
ಕಸ್ತೂರಿ



ಅಕ್ಟೋಬರ್, ೧೯೬೧

ಬೆಲೆ: ೭೫ ನ.ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೆ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಸಮುದ್ರ ತೀರದ ಸಂಜೆ
ವಸಂತ ಕೆ. ಅವರಾದಿ

ಚಂದಾ ದರ :

ವಾರ್ಷಿಕ(ಅಂಚೆಸೇರಿ).		ರೂ.೮.೦೦
ಅರ್ಧ ವರ್ಷ	—	ರೂ.೪.೫೦
ಬಿಡಿಸಂಚಿಕೆ	—	ರೂ.೦.೭೫

Kasturi, October 1961

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಆಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕವಿಭಾಗ

**ಭೀಮ ಒರಟ, ಧರ್ಮರಾಯ ಜ್ಞಾನಿ ಎಂಬ ಭಾವನೆ ಇದೆಯಲ್ಲ;
ಆದರೆ ಭೀಮನಿಂದಲೇ ಆತ ಜ್ಞಾನವನ್ನು ಕಲಿಯಬೇಕಾಯಿತು!**

ಎನ್. ನಾರಾಯಣ ಬಲ್ಲಾಳ

ಒಳಗೆ ಧರ್ಮರಾಯನ ಅಂತರಂಗ ಮಂತ್ರಾಲೋಚನೆ ಬಹು ತೀವ್ರಾಸಕ್ತಿಯಿಂದ ನಡೆದಿತ್ತು. ರಾಜದ್ವಾರದ ಹೊರವಲಯದಲ್ಲಿ ದ್ವಿತೀಯ ಪಾಂಡವನಾದ ಭೀಮಸೇನನು ರಾಜಸಭೆಯ ರಕ್ಷಣೆಯ ಹೊಣೆ ಹೊತ್ತು ನಿಂತಿದ್ದ.

ಅಷ್ಟರಲ್ಲೇ ಒಬ್ಬ ವೃದ್ಧ ಬ್ರಾಹ್ಮಣ ರಾಜದ್ವಾರದ ಬಳಿ ಕಾಣಿಸಿಕೊಂಡ. ಭೀಮಸೇನನ ಅಪ್ಪಣೆಯಿಲ್ಲದೆ ಒಳಗೆ ಪ್ರವೇಶಿಸುವಂತಿಲ್ಲ. ವೃದ್ಧನನ್ನು ಆದರದಿಂದ ಬರಮಾಡಿದ ಭೀಮಸೇನನು ಕುಶಲವಿಚಾರ ಕೇಳಿದನು. ಬ್ರಾಹ್ಮಣ ಬಹು ದಣಿದಿದ್ದ; ಅಂಗಾಂಗಗಳು ನಡುಗುತ್ತಿದ್ದುವು; ಬಾಯಿ ಒಣಗಿತ್ತು. ಸಾವರಿಸಿಕೊಂಡು ವೃದ್ಧ ಹೇಳಿದನು: "ಯುವರಾಜ! ನನಗೀಗಲೇ ಧರ್ಮರಾಜನನ್ನು ಕಾಣಬೇಕಾಗಿದೆ. ನಾನು ಐವತ್ತು ಹರದಾರಿ ನಡೆದು ಬಂದಿದ್ದೇನೆ. ನಾನು ಬಡ ಸಂಸಾರಿ. ನನ್ನ ಹೆಣ್ಣು ಮಗಳಿಗೆ ಬಹು ಪ್ರಯಾಸಾನಂತರ ಒಬ್ಬ ವರನನ್ನು ನೋಡಿಟ್ಟಿದೇನೆ. ಹಣವಿಲ್ಲದೆ ಮದುವೆಯಾಗುವಂತಿಲ್ಲ. ಅದಕ್ಕಾಗಿ ಧರ್ಮರಾಜನಲ್ಲಿ ಯಾಚಿಸಲು ಬಂದಿದ್ದೇನೆ. ಈಗಲೇ ಧರ್ಮರಾಜನನ್ನು ನೋಡಿ ನನ್ನ ಮಗಳ ಭವಿತವ್ಯ ನಿರ್ಧರಿಸಬೇಕಾಗಿದೆ. . . ."

ಭೀಮಸೇನನು ಒಂದು ಕ್ಷಣವೂ ತಡಮಾಡಲಿಲ್ಲ. ಮಂತ್ರಾಲೋಚನೆ ಎಷ್ಟೇ ಗಂಭೀರವಾಗಿದ್ದರೂ, ಬ್ರಾಹ್ಮಣನ ಬೇಡಿಕೆ ಅತಿ ಅಗತ್ಯದ್ದೆಂದು ಭೀಮಸೇನನಿಗೆ ಕಂಡಿತು. ಬ್ರಾಹ್ಮಣನನ್ನು ಒಳಗೆ ಕಳುಹಿದ.

ಅಕಸ್ಮಾತ್ತಾಗಿ ಒಳಗೆ ಬಂದ ಅಪರಿಚಿತ ಬ್ರಾಹ್ಮಣನನ್ನು ಕಂಡು ಒಳಗಿದ್ದ ಅರ್ಜುನ-ಕೃಷ್ಣಾದಿಗಳಿಗೆ ಆಶ್ಚರ್ಯವಾಯಿತು. ಧರ್ಮರಾಯನು ಬಂದ ಸಮಾಚಾರವನ್ನು ಕೇಳಿದ.

ಬ್ರಾಹ್ಮಣ ತನ್ನ ಪರಿಸ್ಥಿತಿಯನ್ನು ವಿವರಿಸಿದ. ಧರ್ಮರಾಯನು ಸಹಾನುಭೂತಿಯಿಂದ ಲಾಲಿಸಿ ತನ್ನ ಸಹಾಯವನ್ನು ಅವಶ್ಯವಾಗಿ ಮಾಡುವುದಾಗಿಯೂ ಮರುದಿನ ಬರಬೇಕೆಂದೂ ಬ್ರಾಹ್ಮಣನಿಗೆ ಹೇಳಿದ.

ಬ್ರಾಹ್ಮಣ ಹೊರಬಂದ. ಉತ್ಸುಕನಾಗಿ ನಿಂತ ಭೀಮಸೇನನು "ಹೋದ ಕೆಲಸವೇನಾಯಿತು?" ಎಂದು ಕೇಳಿದಾಗ "ಧರ್ಮರಾಜರು ಯಾವುದೋ ಗಹನ ವಿಚಾರದಲ್ಲಿದ್ದಾರೆ. ನಾಳೆ ಬರಲು ಆಜ್ಞಾಪಿಸಿದ್ದಾರೆ" ಎಂದನು.

ಕೂಡಲೇ ಸೇನಾಪತಿ ಭೀಮಸೇನನು ರಾಜಸೈನಿಕರಿಗೆ ವಿಜಯದುಂದುಭಿ ಮೊಳಗಿಸಲು ಆಜ್ಞೆಯಿತ್ತ. ವಿಜಯಭೇರಿಯ ಘೋಷವು ದಶದಿಕ್ಕುಗಳಲ್ಲಿ ಪ್ರತಿಧ್ವನಿಸಿದವು. ಶಾಂತ ವಾತಾವರಣದ ರಾಜಧಾನಿಯ ಜನರಿಗೆ ಈ ರಣವಿಜಯದ ಕಹಳೆ, ಭೇರಿಗಳ ಸಪ್ಪಳ ಆಶ್ಚರ್ಯವನ್ನುಂಟುಮಾಡಿತು. ಈ ದಿಗ್ವಿಜಯ ಸೂಚಕವಾದ ಧ್ವನಿಗೆ ಕಾರಣವೇನೆಂದು ಯಾರೂ ಊಹಿಸದಾದರು.

ಮಂತ್ರಾಲೋಚನಾಗಾರದಲ್ಲಿದ್ದ ಅರ್ಜುನ, ಕೃಷ್ಣ, ಧರ್ಮರಾಜಾದಿಗಳಿಗೂ ಆಶ್ಚರ್ಯವಾಯಿತು. ಇದೇನೋ ತಪ್ಪು ಸಂಕೇತವೆಂದು ಭಾವಿಸಿದರು.

ಕೂಡಲೇ ಹೊರ ದ್ವಾರದಲ್ಲಿದ್ದ ಮಹಾಸೇನಾನಿ ಭೀಮಸೇನನಿಗೆ ಕರೆ ಬಂದಿತು. ಭೀಮಸೇನನು ಗಂಭೀರವಾಗಿ ಧರ್ಮರಾಜನೆಡೆಗೆ ಬಂದ. ಈ ವಿಜಯಸೂಚಕ ಸಂತೋಷ ಧ್ವನಿಗೆ ಕಾರಣವೇನೆಂದು ಧರ್ಮರಾಜನು ಕುತೂಹಲಪೂರ್ಣನಾಗಿ ಕೇಳಲು ಭೀಮಸೇನನು ಸಂತೋಷದ ಧ್ವನಿಯಲ್ಲಿ ಹೀಗೆ ಹೇಳಿದ—

"ಅಣ್ಣಾ! ಈ ತನಕ ಯಾರಿಗೂ ಪಡೆಯಲಾಗದಂಥ ವಿಜಯ ನಿಮಗೆ ದೊರಕಿದೆ ಎಂದು ತಿಳಿದುಬಂತು. ಹರಿ ಹರ ಬ್ರಹ್ಮಾದಿಗಳೇ ಯಾರ ವಿಕ್ರಮಕ್ಕೆ ತಲೆಬಾಗಿ ನಡೆದಿದ್ದಾರೋ, ಅಂತಹ ಕಾಲಪುರುಷನನ್ನೇ ನೀವು ಗೆದ್ದ ವರ್ತಮಾನದಿಂದ ನನ್ನ ಮನಸ್ಸು ಆನಂದಪುಲಕಿತವಾಗಿದೆ. ನನ್ನ ಅಣ್ಣ ಕಾಲನನ್ನು ಗೆದ್ದಿದ್ದಾರೆ. ಆದ್ದರಿಂದಲೇ ನಾನು ಜಯದುಂದುಭಿ ಮೊಳಗಿಸಲು, ನಗರದಲ್ಲೆಲ್ಲಾ ಸಂಭ್ರಮವನ್ನಾಚರಿಸಲು ಆಜ್ಞೆ ಕೊಟ್ಟೆ."

ಧರ್ಮರಾಜ ಅವಾಕ್ಕಾದ. ಅರ್ಜುನಾದಿ ವೀರರಿಗೂ ಅರ್ಥವಾಗಲಿಲ್ಲ. ಶ್ರೀಕೃಷ್ಣ ಪರಮಾತ್ಮನು ಮುಸಿಮುಸಿ ನಗುತ್ತಿದ್ದ.

ಧರ್ಮರಾಜನು ಭೀಮನ ಈ ಒಗಟಿನ ಮಾತಿನಿಂದ ಅಪ್ರತಿಭನಾಗಿ "ಎಲ್ಲಿಯ ವಿಜಯ? ಯಾವ ಕಾಲ? ನನಗೊಂದೂ ಅರ್ಥವಾಗುತ್ತಿಲ್ಲ ಭೀಮಸೇನಾ! ನಡೆದ ವಿಚಾರವನ್ನು ಹೇಳು..." ಎಂದ.

ಭೀಮಸೇನನು ಮತ್ತೂ ಮುಂದುವರಿಸಿದ: "ಅಣ್ಣಾ! ಈಗ ತಾನೇ ಒಳಬಂದ ಬ್ರಾಹ್ಮಣನೊಡನೆ ತಾವು ನಾಳೆ ಬರಲು ಹೇಳಿರುವಿರಂತೆ. ಈ ಅಶಾಶ್ವತವಾದ ಜೀವನ, ಈ ನಶ್ವರ ಜಗತ್ತಿನಲ್ಲಿ ನಾಳೆಯ ಭರವಸೆ ಯಾರಿಗೂ ಇಲ್ಲದಿರುವಾಗ, ತಾವು 'ನಾಳೆ' ಬರಹೇಳಬೇಕಾದರೆ ಕಾಲನನ್ನೆ ಗೆದ್ದಂತಾಗಲಿಲ್ಲವೇ? ಈ ಸಂತೋಷ ದೇವತೆಗಳಿಗೂ ದೊರಕೀತೇ? ಅದಕ್ಕಾಗಿ ನಾನು ವಿಜಯಭೇರಿ ಬಾರಿಸಲು ಹೇಳಿದುದು ತಪ್ಪೇ?"

ಭೀಮನ ಪ್ರತಿ ಮಾತೂ ಧರ್ಮರಾಜನಲ್ಲಿ ವಿವೇಕದ ಹೊಸ ಜ್ಯೋತಿಯನ್ನು ಪ್ರಕಾಶಿತಗೊಳಿಸಿತು.

ಬ್ರಾಹ್ಮಣನನ್ನು ಕೂಡಲೇ ಕರೆಸಿ, ಧರ್ಮರಾಜನು ಅವನ ಅಭೀಷ್ಟ ನೆರವೇರಿಸಿದ. *

ಮಹಾಪುರುಷರ ಮನಸು

ಈ ಘಟನೆ ಹಳೆಯದೇನೂ ಅಲ್ಲ. ಇತ್ತೀಚೆಗೆ ನಡೆದುದು. ನಾನೊಂದು ದಿನ ರಾಜಾಜಿಯವರೊಂದಿಗೆ, ಸಮುದ್ರತೀರದತ್ತ ಸಾಗುತ್ತಿದ್ದೆ. ಆ ದಿನ ನಾನು ಬಹಳ ಔದಾಸೀನ್ಯದಲ್ಲಿದ್ದೆ.

ರಾಜಾಜಿಯವರಿಗೆ ನನ್ನ ಉದಾಸ ಭಾವನೆ ಗೊತ್ತಾಯಿತೋ ಏನೋ !

"ನೀವು ಏಕೋ ಬಹಳ ಉದಾಸೀನರಾಗಿದ್ದೀರಿ ! ನಿಮ್ಮ ಔದಾಸ್ಯಕ್ಕೆ ಕಾರಣವಾಗಿ ಯಾವುದೋ ಘಟನೆ ನಡೆದಿರಬೇಕು! ಅಲ್ಲವೆ?"

ರಾಜಾಜಿಯವರೇ ಮುಂದುವರಿದು ಹೇಳಿದರು—

"ನಾನು ಹೇಳಲೇ ? ಕಾರಣವೇನೆಂದು ? ಈ ವಾರ "ಸ್ವರಾಜ್ಯ" ಪತ್ರಿಕೆಯಲ್ಲಿ ಎರಡು ಭಯಂಕರ ತಪ್ಪು ಪ್ರಕಟನೆಗಳಾಗಿವೆ! ಪತ್ರಿಕೆಯಲ್ಲಿ ಈ ತಪ್ಪುಗಳ ವಿವರಣೆ ಪ್ರಕಟವಾದಾಗಲೇ ನಿಮಗೆ ಅವುಗಳ ಬಗೆಗೆ ಅರಿವಾದುದು ! ಆ ತಪ್ಪುಗಳ ವಿಷಯವನ್ನು ನೀವು ಮರೆಯದಾಗಿದ್ದೀರಿ. ಆದ್ದರಿಂದಲೇ ನೀವು ಉದಾಸರಾಗಿದ್ದೀರಿ !"

ನನ್ನ ಮಾನಸಿಕ ಸ್ಥಿತಿಯನ್ನು ರಾಜಾಜಿ ಸರಿಯಾಗಿಯೇ ಊಹಿಸಿದ್ದರು. ನಾನು ಏನೂ ಮಾತನಾಡಲಿಲ್ಲ ನಾವಿಬ್ಬರು, ಸ್ವಲ್ಪ ದೂರದ ವರೆಗೆ ಮೌನವಾಗಿಯೇ ಸಾಗಿದೆವು.

ರಾಜಾಜಿ ಮಾತಿಗೆ ಮೊದಲು ಮಾಡಿದರು—

"ಆಗಿದ್ದು ಆಗಿ ಹೋಯಿತು. ಆದುದಕ್ಕೆ ಚಿಂತಿಸಿ, ಪಶ್ಚಾತ್ತಾಪಪಟ್ಟರೆ ಫಲವೇನು ? ಅದರಿಂದ ಏನೂ ಲಾಭವಿಲ್ಲ."

ಇಷ್ಟು ಹೇಳಿ ರಾಜಾಜಿ, ಸುಮ್ಮನಾದರು. ಒಂದೇ ನಿಮಿಷದ ನಂತರ ಮತ್ತೆ ಹೇಳಿದರು. "ಎರಡನೆಯವರಿಗೆ ಉಪದೇಶ ಕೊಡುವುದು ಅತಿ ಸುಲಭ. ನಾನು ನಿಮಗೆ ಯಾವ ಉಪದೇಶ ಕೊಟ್ಟೆನೋ ಅದೇ ಉಪದೇಶವನ್ನು ಪರಿಪಾಲಿಸಲು ನನ್ನಿಂದ ಸಾಧ್ಯವಾಗಿಲ್ಲ. ಇಂದಿಗೂ ನಾನು ಪಶ್ಚಾತ್ತಾಪದ ದಳ್ಳುರಿಗೆ ಸಿಕ್ಕು ಗಾಸಿಯಾಗುತ್ತಿದ್ದೇನೆ."

ನಾನು ರಾಜಾಜಿಯವರ ಸಜಲ ನೇತ್ರಗಳನ್ನು ಪ್ರತ್ಯಕ್ಷ ಕಂಡೆ. ಇಂಥ ವಿಶಾಲ ವ್ಯಕ್ತಿತ್ವ ಯಾವುದೋ ಪಶ್ಚಾತ್ತಾಪದ ಅಗ್ನಿಯಲ್ಲಿ ಜ್ವಲಿಸುತ್ತಿದೆ !

ರಾಜಾಜಿ ಘಟನೆಯೊಂದನ್ನು ವಿವರಿಸಿ ಹೇಳಿದರು :

"೪೦ ವರ್ಷಗಳ ಹಿಂದಿನ ಘಟನೆ ಇದು. ನನ್ನ ಪತ್ನಿ ಕಾಯಿಲೆಯಿಂದ ನರಳುತ್ತಿದ್ದಳು. ಹಾಸಿಗೆಯ ಮೇಲೆ ಸುಮ್ಮನೇ ಮಲಗಿರಲೂ ಕೂಡ ಅವಳಿಗೆ ಸಾಧ್ಯವಾಗ.ತ್ತಿರಲಿಲ್ಲ. ಅವಳು ನಿಶ್ಯಕ್ತತೆಯನ್ನು ಸಹಿಸಲಾರದೇ ದುಃಖಿಸುತ್ತಿದ್ದಳು.

"ಅವಳಿಗೆ ವಿಶ್ರಾಂತಿಯಾದರೂ ದೊರೆಯಲೆಂದು, ನನ್ನ ತೊಡೆಯ ಮೇಲೆ ಅವಳನ್ನು ಮಲಗಿಸಿಕೊಂಡೆ. ಕೆಲ ನಿಮಿಷ ಅವಳನ್ನು ತೊಡೆಯ ಮೇಲೆ ಇರಿಸಿಕೊಂಡುದೇ ತಡ, ನನ್ನ ಕಾಲು ನೋಯಿಸಿ, ಜವೆ ಹಿಡಿಯಿತು. ನಾನು ಅವಳನ್ನು ಮತ್ತೆ ಹಾಸಿಗೆಯ ಮೇಲೆ ಹಾಕಿದೆ.

"ನನ್ನ ಪತ್ನಿ ಕೋಪದಿಂದಲೇ ನುಡಿದಳು:

"'ನಾನು ನಿಮಗೆ ಎಷ್ಟು ಭಾರವಾಗಿದ್ದೇನೆ? ಪ್ರೇಮದ ಸಹನಶೀಲತೆಗೆ ಕೊನೆಯ ಗಡಿಯೇ ಇಲ್ಲ. ಅದು ಸರಿ. ಆದರೆ ನೀವು ಎಲ್ಲಿಯ ವರೆಗೆ ನಿಮ್ಮ ತೊಡೆಯ ಮೇಲೆ ನನ್ನನ್ನು ಮಲಗಿಸಿಕೊಂಡಿರಿ ! ಪಾಪ !'

"ಅವಳ ನರಳುವಿಕೆಯ ಧ್ವನಿ ಹೊರಬಿದ್ದು

ಹತ್ತೇ ನಿಮಿಷವಾಗಿರಬಹುದು. ಅವಳ ಪ್ರಾಣ ಪಕ್ಷಿ ಹಾರಿಹೋಗಿತ್ತು."

ರಾಜಾಜಿ ಹಸಿಗಣ್ಣುಗಳಿಂದ ಮ್ಲಾನವದನ ರಾಗಿದ್ದರು.

"ಅಯ್ಯೋ! ಹತ್ತು ನಿಮಿಷ, ನನ್ನ ತೊಡೆಯ ಮೇಲೆ ಅವಳನ್ನು ಮಲಗಿಸಿಕೊಂಡಿದ್ದರೇನಾಗುತ್ತಿತ್ತು? ಅವಳು ನನ್ನ ಬಗ್ಗೆ ಅಸಮಾಧಾನ ಪಟ್ಟುಕೊಂಡು ಮೃತಳಾದಳಲ್ಲ! ಅದನ್ನು ನಾನು ಹೇಗೆ ಮರೆಯಲಿ? ಆ ಘಟನೆಯ ಬಗೆಗೆ ನಾನಿನ್ನೂ ಪಶ್ಚಾತ್ತಾಪ ಪಡುತ್ತಲೇ ಇದ್ದೇನೆ."

—ಟಿ. ಸಾ ಸುಬ್ಬಾರಾವ್

— ಸಂಗ್ರಹ: ಕೆ. ಎಸ್. ಪೂರ್ವಾಚಾರ್

ಒಮ್ಮೆ ಲಿಂಕನ್ ಮತ್ತು ಅವರ ಸ್ನೇಹಿತ ವಕೀಲ ಹ್ಯಾರ್ಡನ್ ಒಂದು ಕುದುರೆಗಾಡಿಯಲ್ಲಿ, ಮಳೆ ಸುರಿಯುತ್ತಿದ್ದರೂ ಒಂದು ಅತಿ ರೊಜ್ಜಾದ ಮಾರ್ಗದಲ್ಲಿ ನಡೆದಿದ್ದರು. ಮತ್ತು ಅವರಿಬ್ಬರ ನಡುವೆ ತತ್ವಜ್ಞಾನದ ಬಗ್ಗೆ ಚರ್ಚೆ ನಡೆದಿದ್ದಿತು. ನಿರಭಿಮಾನ ಮತ್ತು ನಿಃಸ್ವಾರ್ಥ ಕೃತ್ಯಗಳೂ ಈ ಜಗತ್ತಿನಲ್ಲಿ ಇವೆ ಎಂದು ಹ್ಯಾರ್ಡನ್ ವಾದಿಸಿದರು. ಆದರೆ ಲಿಂಕನ್ ಹಾಗೆ ಮಾತ್ರ ಇಲ್ಲ ಎಂದು ಹೇಳಿದರು.

ದಾರಿ ಸಾಗುತ್ತಿರುವಾಗ, ಒಂದು ಹಂದಿಯು ರೇಲಿನ ಹಳೆ ಬೇಲಿಯ ನಡುವೆ ಸಿಕ್ಕು, ಚಿರ್– ಚಿರ್– ಎಂದು ಒದರುತ್ತ, ಹೊರಗೆ ತಪ್ಪಿಸಿಕೊಂಡು ಬರುವುದಕ್ಕಾಗಿ ತೊಳಲಾಡುತ್ತಿದ್ದುದನ್ನು ಅವರು ನೋಡಿದರು. ಕುದುರೆ ಗಾಡಿಯನ್ನು ಹೊಡೆಯುತ್ತಿದ್ದ ಲಿಂಕನ್ ಸ್ವಲ್ಪ ದೂರ ಹೋದ ಮೇಲೆ ಅದನ್ನು ನಿಲ್ಲಿಸಿದರು. ನಿಲ್ಲಿಸಿ ಗಾಡಿಯಿಂದ ಕೆಳಗಿಳಿದು ಬಂದು ಆ ಹಂದಿಯನ್ನು ಬೇಲಿಯಿಂದ ಬಿಡಿಸಿ ಪಾರು ಮಾಡಿದರು. ಅವರು ತಿರುಗಿ ಬಂದು ಗಾಡಿಯನ್ನು ಹತ್ತಿದಾಗ ಅವರ ಕಾಲುಗಳೆಲ್ಲ ಕೊಳಕುರಾಡಿಯಾಗಿದ್ದವು. ಅವರ ಅರಿವೆಗಳೆಲ್ಲ ತೊಯ್ದು ತಪ್ಪಡಿಯಾಗಿದ್ದವು. ಅವರ ಹ್ಯಾಟು ಒದ್ದೆಯಾಗಿ ಮುದುಡಿ ಹೋಗಿತ್ತು.

ಹ್ಯಾರ್ಡನ್ ಹೇಳಿದರು:—"ಈಗ ಹೇಳು– ನಿನ್ನ ತರ್ಕದ ವಿರುದ್ಧವಾಗಿ ನೀನು ನನ್ನ ಹೇಳಿಕೆಯನ್ನೇ ಸಮರ್ಥಿಸಿದಂತಾಯಿತು. ಆ ಹಂದಿಯು ಹೇಗಾದರೂ ಮಾಡಿ ಆ ಬೇಲಿಯಿಂದ ಬಿಡಿಸಿಕೊಂಡು ಪಾರಾಗುತ್ತಿತ್ತು. ಆದರೆ ನೀನು ಆ ಕೊಳಕು ರಾಡಿಯಲ್ಲಿ ಇಳಿದು ಆ ಮೂರ್ಖ ಹಂದಿಯನ್ನು ಬೇಲಿಯಿಂದ ಹೊರಗೆ ತೆಗೆದದ್ದಾದರೂ ಏಕೆ?"

ಲಿಂಕನ್ ಉತ್ತರವಿತ್ತರು: "ನಾನು ಹಾಗೆ ಮಾಡಿದ್ದು ಸಂಪೂರ್ಣವಾಗಿ ಸ್ವಾರ್ಥಪೂರಿತವಾದ ಕೆಲಸ. ನಾನು ಹಾಗೆ ಮಾಡದಿದ್ದರೆ ರಾತ್ರಿಯೆಲ್ಲ ನಾನು ಒಂದು ಗಳಿಗೆಯೂ ಕಣ್ಣಿಗೆ ಕಣ್ಣು ಹಚ್ಚಿ ನಿದ್ರೆಮಾಡುತ್ತಿರಲಿಲ್ಲ. ಅದರ ಚೀರುವಿಕೆಯು ನನ್ನ ಕನಸಿನಲ್ಲಿ ಕೂಡ ನನ್ನನ್ನು ಕಾಡುತ್ತಿತ್ತು. ಅದು ಬೇಲಿಯಿಂದ ತನ್ನಷ್ಟಕ್ಕೆ ತಾನೆ ಬಿಡಿಸಿಕೊಂಡು ತನ್ನ ಹಾದಿ ಹಿಡಿಯಬಹುದಾಗಿತ್ತು. ಆದರೆ ಆ ಸಂಗತಿ ನನಗೆ ಗೊತ್ತಾಗುತ್ತಿರಲಿಲ್ಲ. ನನ್ನ ಸ್ವಾರ್ಥಕ್ಕಾಗಿ ನಾನು ಮಾಡಿದ್ದು ಸರಿ. ನಾನೇ ಗೆದ್ದೆ."

—ಜೊಸೆಫ್ ಫೋರ್ಟ ನ್ಯೂಟನ್

— ಸಂಗ್ರಹ: ಆರ್. ಎಂ. ಕುಲಕರ್ಣಿ


"ಇಂದು ಮ್ಯಾಟನಿ ಸಿನೆಮಾಕ್ಕೆ ಹೋಗಬೇಕು ಎಂದು ಮಾಡಿದ್ದೆ. ಆದರೆ ಬಿಸಿಲುಹೊತ್ತು, ಟಿಕೀಟಿಗಾಗಿ ಕ್ಯೂ ನಿಲ್ಲುವುದು, ಆ ಗದ್ದಲ ಎಲ್ಲ ನೆನಪಾಗಿ .."

"ಹೌದು. ನೀನನ್ನುವುದು ತಿಳಿಯಿತು. ನನ್ನ ಹೆಂಡತಿ ಕೂಡ ನಾನೊಬ್ಬನೇ ಸಿನೇಮಾಕ್ಕೆ ಹೋಗಲು ಬಿಡುವುದಿಲ್ಲ."

ಕರ್ನಾಟಕದ ಸಂಗೀತದ ಮಹಾಸಾಧಕರ
ಜೀವನದ ಹೊಳಹುಗಳು

ಸಂಗೀತಕಲಾನಿಧಿ ವಾಸುದೇವಾಚಾರ್ಯರು

"ಗೀತಾ"



ಆಕಾಶವಾಣಿ—-ಮೈಸೂರು, ಮಿಶ್ರಮಾಧುರ್ಯ ರೆಕಾರ್ಡು ಸಂಗೀತ."

ರೇಡಿಯೋ ಸೆಟ್ಟಿನ ಮುಂದೆ ತಾತ ಆಸಕ್ತಿಯಿಂದ ಕುಳಿತರು.

"ಬಿನ ಮಧುರ ಮಧುರ ....ಮೊದಲನೆಯ ಗೀತೆ."

ಕೇಳುತ್ತ ಕೇಳುತ್ತ ತಾತ "ಎಷ್ಟು ಮುದ್ದಾಗಿದೆ, ಎಂಥ ಮಧುರವಾದ ಶಾರೀರ!" ಎಂದರು.

"ಎಲ್ಲಮ್ಮ ರುಕ್ಮಿಣೀ, ಸ್ವಲ್ಪ ರೇಡಿಯೋವನ್ನು ಹಿಂದಕ್ಕೆ ತಿರುಗಿಸು. ಇನ್ನೊಂದಾವರ್ತಿ ಮೊದಲಿನಿಂದ ಕೇಳಬೇಕು ಎನ್ನಿಸುತ್ತೆ."

ರೇಡಿಯೋವನ್ನು ಗ್ರಾಮಫೋನ್ ಮಿಷನ್ನಿನಂತೆ ಹಿಂದು ಮುಂದೆ ಹಾಕಿಕೊಳ್ಳಬಹುದೆಂದು ತಾತ ಆಗ ತಿಳಿದಿದ್ದರು! ವಿಷಯವನ್ನು ವಿವರಿಸಿದ ಮೇಲೆ "ಅಯ್ಯೋ ಬೆಪ್ಪುತಕ್ಕಡಿ" ಎಂದು ತಮ್ಮನ್ನು ತಾವೇ ಪರಿಹಾಸ್ಯ ಮಾಡಿಕೊಂಡು ಬಿದ್ದು ಬಿದ್ದು ನಕ್ಕರು.

ಅರ್ಧ ಗಂಟೆಯ ಕಾಲ ಪ್ರಸಾರವಾದ ಮಿಶ್ರ ಮಾಧುರ್ಯದಲ್ಲಿ ಚಿತ್ರಗೀತೆ, ದೇವರನಾಮ, ವಚನ ಸಂಗೀತ, ಇಂಗ್ಲೀಷ್ ಟ್ಯೂನು, ವಾದ್ಯ ಸಂಗೀತ, ಶಾಸ್ತ್ರೀಯ ಸಂಗೀತ— ಎಲ್ಲವೂ ಇದ್ದವು. ತಾತ ಎಲ್ಲವನ್ನು ಒಂದೇ ವಿಧವಾದ ಆಸಕ್ತಿಯಿಂದ ಕೇಳಿ ಮೆಚ್ಚಿಕೊಂಡಾಗ ನನಗೆ ಸ್ವಲ್ಪ ಆಶ್ಚರ್ಯವಾಯಿತು.

"ಏನು ತಾತ! ಈಗ ನೀವು ಕೇಳಿದ ವಿವಿಧ ಗೀತೆಗಳಲ್ಲಿ ನಿಮ್ಮ ಮನಸ್ಸಿಗೆ ತುಂಬ ಮೆಚ್ಚಿಗೆಯಾದದ್ದು ಯಾವುದು?" ಎಂದು ಪ್ರಶ್ನಿಸಿದೆ.

ತಾತ ನಕ್ಕರು. ನೇರವಾಗಿ ಉತ್ತರ ಕೊಡಲಿಲ್ಲ.

"ರುಕ್ಮಿಣಿ, ಒಂದು ಬುಟ್ಟಿಯ ತುಂಬ ದ್ರಾಕ್ಷೆ, ದಾಳಿಂಬೆ, ಕಿತ್ತಲೆ ಎಲ್ಲವನ್ನು ತಂದು ನಿನ್ನ ಮುಂದಿಟ್ಟು ಇದರಲ್ಲೆಲ್ಲ ರುಚಿಯಾದದ್ದು ಯಾವುದು" ಎಂದು ಕೇಳಿದರೆ ಏನು ಹೇಳುತ್ತೀಯೆ? ಒಂದೊಂದನ್ನು ತಿನ್ನುವಾಗ ಒಂದೊಂದು ಬಗೆಯ ರುಚಿ"ಎಂದರು. ಕರ್ನಾಟಕ ಸಂಗೀತವನ್ನುಳಿದು ಇನ್ನಾವ ಸಂಗೀತವನ್ನೂ ತಾತ ಬಯಸಲಾರರೆಂಬ ನನ್ನ ಭಾವನೆ ಅಂದು ಮಾಯವಾಯಿತು. ಹಿಂದುಸ್ತಾನಿ ಸಂಗೀತವನ್ನು ಕೇಳಿದಾಗ "ಅಯ್ಯೋ! ಶ್ರುತಿಗಾಗಿ ತಮ್ಮ ಪ್ರಾಣವನ್ನೇ ಬಿಡುತ್ತಾರೆ ಅವರು! ಎಂತಲೇ ಅವರ ಸಂಗೀತ ಕೇಳಲು ಅಷ್ಟು ಹಿತ" ಎನ್ನುತ್ತಿದ್ದರು ತಾತ. ಇಂಗ್ಲೀಷ್ ಬ್ಯಾಂಡ್ ಸಂಗೀತವನ್ನು ಕೇಳಿದಾಗ ಕವಾಯಿತು ಮಾಡುತ್ತಿದ್ದಷ್ಟು ಉತ್ಸಾಹ ಅವರ ಮುಖದಲ್ಲಿ ಮೂಡಿರುತ್ತಿತ್ತು. ಚಿತ್ರ ಸಂಗೀತವನ್ನು ಕೇಳುವುದು ತಮ್ಮ ಅಂತಸ್ತಿಗೆ ಕಮ್ಮಿ, ಕರ್ನಾಟಕ ಸಂಗೀತ ವಿದ್ವಾಂಸ ಹಿಂದುಸ್ತಾನಿ ಸಂಗೀತವನ್ನು ಕೇಳುವುದರಿಂದ ತನ್ನ ಶೈಲಿ, ಪಂಥಕ್ಕೆ ಧಕ್ಕೆ ಬರುತ್ತದೆ ಎಂದು ತಾತ ಅಂದವರೇ ಅಲ್ಲ.

ತಾತನ ಮನೆಗೆ ನಾನು ಸೊಸೆಯಾಗಿ ಬಂದದ್ದು ಈಗ್ಗೆ ಹತ್ತು ವರ್ಷಗಳ ಹಿಂದೆ. ಆಗ ತಾತನಿಗೆ ಎಂಭತ್ತಾರು ವಯಸ್ಸು. ಆ ವೊದಲು ತಾತ ಸುಪ್ರಸಿದ್ಧ ಸಂಗೀತ ವಿದ್ವಾಂಸರು, ರಚನಕಾರರು ಎಂದಿಷ್ಟೇ ಕೇಳಿ ತಿಳಿದಿದ್ದೆ. "ಶ್ರೀ ಚಾಮುಂಡೇಶ್ವರಿ", "ಬ್ರೋಚೇವಾರೆವರುರ", "ರಾರಾ ರಾಜೀವಲೋಚನ" ಮೊದಲಾದ ಅವರ ಕೃತಿಗಳನ್ನು ಅಲ್ಲಲ್ಲಿ ಕೇಳಿ ಆನಂದಪಟ್ಟಿದ್ದೆ. ಮೈಸೂರಿನ ಹಿರಿಯ ವಿದ್ವಾಂಸರಾಗಿದ್ದ ತಾತ ಎಲ್ಲ ಸಂಗೀತ ವಿದ್ವಾಂಸರಂತೆ ಜರಿಪಂಚೆ, ಜರಿಪೇಟ, ಜರಿವಲ್ಲಿ, ಬಂಗಾರದ ಚೈನು, ವಜ್ರದುಂಗುರ ಮುಂತಾದ ವಸ್ತ್ರಾಭರಣಗಳಿಂದ ಅಲಂಕೃತರಾಗಿರುತ್ತಾರೆ, ಸ್ಥಾನಮಾನಗಳಿಗೆ ತಕ್ಕ ದರ್ಪ, ಗಾಂಭೀರ್ಯಗಳಿಂದ ಸ್ವಲ್ಪ ಬಿಗಿಯಾಗಿರುತ್ತಾರೆ; ಇಂತೆಲ್ಲ ಅವರನ್ನು ನಾನು ಚಿತ್ರಿಸಿಕೊಂಡಿದ್ದೆ. ಆದರೆ ನಾನು ಕಂಡ ತಾತ ನಿರಾಡಂಬರ ಜೀವಿ! ಸಾತ್ವಿಕ ಮೂರ್ತಿ! ಮನೆಯಲ್ಲಿದ್ದಾಗ ಏಕವಸ್ತ್ರಧಾರಿ! ಉಟ್ಟ ಪಂಚೆಯ ಸೆರಗನ್ನೇ ಮೈಗೆ ಹೊದೆದುಕೊಳ್ಳುವುದು ಅವರ ಪದ್ಧತಿ. ಪಂಚೆಯನ್ನು ಕಚ್ಚೆ ಹಾಕಿ ಉಡುತ್ತಿದ್ದುದು ಹೊರಗಡೆ ಹೋಗುವಾಗ ಮಾತ್ರ. ಒಂದೊಂದು ವೇಳೆ ಪಂಚೆಯನ್ನು ನಾಲ್ಕು ಭಾಗವಾಗಿ ಮಡಿಸಿ ಸೆರಗು ಕಾಲು ಕಡೆ ಬರುವಂತೆ ಉಡುತ್ತಿದ್ದುದೂ ಉಂಟು. ಮನಸ್ಸು ಬಂದಾಗ ಒಂದು ತೆಳ್ಳನೆಯ ಬಿಳಿ ಜುಬ್ಬ ಧರಿಸುತ್ತಿದ್ದರು. ಅದಕ್ಕೆ ಗುಂಡಿಗಳಿದ್ದರೆ ಇದ್ದವು ಇಲ್ಲದಿದ್ದರೆ ಇಲ್ಲ. ಜುಬ್ಬದ ಕಿಸೆಯಲ್ಲಿ ಯಾವಾಗಲೂ ಒಂದು ಪೊಟ್ಟಣ. ಒಂದು ಕರವಸ್ತ್ರದಲ್ಲಿ ಆ ಪೊಟ್ಟಣವನ್ನು ಬಹು ಜೋಪಾನವಾಗಿ ಕಟ್ಟಿ ಒಂದು ದಾರವನ್ನೂ ಸುತ್ತಿರುತ್ತಿದ್ದರು. ನನಗೊಮ್ಮೆ ಕುತೂಹಲ ಕೆರಳಲು ತಾತ ಇಲ್ಲದ ವೇಳೆ ಸಾಧಿಸಿ ಚಪಲ ತೀರಿಸಿಕೊಂಡೆ! ಒಳಗಿದ್ದುದೇನು? ದಪ್ಪ ಕಾಗದಕ್ಕೆ

ಅಂಟಿಸಿದ್ದ ರಾಘವೇಂದ್ರ ಸ್ವಾಮಿಗಳ ಒಂದು ಸಣ್ಣ ಚಿತ್ರ, ಮಂತ್ರಾಕ್ಷತೆ ಕಾಳಿನ ಒಂದೆರಡು ಸಣ್ಣ ಪೊಟ್ಟಣ, ದೇವರ ನಿರ್ಮಾಲ್ಯವಾದ ತುಳಸೀದಳ, ಹೂ ಇಷ್ಟೆ!

ತಾತನಿಗೆ ಈ ಪಂಚೆ-ಜುಬ್ಬಗಳ ಅವಶ್ಯಕತೆ ಯಾದರೂ ಇದ್ದುದು ಮಧ್ಯಾಹ್ನ ಹನ್ನೆರಡು ಗಂಟೆಯ ಮೇಲೆ. ಅಲ್ಲಿಯ ವರೆಗೆ ನಾರುಮಡಿ ಯನ್ನೋ ಕಾಶಿಯಿಂದ ಯಾರೋ ತಂದುಕೊಟ್ಟಿದ್ದ ಪೀತವರ್ಣದ ರಾಮನಾಮ ವಸ್ತ್ರವನ್ನೋ ಇಲ್ಲವೇ ಯಾರೋ ಮಠಾಧಿಪತಿಗಳು ಅನುಗ್ರಹ ಮಾಡಿ ಕೊಟ್ಟ ಕಾವಿ ವಸ್ತ್ರವನ್ನೋ ಉಟ್ಟು ಪೂಜೆ-ಪಾರಾಯಣಗಳಲ್ಲಿ ನಿರತರಾಗಿರುತ್ತಿದ್ದರು.

ತಾತ ಸ್ನಾನಗ್ರಹವನ್ನು ಸೇರಿದರೆಂದರೆ ಹೊರಗೆ ಬರಲು ಎರಡು ತಾಸಾದರೂ ಬೇಕು. ಆದ್ದರಿಂದ ಮನೆಯವರೆಲ್ಲರೂ ಬಹಳ ಎಚ್ಚರಿಕೆಯಿಂದ ಅವರಿಗಿಂತ ಮುಂಚಿತವಾಗಿ ಸ್ನಾನ ತೀರಿಸಲು ಹವಣಿಸುತ್ತಿದ್ದರು. ತಾತ ಸ್ನಾನ ಮಾಡುವ ಮೊದಲು ಸ್ನಾನದ ಮನೆಯನ್ನು ಚೊಕ್ಕಟವಾಗಿ ತೊಳೆದು, ಅಲ್ಲಿ ಕಣ್ಣಿಗೆ ಕಂಡ ತಂಬಿಗೆ, ಸಾಬೂನಿನ ಪೆಟ್ಟಿಗೆ ಎಲ್ಲವನ್ನೂ ತೊಳೆದು ಒರೆಸಿ ಅಚ್ಚುಕಟ್ಟಾಗಿ ಜೋಡಿಸಿ ಆ ಬಳಿಕ ಸ್ನಾನಕ್ಕಿಳಿಯುತ್ತಿದ್ದರು. ಸ್ನಾನದ ಮನೆ ಇಷ್ಟು ಪರಿಷ್ಕಾರವಾಗುವಷ್ಟರಲ್ಲಿ ಕಾಲು ವೀಸೆ ಸೀಗೇಕಾಯಿಪುಡಿ ಮುಗಿದಿರುತ್ತಿತ್ತು! ಸ್ನಾನ ಮಾಡುವಾಗ ಬಾಯಲ್ಲಿ ಮಂತ್ರೋಚ್ಚಾರಣೆ. ಒಂದು ಬಕೆಟ್ಟು ನೀರು ಮುಗಿಯುವ ಹೊತ್ತಿಗೆ ಹದಿನೈದು ಇಪ್ಪತ್ತು ನಿಮಿಷಗಳಾದರೂ ಬೇಕಿತ್ತು. ಇಷ್ಟಾದ ಮೇಲೆ ಮಡಿಯುಟ್ಟು ದೇವರ ಮನೆ ಹೊಕ್ಕು ಅಲ್ಲಿನ ಪರಿಷ್ಕಾರ ಪ್ರಾರಂಭ ಮಾಡುತ್ತಿದ್ದರು! ದೇವರ ಪಟಗಳ ಮೇಲೆ ಸ್ವಲ್ಪವೂ ಧೂಳಿರಬಾರದು. ಬಾಡಿದ ಹೂ ಇರಬಾರದು. ದೇವರ ಮಂದಾಸನ ಶುಭ್ರವಾಗಿರಬೇಕು. ನಂದಾದೀಪ ಯಾವಾಗಲೂ ನಂದಿರಬಾರದು. ದೇವರ ಪೂಜಾ ಸಾಮಗ್ರಿಗಳು ಓರಣವಾಗಿರಬೇಕು. ಇಷ್ಟೆಲ್ಲ ಮಾಡಿ ಹಣೆಗೆ ಅಂಗಾರ ಅಕ್ಷತೆಗಳನ್ನು ಹಚ್ಚಿಕೊಳ್ಳುವ ಸಮಯಕ್ಕೆ ಸರಿಯಾಗಿ ನನಗೆ ಕರೆ ಬರುತ್ತಿತ್ತು. "ಅಂಗಾರ ನೇರವಾಗಿದೆಯೇನಮ್ಮ? ಅಕ್ಷತೆ ದುಂಡಗೆ ಹಣೆ ಮಧ್ಯದಲ್ಲಿದೆಯೆ? ಇಲ್ಲದಿದ್ದರೆ ಸ್ವಲ್ಪ ತಿದ್ದಿ ಸರಿಮಾಡು" ಎನ್ನುತ್ತಿದ್ದರು. ಆ ವಯಸ್ಸಿನಲ್ಲಿ ಕನ್ನಡಿ ನೋಡಿಕೊಂಡು ಅಂಗಾರಾಕ್ಷತೆ ಹಚ್ಚಿಕೊಂಡರೆ ಶೃಂಗಾರ ಮಾಡಿಕೊಂಡಂತಾಗುತ್ತದೆಂಬುದು ಅವರ ಭಾವನೆ ಇರಬೇಕೆಂದು ತೋರುತ್ತದೆ!

ಸಂಧ್ಯಾವಂದನೆಯಾದ ಮೇಲೆ ಮನೆಯ ಹಜಾರದ ಕಿಟಕಿಯ ಬೆಳಕಿನಲ್ಲಿ ಪಾರಾಯಣ ಮಾಡುತ್ತಿದ್ದರು ತಾತ.

ತಾತನವರಿಗೆ ಮೊಮ್ಮಕ್ಕಳೆಂದರೆ ಪಂಚಪ್ರಾಣ. ತಾರುಣ್ಯದಲ್ಲೇ ಪತ್ನಿಯನ್ನು ಕಳೆದುಕೊಂಡು ಮತ್ತೆ ಮದುವೆ ಮಾಡಿಕೊಳ್ಳಲಿಲ್ಲ ಅವರು. ಆಗಿದ್ದ ಮೂರು ನಾಲ್ಕು ಮಕ್ಕಳ ಪೈಕಿ ಉಳಿದುಕೊಂಡವರು ನಮ್ಮ ಮಾವನವರೊಬ್ಬರೆ. ಸಹಜವಾಗಿಯೇ ತಾತ ನನ್ನ ಮಾವನವರನ್ನೂ ಅವರ ಮಕ್ಕಳನ್ನೂ ತಮ್ಮ ಸರ್ವಸ್ವವೆಂದು ತಿಳಿದಿದ್ದರು.

ಪಾರಾಯಣ ಮುಗಿಯುವ ಹೊತ್ತಿಗೆ ಸುಮಾರು ಹತ್ತು ಹೊಡೆಯುತ್ತಿತ್ತು. ತಾತನ ಊಟದ ಸಮಯವಾಗುತ್ತಿತ್ತು. ತಾತ ಭೋಜನಪ್ರಿಯರು. ರುಚಿಯಾದ ಆಹಾರವನು ಮಿತಿಯಾಗಿ ಸೇವಿಸುತ್ತಿದ್ದರು.

ಊಟವಾದಮೇಲೆ ತಾತ ವೃತ್ತಪತ್ರಿಕೆಯನ್ನು ಓದುತ್ತಿದ್ದರು. ಅದನ್ನು ಓದುವುದರಲ್ಲಿ ಯಾವ ತರುಣನಿಗೂ ಇಲ್ಲದ ಶ್ರದ್ಧೆ ಅವರಿಗೆ. ಮೊದಲ ಪುಟದ ಮೊದಲಕ್ಷರದಿಂದ ಕೊನೆಯ ಪುಟದ ಕೊನೆಯಕ್ಷರದವರೆಗೂ ಅತಿ ಕುತೂಹಲದಿಂದ ಓದುತ್ತಿದ್ದರು. ಪತ್ರಿಕೆ ಓದಿದ ಬಳಿಕ ಮಡಿ ಮಾಡಿದ ಪಂಚೆ, ಜುಬ್ಬಗಳನ್ನು ಧರಿಸಿ ಹಾಯಾಗಿ ಮಲಗಿಬಿಡುತ್ತಿದ್ದರು ತಾತ! ಅವರದು ವಿಚಿತ್ರ ಸ್ವಭಾವ!

ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ತಾತ ತಂಬೂರಿಯನ್ನು ಹಿಡಿದು ತಪಸ್ಸು ಮಾಡುವ

ಮಹರ್ಷಿಯಂತೆ ಅಚಲರಾಗಿ ಕುಳಿತುಬಿಡುತ್ತಿದ್ದರು. ತಂಬೂರಿಯನ್ನು ಶ್ರುತಿಮಾಡಿ ತಮ್ಮಷ್ಟಕ್ಕೆ ತಾವೇ ಅದರ ಪರಿಶುದ್ಧ ನಾದವನ್ನು ಕಣ್ಣು ಮುಚ್ಚಿಕೊಂಡು ಕೆಲವು ನಿಮಿಷಗಳ ಕಾಲ ಕೇಳಿದ ನಂತರ ಹಾಡಲುಪಕ್ರಮಿಸುತ್ತಿದ್ದರು. ಅವರ ಸಾಧನೆ ಅಟ್ಟ ತಾಳದ ವರ್ಣದೊಂದಿಗೆ ಪ್ರಾರಂಭವಾಗುತ್ತಿತ್ತು. ಒಂದೊಂದಾವರ್ತವನ್ನು ಕಾಲ, ಮಧ್ಯಮ ಕಾಲ, ತ್ರಿಕಾಲದಲ್ಲಿ ಹಾಡಿ ಪುನಃ ತ್ರಿಕಾಲ, ಮಧ್ಯಮ ಕಾಲ, ಕಾಲ—ಹೀಗೆ ಹಿಂದಕ್ಕೆ ಬಂದು ಎರಡನೆಯ ಆವರ್ತವನ್ನು ಎತ್ತಿಕೊಳ್ಳುತ್ತಿದ್ದರು. ತಾರಸ್ಥಾಯಿಯಲ್ಲಿ ಹಾಡುವಾಗ ಎಷ್ಟೇ ಶ್ರಮವೆನಿಸಿದರೂ ಅವರ ಮನಸ್ಸಿಗೆ ತೃಪ್ತಿಯಾಗಿ ತೋರುವ ವರೆಗೂ ಸಂಗತಿಗಳನ್ನು ಪುನರಾವರ್ತನೆ ಮಾಡದೆ ಬಿಡುತ್ತಿರಲಿಲ್ಲ. ಹೀಗೆ ವರ್ಣದ ಸಾಧಕವಾದ ಮೇಲೆ ತಮಗೆ ಪ್ರಿಯವಾದ ಕೆಲವು ಕೃತಿಗಳನ್ನು ಹಾಡಿಕೊಳ್ಳುತ್ತಿದ್ದರು.

ಸಾಧಕದ ಅವಧಿಯಲ್ಲಿ ಮುಕ್ಕಾಲು ಭಾಗ ವರ್ಣಕ್ಕಾದರೆ ಕೀರ್ತನೆಗೆ ಕಾಲುಭಾಗ ಮಾತ್ರ. ಇದಕ್ಕೆ ಕಾರಣವನ್ನು ಅವರೇ ಒಮ್ಮೆ ನನಗೆ ತಿಳಿಯಹೇಳಿದ್ದರು. "ನೋಡು ರುಕ್ಮಿಣಿ, ವರ್ಣವನ್ನು ಚೆನ್ನಾಗಿ ಸಾಧಕ ಮಾಡಿದರೆ ಶಾರೀರ ಸಂಪೂರ್ಣವಾಗಿ ನಮ್ಮ ಹತೋಟಿಗೆ ಬರುತ್ತದೆ. ಕಾಲ, ಮಧ್ಯಮ ಕಾಲ, ತ್ರಿಕಾಲ ಮತ್ತೆ ತ್ರಿಕಾಲ ಮಧ್ಯಮ ಕಾಲ, ಕಾಲ— ಹೀಗೆ ಹಾಡುವುದರಿಂದ ಲಯಶುದ್ಧತೆ ದೊರೆಯುತ್ತದೆ. ಮಂದ್ರಸ್ಥಾಯಿಯಲ್ಲಿ ಸಾಧಕ ಮಾಡಿದಷ್ಟೂ ಶಾರೀರ ಸೌಲಭ್ಯ ತಾರ ಸ್ಥಾಯಿಯಲ್ಲಿ ಒದಗಿ ಬರುತ್ತದೆ. ಚೆಂಡನ್ನು ಎಷ್ಟು ರಭಸದಿಂದ ನೆಲಕ್ಕೆ ಪುಟ ಹೊಡೆಯುತ್ತೀಯೋ ಅಷ್ಟು ಎತ್ತರಕ್ಕೆ ಅದು ಚಿಮ್ಮುವುದಿಲ್ಲವೆ ಹಾಗೆ" ಎಂದು ಹೇಳಿ ತಮ್ಮ ಗುರುಗಳು ಅವರಿಗೆ ಅದೇ ರೀತಿಯಲ್ಲಿ ಬೇಗಡೆ ರಾಗದ ವರ್ಣವನ್ನು ಪಾಠಹೇಳಿದ ಕ್ರಮವನ್ನೂ ವಿವರಿಸಿದರು.

ಸುಮಾರು ಸಂಜೆ ಆರು ಗಂಟೆಯ ಹೊತ್ತಿಗೆ ತಾತ ಸುತ್ತಾಡಿಕೊಂಡು ಬರಲು ಹೊರಡುತ್ತಿದ್ದರು. ಜೊತೆಗೆ ಯಾರ ಸಹಾಯವನ್ನೂ ಅಪೇಕ್ಷಿಸುತ್ತಿರಲಿಲ್ಲ. ಮೆಟ್ಟಲು ಇಳಿಯುವಾಗ ಮತ್ತು ಹತ್ತುವಾಗ ಕೈ ಹಿಡಿದುಕೊಂಡರೆ "ನಾನೇನು ಅಷ್ಟು ಮುದುಕನೇ?" ಎಂದು ಕೈ ಕೊಡವಿಕೊಳ್ಳುತ್ತಿದ್ದರು! ಕೋಟೆಯಲ್ಲಿರುವ ವರಾಹಸ್ವಾಮಿ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡಿಕೊಂಡು ಏಳು ಗಂಟೆಗೆ ಮನೆಗೆ ಹಿಂದಿರುಗುತ್ತಿದ್ದರು. ದಾರಿಯುದ್ದಕ್ಕೂ ಇಷ್ಟಮಿತ್ರರ ಭೇಟಿ. ಅಲ್ಲಲ್ಲೇ ನಿಂತು ಪರಸ್ಪರ ಯೋಗಕ್ಷೇಮ ವಿಚಾರಣೆ.

ಮನೆಗೆ ಹಿಂದಿರುಗಿದ ಮೇಲೆ ವರಾಂಡದಲ್ಲಿ ಸ್ವಲ್ಪ ಹೊತ್ತು ಕುಳಿತು ಮಾತುಕತೆಯಾಡುವುದು ವಾಡಿಕೆ. ಆ ವೇಳೆ ಏನೇ ಕೆಲಸವಿದ್ದರೂ ಹಾಗೇ ಬಿಟ್ಟು ತಾತನ ಬಳಿಗೆ ಓಡಿ ಬರುತ್ತಿದ್ದೆ ನಾನು. ಅವರ ಮಾತನ್ನು ಕೇಳುವುದೆಂದರೆ ಹಬ್ಬದ ಊಟ ಮಾಡಿದಂತೆ! ಮಾತು ಮಾತಿಗೂ ಹಾಸ್ಯ. ಹೆಜ್ಜೆ ಹೆಜ್ಜೆಗೂ ಅವರ ಅನುಭವಾಮೃತದ ರಸಪಾಕ. ತಾತನವರಿಗೆ ಅಸಾಧಾರಣ ಜ್ಞಾಪಕ ಶಕ್ತಿ. ತಮ್ಮ ಎಳೆಯ ವಯಸ್ಸಿನಲ್ಲಿ ನಡೆದಿದ್ದ ಸಂಗತಿಗಳನ್ನು ಕೂಡ ನಿನ್ನೆ ಮೊನ್ನೆ ನಡೆಯಿತೋ ಅನ್ನುವಷ್ಟು ವಿಶದವಾಗಿ ಕಣ್ಣಿಗೆ ಕಟ್ಟಿದಂತೆ ಹೇಳುತ್ತಿದ್ದರು. ಅವರ ಎಂಭತ್ತಾರು ವರ್ಷಗಳ ತುಂಬುಜೀವನದಲ್ಲಿ ನಡೆದ ಘಟನಾವಳಿಗಳೆಷ್ಟೋ. ಕೆಲವನ್ನು ಜ್ಞಾಪಿಸಿಕೊಂಡು ಕಣ್ಣೀರಿಡುತ್ತಿದ್ದರು. ಕೆಲವನ್ನು ನೆನೆದಾಗ ಅವರ ಮುಖದಲ್ಲಿ ನಗೆ ಮಿಂಚುತ್ತಿತ್ತು.

ದಿನಕ್ಕೊಂದು ವಿಷಯವನ್ನು ತಾತನವರಲ್ಲಿ ಪ್ರಸ್ತಾಪಿಸುತ್ತಿದ್ದೆ. ಬಹು ಸ್ವಾರಸ್ಯವಾಗಿ ಮಕ್ಕಳಿಗೆ ಕತೆ ಹೇಳಿದಂತೆ ಹೇಳುತ್ತಿದ್ದರು. ತಾತನವರು ಮೈಸೂರನ್ನು ಬಿಟ್ಟು ಮದ್ರಾಸಿಗೆ ತೆರಳುವವರೆಗೂ * ಪ್ರತಿ ಸಂಜೆ ಹೀಗೆ ಮಾತುಕತೆ

* ಶ್ರೀಮಾನ್ ವಾಸುದೇವಾಚಾರ್ಯರು ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಮದ್ರಾಸಿನ ಅಡೆಯಾರಿನಲ್ಲಿರುವ ಪ್ರಸಿದ್ಧ ಕಲಾಕ್ಷೇತ್ರದ ದಿಗ್ದರ್ಶಕರಾಗಿದರು.

ಯಾಡುವುದು ದಿನಚರಿಯಾಗಿ ಬಿಟ್ಟಿತ್ತು. ಇದರ ಫಲವಾಗಿ ಅವರ ಪೂರ್ವಜೀವನದ ಪೂರ್ಣ ಪರಿಚಯದ ಭಾಗ್ಯ ನನಗೆ ಲಭಿಸಿತು.

"ಕಾನಕಾನಹಳ್ಳಿ ವಾಸುದೇವಾಚಾರ್ಯರು" ಎಂದು ನಿಮಗೆ ಹೆಸರು ಬರಲು ಕಾರಣವೇನು ತಾತ?" ಎಂದು ಒಮ್ಮೆ ಕೇಳಿದೆ.

ಆಗ ತಾತನವರು ನಕ್ಕು ಹೀಗೆ ಹೇಳಿದರು: ಆ "ವಿಷಯ ನಿನಗೆಷ್ಟು ಗೊತ್ತೋ ನನಗೂ ಅಷ್ಟೆ. ನನ್ನ ಹಿರಿಯರಾರೂ ಕಾನಕಾನ ಹಳ್ಳಿಯವರಲ್ಲ. ನಾನು ಹುಟ್ಟಿದ್ದು ಕಾನಕಾನಹಳ್ಳಿಯಲ್ಲಲ್ಲ. ನನ್ನ ತಂದೆ ಸುಬ್ರಮಣ್ಯಾಚಾರ್ಯರು ಕೊಯಿಮುತ್ತೂರು ಜಿಲ್ಲೆಯ ಚೇವೂರಿನಲ್ಲಿ ಪ್ರಖ್ಯಾತ ವೈದಿಕ ಮನೆತನವೊಂದರಲ್ಲಿ ಹುಟ್ಟಿದವರು. ದಾಯಾದಿ ಮತ್ಸರದಿಂದ ಕಲುಷಿತವಾಗಿದ್ದ ಚೇವೂರನ್ನು ಬಿಟ್ಟು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಬಂದು ನೆಲಸಿದರು. ನನ್ನ ತಾಯಿ ಕೃಷ್ಣಾಬಾಯಿ –ನನ್ನ ತಂದೆಯವರ ಮೂರನೆಯ ಪತ್ನಿ. ಅವರ ಸ್ಥಳ ನರಸೀಪುರ ತಾಲ್ಲೋಕು. ನಾನು ಹುಟ್ಟಿದ್ದು ಮೈಸೂರಿನಲ್ಲಿ. ಅಂತೂ ಹೇಗೋ ನಾನು ಕಾನಕಾನ ಹಳ್ಳಿಯವನಾದೆ. ನನ್ನ ಬಂಧುಗಳ ಪೈಕಿ ಕೆಲವರು ಆ ಹಳ್ಳಿಯಲ್ಲಿದ್ದ ಕಾರಣವೋ ಏನೋ ಜನ ನನ್ನ ಸ್ಥಳ ಕಾನಕಾನಹಳ್ಳಿಯೆಂದು ಗೊತ್ತು ಮಾಡಿರಬೇಕು. ಅವರ ನಿರ್ಣಯಕ್ಕೆ ನಾನಾದರೂ ಏಕೆ ಅಡ್ಡ ಬರಬೇಕು ಎಂದು ಸುಮ್ಮನಿದ್ದೇನೆ."

"ನಿಮ್ಮ ತಂದೆ ವೈದಿಕ ಮನೆತನದವರು ಎನ್ನುತ್ತೀರ. ಹಾಗಾದರೆ ನೀವು ಸಂಗೀತ ಪ್ರಪಂಚಕ್ಕೆ ಕಾಲಿಟ್ಟದ್ದು ಹೇಗೆ? ನೃತ್ಯ, ಸಂಗೀತ, ನಾಟಕ ಈ ಕಲೆಗಳಿಗೆ ಆಗಿನ ಕಾಲದಲ್ಲಿ ಗೌರವಸ್ಥ ಮನೆತನದಲ್ಲಿ ಅಷ್ಟು ಮಾನ್ಯತೆ ಇರಲಿಲ್ಲವಂತೆ?" ಎಂದು ಪ್ರಶ್ನಿಸಿದೆ ನಾನು.

"ಅದೊಂದು ದೊಡ್ಡ ಕಥೆ ರುಕ್ಮಿಣಿ. ನನ್ನ ತಂದೆಯವರು ಕಾಲವಾದಾಗ ನನಗೆ ಸುಮಾರು ಮೂರು ವರುಷ. ಆ ಬಳಿಕ ನನ್ನ ಪಾಲನೆಯ ಜವಾಬ್ದಾರಿ ನನ್ನ ತಾಯಿಯ ತಂದೆ ಗೋಪಾಲಾಚಾರ್ಯರ ಮೇಲೆ ಬಿದ್ದಿತು. ನನ್ನ ಅಜ್ಜ ದಿವಾನ್ ರಂಗಾಚಾರ್ಲು ಅವರನ್ನು ಆಶ್ರಯಿಸಿ ನನ್ನ ತಂದೆಯವರ ಅರಮನೆಯ ವೇತನವನು ನನ್ನ ಹೆಸರಿಗೆ ಮಾಡಿಸಿಕೊಟ್ಟರು. ಸಂಬಳ ಎಷ್ಟು ಅಂತೀಯೆ? ಹದಿನೈದು ಹಣ ಅಂದರೆ ಸುಮಾರು ನಾಲ್ಕೂವರೆ ರೂಪಾಯಿ!

"ನನ್ನನ್ನು ನನ್ನ ತಂದೆಗಿಂತಲೂ ದೊಡ್ಡ ಸಂಸ್ಕೃತ ವಿದ್ವಾಂಸನನ್ನಾಗಿ ಮಾಡಬೇಕು, ಪುರಾಣಿಕನನ್ನಾಗಿ ಮಾಡಬೇಕು ಎಂದು ನನ್ನ ತಾತನ ಆಸೆ. ಮೈಸೂರಿಗೆ ನನ್ನನ್ನು ಕರೆದುಕೊಂಡು ಬಂದು ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ಶಿಷ್ಯವೃತ್ತಿಗೆ ಸೇರಿಸಿದರು. ನಂತರ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆ. ಸಂಸ್ಕೃತ ವ್ಯಾಸಂಗವೇನೋ ನಿರಾತಂಕವಾಗಿ ಸಾಗುತ್ತಿತ್ತು. ಆದರೆ ನನ್ನ ಮನಸ್ಸು ಸಂಗೀತಾಭ್ಯಾಸದ ಕಡೆಗೆ ಹರಿಯುತ್ತಿತ್ತು. ನನ್ನ ಸೋದರ ಮಾವ ಪದ್ಮನಾಭಾಚಾರ್ಯರು ನನ್ನ ಈ ಗುಪ್ತ ಆಸೆಯನ್ನು ಮನಗಂಡರು ಮತ್ತು ಅವರೇ ನನಗೆ ಸಂಗೀತದ ಗುರುಗಳನ್ನು ಗೊತ್ತುಮಾಡಿಕೊಟ್ಟರು. ನನಗೆ 'ಸಪಸ' ಕೂಗಿಸಿದ ಪ್ರಥಮ ಗುರುಗಳು ಸುಬ್ಬರಾಯರು. ಅವರು ಅರಮನೆಯ ವಿದ್ವಾಂಸರಾಗಿದ್ದರು.

"ನನ್ನ ದುರದೃಷ್ಟವಶಾತ್ ನಾನು ಸುಬ್ಬರಾಯರಲ್ಲಿ ಸಂಗೀತಾಭ್ಯಾಸ ಮಾಡುತ್ತಿರುವ ವಿಷಯ ನನ್ನ ತಾತನಿಗೆ ಹೇಗೋ ತಿಳಿಯಿತು. ವಂಶದ ಗೌರವಕ್ಕೆ ಕಳಂಕ ತರುವ ಕೆಲಸಕ್ಕೆ ಕೈ ಹಾಕಿರುವೆನೆಂದು ಕಿಡಿಕಿಡಿಯಾದರು. ಅಂದಿನಿಂದ ಸಂಗೀತ ಕಲಿಯಬಾರದು ಮತ್ತು ಸಂಗೀತ ಕಛೇರಿಗಳಿಗೆ ಹೋಗಬಾರದೆಂದು ಕಟ್ಟಪ್ಪಣೆ ಮಾಡಿದರು. ಆಗ ನನಗಾದ ಹೃದಯವೇದನೆ ಹೇಳತೀರದು.

"ಇಷ್ಟರಲ್ಲಿ ಇನ್ನೊಂದು ವಿಷಯ ನಡೆಯಿತು. ಪಾಠಶಾಲೆಯ ಪಠ್ಯ ವಿಷಯಗಳಲ್ಲಿ ಕೆಲವು ಬದ-

ಲಾವಣೆಗಳಾದವು. ಇದರ ಪರಿಣಾಮವಾಗಿ ಸಂಗೀತಾಧ್ಯಯನಕ್ಕೂ ಪಾಠಶಾಲೆಯಲ್ಲಿ ಅವಕಾಶ ಕಲ್ಪಿಸಲಾಯಿತು. ಪ್ರತಿಯೊಬ್ಬ ವಿದ್ಯಾರ್ಥಿಯೂ ಎರಡೆರಡು ಶಾಸ್ತ್ರಗಳನ್ನು ಕಲಿಯಬೇಕೆಂದೂ ಪಠ್ಯವಿಷಯಗಳನ್ನು ಬೇರೆ ಬೇರೆ ಚೀಟಿಗಳಲ್ಲಿ ಗುರುತು ಮಾಡಿ ಪಾಠಶಾಲೆಯ ವಿನಾಯಕನ ಮುಂದೆ ಹಾಕಿ ಸಣ್ಣ ಮಗುವೊಂದರ ಕೈಯಲ್ಲಿ ಎತ್ತಿಸುವುದೆಂದೂ ವಿದ್ಯಾರ್ಥಿಗಳ ಹೆಸರಿಗೆ ಬಂದ ಎರಡು ಶಾಸ್ತ್ರಗಳನ್ನು ಅವರು ಅಧ್ಯಯನ ಮಾಡತಕ್ಕದ್ದೆಂದೂ ವ್ಯವಸ್ಥೆಯಾಯಿತು. ಗಾನಸರಸ್ವತಿ ತಾನಾಗಿ ನನ್ನನ್ನು ಒಲಿದು ಬಂದಳು! ನನ್ನ ಹೆಸರಿನಲ್ಲಿ ಚೀಟಿಯೆತ್ತಿದಾಗ 'ಸಂಗೀತ ಮತ್ತು ಸಾಹಿತ್ಯ' ಎಂದು ಬಂದಿತು. ಅಂದಿನಿಂದಲೇ ವೀಣೆ ಪದ್ಮನಾಭಯ್ಯನವರಲ್ಲಿ ನನ್ನ ಸಂಗೀತಾಭ್ಯಾಸ ಮತ್ತೆ ಮೊದಲಾಯಿತು."

"ನೀವು ಪಟ್ನಂ ಸುಬ್ರಮಣ್ಯಯ್ಯರ್‌ರವರ ಬಳಿಗೆ ಹೋದದ್ದು ಹೇಗೆ?"

"ಒಂದು ಸಾರೆ ಪಾಠಶಾಲೆಯಲ್ಲಿ ಪಟ್ನಂ ಸುಬ್ರಮಣ್ಯಯ್ಯರ್ ಮತ್ತು ಮಹಾ ವೈದ್ಯನಾಥಯ್ಯರ್ ಅವರುಗಳ ಕಛೇರಿಗಳನ್ನು ಕೇಳುವ ಸುಯೋಗ ಲಭಿಸಿತು. ಪಟ್ನಂ ಸುಬ್ರಮಣ್ಯಯ್ಯರ್‌ರವರ ಅಮೋಘ ಸಂಗೀತ ಸುಧೆಯನ್ನು ಪಾನಮಾಡಿದ ಮೇಲೆ ಹೇಗಾದರೂ ಮಾಡಿ ಅವರ ಶಿಷ್ಯನಾಗಬೇಕೆಂಬ ಆಸೆ ಅಂಕುರಿಸಿತು. ಆದರೆ ಹೋಗುವ ಬಗೆ? ಗುರುದಕ್ಷಿಣೆಗೆ ಹಣ? ಆಗ ನನ್ನ ಭಾಗ್ಯಸೂರ್ಯನ ಉದಯವಾಯಿತು. ಪ್ರಭು ಚಾಮರಾಜ ಒಡೆಯರ ಕೃಪಾಕಟಾಕ್ಷಕ್ಕೆ ಪಾತ್ರನಾದೆ. ವಿದ್ಯಾರ್ಥಿವೇತನವನ್ನು ಕೊಟ್ಟು ತಿರವೆಲ್ಲೂರಿಗೆ ಕಳುಹಿಸಿಕೊಟ್ಟರು ನನ್ನ ಪ್ರಭುಗಳು. ಆರು ವರ್ಷಗಳ ಕಾಲ ಗುರುಸೇವೆ ಮಾಡಿ ಅವರ ಆಶೀರ್ವಾದ ಪಡೆದು ಹಿಂದಿರುಗಿದೆ."

"ನಿಮ್ಮ ಗುರುಕುಲವಾಸ ಹೇಗೆ ನಡೆಯಿತು?"

"ನನ್ನ ಗುರುಗಳ ಮನೆಯಲ್ಲಿ ಆಗಿದ್ದವರೆಂದರೆ ಅವರ ಅತ್ತೆ, ಪತ್ನಿ, ನಾದಿನಿ, ಇಷ್ಟೇ ಮಂದಿ. ಮಕ್ಕಳಿರಲಿಲ್ಲ. ಪರಮೇಶ್ವರಯ್ಯ ಮತ್ತು ಕೊಯಿಮತ್ತೂರು ಕೆಂಪೇಗೌಡರೆಂಬ ಇಬ್ಬರು ಶಿಷ್ಯರು ಮಾತ್ರ. ನಾವು ಮೂವರೂ ಗುರುಗಳ ಮನೆಗೆಲಸವನ್ನು ಹಂಚಿಕೊಂಡಿದ್ದೆವು. ಗುರುಗಳ ಧೋತ್ರ, ಅವರ ಪತ್ನಿಯ ಸೀರೆಗಳನ್ನು ನದಿಗೆ ತೆಗೆದುಕೊಂಡು ಹೋಗಿ ಮಡಿ ಮಾಡಿ ತರುವುದು, ತಾಮ್ರದ ಕೊಡಗಳನ್ನು ಶುಭ್ರವಾಗಿ ತೊಳೆದು ಕುಡಿಯುವ ನೀರು ತರುವುದು, ದೇವರ ಪೂಜಾ ಪಾತ್ರೆಗಳನ್ನು ತೊಳೆದುಕೊಡುವುದು, ರಾತ್ರಿಯ ವೇಳೆ ಗುರುಗಳಿಗೆ ಹಾಸಿಗೆ ಹಾಸಿ ಕೊಡುವುದು ಮತ್ತು ಅವರಿಗೆ ನಿದ್ರೆ ಹತ್ತುವ ವರೆಗೂ ಅವರ ಕಾಲು ಒತ್ತುವುದು- ಇವು ನನ್ನ ಪಾಲಿನ ಕೆಲಸಗಳು. ಗುರುಗಳನ್ನು ಎಂದೂ ನಮಗೆ ಪಾಠ ಹೇಳಿಕೊಡಿ ಎಂದು ಕೇಳುವ ಧೈರ್ಯ ನಮಗಿರಲಿಲ್ಲ. ಅವರು ಹೇಳಿಕೊಟ್ಟಾಗ ಮತ್ತು ಹೇಳಿಕೊಟ್ಟುದನ್ನು ಶ್ರದ್ಧೆಯಿಂದ ಕಲಿಯುವುದು ನಮ್ಮ ಕೆಲಸವಾಗಿತ್ತು."

"ನಿಮ್ಮ ಗುರುಗಳಿಂದ ನೀವು ಎಷ್ಟು ವರ್ಣ, ಎಷ್ಟು ಕೀರ್ತನೆಗಳನ್ನು ಕಲಿತಿರಿ?"

"ನೂರು ವರ್ಣ, ಇನ್ನೂರು ಕೀರ್ತನೆಗಳನ್ನು ಕಲಿಯಬೇಕೆಂಬ ಹಂಬಲವೇ ನಮಗಿರಲಿಲ್ಲ ಆಗಿನ ಕಾಲದಲ್ಲಿ. ನಾಲ್ಕು ವರ್ಣ, ಹತ್ತು ಕೀರ್ತನೆಗಳನ್ನಷ್ಟೇ ಕಲಿತರೂ ಕಲಿತದ್ದರಲ್ಲಿ ಪರಿಪೂರ್ಣತೆ ಗಳಿಸಬೇಕೆಂದು ಹವಣಿಸುತ್ತಿದ್ದೆವು. ರಾಗಾಲಾಪನೆ, ಮಧ್ಯಮಕಾಲವಿನ್ಯಾಸ, ಪಲ್ಲವಿ, ನೆರವಲು ಇವುಗಳಿಗೇ ಆಗ್ಗೆ ಹೆಚ್ಚು ಪ್ರಾಮುಖ್ಯ."

"ನಿಮ್ಮ ಗುರುಗಳ ಕಛೇರಿಗಳನ್ನು ನೀವು ಅನೇಕ ಬಾರಿ ಕೇಳಿರಬೇಕಲ್ಲ. ಅದರ ಕ್ರಮ ಏನು?"

"ನಮ್ಮ ಗುರುಗಳ ಸಂಗಡ ಕಛೇರಿಗಳಿಗೆ ಹೋಗುತ್ತಿದ್ದಾಗ ಸುಮ್ಮನೆ ಕುಳಿತು ಸಂಗೀತ ಕೇಳಿ, ಆನಂದಿಸುವ ಹಾಗಿರಲಿಲ್ಲ. ಕಛೇರಿಗಳಿಗೆ ಹೋಗುವ ಮುನ್ನ ಗುರುಗಳು ಕೆಲವು ವಿಷಯಗಳನ್ನು ಗಮನಿಸಬೇಕೆಂದು ಅಪ್ಪಣೆ ಮಾಡುತ್ತಿದ್ದರು. ಹಾಡಿಕೆಗೂ-ಪಕ್ಕವಾದ್ಯಕ್ಕೂ ಸಾಮ

ರಸ್ಯವಿತ್ತೆ? ಸ್ವರ ಹಾಡುವಾಗ ವಿಷಮಾವರ್ತನಗಳೇನಾದರೂ ಇದ್ದವೇ ? ಈ ಎಲ್ಲ ವಿವರಗಳನ್ನೂ ಗಮನವಿಟ್ಟು ಕೇಳಿ ಗುರುಗಳಿಗೆ ವರದಿ ಮಾಡಬೇಕಿತ್ತು. ಈ ರೀತಿಯಾಗಿ ಕಛೇರಿಗಳನ್ನು ಕೇಳುವ ಸಮಯದಲ್ಲೂ ಒಂದು ರೀತಿಯ ಶಿಕ್ಷಣಕೊಡುತ್ತಿದ್ದರು. ನಮ್ಮ ಗುರುಗಳ ಕಛೇರಿಯಲ್ಲಿ ನೆರವಲು ಮತ್ತು ಮಧ್ಯಮಕಾಲಗಳು ಅತ್ಯಂತ ರಸವತ್ತಾದ ಭಾಗಗಳೆನ್ನಬಹುದು. ಕಛೇರಿ ವರ್ಣದಿಂದ ಪ್ರಾರಂಭವಾಗುತ್ತಿತ್ತು. ಅನಂತರ ಒಂದೆರಡು ಮಧ್ಯಮಕಾಲ ಕೀರ್ತನೆಗಳು, ಅದಾದ ಬಳಿಕ ಘನರಾಗಗಳು ಮತ್ತು ಮಧ್ಯಮಕಾಲ, ಇಷ್ಟಾದ ಮೇಲೆ ಯಾವ ರಾಗದ ವರ್ಣವನ್ನು ಹಾಡುತ್ತಿದ್ದರೋ ಆ ರಾಗವನ್ನೇ ವಿಸ್ತಾರ ಮಾಡಿ ಪಲ್ಲವಿ ಹಾಡಿ, ನೆರವಲ್ ಮಾಡಿ ನಾಲ್ಕಾವರ್ತ ಸ್ವರ ಹಾಕಿ ಕಛೇರಿಯನ್ನು ಮುಗಿಸುತ್ತಿದ್ದರು. ಸ್ವರ ಕಲ್ಪನೆಗಾಗಿ, ತಾಳವಾದ್ಯಗಳ ತನಿಗಾಗಿ ಹೆಚ್ಚು ಕಾಲವನ್ನು ಕಳೆಯುತ್ತಿರಲಿಲ್ಲ. ಸ್ವರ ಕಲ್ಪನೆ ತಾತ್ಕಾಲಿಕ ಮನೋಧರ್ಮದ್ದಾಗಿರುತ್ತಿತ್ತು. ಅದಕ್ಕಾಗಿ ಎಂದೂ ಪೂರ್ವಸಿದ್ಧತೆಗಳನ್ನು ಮಾಡಿಕೊಂಡು ಮುಕ್ತಾಯ ಸ್ವರಗಳನ್ನು ಹಾಡುತ್ತಿರಲಿಲ್ಲ. ಕಛೇರಿಗಳಲ್ಲಿ ಸಾಮಾನ್ಯವಾಗಿ ಸುಲಭ ತಾಳಗಳ ಪಲ್ಲವಿಗಳನ್ನು ಬಿಟ್ಟು ಬೇರೆ ಹಾಡುತ್ತಿರಲಿಲ್ಲ. ಪಕ್ಕವಾದ್ಯ ನುಡಿಸುವ ವಿದ್ವಾಂಸರಿಗೆ ತೊಡಕಾಗುವ ಯಾವ ರೀತಿಯ ಸಮಸ್ಯೆಯನ್ನೂ ಕಛೇರಿಯಲ್ಲಿ ತಂದೊಡ್ಡುತ್ತಿರಲಿಲ್ಲ."

"ಗುರುಗಳ ಅನುಗ್ರಹ ಪಡೆದು ಬಂದಮೇಲೆ ನೀವು ದೇಶಸಂಚಾರ ಹೊರಟು ಕಛೇರಿಗಳನ್ನು ಮಾಡಿರಬೇಕಲ್ಲವೆ, ತಾತ ?"

"ನೋಡು ರುಕ್ಮಿಣಿ, ನನ್ನ ಪ್ರಪ್ರಥಮ ಕಚೇರಿ ನಡೆದದ್ದು ೧೯೦೮ ರಲ್ಲಿ ಮೈಸೂರಿನ ಸದ್ವಿದ್ಯಾ ಪಾಠಶಾಲೆಯಲ್ಲಿ. ಅಂದು ಸಭೆಯಲ್ಲಿ ಕಲಾಭಿಮಾನಿಗಳ ಪರವಾಗಿ ವೈಣಿಕ ಶಿಖಾಮಣಿ ಶೇಷಣ್ಣನವರು ಬಂಗಾರದ ತೋಡವನ್ನು ಕೊಟ್ಟು ಸನ್ಮಾನಿಸಿ ಆಶೀರ್ವದಿಸಿದರು. ನಂತರ ನನ್ನ ದೇಶಾಟನೆ ಮೊದಲಾಯಿತು ದಕ್ಷಿಣದಲ್ಲಿ ಕೊಯಿಮತ್ತೂರಿನಿಂದ ಹಿಡಿದು ಉತ್ತರದಲ್ಲಿ ಜಲಂಧರಿನವರೆಗೂ ಸಂಚಾರ ಮಾಡಿ ರಾಜಾಸ್ಥಾನ, ಯತಿಗಳ ಮಠ, ಸಮಾಜ, ವಿದ್ಯಾಗೋಷ್ಠಿಗಳಲ್ಲಿ ಕಛೇರಿ ಮಾಡಿ ಮರಳಿದೆ. ಆಗಿನ ದಿನಗಳಲ್ಲಿ ಈಗಿನಂತೆ ಕಲಾವಿದನೊಬ್ಬನ ಕಾರ್ಯಚಟುವಟಿಕೆಗಳು ಬೆಳಕಿಗೆ ಬರಲು ಅಷ್ಟು ಅವಕಾಶವಿರುತ್ತಿರಲಿಲ್ಲ. ಅಲ್ಲದೆ ಈಗ ಕಛೇರಿಗೆ ಸಾವಿರಾರು ರೂಪಾಯಿಗಳ ಸಂಭಾವನೆಯನ್ನು ನೀಡುವಂತೆ ಆಗ ಕೊಡುತ್ತಿರಲಿಲ್ಲ. ಶೇಷಣ್ಣನವರಂಥ ಘನವಿದ್ವಾಂಸರೇ ಕೇವಲ ಐದು ರೂಪಾಯಿಗೆಲ್ಲ ಕಛೇರಿ ಮಾಡುತ್ತಿದ್ದ ಕಾಲ ಅದು. ಹೀಗಾಗಿ ನಮ್ಮ ಸಂಪಾದನೆಯೂ ಕಮ್ಮಿ. ನಮ್ಮ ಹೆಸರಿಗೆ ವ್ಯಾಪ್ತಿಯೂ ಕಮ್ಮಿ."

"ನಿಮಗೆ ಯಾವ ಕೀರ್ತನೆ, ಯಾವ ರಾಗಗಳ ಮೇಲೆ ಹೆಚ್ಚು ಪ್ರೀತಿ ?"

"ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಭೈರವಿ, ಕಲ್ಯಾಣಿ, ತೋಡಿ, ಶಂಕರಾಭರಣ, ಸಾವೇರಿ, ಕಾಂಬೋಧಿ, ಕೇದಾರಗೌಳ, ಬೇಗಡೆ, ಶಹಾನ, ಕಾನಡ ಈ ಕೆಲವು ರಾಗಗಳನ್ನು ಕಂಡರೆ ನನಗೆ ಹೆಚ್ಚು ಪ್ರೀತಿ. ತ್ಯಾಗರಾಜಸ್ವಾಮಿಗಳ 'ರಾಮಬಾಣ' ದೀಕ್ಷಿತರ 'ಚಿಂತಯ ಮಾಕಂದ ಮೂಲಕಂದಂ', ನನ್ನ ಗುರುಗಳ 'ಇಂತ ಕಂಟೆ ಕಾವಲೆನ' –ಮುಂತಾದ ಕೀರ್ತನೆಗಳನ್ನು ತಪ್ಪದೆ ಎಲ್ಲ ಕಛೇರಿಗಳಲ್ಲೂ ಹಾಡುತ್ತಿದ್ದೆ. ಶಂಕರಾಭರಣದಲ್ಲಿ 'ಸಾಮಿ ನಿನ್ನೆ ಕೋರಿ', ಕಾಂಬೋಧಿಯಲ್ಲಿ 'ಎರನಸಾಮಿ ಪಗವಾ', 'ಪರಿಮಳ ರಂಗಪತೆ', ತೋಡಿಯಲ್ಲಿ 'ಗಾನಲೋಲ ಕರುಣಾಲವಾಲ' — ಈ ಕೆಲವು ಪಲ್ಲವಿಗಳು ನನಗೆ ಅಚ್ಚುಮೆಚ್ಚು."

"ನೀವು ಕೀರ್ತನೆಗಳನ್ನು ರಚಿಸಲು ಪ್ರಾರಂಭಿಸಿದ್ದು ಯಾವಾಗ ?"

"ಮೈಸೂರಿಗೆ ೧೯೦೦ ರಲ್ಲಿ ಪ್ಲೇಗ್ ಉಪದ್ರವ ಕಾಲಿಟ್ಟಾಗ ದಿನಕ್ಕೆ ನೂರಾರು ಹೆಣಗಳು ಬೀಳುತ್ತಿದ್ದವು. ಆ ಸನ್ನಿವೇಶದಲ್ಲಿ ನನ್ನ ತಂದೆಯವರ

ಸ್ನೇಹಿತರೂ ಮತ್ತು ನನ್ನ ಹಿತೈಷಿಗಳೂ ಆದ ಗೋಪಾಲರಾಜೇ ಅರಸಿನವರು 'ವಾಸು, ಯಾವ ಘಳಿಗೆಯಲ್ಲಿ ಯಾರನ್ನು ಆಹುತಿ ತೆಗೆದುಕೊಳ್ಳುತ್ತದೋ ಈ ಜಾಡ! ನಿನ್ನ ಹೆಸರು ಶಾಶ್ವತವಾಗಿ ಉಳಿಯುವಂತೆ ಕೆಲವು ಕೃತಿಗಳನ್ನಾದರೂ ರಚಿಸು' ಎಂದು ಹೇಳಿ ಒತ್ತಾಯಪಡಿಸಿ ಕೃತಿ ರಚನೆಯ ಕಾರ್ಯದಲ್ಲಿ ತೊಡಗಿಸಿದರು. ಮಾಯಾ ಮಾಳವಗೌಳದಲ್ಲಿ 'ಚಿಂತಯೇಽಹಂ ಜಾನಕೀ ಕಾಂತಂ' ಎಂಬ ಒಂದು ಕೀರ್ತನೆಯನ್ನು ರಚಿಸಿ ಸುಪ್ರಸಿದ್ಧ ಸಂಸ್ಕೃತ ಪಂಡಿತರಾಗಿದ್ದ ಚಾಮ ರಾಜನಗರದ ರಾಮಾಶಾಸ್ತ್ರಿಗಳ ಬಳಿಗೆ ಹೋಗಿ ಹಾಡಿ ತೋರಿಸಿದೆ. ಅವರು ಬಹಳ ಸಂತೋಷ ಪಟ್ಟು ಆಶೀರ್ವಾದ ಮಾಡಿ ಕೃತಿ ರಚನೆಯ ಕೆಲಸವನ್ನು ಮುಂದುವರೆಸಿಕೊಂಡು ಹೋಗುವಂತೆ ಪ್ರೋತ್ಸಾಹಿಸಿದರು."

"ತಾತ, ಇನ್ನೊಂದು ವಿಷಯವನ್ನು ಕೇಳಿದರೆ ನೀವು ಮನಸ್ಸಿಗೆ ಬೇಸರ ಮಾಡಿಕೊಳ,ಬಾರದು. ನೀವು ಹೆಚ್ಚು ಮಂದಿ ಶಿಷ್ಯರನ್ನು ತಯಾರು ಮಾಡಿಲ್ಲ ಎನ್ನುತ್ತಾರಲ್ಲ ಜನ, ಇದಕ್ಕೇನು ಕಾರಣ?"

"ನಾನೇನು ಉತ್ತರ ಹೇಳಲಿ ಈ ಪ್ರಶ್ನೆಗೆ? 'ನಿಮ್ಮ ಗುರುಗಳು ಎಷ್ಟು ಮಂದಿ ಶಿಷ್ಯಂದಿರನ್ನು ತಯಾರು ಮಾಡಿದರು? ವೀಣೆ ಶೇಷಣ್ಣನವರು ಎಷ್ಟು ಜನ ಶಿಷ್ಯಂದಿರನ್ನು ತಯಾರು ಮಾಡಿದರು?' ಎಂದು ಲೆಕ್ಕ ಕೇಳಿದರೆ ಏನು ಹೇಳಲು ಬರುತ್ತದೆ? ಗುರುಗಳಿಗೆ ತಕ್ಕ ಶಿಷ್ಯ, ಶಿಷ್ಯನಿಗೆ ತಕ್ಕ ಗುರು ದೊರೆಯುವುದು ಅತಿ ವಿರಳ."

"ಮದ್ರಾಸಿನವರು ಹೇಗಿದ್ದಾರೆ ತಾತ ನಿಮ್ಮ ವಿಷಯದಲ್ಲಿ?" ಎಂದು ಈಗ್ಗೆ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ನಮ್ಮ ಮನೆಗೆ ಬಂದಿದ್ದಾಗ ಕೇಳಿದೆ.

"ಅಲ್ಲಿಯ ಜನ ಬಹಳ ಗೌರವದಿಂದ, ವಿಶ್ವಾಸ ದಿಂದ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ನಿಜವಾದ ವಿದ್ಯೆಗೆ, ಕಲೆಗೆ ಅಲ್ಲಿ ಪ್ರೋತ್ಸಾಹವಿದೆ, ಪುರಸ್ಕಾರವಿದೆ. ನನಗಂತೂ ಮದ್ರಾಸು ಬಹು ಒಗ್ಗಿ ಹೋಗಿದೆ" ಎಂದು ಹೇಳಿದರು ತಾತ.

"ರಾಮಾಯಣ ನೃತ್ಯನಾಟಕದ ಕೆಲಸ ಎಲ್ಲಿಯವರೆಗೆ ಬಂದಿದೆ ತಾತ?" ಎಂದು ಕೇಳಿದಾಗ ತಾತ ತಮ್ಮ ಒಂದು ವಿಸ್ಮಯಕಾರಕ ಅನುಭವವನ್ನು ತಿಳಿಸಿದರು.

"ದೈವ ಸಂಕಲ್ಪ ಏನು ಹೇಳಲಿ ರುಕ್ಮಿಣಿ. ನನ್ನ ರಚನಾಕಾರ್ಯವನ್ನು ಶ್ರೀರಾಮ ನಾಮ ಸಂಕೀರ್ತನದಿಂದ ಪ್ರಾರಂಭಮಾಡಿದೆ. ನೂರೆಂಟಾವರ್ತಿ ರಾಮಾಯಣ ಪಾರಾಯಣವನ್ನು ದೇವರು ನನ್ನಿಂದ ಮಾಡಿಸಿದ. ನನ್ನ ಜೀವನದ ಕೊನೆಯ ದಿನಗಳಲ್ಲಿ ಮತ್ತೆ ಶ್ರೀರಾಮಚಂದ್ರನ ಸೇವೆ ಪ್ರಾಪ್ತವಾಗಿದೆ. ಒಂದು ಸ್ವಾರಸ್ಯವಾದ ಸಂಗತಿ ನಿನಗೆ ಹೇಳಬೇಕಾಗಿದೆ. ರಾಮಾಯಣ ನೃತ್ಯ ನಾಟಕದ ಮೊದಲನೆಯ ಘಟ್ಟ ಸೀತಾ ಸ್ವಯಂವರಕ್ಕೆ ನಿಲ್ಲುತ್ತದೆ. ಆ ಭಾಗದ ಸಂಗೀತ ನೃತ್ಯ ಜೋಡಣೆ ಮುಗಿದು ರಂಗಭೂಮಿಯ ಮೇಲೆ ಪ್ರದರ್ಶಿತವಾಗುವುದಕ್ಕೆ ಮುಂಚೆ ತಿರುಪತಿಗೆ ಹೋಗಿ ಶ್ರೀನಿವಾಸ ದೇವರ ಸನ್ನಿಧಿಯಲ್ಲಿ ಅದನ್ನು ಸಮರ್ಪಿಸಬೇಕೆಂಬ ಆಸೆಯಾಯಿತು ನನಗೆ. ಶ್ರೀಮತಿ ರುಕ್ಮಿಣಿದೇವಿ ಅದಕ್ಕೆ ತಕ್ಕ ಸಿದ್ಧತೆ ನಡೆಸಿದರು. ತಿರುಪತಿಯ ದೇವಾಲಯವನ್ನು ನಾವು ಸೇರಿದಾಗ ಮಧ್ಯಾಹ್ನ ನಾಲ್ಕು ಘಂಟೆಯ ಸಮಯ. ಗರ್ಭಗುಡಿಯ ಬಾಗಿಲು ಹಾಕಿತ್ತು. ದೇವರೆದುರಿನಲ್ಲೇ ಕುಳಿತು ಹಾಡಿ ಸೇವೆ ಸಲ್ಲಿಸಬೇಕೆಂಬ ನನ್ನ ಆಸೆಗೆ ದೇವಸ್ಥಾನದ ಸಂಪ್ರದಾಯ ಅಡ್ಡಿ ಬಂತು. ಗರ್ಭಗುಡಿಯ ಹೊರಗಡೆಯೇ ಕುಳಿತು ಹಾಡತೊಡಗಿದೆ. ಜನಕಮಹಾರಾಜ ಸೀತಾದೇವಿಯನ್ನು ಶ್ರೀ ರಾಮಚಂದ್ರನಿಗೆ ಧಾರೆಯೆರೆದು ಕೊಡುವ ಸನ್ನಿವೇಶವನ್ನು ಕುರಿತ ಶ್ಲೋಕವೊಂದನ್ನು ಹಾಡುವ ಸಮಯಕ್ಕೆ ಸರಿಯಾಗಿ ದೇವಸ್ಥಾನದ ಹೊರ ಪ್ರಾಕಾರಕ್ಕೆ ಗರುಡ ಸೇವೆಗಾಗಿ ಕರೆದೊಯ್ದಿದ್ದ ಉತ್ಸವ ಮೂರ್ತಿ ಹಿಂದಿರುಗಿತು. ನನ್ನ ಸಂಗೀತ ಮುಗಿಯುವ ವರೆಗೂ ಉತ್ಸವ ಮೂರ್ತಿಯನ್ನು ಹೊರಗಡೆ ನಿಲ್ಲಿಸಿಕೊಂಡಿರು

ಪಂತಿರಲಿಲ್ಲ. ಉಪಾಯವಿಲ್ಲದೆ ಗರ್ಭಗುಡಿಯ ಬಾಗಿಲನ್ನು ತೆರೆಯಬೇಕಾಯಿತು. ಶ್ರೀನಿವಾಸನ ದಿವ್ಯ ದರ್ಶನವಾಯಿತು. ನನ್ನ ಆಸೆಯನ್ನು ದೇವರು ಈಡೇರಿಸಿದರಲ್ಲ ಎಂದು ಮೈ ಪುಲಕಿತವಾಯಿತು."

ಹೀಗೆ ಹಲವಾರು ವಿಷಯಗಳನ್ನು ಚರ್ಚಿಸುವ ಹೊತ್ತಿಗೆ ದೇವರಿಗೆ ಮಂಗಳಾರತಿಯ ಸಮಯವಾಗುತ್ತಿತ್ತು. ತಾತ ಮಡಿಯುಟ್ಟು ಸಾಯಂ ಸಂಧ್ಯಾವಂದನೆಯನ್ನು ಮಾಡಿ ದೇವರಿಗೆ ಮಂಗಳಾರತಿ ಮಾಡುತ್ತಿದ್ದರು. ನಂತರ ಮಿತ ಆಹಾರವನ್ನು ತೆಗೆದುಕೊಂಡು ಮಲಗುತ್ತಿದ್ದರು. ಒಬ್ಬರೇ ಕೊಠಡಿಯಲ್ಲಿ ಮಲಗಲು ತಾತ ಮಗುವಿನಂತೆ ಹೆದರುತ್ತಿದ್ದರು. ಹಾಸಿಗೆಯನ್ನು ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸುವುದು, ಮೇಲು ಹೊದ್ದಿಕೆಯನ್ನು ತೆಗೆದು ಹಾಸಿಗೆಯ ಅಡಿ ಹಾಸುವುದು! ಕೊನೆಗೆ ಎಲ್ಲವನ್ನೂ ಬಿಸುಟು ಬರಿಯ ಚಾಪೆಯ ಮೇಲೆ ಮಲಗುವುದು. ಇದೊಂದು ಅವರ ವಿಚಿತ್ರ ಸ್ವಭಾವ. ಕಾರಣವನ್ನು ಕೇಳಿದರೆ 'ಎಲ್ಲಿ ಮಲಗಿದರೆ, ಹೇಗೆ ಮಲಗಿದರೆ ಸ್ವಪ್ನ ಚೆನ್ನಾಗಿ ಬೀಳುತ್ತದೋ ನೋಡೋಣವೆಂದು ಹಾಗೆ ಮಾಡುತ್ತೇನೆ' ಎಂದು ಎಳೆ ನಗೆ ಬೀರುತ್ತಿದ್ದರು. ಸ್ವಪ್ನ, ಶಕುನ, ಜ್ಯೋತಿಷ್ಯ ಇವುಗಳಲ್ಲಿ ತಾತನಿಗೆ ಅಪಾರ ನಂಬಿಕೆ. ಮನೆಯಿಂದ ಹೊರಡುವಾಗ ಎಷ್ಟೇ ಅವಸರದ ಕೆಲಸವಿರಲಿ ಒಳ್ಳೆಯ ಶಕುನ ಕಾಣಿಸಿಕೊಳ್ಳುವ ವರೆಗೂ ಹೆಜ್ಜೆ ಹೊರಗಿಡುತ್ತಿರಲಿಲ್ಲ. ಕೊನೆಗೆ ಶುಭಶಕುನ ದೊರೆಯದಿದ್ದರೆ ನನ್ನನ್ನೇ ಕರೆದು "ರುಕ್ಮಿಣಿ, ನೀನೇ ಅಷ್ಟು ದೂರ ಹೋಗಿ ಎದುರುಗಡೆಯಿಂದ ಬಾಮ್ಮ" ಎಂದು ಹೇಳಿ ನಂತರ ತಾವು ಮನೆಯಿಂದ ಹೊರಡುತ್ತಿದ್ದರು!

ಯಾವುದಾದರೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸುವ ಸಂದರ್ಭ ಒದಗಿಬಂದಾಗ ಅಥವಾ ಕಛೇರಿಯಲ್ಲಿ ಹಾಡುವ ಸಂದರ್ಭ ಬಂದಾಗ ತಾತನಿಗೆ ಎಲ್ಲೂ ಇಲ್ಲದ ಆತಂಕ ಮತ್ತು ಗಾಬರಿ. ನಾವುಗಳು ಅವರ ವಿದ್ವತ್ತು, ಅನುಭವ, ಶಕ್ತಿಸಾಮರ್ಥ್ಯಗಳ ಜ್ಞಾಪಕ ತಂದು ಕೊಟ್ಟು ಧೈರ್ಯ ಹೇಳಬೇಕಾಗಿಬರುತ್ತಿತ್ತು! ಆದರೆ ಸಭೆಯಲ್ಲಿ ಮಾತನಾಡಲು ನಿಲ್ಲುವುದೇ ತಡ, ಕಚೇರಿಯಲ್ಲಿ ಹಾಡಲು ಕೂಡುವುದೇ ತಡ ಸಿಂಹಧೈರ್ಯ ಬರುತ್ತಿತ್ತು ಅವರಿಗೆ!

ದೇವರು ಬ್ರಾಹ್ಮಣರು ಎಂದರೆ ತಾತನಿಗೆ ಬಹಳ ಭಕ್ತಿ. ತಮ್ಮ ಕಷ್ಟಕಾಲದಲ್ಲಿ ನೆರವು ನೀಡಿದ ಅನ್ನದಾತರನ್ನು ಪ್ರತಿದಿನ ಊಟಮಾಡುವಾಗ ಸ್ಮರಿಸಿಕೊಂಡು 'ಅನ್ನದಾತ ಸುಖೀಭವ' ಎನ್ನುತ್ತಿದ್ದರು.

"ದೇವರು ನನಗೆ ಅನಾಯಾಸವಾದ ಮರಣ ಕೊಡಬೇಕು" ಎಂದು ಪದೇ ಪದೇ ನಮ್ಮ ಅತ್ತೆಯವರಿಗೆ ಹೇಳುತ್ತಿದ್ದರು. ದೇವರು ಅವರ ಕೋರಿಕೆಯನ್ನು ಈಡೇರಿಸಿದ. ಕಳೆದ ಮೇ ತಿಂಗಳು ಹದಿನೇಳರಂದು ತಾತ ಇದ್ದಕ್ಕಿದ್ದಂತೆಯೇ ನಮ್ಮೆಲ್ಲರನ್ನೂ ಬಿಟ್ಟು ಕಣ್ಮರೆಯಾದರು. ಕೊನೆಯುಸಿರಿನ ವರೆಗೂ ಇಷ್ಟಮಿತ್ರರೊಂದಿಗೆ ಸವಿನುಡಿಗಳಾಡುತ್ತ ನಾದಾನುಸಂಧಾನ ಮಾಡುತ್ತ ತಮ್ಮ ಇಹಲೋಕ ವ್ಯಾಪಾರವನ್ನು ಮುಗಿಸಿದರು. ಅವರು ಸ್ವರ್ಗಸ್ಥರಾದ ಮರುದಿನವೇ ಅವರ ೯೭ ನೇ ವರ್ಷದ ಹುಟ್ಟುದಿನವಾಗಿತ್ತು.

*

ಪ್ರೇಮ ಅನ್ನುವುದಕ್ಕೆ ಸುಲಭ; ಬದುಕುವುದಕ್ಕೆ ಗಹನ.

* * *

ನಿಜವಾದ ಪ್ರೇಮವು ದೆವ್ವಗಳ ಕತೆಯಂತೆ; ಅದನ್ನು ಕೇಳಿದವರು ಇದ್ದಾರೆ, ಕಂಡವರು ಮಾತ್ರ ಇಲ್ಲ.

— ಸಂಗ್ರಹ : 'ಗಸುಉ'

ಅಮೇರಿಕದ ಅಧ್ಯಕ್ಷನಾಗಿ ಆಯ್ಕೆ ಹೊಂದಿದವನು ಬೈಬಲ್ಲನ್ನು ಮುಟ್ಟಿ ಪ್ರತಿಜ್ಞೆ ಮಾಡಿ ಅಧಿಕಾರ ಸ್ವೀಕರಿಸುತ್ತಾನೆ. ಈ ಪ್ರತಿಜ್ಞಾ ಸಮಾರಂಭದ ಕಾಲದಲ್ಲಿ ಬೈಬಲ್ಲನ್ನು ಇಡಲು ಉಪಯೋಗಿಸುವ ಮೇಜು ಸಾಮಾನ್ಯವಾದುದಲ್ಲ. ಅದಕ್ಕೊಂದು ಇತಿಹಾಸವಿದೆ. ಈ ಮೇಜಿಗೊಂದು ದೈವೀಶಕ್ತಿ ಇದೆ. ಆ ಶಕ್ತಿಯ ಮೂಲಕ ಅದು ಅಮೇರಿಕದ ಅಧ್ಯಕ್ಷ ಹಾಗೂ ಅಮೇರಿಕದ ಮೇಲೆ ಪ್ರಭಾವ ಬೀರುವುದೆಂದು ಅಮೇರಿಕನ್ನರು ತಿಳಿದಿದ್ದಾರೆ. ಈ ಮೇಜಿನ ಇತಿಹಾಸವನ್ನು ನೋಡಿದಾಗ ಅಮೇರಿಕನ್ನರ ಈ ನಂಬಿಕೆಯಲ್ಲಿ

ಈಗ ಈ ಸಮಾರಂಭವನ್ನು ಜನವರಿ ೨೦ ರಂದು ಜರುಗಿಸುತ್ತಾರೆ.

೧೮೬೫ ಮಾರ್ಚ್ ೪ ರಂದು ಅಧ್ಯಕ್ಷ ಅಬ್ರಹಾಮ್ ಲಿಂಕನ್ನರು ಎರಡನೇ ಬಾರಿ ಆರಿಸಿ ಬಂದು ಪ್ರತಿಜ್ಞಾ ವಿಧಿ ಜರುಗಲಿತ್ತು. ಮುಹೂರ್ತ ಸಮೀಪಿಸುತ್ತ ಬಂದಾಗ ಸಮಾರಂಭದ ವ್ಯವಸ್ಥಾಪಕರಿಗೆ ಅಧ್ಯಕ್ಷರು ಪ್ರತಿಜ್ಞೆ ಮಾಡುವಾಗ ಕೈಯಲ್ಲಿ ಹಿಡಿಯುವ ಬೈಬಲನ್ನಿಡಲು ಒಂದು ಒಳ್ಳೆಯ ಮೇಜಿಲ್ಲ ಎಂಬುದು ಗಮನಕ್ಕೆ ಬಂತು. ಹುಡುಕಾಡಲು ಸಾಕಷ್ಟು ಸಮಯವಿರಲಿಲ್ಲವಾದ್ದರಿಂದ ಎಡ್ವರ್ಡ್ ಸಿ. ಕ್ಲಾರ್ಕ್ ಎಂಬವರು

ಅಮೇರಿಕದ ಅಧ್ಯಕ್ಷರ ಅದೃಷ್ಟವನ್ನು ಬರೆಯುವ ಬ್ರಹ್ಮ

ಈ ಅದ್ಭುತ ಮೇಜು!

ಸಂಜೀವ ಲಕ್ಷ್ಮೇಶ್ವರ

ತಥ್ಯಾಂಶವಿಲ್ಲದಿಲ್ಲ ಎನ್ನಬಹುದು.

ಮಹಾಗನಿ ಕಟ್ಟಿಗೆಯಲ್ಲಿ ತಯಾರಿಸಿರುವ ಈ ಮೂರು ಕಾಲಿನ ಮೇಜು ರಿಪಬ್ಲಿಕನ್ ಪಕ್ಷದ ಅಧ್ಯಕ್ಷರಿಗೆ ಅನಿಷ್ಟದಾಯಕವಾಗಿಯೂ ಡೆಮೊಕ್ರೆಟಿಕ್ ಪಕ್ಷದ ಅಧ್ಯಕ್ಷರಿಗೆ ಶುಭದಾಯಕವಾಗಿಯೂ ಪರಿಣಮಿಸಿದೆ.

ಅಧ್ಯಕ್ಷರ ಪ್ರತಿಜ್ಞಾ ಸಮಾರಂಭ ವಾಶಿಂಗ್ಟನ್ನಿನಲ್ಲಿಯ 'ಕ್ಯಾಪಿಟೊಲ್' ಎಂಬ ಭವ್ಯ ಕಟ್ಟಡದ ಪೂರ್ವಭಾಗದಲ್ಲಿ ನಡೆಯುತ್ತದೆ. ಮೊದಲು ಸಮಾರಂಭ ಮಾರ್ಚ್ ೪ ರಂದು ನಡೆಯುತ್ತಿತ್ತು. ಆದರೆ ಆಗ ಅಡ ಮಳೆಯ ದಿನಗಳಿರುವುದರಿಂದ

ತಮ್ಮ ಮನೆಗೆ ಹೋಗಿ ತಾವು ಹದಿನಾಲ್ಕು ವರ್ಷಗಳ ಹಿಂದೆ ಕೊಂಡಿದ್ದ ಒಂದು ಮೇಜನ್ನು ತಂದು ಕೊಟ್ಟರು. ಅದರ ಮೇಲೆಯೇ ಬೈಬಲ್ಲನ್ನಿಟ್ಟರು. ಲಿಂಕನ್ನರ ಪ್ರತಿಜ್ಞಾವಿಧಿ ಸಾಂಗವಾಯಿತು. ಆದರೆ ಮುಂದೆ ೪೧ ದಿನಗಳಲೆ ಅವರ ಕೊಲೆಯಾಯಿತು.

ಅವರ ನಂತರ ಅಧ್ಯಕ್ಷರಾಗಿ ಬಂದ ಡೆಮೊಕ್ರೆಟಿಕ್ ಪಕ್ಷದ ಆಂಡ್ರ್ಯೂ ಜಾಕ್ಸನ್ ಎಂಬವರು ಪ್ರತಿಜ್ಞಾವಿಧಿಯ ಕಾಲಕ್ಕೆ ಈ ಮೇಜನ್ನು ಉಪಯೋಗಿಸಲಿಲ್ಲ. ಅದೇ ಎರಡು ಸಲ ಅಧ್ಯಕ್ಷಪೀಠವನ್ನಲಂಕರಿಸಿದ ರಿಪಬಿಕನ್ ಪಕ್ಷದ

ಯೂಲಿಸಿಸ್ ಗ್ರ್ಯಾಂಟ್ ಎಂಬವರು ಲಿಂಕನ್ನರು ಉಪಯೋಗಿಸಿದ ಮೇಜನ್ನೇ ಉಪಯೋಗಿಸಿದರು. ಮುಂದೆ ಅವರಿಗೆ ಅವರ ಆಯುಷ್ಯದಲ್ಲಿ ಸುಖ ಸಿಗಲಿಲ್ಲ. ಅವರ ವಿರುದ್ಧ ಬಂಡೆದ್ದದ್ದರಿಂದ ಅವರು ಅಧ್ಯಕ್ಷಪದಕ್ಕೆ ರಾಜೀನಾಮೆ ಕೊಡಬೇಕಾಯಿತು. ಅವರ ಉದ್ಯೋಗದಲ್ಲೂ ನಷ್ಟವಾಗಿ ಅವರು ದಿವಾಳಿ ತೆಗೆದರು. ಮುಂದೆ ಕ್ಯಾನ್ಸರ್ ರೋಗದಿಂದ ಬಳಲಿ ಸತ್ತರು.

ಗ್ರ್ಯಾಂಟರ ನಂತರ ರಿಪಬ್ಲಿಕನ್ ಪಕ್ಷದ ರದರ್‌ಫೋರ್ಡರು ಅಧ್ಯಕ್ಷರಾದರು. ಇವರು ಕೂಡ ಈ ಮೂರು ಕಾಲಿನ ಮೇಜಿನ ಮೇಲಿಟ್ಟ ಬೈಬಲನ್ನು ಮುಟ್ಟಿಯೆ ಪ್ರತಿಜ್ಞೆ ಸ್ವೀಕರಿಸಿದರು. ಅಮೇರಿಕದ ಯಾದವೀ ಕಲಹದಲ್ಲಿ ಇವರು ಸಮರ್ಥರೆಂದು ಪ್ರಖ್ಯಾತಿ ಪಡೆದಿದ್ದರು. ಹಿಂದಿನ ಅಧ್ಯಕ್ಷ ಗ್ರ್ಯಾಂಟರ ದುಷ್ಕೃತ್ಯಗಳನ್ನು ಹತ್ತಿಕ್ಕಬೇಕೆಂದು ರಿಪಬ್ಲಿಕನ್ ಮುಂದಾಳುಗಳು ಇವರ ಮೇಲೆ ಒತ್ತಡ ತಂದರು. ಫೋರ್ಡರು ಒಪ್ಪದೆ ಪಕ್ಷದ ವಿಶ್ವಾಸವನ್ನು ಕಳೆದುಕೊಂಡರು.

ಆ ಮೇಲೆ ಅಧ್ಯಕ್ಷರಾದ ರಿಪಬ್ಲಿಕನ್ ಪಕ್ಷದ ಗಾರ್‌ಫೀಲ್ಡರೂ ಈ ಮೇಜಿನ ಪ್ರಭಾವಕ್ಕೆ ಒಳಗಾದರು ಅಧ್ಯಕ್ಷರಾದ ಕೆಲವೇ ದಿನಗಳಲ್ಲಿ ಒಬ್ಬ ತಲೆತಿರುಕ ಇವರ ಮೇಲೆ ಗುಂಡು ಹಾರಿಸಿದ. ಇದೇ ನೆಪವಾಗಿ ಗಾರ್‌ಫೀಲ್ಡರು ತುಸು ಸಮಯದಲ್ಲಿ (೧೮೮೧) ಮೃತರಾದರು.

೧೯೦೧ ರಲ್ಲಿ ಅಧ್ಯಕ್ಷ ಸ್ಥಾನದಲ್ಲಿದ್ದ ರಿಪಬ್ಲಿಕನ್ ಪಕ್ಷದ ವಿಲಿಯಂ ಮ್ಯಾಕಿನ್‌ಲೆ ಅವರು ಕೂಡ ಒಬ್ಬ ತಲೆತಿರುಕನ ಗುಂಡಿಗೆ ಆಹುತಿಯಾಗಿ ಮರಣಹೊಂದಿದರು. ಇವರು ಸಹ ಪ್ರತಿಜ್ಞಾವಿಧಿಯ ಕಾಲಕ್ಕೆ ಇದೇ ಮೂರು ಕಾಲಿನ ಮೇಜನ್ನು ಉಪಯೋಗಿಸಿದ್ದರು.

ಮ್ಯಾಕಿನ್‌ಲೆ ನಂತರ ಥಿಯೊಡೊರ್ ರೂಜವೆಲ್ಟರು ಅಧ್ಯಕ್ಷರಾದಾಗ ಇದೇ ಮೇಜನ್ನು ಉಪಯೋಗಿಸಿದರು. ಏಳು ವರ್ಷಗಳ ನಂತರ ರೂಜವೆಲ್ಟರು ಅಧ್ಯಕ್ಷ ಸ್ಥಾನಕ್ಕೆ ಮತ್ತೊಮ್ಮೆ ಹುರಿಯಾಳಾಗಿ ನಿಂತು ಪ್ರಚಾರ ಮಾಡುತ್ತಿದ್ದಾಗ ಯಾವನೊ ಒಬ್ಬ ಅವರ ಮೇಲೆ ಗುಂಡು ಹಾರಿಸಿದ. ರೂಜವೆಲ್ಟರೇನೊ ಅನಾಹುತದಿಂದ ಪಾರಾಗಿ ಉಳಿದರೂ ಅವರು ಆರಿಸಿ ಬರಲಿಲ್ಲ.

ರಿಪಬ್ಲಿಕನ್ ಪಕ್ಷದ ವಾರೆನ್ ಹಾರ್ಡಿಂಜ್ ಮತ್ತು ಹರ್ಬರ್ಟ್ ಹೂವರರೂ ಈ ಮೇಜಿನ ಪ್ರಸಾದ ಪಡೆದವರೇ. ಹಾರ್ಡಿಂಜರು ಜನತೆಯ ಅಸಂತೋಷವನ್ನು ಎದುರಿಸಿ ಅದರಿಂದ ಕಂಗಾಲಾಗಿ ಅಸು ತೊರೆದರು.

೧೯೫೨ರಲ್ಲಿ ಅಧ್ಯಕ್ಷರಾಗಿ ಆಯ್ಕೆಗೊಂಡ ಐಸೆನ್‌ಹಾವರರ ಪ್ರತಿಜ್ಞಾವಿಧಿಗಾಗಿ ಈ ಮೇಜನ್ನು ಉಪಯೋಗಿಸಬೇಕೇ, ಬಾರದೇ ಎಂಬ ಬಗ್ಗೆ ವಾದವಿವಾದವೆದ್ದಿತು. ಐಸೆನ್‌ಹಾವರರು ಈ ಮೇಜನ್ನು ಉಪಯೋಗಿಸಲಿಲ್ಲ. ಈ ಮೇಜನ್ನು ಉಪಯೋಗಿಸದ ರಿಪಬ್ಲಿಕನ್ ಅಧ್ಯಕ್ಷರೆಂದರೆ ಐಸೆನ್‌ಹಾವರ್‌ರೊಬ್ಬರೇ. ಅವರು ಎರಡು ಸಲ ಆರಿಸಿ ಬಂದು ಪೂರ್ಣಾವಧಿಯ ವರೆಗೆ ಆಳಿದರು. ಅಧ್ಯಕ್ಷರಾದ ಮೂರು ವರ್ಷಗಳ ನಂತರ ಇವರಿಗೆ ಹೃದಯವಿಕಾರವಾಯಿತು. ಈ ಬೇನೆಯಿಂದ ಇವರು ಉಳಿದುಕೊಂಡರು. ಈ ಮೇಜನ್ನು ಉಪಯೋಗಿಸಿದ್ದರೆ ಏನಾಗುತ್ತಿತ್ತೊ ?

ಆದರೆ ಸೋಜಿಗವೆಂದರೆ ಡೆಮೊಕ್ರೆಟಿಕ್ ಪಕ್ಷದವರಿಗೆ ಈ ಮೇಜು ಶುಭವನ್ನೇ ತಂದಿದೆ.

ಅಮೇರಿಕದ ಯಾದವೀ ಯುದ್ಧದ ನಂತರ ೧೮೮೫ ರಲ್ಲಿ ಡೆಮೊಕ್ರೆಟಿಕ್ ಪಕ್ಷದ ಗ್ರೋವರ್ ಕ್ಲೀವ್‌ಲ್ಯಾಂಡರು ಅಧ್ಯಕ್ಷರಾಗಿ ಆರಿಸಿ ಬಂದರು. ಪ್ರತಿಜ್ಞಾವಿಧಿಗೆ ಈ ಮೇಜೇ ಉಪಯೋಗಿಸಲ್ಪಟ್ಟಿತು. ಕ್ಲೀವ್‌ಲ್ಯಾಂಡರ ಆಳಿಕೆ ಯಶಸ್ವಿಯಾಯಿತು. ಮಾತ್ರವಲ್ಲ, ಅವರು ೧೮೯೨ ರಲ್ಲಿ ಮತ್ತೊಮ್ಮೆ ಅಧ್ಯಕ್ಷರಾಗಿ ಆಯ್ಕೆ ಹೊಂದಿದರು. ಅದರಂತೆ ಈ ಮೇಜನ್ನುಪಯೋಗಿಸಿದ ಡೆಮೊಕ್ರೆಟಿಕ್ ಪಕ್ಷದ ವುಡ್ರೋ ವಿಲ್ಸನ್‌ರು ಎರಡು ಸಲ ಅಧ್ಯಕ್ಷರಾದರು. ೧೯೧೩ ರಲ್ಲೊಮ್ಮೆ ಮತ್ತು ೧೯೧೭ ರಲ್ಲೊಮ್ಮೆ. ಮೊದಲನೆ ಮಹಾಯುದ್ಧದ ಕಾಲದಲ್ಲಿ ಇವರ ಕೀರ್ತಿ ಜಗತ್ತಿ

ನಲ್ಲೆಲ್ಲ ಹರಡಿತು.

೧೯೩೨ ರಲ್ಲಿ ಫ್ರಾಂಕ್‌ಲಿನ್ ರೂಝುವೆಲ್ಟರು ಅಧ್ಯಕ್ಷರಾದರು. ಅವರು ಸಂಪ್ರದಾಯಸ್ಥ ಕುಟುಂಬದವರು. ಪ್ರತಿಜ್ಞಾವಿಧಿಯ ಕಾಲಕ್ಕೆ ತಮ್ಮ ಮನೆಯಲ್ಲಿದ್ದ ಡಚ್ ಭಾಷೆಯ ಬೈಬಲ್ಲನ್ನೂ ಒಂದು ಮೇಜನ್ನೂ ಅವರು ತಂದರು. ಆದರೆ ಕ್ಯಾಪಿಟೋಲ್‌ದ ವ್ಯವಸ್ಥಾಪಕರು ಸಂಪ್ರದಾಯ ವನ್ನು ಮುರಿಯಲೊಪ್ಪಲಿಲ್ಲ. ಹೀಗಾಗಿ ಮೂರು ಕಾಲಿನ ಈ ಮಹಾ ಪ್ರತಾಪಿ ಮೆಹಾಗನಿ ಮೇಜೇ ಉಪಯೋಗಿಸಲ್ಪಟ್ಟಿತು. ಆದರೆ ರೂಝುವೆಲ್ಟರು ೧೯೪೪ ರಲ್ಲಿ ನಾಲ್ಕನೆಯ ಸಲ ಅಧ್ಯಕ್ಷರಾಗಿ ಆಯ್ಕೆ ಹೊಂದಿದಾಗ ಹಟ ಹಿಡಿದು ತಮ್ಮ ಮನೆಯಿಂ- ದಲೇ ಬೈಬಲ್ ಮತ್ತು ಮೇಜನ್ನು ತರಿಸಿದರು. ಪ್ರತಿಜ್ಞೆ ಸ್ವೀಕರಿಸಿದ ನಾಲ್ಕೇ ತಿಂಗಳಲ್ಲಿ ವೃತ ರಾದರು.

೧೯೪೮ ರಲ್ಲಿ ಆಯ್ಕೆ ಹೊಂದಿದ ಹ್ಯಾರಿ ಟ್ರೂ- ಮನ್ನರು ತಮ್ಮ ಪ್ರತಿಜ್ಞೆಗಾಗಿ ಈ ಅದ್ಭುತ ಮೇಜೇ ಬೇಕೆಂದು ಹಟ ಹಿಡಿದರು. ಆದರೆ ಆಗ ಅದು ವಾಶಿಂಗ್ಟನ್ನಿನಲ್ಲಿರಲಿಲ್ಲ. ಮೆಸಾಚುಸೆಟ್ಸ್‌ನ ಸ್ಯಾಂಡ್‌ವಿಚ್ ಎಂಬಲ್ಲಿತ್ತು. ಟ್ರೂಮನ್ನರು ಹಟ ಹಿಡಿದದ್ದರಿಂದ ಅದನ್ನು ಅಲ್ಲಿಂದ ತಂದೇ ಪ್ರತಿಜ್ಞಾ ವಿಧಿ ನೆರವೇರಿಸಬೇಕಾಯಿತು.

ಎಡ್ವರ್ಡ್ ಸಿ. ಕ್ಲಾರ್ಕರು ಅನಿವಾರ್ಯವಾಗಿ ತರಬೇಕಾದ ಈ ಮೇಜು ಅಂದಿನಿಂದಲೂ ಈ ರೀತಿಯಾಗಿ ತನ್ನ ಪ್ರಭಾವವನ್ನು ತೋರಿಸುತ್ತ ಬಂದಿದೆ. ಈಗ ಸ್ಯಾಂಡ್‌ವಿಚ್‌ನಲ್ಲಿರುವ ಅವರ ಮೊಮ್ಮಗಳ ಬಳಿ ಈ ಮೇಜಿದೆ. ಹೊಸ ಅಧ್ಯ- ಕ್ಷರು ಪ್ರತಿಜ್ಞಾವಿಧಿ ಜರುಗಿಸಬೇಕಾದ ಸಂದರ್ಭ ಬಂದಾಗಲೆಲ್ಲ ಈ ಮೇಜನ್ನು ೧,೦೦೦ ಡಾಲರು ಗಳಿಗೆ ವಿಮೆ ಇಳಿಸಿ ಅದನ್ನು ವಾಶಿಂಗ್ಟನ್ನಿಗೆ ತರು ತ್ತಾರೆ. ಅದರ ಕಾವಲಿಗೆ ಸಶಸ್ತ್ರ ಪೋಲೀಸ್ ಪಡೆಯನ್ನು ನೇಮಿಸುತ್ತಾರೆ.

ಅಮೇರಿಕದ ರಾಷ್ಟ್ರಜೀವನದಲ್ಲಿ ಈ ರೀತಿ ಯಾಗಿ ಒಂದು ನಿರ್ಜೀವ ವಸ್ತು ಅತಿ ಪ್ರಭಾವ ಶಾಲಿಯಾಗಿ, ಭಾಗ್ಯ-ದುರ್ಭಾಗ್ಯಗಳ ಸೂಚಕ ವಾಗಿ ಉಳಿದುಕೊಂಡಿದೆ. ರಿಪಬ್ಲಿಕನ್ ಪಕ್ಷದ ವರಿಗೆ ಇದು ಅಶುಭಕಾರಿ ಎಂದು ತಿಳಿದಿದ್ದರೂ ಈ ಮೇಜನ್ನೇ ಅವರೂ ಉಪಯೋಗಿಸುತ್ತಿರು ವುದು ಪರಂಪರೆಗೆ ಜೀವನದಲ್ಲಿ ಎಂಥ ಬಲವಾದ ಸ್ಥಾನವಿದೆಯೆಂದು ತೋರಿಸುವುದಿಲ್ಲವೆ! *

ಮರೆತ ಅಳತೆ

ಸುಪ್ರಸಿದ್ಧ ಇಂಗ್ಲೀಷ್ ವಿಜ್ಞಾನಿಯೊಬ್ಬ ತನ್ನ ಕಾಲಿಗೆ ಸರಿಯಾದ ಸುಂದರ ಪಾದರಕ್ಷೆ ಕೊಳ್ಳಬೇಕೆಂದು ಯೋಚಿಸಿದ. ಒಬ್ಬ ಹುಡುಗನ ಮೂಲಕ ಚಪ್ಪಲಿ ಯವನಲ್ಲಿಗೆ ಕಳಿಸುವ ಯೋಚನೆಯಿಂದ ತನ್ನ ಕಾಲಿನ ಅಳತೆಯನ್ನು ನಿದಾನವಾಗಿ ಚೆನ್ನಾಗಿ ತೆಗೆದುಕೊಂಡ. ಆದರೆ ಯಾವುದೋ ಕಾರಣದಿಂದ ಹುಡುಗನನ್ನು ಕಳಿಸದೆ ತಾನೇ ಹೋಗಲು ನಿಶ್ಚಯಿಸಿ ಚಪ್ಪಲಿ ಅಂಗಡಿ ಕಡೆ ಹೊರಟ. ಅರ್ಧ ದಾರಿ ಹೋಗಿರಬೇಕು. ಇದ್ದಕ್ಕಿದ್ದಂತೆ ರಸ್ತೆಯಲ್ಲಿ ನಿಂತುಕೊಂಡು ತಲೆ ಕರೆದು ಕೊಂಡ. ಮತ್ತೆ ಗೊಣಗುತ್ತಾ ಮನೆಯ ಕಡೆ ಹೊರಟ.

ಮನೆಗೆ ಹಿಂತಿರುಗಿ ಹೋಗಿ ನಂತರ ಚಪ್ಪಲಿ ಅಂಗಡಿಗೆ ಹೋದ. ತಾನು ಅಳತೆ ಮರೆತು ಬಂದು ಪುತ್ತೆ ಪಟ್ಟ ಕಷ್ಟವನ್ನು ಹೇಳಿದ. ಆಗ ಅಂಗಡಿಯವನು,

"ಅಯ್ಯೋ ಮಹಾರಾಯಾ, ಸ್ವತಃ ನಿಮ್ಮ ಕಾಲುಗಳೇ ಇರುವಾಗ ಇದ ಕ್ಕೇಕೆ ಮನೆಗೆ ಮತ್ತೊಮ್ಮೆ ಹೋದಿರಿ?"

— ಎಂದಾಗ "ಹೌದೇನು?"

ಎಂದು ಬಾಯಿ ಬಿಟ್ಟನಾತ.

— "ರಂಜನ" ಬೆಂಗಳೂರು

ಒಂದು ಹೃದಯಸ್ಪರ್ಶಿ ಕಥೆ

ಮಗಳ ಮನೆ

ಎಸ್. ಸಿ. ಶರ್ಮಾ

ಆಫೀಸಿನ ಅವಸರದ ಕೆಲಸಕ್ಕಾಗಿ ಚಿತ್ರದುರ್ಗದಿಂದ ತುಮಕೂರಿಗೆ ಹೊರಟು ಬಸ್ಸಿನಲ್ಲಿ ಸ್ಥಳ ಹಿಡಿದು ಕುಳಿತಿದ್ದೆ. ಹಿಡಿದ ಮಳೆ ಬಿಟ್ಟಿರಲಿಲ್ಲ. ಜೋರೆಂದು ಹೊಯ್ಯುತ್ತಲಿತ್ತು. ಬಸ್ಸಿನಲ್ಲಿ ಜನ ತುಂಬಿತ್ತು. ಇನ್ನೇನು ಬಸ್ಸು ಹೊರಡುವುದರಲ್ಲಿತ್ತು. ಆ ಹೊತ್ತಿಗೆ ಹಣ್ಣು ಹಣ್ಣು ಮುದುಕರೊಬ್ಬರು ಬಂದು ಬಸ್ಸು ಹತ್ತಿದರು. ಅವರು ನಿಂತುಕೊಂಡು ಪ್ರಯಾಣ ಮಾಡುವುದಾದರೆ ಮಾತ್ರ ಸ್ಥಳ ಕೊಡಬಹುದೆಂದು ಕಂಡಕ್ಟರ ತಿಳಿಸಿದ. ಮುದುಕರು ಅದಕ್ಕೊಪ್ಪಿ ಟಿಕೀಟು ಪಡೆದರು. ಅವರು ಥಂಡಿಯಲ್ಲಿ ನಡುಗುವುದನ್ನು ನೋಡಲಾರದೆ ಅವರನ್ನು ನನ್ನ ಸ್ಥಳದಲ್ಲಿ ಕುಳ್ಳಿರಿಸಿ ನಾನು ನಿಂತುಕೊಂಡೆ. ತುಂಬ ಒತ್ತಾಯ ಮಾಡಿದ ಬಳಿಕ ಆ ಯಜಮಾನರು ಸಾವಿರ ಬಾರಿ ಹರಸುತ್ತಾ ಕುಳಿತು ಬೆಚ್ಚಗೆ ಒಂದು ಚುಟುಕಿ ನಸ್ಯ ಎಳೆದು ನನ್ನೊಡನೆ ಸಂಭಾಷಣೆಗೆ ಮೊದಲಿಟ್ಟರು. ಒಂದೆರಡು ಹಳ್ಳಿ ದಾಟಿದ ಬಳಿಕ ನನಗೂ ಅವರ ಸೀಟಿನಲ್ಲಿ ಕುಳಿತುಕೊಳ್ಳಲು ಎಡೆಯಾಯಿತು. ಕುಳಿತ ಮೇಲೆ,

"ತಾವು ಎಲ್ಲಿಯವರೆಗೆ?" ಎಂದೆ.

"ನಾನೇ? ತುಮಕೂರಿಗೆ ಹೋಗಿ ಬರಬೇಕಾಗಿದೆ. ಇಂದು ಜ್ಯೇಷ್ಠ ಶುದ್ಧ ಪಂಚಮಿಯಲ್ಲವೆ? ಇವತ್ತು ನಮ್ಮ ಶೈಲಜಾನ ಹುಟ್ಟಿದ ಹಬ್ಬ. ನನ್ನ ಅಳಿಯ ತುಮಕೂರಿನಲ್ಲಿದ್ದಾನೆ" ಎಂದರು.

"ಒಳ್ಳೇ ಮಳೆಯಲ್ಲೇ ಹೊರಟುಬಿಟ್ಟಿರಿ."

"ಹೋಗದೆ ಇದ್ದರೆ ಆದೀತೆ? ಇವತ್ತು ಬಿಟ್ಟರೆ ಶೈಲಜೆಗೆ ಅರಿಸಿನ ಕುಂಕುಮ ಹೂವು ತಲುಪಿಸುವುದು ಬೇಡವೆ?"

"ಹಾದು ಹಾದು, ತಮ್ಮ ಸ್ಥಳ..? ಎಲ್ಲಿಂದ ಬಂದದ್ದು?" ಎಂದು ಕೇಳಿದೆ.

"ನನಗೊಂದು ಸ್ಥಳವೇ......ನಾನೊಬ್ಬ ಸ್ಕೂಲು ಮೇಷ್ಟ್ರು. ಇವತ್ತೊಂದು ಊರು ನಾಳೆ ಮತ್ತೊಂದು ಊರು. ಈಗ ರಿಟೈರಾಗಿ ಎರಡು ವರುಷವಾಯಿತು. ಚೆನ್ನಗಿರಿಯಲ್ಲಿ ಇದ್ದೇನೆ.



ಇಷ್ಟಕ್ಕೂ ಇರುವವನು ನಾನೊಬ್ಬ. ನನಗೆ ಹಿಂದೆ ಮುಂದೆ ಮಕ್ಕಳೆ ಹೆಂಡತಿಯೆ? ಮನೆಯೆ-ಮಾರೇ?.... ಅಯ್ಯೋ, ನಾನೊಬ್ಬ ಒಂಟಿ ಬಡಕ ಸುಂಟರಗಾಳಿ. ಬರುವವರಿಲ್ಲ ಹೋಗುವವರಿಲ್ಲ. ಆ ಊರಿನಲ್ಲಿ ನಾಲ್ಕು ಮಕ್ಕಳಿಗೆ ಪಾಠ ಹೇಳಿ ಕೊಡುತ್ತಿದ್ದೇನೆ. ಇಷ್ಟು ಅಕ್ಕಿ-ಕಟ್ಟಿಗೆ ಕೊಡುತ್ತವೆ. ಇಷ್ಟು ಕುಚ್ಚಿಕೊಂಡರಾಯಿತು....ಇಗೋ ನೋಡಿ. ಈ ಜೇಷ್ಠ ಶುದ್ಧ ಪಂಚಮಿ ಒಂದು ದಿನ ಮಾತ್ರ ನಾನೆಲ್ಲಿ ಸಾಯುತ್ತಾ ಬಿದ್ದಿದ್ದರೂ ನನ್ನ ಮಗಳ ಮನೆಗೆ ಹೋಗಿ ಅರಿಸಿನ ಕುಂಕುಮ ತಲುಪಿಸಲೇ ಬೇಕು," ಎಂದು ವೃತ್ತಾಂತವನ್ನೇ ಬಿತ್ತರಿಸಿದರು.

"ಗಂಡು ಮಕ್ಕಳಿಲ್ಲವೆ?" ಪಕ್ಕದಲ್ಲಿದ್ದ ಗೃಹಸ್ಥರೊಬ್ಬರು ಪ್ರಶ್ನಿಸಿದರು.

"ಇದ್ದರು ಸ್ವಾಮಿ, ಇದ್ದರು. ನಮ್ಮ ಶೈಲಜ ನನ್ನ ಕಡೆಯ ಮಗಳು. ಅವಳಿಗೆ ಮೊದಲು ಇದ್ದ ಆರು ಮಕ್ಕಳು ಬೆಳೆಬೆಳೆದು ನಮ್ಮನ್ನು ಬಿಟ್ಟು ಹೋದವು. ಹಿರಿಯವನಿದ್ದಿದ್ದರೆ.... ಅವನಿಗೀಗ ೩೫ ವಯಸ್ಸಿರುತ್ತಿತ್ತು. ಎಲ್ಲ ಅವನ ಇಚ್ಛೆ" ಎಂದು ದುಗುಡದಿಂದ ಕಣ್ಣೊರಸಿಕೊಂಡರು.

"ನಮ್ಮ ಶೈಲಜಾ ಎಂಥ ಮಗು ಅನ್ನುತ್ತೀರಿ! ನಮ್ಮ ಬೆಂದೊಡಲಿಗೆ ತಂಪೆರೆಯುವ ಕಾರಂಜಿ ನಮ್ಮ ಶೈಲಜಾ ಎಂದರೆ! ನಮ್ಮ ಬಡತನ ಸುತ್ತಾಟಗಳ ಪರಿಪಾಟನ್ನು ಲೆಕ್ಕಿಸದೆ ಅವಳನ್ನು ಸಾಕಿ ದೊಡ್ಡವಳನ್ನಾಗಿ ಮಾಡಿದೆವು— ನನ್ನ ಹೆಂಡತಿ ಭಾಗೀರಥಿ ಆ ಮಗುವಿನಲ್ಲೇ ತನ್ನೆಲ್ಲ ಜೀವವನ್ನೂ ಇಟ್ಟಿದ್ದಳು....ಆದರೆ...."

"ನಿಮ್ಮ ಅಳಿಯಂದಿರು ಏನು ಕೆಲಸ ಮಾಡುತ್ತಾರೆ?" ಎಂದೆ.

"ಯಾರು? ಶಿವಮೂರ್ತಿಯೇ? ಅದೆಂಥದೊ ಕಂಪನಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರಂತೆ; ಅವನಾದರೂ ಅಷ್ಟೆ, ದೇವರಂಥ ಹುಡುಗ— ನಮ್ಮ ಶೈಲಜೆಯ ಪುಣ್ಯವೆನ್ನಿ— ಅವಳ ರೂಪು, ಗುಣ ನಡತೆಗೆ ತಕ್ಕ ಹಾಗೆ ಶಿವಮೂರ್ತಿಯೂ ಮುತ್ತಿನಂಥ ಹುಡುಗ— ಆ ಜೋಡೀನ ಕಲೆಹಾಕುವುದಕ್ಕೆ ನಾವೆಷ್ಟು ಕಷ್ಟಪಟ್ಟೆವೋ ಆ ಜಗದೀಶನೇ ಬಲ್ಲ. ನಮ್ಮ ಭಾಗೀರಥಿಯಂತೂ ತಾನೇ ಮದುವೆ ಆಗುವವಳ ಹಾಗೆ ಬಂದ ಗಂಡುಗಳನ್ನೆಲ್ಲ ಜರೆದು ಕಡೆಗೆ ಶಿವಮೂರ್ತಿಯನ್ನು ಒಪ್ಪಿದ್ದಳು. ಅಂತೂ ಅವಳ ಆಸೆ ಅಲ್ಲಿಯ ವರೆಗೆ ಈಡೇರಿತು ಅನ್ನಿ. ನಮ್ಮ ಶೈಲಜಾ ಅಂದರೆ ಮುತ್ತಿನಂಥ ಹುಡುಗಿ. ಆ ರೂಪು! ಆ ಗುಣ! ತಂದೆ ತಾಯಿ ಅಂದರೆ ಅದೆಷ್ಟು ಹಿಗ್ಗು ಆ ಮಗುವಿಗೆ— ನಮ್ಮ ಬೀಗರಾದರೂ ಅಷ್ಟೆ, ದೇವರಂಥ ಮನುಷ್ಯರು ಸೊಸೆಯಲ್ಲ— ಮಗಳು ಅನ್ನುತ್ತಿದ್ದರು ಅವರ ಅತ್ತೆ-ಮಾವ!" ಎಂದು ಹೇಳುತ್ತಲೇ ಬಂದರು ದಾರಿಯುದ್ದಕ್ಕೂ. ಅವರು ಮಾತಿಗೊಂದು ಸಾರಿ "ನಮ್ಮ ಶೈಲಜ" ಎನ್ನದೆ ಬಾಯಿ ಬಿಡುತ್ತಿರಲಿಲ್ಲ. ಅಕ್ಕ-ಪಕ್ಕದವರು ಈ ಮುದುಕರ ಚರ್ವಿತ ಚರ್ವಣಕ್ಕೆ ಬೇಸರಗೊಂಡು ತಮ್ಮ ವಿಷಯಗಳಲ್ಲಿ ಮಗ್ನರಾದರು. ನನಗೆ ಮಾತ್ರ ಇವರ ಮಮತೆಯನ್ನು ಕಂಡು ಮರುಕವಾಯಿತು. ಅವರು ನುಡಿದಂತೆಲ್ಲ ಅವರ ಸುಕ್ಕುಗಟ್ಟಿದ ಮುಖದಲ್ಲಿ ಆಸೆ ನಿರಾಸೆಗಳ ಗೆರೆಗಳು ಮೂಡಿ ಮೂಡಿ ಮಾಯವಾಗುತ್ತಿದ್ದವು. ಹಿಗ್ಗಿನಿಂದ ಹೇಳುವಾಗ ಅವರ ಮುಖ ಗಾಳಿತುಂಬಿದ ಬಲೂನಿನ ಹಾಗೆ ಉಬ್ಬುತ್ತಿತ್ತು. ಮರಳಿ ಒಮ್ಮೆಲೇ ರಸ ಹಿಂಡಿದ ಹಣ್ಣಿನಂತೆ ಕಳೆಗುಂದುತ್ತಿತ್ತು. ಕಣ್ಣಿನಲ್ಲಿ ಒಮ್ಮೆ ಸಂತಸದ ಬುಗ್ಗೆ ಮತ್ತೊಮ್ಮೆ ದುಗುಡದ ಒರತೆ—ಆಗಾಗ ಬತ್ತಿದ ಕೆರೆಯಂತೆ ತೆರವೋ ತೆರವು. ಮುಗುಳೊಮ್ಮೆ ಕಣ್ಣುಗಳು ಹನಿತುಂಬಿ ತೇಲಾಡುವ ಕೆಂಬಟ್ಟಲಗಳಾಗುವುವು. ಮಧ್ಯೆ ಮಧ್ಯೆ ಅವರು ನಿಟ್ಟುಸಿರು ಬಿಡುತ್ತಿದ್ದರು. ಮಾತು ನಿಲ್ಲಿಸಿದಾಗ ಎಡೆಯಾಳದಲ್ಲಿ ದುಃಖದ ಕಡಲೊಂದರ ತೆರೆ ಅವರನ್ನು ಅಪ್ಪಳಿಸುತ್ತಿರಬಹುದೆಂದು ಅನಿಸುತ್ತಿತ್ತು.

ಪುನಃ ಅವರೇ ಪ್ರಾರಂಭಿಸಿದರು: "ಈ ಮಳೆ ನಿಲ್ಲುವುದೇ ಇಲ್ಲವೋ ಏನೋ? ನಮ್ಮ ಶೈಲಜಾ ಹುಟ್ಟಿದಾಗಲೂ ಹೀಗೇ ಹಿಡಿದ ಮಳೆ ಬಿಟ್ಟಿರ

"ಇದೇ ನೋಡಿ ಶುಷ್ಕ ವೇದಾಂತವೆಂದರೆ. ಬಯಸಿದ ಮಾತ್ರಕ್ಕೆ ಬಾಳಿಯಾವೆ ಮಕ್ಕಳು? ಅಥವಾ 'ಋಣಾನುಬಂಧ' ಎಂದುಬಿಟ್ಟರೆ ಮುಗಿಯಿತೆ? ಅಂಥ ಸಂದಿಗ್ಧದಲ್ಲೂ ನಾವು ಮಾಡಬೇಕಾದ ಕರ್ತವ್ಯ ಇದ್ದೇ ಇರುತ್ತದೆ. ಆ ಕರ್ತವ್ಯ ನಿರ್ವಹಿಸಿದರೇ ನಾವು ಮನುಷ್ಯರಾದದ್ದಕ್ಕೆ ಸಾರ್ಥಕ. ಇಲ್ಲವಾದರೇನು ಬಂತು— ನಾವು ಪಶುಗಳಿಗೂ ಕಡೆ."

"ನೀವು ಮಾಡುವಷ್ಟು ಮಾಡಿಯೂ ಇದ್ದೀರಿ— ಈಗಲೂ ಆಕೆ ಇರಲಿ ಇಲ್ಲದಿರಲಿ ಆಕೆಗಾಗಿ ಮಾಡುತ್ತಲೂ ಇದ್ದೀರಿ— ಇನ್ನೇನು ಬೇಕು ಇದಕ್ಕಿಂತ?"

"ನಿಮಗೆ ತಿಳಿಯದು. ಇನ್ನೂ ಸ್ವಲ್ಪ ಕೇಳಿಬಿಡಿ. ನಂತರ ನಿಮಗೆ ತಿಳಿಯುತ್ತದೆ. ನಾನು ತಂದೆಯಾಗಿದ್ದೂ ನನ್ನ ಕರ್ತವ್ಯ ನೆರವೇರಿಸಲಿಲ್ಲ ಎಂಬುದು. ನಮ್ಮ ಶೈಲಜೆಯ ಮದುವೆಯಾಗಿ ಆಕೆಯನ್ನು ಕಳಿಸಿಕೊಟ್ಟಾಗ ನಮ್ಮ ಮನೆ ಬರಿದಾಯಿತು. ಆದರೆ ನಮ್ಮ ಮನಸ್ಸು ಮಾತ್ರ ಸಂತೃಪ್ತಿಯಿಂದ ತುಂಬಿತುಳುಕಿತ್ತು. ಒಂದೂವರೆ ವರುಷ ನನ್ನ ಗಿಣಿ ಸುಖವಾಗಿ ಬಾಳುವೆ ಮಾಡಿತು. 'ಶೈಲಜಾ ಬಸುರಿ, ನಿಮ್ಮನ್ನು ಹಂಬಲಿಸುತ್ತಾಳೆ, ಬಂದು ಹೋಗಿ, ಎಂದು ಬೀಗರಿಂದ ಪತ್ರ ಬಂತು. ನನ್ನಾಕೆಗೆ ಸ್ವರ್ಗ ಮೂರೇ ಬೆರಳುಳಿಯಿತು. ಹಿಗ್ಗಿ ಹೀರೇಕಾಯಾದಳು. ಏನೆಲ್ಲಾ ತಿನಿಸು ಭಕ್ಷ್ಯಗಳನ್ನು ತಯಾರು ಮಾಡಿದಳು. ಹೊಸ ಸೀರೆ ಕುಪ್ಪಸ ಅಣಿ ಮಾಡಿಕೊಂಡಳು. ಅಂದವಾದ ಬಳೆಗಳನ್ನೂ ಆರಿಸಿ ಖರೀದಿ ಮಾಡಿಟ್ಟಳು. ಎಂದು ಹೊರಡುವುದು ಎಂದು ದಿನ ಬೆಳಗಾದರೆ ಕೇಳಹತ್ತಿದಳು.

"ನನ್ನ ಮಗಳ ಮನೆಗೆ ಹೊರಡುವ ಸಿದ್ಧತೆ ಎಲ್ಲಾ ಪೂರೈಸಿತ್ತು. ಆದರೆ ದೂರದ ಊರು. ಇಬ್ಬರೂ ಹೊರಡಬೇಕೆಂದು ನಿರ್ಧರಿಸಿದ್ದೆವು. ಪಾಪ, ಭಾಗೀರಥಿಯನ್ನು ಬಿಟ್ಟು ಹೋದರೆ ಹೇಗೆ—ಹೆತ್ತ ಹೊಟ್ಟೆಯಲ್ಲವೆ? .... ಅಲ್ಲಿಗೆ ಹೋಗಿ ಬರುವುದಕ್ಕೆ ಹಣ ತುಸು ತಗಲುವುದೇ?.... ಹೇಗೋ ಮಾಡಿ ಹಣವನ್ನು ಜತೆ ಮಾಡಿ ಮರುದಿನ ಹೊರಡಲು ಗಂಟು-ಮೂಟೆ ಕಟ್ಟಿಟ್ಟಿದ್ದೆವು. ಆ ದಿನ ಸ್ಕೂಲಿಗೆ ಹೋದಾಗ ನನಗೆ ಟಪಾಲು ಬಂದು ಕುಳಿತಿತ್ತು. ನನಗೆ ಚಿಕ್ಕಮಗಳೂರು ಜಿಲ್ಲೆಯ ಕಳಸದ ಹತ್ತಿರ ಒಂದು ಹಳ್ಳಿಗೆ ವರ್ಗವಾಗಿತ್ತು. ನಾವಿದ್ದ ಊರಿಗೆ ವಾರಕ್ಕೊಂದು ಸಾರಿ ಟಪಾಲು ಬರಬೇಕೆಂದು ಇತ್ತು, ತಪ್ಪಿದರೆ ವಾರ ಹೋಗಿ ಪಕ್ಷವೇ ಆದೀತು. ಈ ಪತ್ರ ಹೊರಟು ಒಂದು ಪಕ್ಷವೇ ಆಗಿತ್ತು. ಅದರ ಜೊತೆಗೆ ಡಿ. ಇ. ಓ. ಸಾಹೇಬರಿಂದ ಒಂದು 'ಬೆದರು ಪತ್ರ'ವೂ ಬಂದಿತ್ತು. 'ನಿಮಗೆ ವರ್ಗಾವಣೆ ಹುಕ್ಕುಂ ಕಳಿಸಿ ಹದಿನೈದು ದಿನಗಳಾದರೂ ನೀವು ಛಾರ್ಜು ಪಡೆದಿಲ್ಲವೆಂದು ವರದಿ ಬಂದಿದೆ. ಈಗಲೂ ಕೂಡಲೇ ಹೋಗಿ ಡ್ಯೂಟಿ ಮೇಲೆ ಹಾಜರಾಗದಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದಿತ್ತು. ದೇವರೇ ಸೂಕ್ತ ಕ್ರಮ ಕೈಗೊಂಡಿರುವಾಗ ಬೇರೆ ಯಾರ ಕ್ರಮದಿಂದೇನು ಎಂದು ಭಾಗೀರಥಿಯೊಡನೆ ಪ್ರಯಾಣದ ದಿಕ್ಕು ಬದಲಿಸಬೇಕಾದ್ದನ್ನು ತಿಳಿಸಿದಾಗ ಅವಳು ಅತ್ತು ಹೊರಳಿದಳು. ಮಾಡಿದ ತಿಂಡಿ ತೀರ್ಥಗಳನ್ನು ಬೆರಳಲ್ಲಿಯೂ ನಾವು ಮುಟ್ಟಲಿಲ್ಲ. ನಮ್ಮ ಸ್ಕೂಲಿನ ಮಕ್ಕಳಿಗೆ ಹಂಚಿ— ನಾನು ಮೊದಲೇ ಹೇಳಿದೆನಲ್ಲ, ಅಲ್ಲಿಗೆ ಹೊರಟೇ ಬಿಟ್ಟೆವು. ಭಾಗೀರಥಿ ಹೇಳಿಯೇ ಹೇಳಿದಳು: 'ಹೀಗೆ ಶೈಲಜಾ ಬಸುರಿ—ಒಬ್ಬಳೇ ಮಗಳು— ತುಂಬಿದ ಬಸುರಿ. ದೂರದ ಊರಿನಲ್ಲಿ ಇದ್ದಾಳೆ. ಹೋಗಿ ಕಂಡು ಬಂದು ಕೂಡಲೆ ಆ ಊರಿಗೆ ಹೋಗುತ್ತೇವೆ ಎಂದು ಎಲ್ಲಾ ಬರೆದು ಸಾಹೇಬರಿಗೆ ರಜಾಕ್ಕೆ ಅರ್ಜಿ ಮಾಡಿರಿ' ಎಂದು. ಪಾಪ ಮುಗ್ಧ ಹೆಂಗಸು. ಆ ಸಾಹೇಬರಿಗೆ ಮಗಳೂ-ಅಪ್ಪ ಅವ್ವ ಇವರು ಕರುಳು ತೊಡಕಿಕೊಂಡು ಒಬ್ಬರನ್ನೊಬ್ಬರು ಜಗ್ಗುತ್ತಿರುತ್ತಾರೆ ಎಂಬ ಮಾತು ಹೇಗೆ ತಿಳಿದೀತು? ನಾನು ಬರೆದುಹಾಕಿದೆನೆಂದೂ ಅದಕ್ಕವರು ಸಾಧ್ಯವಿಲ್ಲ ಅಂತ ಉತ್ತರ

ಕೊಟ್ಟರೆಂದೂ ಸುಳ್ಳು ಹೇಳಿದೆ—ನಾನು ಭಾಗೀರಥಿಗೆ ಸುಳ್ಳು ಹೇಳುತ್ತಲೇ ಇರಲಿಲ್ಲ. ನಮ್ಮ ಇಡೀ ದಾಂಪತ್ಯದಲ್ಲಿ ಇದೊಂದೇ ಸುಳ್ಳೆಂದು ತೋರುತ್ತೆ ನಾನು ಹೇಳಿದ್ದು. ಆದರೆ ಈ ಸುಳ್ಳು ಅಷ್ಟೇ ಕ್ರೂರ ಆಘಾತವನ್ನು ಮಾಡಿತು. ಆಗ ಆದ ಗಾಯ ಇನ್ನೂ ವರೆಗೂ ಮಾಯಲಿಲ್ಲ.

"ನಾವು ಹೊಸಹಳ್ಳಿಗೆ ಬಂದು ತಲುಪಿದೆವು. ಮೂರು ದಿನ ಕಳೆದಿತ್ತು. ನಮ್ಮ ಕೈಯಲ್ಲಿದ್ದ ಹಣವೆಲ್ಲ ಖರ್ಚಾಗಿತ್ತು. ಹೊಸ ಸ್ಥಳ. ಜನ ಒಳ್ಳೆಯವರು. ಮನೆ ತಕ್ಕಮಟ್ಟಿಗಿತ್ತು. ನಾಲ್ಕಾರು ದಿನಗಳ ಊಟ ಒಬ್ಬ ಕಾಫಿ ಪ್ಲಾಂಟರರ ಆಶ್ರಯದಲ್ಲಿ ಕಳೆಯಿತು. ನಾವು ಇನ್ನೂ ಒಂದೆರಡು ದಿನ ಹೋಗಿ ತಡೆದು ಶೈಲಜಾನ್ನ ಕರೆತರಲು ಯೋಚಿಸಿದ್ದೆವು— ಆ ಒಂದು ಆಶೆಯಿಂದಲೇ ನಾವು ದಿನವೂ ಉಣ್ಣಲಾರದೆ ಉಂಡು ಜೀವ ಬಿಗಿಹಿಡಿದಿದ್ದೆವು.— ಹೀಗೆ ಒಂದು ವಾರದ ಬಳಿಕ ನನಗೊಂದು ಪತ್ರ ಬಂದಿತು. ಶೈಲಜಾಳ ಊರಿನಿಂದ ಬಂದದ್ದು. ಅದನ್ನು ಬರೆದು ಒಂಬತ್ತು ದಿನಗಳಾಗಿದ್ದವು. ಅದರ ಮೇಲೆ ಯಮರಾಯನ ಕೋಣನ ಕಣ್ಣಿನ ಹಾಗೆ ಹತ್ತು ಹನ್ನೆರಡು ಕಪ್ಪು ಮುದ್ರೆಗಳು ತುಂಬಿದ್ದವು. ಎರಡೇ ಪಂಕ್ತಿ ಇತ್ತು. 'ಶೈಲಜಾಗೆ ಆರೋಗ್ಯವಿಲ್ಲ. ನಿಮ್ಮನ್ನೂ ತಾಯಿಯನ್ನೂ ಹಗಲಿರುಳೂ ಹಂಬಲಿಸುತ್ತಾಳೆ. ಕೂಡಲೇ ಬನ್ನಿ. ಟೆಲಿಗ್ರಾಂ ಕೊಡಲು ನೀವಿರುವುದು ಹಳ್ಳಿಯಾದ್ದರಿಂದ ಆಗಲಿಲ್ಲ— ಕೂಡಲೆ ಹೊರಟು ಬನ್ನಿ.' ನನ್ನ ಎದೆ ಬಿರಿಯಿತು. ಅಳುತ್ತಾ ಮನೆಗೆ ಓಡಿ ಸುದ್ದಿ ಮುಟ್ಟಿಸಿದೆ. ಈ ಸಾರಿ ರಜಾಕ್ಕೂ ಹಾಕಲಿಲ್ಲ, ಸಜಾಕ್ಕೂ ಹಾಕಲಿಲ್ಲ. ಆಗುವುದಾಗುತ್ತದೆ ಎಂದುಕೊಂಡು ನಾವಿಬ್ಬರೂ ಹೊರಟೇಬಿಟ್ಟೆವು. ಎರಡು ದಿನದ ಪಯಣದ ನಂತರ ನಮ್ಮ ಮಗಳ ಮನೆ ತಲುಪಿದೆವು.

ಅವರ ಮನೆಯ ಅಂಗಳ ತಲುಪುತ್ತಲೇ ನಮ್ಮ ಬೀಗರ ಮುಖ ನೋಡಿ ರಾಹು ಹೊಡೆದಂತಾಯಿತು. ಶೈಲಜ ಇಲ್ಲವಾದುದನ್ನು ಕಣ್ಣೀರಿಡುತ್ತ ಹೇಳಿದರು. ನಾವು ಒಪ್ಪತ್ತು ಅಲ್ಲಿದ್ದೆವು. ಶೈಲೆಯ ಗುಣಗಾನವಾಯಿತು-ಇನ್ನು ಅವಸಾನ ಕಾಲದ ಅಳಲಿನ ವರ್ಣನೆಯೂ ಮುಗಿಯಿತು. 'ಅಪ್ಪಾ ಹೂವು— ಹಣ್ಣು ತಂದೆಯಾ' ಎನ್ನುತ್ತಲೇ ಅಸು ನೀಗಿದ್ದಳು ನಮ್ಮ ಮಗಳು— ಹುಟ್ಟಿದ ಹಬ್ಬಕ್ಕೆ ಅಮ್ಮ ಹೊಸ ಸೀರೆ ಉಡಿಸುತ್ತಾಳೆ ಎಂದು ಬಡಬಡಿಸಿ ಜೀವ ಬಿಟ್ಟಳಂತೆ. ನನಗೆ ಅತ್ತು ಅತ್ತು ಸಾಕಾಯಿತು. ಭಾಗೀರಥಿ ಅಳಲಿಲ್ಲ. ಅವಳ ಕಣ್ಣಿನಲ್ಲಿ ಒಂದು ಹನಿ ನೀರೂ ಹನಿಯಲಿಲ್ಲ—ಅವಳನ್ನು ನೋಡಿ ನನಗೆ ಗಾಬರಿಯಾಯಿತು. "ನಡಿಯಿರಿನ್ನು ಹೋಗೋಣ— ನಿಮ್ಮ ಸಾಹೇಬರು ಸಿಟ್ಟಾಗಿ ನಿಮ್ಮ ನೌಕರಿ ಹೋದೀತು!" ಎಂದಿಷ್ಟೆ ಹೇಳಿದಳು.

ಅಲ್ಲಿಂದ ಬಂದು ನಮ್ಮ ಗೂಡಿನಲ್ಲಿ ನಾವಿಬ್ಬರೇ ಕುಳಿತೆವು. ಐದು ವರುಷ ದಿನಕ್ಕೊಂದು ಸಾರೆ "ನೀವು ಆ ದಿನ ಅರ್ಜಿ ಮಾಡಿರಲಿಲ್ಲವೆ?" ಎಂದು ಕೇಳದೆ ಇರುತ್ತಿರಲಿಲ್ಲ— ಭಾಗೀರಥಿ. ಆ ಬಳಿಕ ಒಂದು ದಿನ ಅವಳೂ ಅರಿಸಿನ ಕುಂಕುಮ ತೆಗೆದುಕೊಂಡು ಮಗಳಿಗೆ ಕೊಡಲು ಹೊರಟೇ ಬಿಟ್ಟಳು. ಅವಳು ಕೊನೆ ಉಸಿರು ಬಿಟ್ಟಾಗ ಹೇಳಿದಂತೆ ಶೈಲಜಾಳ ಹುಟ್ಟಿದ ಹಬ್ಬಕ್ಕೆ ಆಕೆಯ ಮನೆಗೆ ಅರಿಸಿನ ಕುಂಕುಮ ಹೂವು ಹಣ್ಣು ತಲುಪಿಸಿ ನನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದೇನೆ— ಇನ್ನು ಹೊರಡಿ, ಚಿತ್ರದುರ್ಗ ಬಂತೂಂತ ಕಾಣುತ್ತೆ" ಎಂದು ಆ ಮುದುಕರು ಸುಮ್ಮನಾದರು.

ಚಿತ್ರದುರ್ಗ ಬಂತು. ಅವರು ಅಂದಂತೆ 'ಋಣಾನುಬಂಧ ತೀರಿತು' ಎಂದರೆ ಹಾರಿಸುವ ಮಾತಾಯಿತು. ಈ ಕರುಳಿನ ತೊಡಕು ದೂರಿರಲಿ-ಹತ್ತರಿರಲಿ, ಸ್ನೇಹವಿರಲಿ-ವೈರವಿರಲಿ ತನ್ನ ಜಗ್ಗಾಟವನ್ನು ಮಾತ್ರ ಬಿಡುವುದಿಲ್ಲ. ನಮಗರಿವಾಗದ ಈ ಆಟವನ್ನು ನಾವು 'ಮಾಯೆ' ಎಂದು ಎರಡು ಅಕ್ಷರದಲ್ಲಿ ಅಂದುಬಿಡುತ್ತೇವೆ. ಆದರೆ ಈ ಮಾಯೆಯನ್ನು ಮೀರಿದ ಮಾನವರಿರುವರೆ?

*

ಇದುವೆ ಜೀವ, ಇದು ಜೀವನ

ಕಾಲೇಜ್ ಬಿಟ್ಟು ಮೂರು ವರ್ಷಗಳ ನಂತರ ಒಂದು ದಿನ ಹಾಸನದಲ್ಲಿ ನನ್ನ ಮೆಚ್ಚಿನ ಪ್ರಾಧ್ಯಾಪಕರೊಬ್ಬರು ಭೇಟಿಯಾಗಿ ಸಮೀಪದಲ್ಲಿದ್ದ ತಮ್ಮ ಮನೆಗೆ ಕರೆದುಕೊಂಡು ಹೋದರು. ಮನೆಯಲ್ಲಿ ಕುಳಿತಿದ್ದಾಗ ಬೀರುವಿನಲ್ಲಿದ್ದ ಪುಸ್ತಕಗಳ ಕಡೆಗೆ ನಾನು ಆಸಕ್ತಿಯಿಂದ ನೋಡುತ್ತಿದ್ದುದನ್ನು ಕಂಡು ಅವರು, ಬೇಕಾದರೆ ಒಂದೆರಡು ಪುಸ್ತಕಗಳನ್ನೊಯ್ದು ಓದಿಕೊಡಬಹುದೆಂದು ಸೂಚಿಸಿದರು.

ಕೈ ಹಾಕಿದೊಡನೆಯೇ 'ಎಸ್ತರ್ ಫೋರ್ಬಿಸ್' ರ ಒಂದು ಪುಸ್ತಕ ಸಿಕ್ಕಿತು. ಊರಿಗೆ ತೆಗೆದುಕೊಂಡು ಬಂದೆ. ವ್ಯವಸಾಯದ ಕೆಲಸಗಳ ನಡುವೆ ಪುಸ್ತಕ ವಾಚನಕ್ಕೆ ಅಷ್ಟಾಗಿ ಬಿಡುವು ದೊರೆಯದಿದ್ದರೂ ದೊರೆಯುವ ಅಲ್ಪಾವಕಾಶದಲ್ಲಿ,ಇಂಗ್ಲಿಷ್ ಪುಸ್ತಕ ಓದಲು ಬೇಸರವಾಗಿ ನಾಲ್ಕಾರು ತಿಂಗಳು ಮೇಜಿನ ಮೇಲೇ ಆ ಪುಸ್ತಕ ಕಳೆಯಿತು. ಕಡೆಗೆ ಓದದೆಯೇ ವಾಪಸು ಮಾಡಬೇಕಾಯಿತಲ್ಲಾ ಎಂದಾಲೋಚಿಸಿ ಓದತೊಡಗಿದೆ. ಆಸಕ್ತಿ ಉತ್ತೇಜಿತವಾಗಿ ಪೂರ್ತಿ ಓದಿದೆ. ಎಷ್ಟು ಮುಗ್ಧನಾದೆನೆಂದರೆ ಮತ್ತೂ ಒಂದು ಬಾರಿ ಓದಿ, ವಾಪಸು ಮಾಡುವ ಮೊದಲು ಆ ಪುಸ್ತಕವನ್ನು ನಾನೇ ಇಟ್ಟುಕೊಂಡು ಅದರ ಬೆಲೆಯನ್ನು ಕೊಟ್ಟರೆ ಆಗಬಹುದೇ ಎಂದು ಕೇಳಿದೆ. ಆದರೆ ಅದು ಕಾಲೇಜು ಲೈಬ್ರರಿಯದೆಂದೂ ಹಾಗೆ ಮಾಡಲು ಸಾಧ್ಯವಿಲ್ಲೆಂದೂ ತಿಳಿದದ್ದರಿಂದ ವಿಧಿಯಿಲ್ಲದೆ ಪುಸ್ತಕ ವಾಪಸು ಕೊಟ್ಟೆ.

ಇದಾಗಿ ಮೂರು ನಾಲ್ಕು ತಿಂಗಳಾಯಿತು. ಮೊನ್ನೆ ತಾನೇ ಬಂದಿದ್ದ ನನ್ನ ಬಂಧು ಒಬ್ಬರು ನನ್ನರೂಮಿನಲ್ಲಿದ್ದ ಪುಸ್ತಕ ಸಂಗ್ರಹವನ್ನು ನೋಡಿ "ಯಾವುದಾದರೂ ಹೊಸ ಪುಸ್ತಕ ಇದೆಯೇನ್ರೀ ?" ಎಂದು ಕೇಳುತ್ತಾ ಕೈ ಹಾಕಿ ಒಂದು ಪುಸ್ತಕವನ್ನು ಹೊರಗೆಳೆದರು. ಅದಕ್ಕೆ ಹಾಕಿದ್ದ ರಟ್ಟಿನ ಬಣ್ಣದ ಮೇಲಿಂದ ನೆನಪು ಮಾಡಿಕೊಂಡು ಅದು ನನಗೆ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ಪರ್ಧೆಯೊಂದರಲ್ಲಿ ಬಹುಮಾನವಾಗಿ ಬಂದ ಪುಸ್ತಕವೆಂದು ವಿವರಿಸಿ ಮರೆತುಹೋಗಿದ್ದ ಅದರ ಹೆಸರನ್ನು ನೋಡಲು ಪುಸ್ತಕವನ್ನು ಕೈಗೆ ತೆಗೆದುಕೊಂಡು ಹಾಳೆ ತಿರುವಿದೆ. ನೋಡಿದರೆ . . . ನಾನು ಎರವಲು ತಂದು ಓದಿ . . . ಬಹುವಾಗಿ ಮೆಚ್ಚಿ . . . ಇಟ್ಟುಕೊಳ್ಳ ಬಯಸಿದ್ದ ಅದೇ ಪುಸ್ತಕ . . . " ಜಾನಿ ಟ್ರೆಮೈನ್ . . . " ಅದಕ್ಕೆ ರಟ್ಟು ಹಾಕಿ ಇಟ್ಟಿದ್ದೆನೇ ಹೊರತು, ಅದರ ಹಾಳೆಗಳನ್ನು ಎಂದೂ ಬಿಡಿಸಿರಲಿಲ್ಲ.

—ಎಂ. ಕೋದಂಡರಾಮ್

ವಿದೇಶದಿಂದ ಭಾರತದ ಪ್ರವಾಸ ಕೈಗೊಂಡು, ಬೆಂಗಳೂರಿಗೆ ಬಂದಿದ್ದ ಪಿ. ಎಸ್. ಜೋಸೆಫ್‌ರವರೊಡನೆ, ಆಗಸ್ಟ್ ಹದಿನೈದರಂದು ಪ್ರಾತಃಕಾಲ ನಿಗದಿಯಾಗಿದ್ದ ನನ್ನ ಭೇಟಿ, ವಿಚಾರ ವಿನಿಮಯ ಮುಗಿದು, ನಗರದ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿಕೊಂಡು ಬರಲು, ಅವರನ್ನು ನನ್ನ ಕಾರಿನಲ್ಲಿಯೇ ಕರೆದೊಯ್ದೆ.

ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ಆಗ

ತಾನೇ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮ ಮುಕ್ತಾಯವಾಗಿ ಸೇರಿದ್ದ ಜನ ಚದುರಲಾರಂಭಿಸಿತ್ತು. ನಾವು ಕಾರು ನಿಲ್ಲಿಸಿ ಅಲ್ಪೋಪಹಾರಕ್ಕಾಗಿ ಹೋಟೆಲ್ ಮುಂದೆ ಇಳಿದುದೇ ತಡ—ದೂರದಿಂದ, ಗಾಂಧೀ ಟೋಪಿ ಧರಿಸಿ, ತೂಗು ಚೀಲ ಹಾಕಿಕೊಂಡಿದ್ದ ಸುಮಾರು ಹತ್ತು ವರ್ಷದ ಹುಡುಗನೊಬ್ಬ, ನಮ್ಮತ್ತ ಧಾವಿಸಿ ಬಂದು ತ್ರಿವರ್ಣದ ಸಣ್ಣ ಬಾವುಟವನ್ನು ನನ್ನ ಕೋಟಿಗೆ ತಗಲಿಸಲು ಪ್ರಯತ್ನಿಸಿದ. ಹುಬ್ಬು ಗಂಟಿಕ್ಕಿ ನಾನು ಅವನನ್ನು ಪ್ರತಿಭಟಿಸಿದೆ. ಒಂದು ಹೆಜ್ಜೆ ಮುಂದಿಟ್ಟ ತಕ್ಷಣ ಜೋಸೆಫ್‌ರವರು ನನ್ನನ್ನು ಕುರಿತು "ಏನು ವಿಷಯ, ಏಕೆ ಹಾಗೆ ಮಾಡಿದಿರಿ?" ಎಂದು ಕೇಳಿದರು. ನಾನು "ಈ ಹುಡುಗರಿಗೆ ಬೇರೆ ಕೆಲಸವೇ ಇಲ್ಲ. ರಾಷ್ಟ್ರೀಯ ದಿನೋತ್ಸವಗಳಲ್ಲಿ ಇದೇ ರೀತಿ ಒಂದೊಂದು 'ಬಾವುಟ' ಚುಚ್ಚಿ ಕಾಸು ಕೇಳುತ್ತಾರೆ" ಎಂದೆ. ಅವಾಕ್ಕಾದ ಜೋಸೆಫ್‌ರವರು ಹಾಗೇ ನಿಂತು, ಇನ್ನೂ ಅಲ್ಲೇ ದಾರಿ ಹೋಕರನ್ನು ಕಾದು ನಿಂತಿದ್ದ ಆ ಹುಡುಗನನ್ನು ಕರೆದು, ತಮ್ಮ ಕೋಟಿಗೆ 'ಬಾವುಟ' ಚುಚ್ಚಿಸಿಕೊಂಡರು. ವಿಧಿಯಿಲ್ಲದೆ ನಾನೂ ಚುಚ್ಚಿಸಿಕೊಳ್ಳಬೇಕಾಯಿತು. ಬಕ್ಷೀಸೂ ಹುಡುಗನ ಕೈಸೇರಿತು. ಕಾಫೀ ಕುಡಿಯುವಾಗ ಜೋಸೆಫ್‌ರವರು ಹೇಳಿದ ಮಾತುಗಳನ್ನು ನಾನೆಂದೂ ಮರೆಯಲಾರೆ; "ರಾಷ್ಟ್ರಕ್ಕೆ—ರಾಷ್ಟ್ರ ಧ್ವಜಕ್ಕೆ ಗೌರವ ಸಲ್ಲಿಸಬೇಕಾದ್ದು ನಮ್ಮ ಆದ್ಯ ಕರ್ತವ್ಯ; ಇಲ್ಲಿ ಹುಡುಗನ ಸ್ಥಾನ-ಮಾನ ಗೌಣ. ಜಗತ್ತೇ ಇದುವರೆಗೆ ಕೇಳದ, ಕಂಡರಿಯದ ಅಹಿಂಸಾತ್ಮಕ ಮಹಾಕ್ರಾಂತಿ ನಿಮ್ಮ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ಇಂದಿಗೆ ಹದಿನಾಲ್ಕು ವರ್ಷ ತುಂಬಿದೆ. ಇಂಥ ಸುವರ್ಣ ದಿನದಲ್ಲೂ ನಿಮ್ಮ ಜನರ ಮುಖಗಳಲ್ಲಿ ಉತ್ಸಾಹ, ಸಂತೋಷಗಳೇ ಕಾಣಿಸುತ್ತಿಲ್ಲವಲ್ಲಾ! ನಮ್ಮ ದೇಶಗಳಿಗೆ ಬರುವ ನಿಮ್ಮವರು ನಮ್ಮ ರಾಷ್ಟ್ರೀಯ ದಿನೋತ್ಸವಗಳಲ್ಲಿ ಸಂತೋಷದಿಂದ ಭಾಗವಹಿಸುತ್ತಾರೆ!"

—ಎಂ. ಕೆ. ಮೂರ್ತಿ

ಒಮ್ಮೆ ನನ್ನ ಅಜ್ಜನವರು ಪ್ರಯಾಣ ಮಾಡುತ್ತಿರುವಾಗ ನಡೆದ ಸಂಗತಿ ಇದು. ಅವರಿಗೆ ಮಂಗಳೂರಿನಿಂದ ಮದ್ರಾಸಿಗೆ ಹೋಗಬೇಕಿತ್ತು. ರೇಲ್ವೆ ಸ್ಟೇಶನ್‌ಗೆ ಬರುವಾಗಲೇ ತಡವಾಗಿತ್ತು. ಅವರೊಂದಿಗೆ ಇದ್ದ ಮಿತ್ರರೊಬ್ಬರಹತ್ತಿರ ಟಿಕೀಟು ತರಿಸಿ ಇಬ್ಬರೂ ಗಾಡಿಯಲ್ಲಿ ಕುಳಿತರು. ಇಷ್ಟೆಲ್ಲ ಕಷ್ಟಪಟ್ಟು ಒಳಗೆ ಹೋದಾಗ ಅಲ್ಲಿ ಕುಳಿತುಕೊಳ್ಳಲು ಜಾಗವಿದ್ದಿಲ್ಲ. ಓರ್ವ ಗೃಹಸ್ಥ ಮತ್ತು ಆತನ ಹೆಂಡತಿ ಮಕ್ಕಳು ಒಂದೊಂದು ಸೀಟಿನಲ್ಲಿ ಮಲಗಿಕೊಂಡು ನಿದ್ರಿಸುತಿದ್ದರು. ನನ್ನ ಅಜ್ಜನವರು ಅತ್ತಿತ್ತ ನೋಡಿ, ತನ್ನ ಮಿತ್ರರೊಂದಿಗೆ "ಶ್ರೀನಿವಾಸ, ಮಲಗಿಕೊಳ್ಳುವ ಟಿಕೀಟಿನ ಬದಲು ನಿಂತುಕೊಳ್ಳುವ ಟಿಕೀಟು ಯಾಕೆ ತಂದಿ? ನೀನು ಕೂಡಾ ಮಲಗಿಕೊಳ್ಳುವ ಟಿಕೀಟು ತರಬೇಕಿತ್ತು" ಎಂದರು. ಆಗ ಅವರ ಮಿತ್ರರು "ಮಲಗಿಕೊಳ್ಳುವ ಟಿಕೀಟು ಎಂದು ಪ್ರತ್ಯೇಕ ಇಲ್ಲ. ಎಲ್ಲಾ ಒಂದೇ" ಎಂದರು. ಅಜ್ಜನವರು, "ಛೆ! ಮಲಗಿಕೊಳ್ಳುವ ಟಿಕೀಟು ಎಂದು ಪ್ರತ್ಯೇಕ ಇರಲೇಬೇಕು. ಇಲ್ಲವಾದರೆ ಇವರೆಲ್ಲಾ ಯಾಕೆ ಮಲಗಿಕೊಳ್ಳುತ್ತಾರೆ?" ಎಂದರು. ಅಷ್ಟರಲ್ಲಿ, ಮಲಗಿಕೊಂಡು ನಿದ್ರಿಸುವವನಂತೆ ನಟಿಸುತ್ತಿದ್ದ ಗೃಹಸ್ಥನ ಮುಖದಲ್ಲಿ ಮುಗುಳ್ನಗೆ ಮೂಡಿತು. ಆತ ನಗುತ್ತ, ಎದ್ದು ಕುಳಿತು ಇವರಿಗೆ ಸ್ಥಳಾವಕಾಶವನ್ನು ಮಾಡಿಕೊಟ್ಟ.

—ಸುಧಾಕರ, ಉಡುಪಿ

ಈ ಪ್ರಶ್ನೆಗಳನ್ನು ಉತ್ತರಿಸಬಲ್ಲಿರಾ ?

ನಿಮ್ಮ ಬುದ್ಧಿಬಲಕ್ಕೊಂದು ಸವಾಲು

ಡಾ. ವಿ. ಎಸ್. ರಾಮಚಂದ್ರನ್


ಸಮಸ್ಯೆ ೧

ರಾಮಾನುಜಂ ಮತ್ತು ಅವನ ಮಿತ್ರರಾದ ಕೃಷ್ಣ ಮತ್ತು ಮಧು ಎಪ್ರಿಲ್ ೧ ರಂದು ಆಫೀಸಿನಿಂದ ಮರಳಿ ಬರುತ್ತಿದ್ದರು. ಮೂವರ ಕೋಟುಗಳ ಬೆನ್ನಿಗೂ ಅವರ ಯಾವನೋ ಕಿಡಿಗೇಡಿ ಮಿತ್ರನಿಂದ ಅಂಟಿಸಲ್ಪಟ್ಟಿದ್ದ "ಎಪ್ರಿಲ್ ಫೂಲ್" ಎಂಬ ಚೀಟಿಗಳಿದ್ದವು. ರಾಮಾನುಜಂ ತನ್ನ ಇಬ್ಬರು ಮಿತ್ರರನ್ನು ನೋಡಿ ಗುಸುಗುಸು ನಗುತ್ತಿದ್ದರೆ ಅವರು ಗಹಗಹಿಸಿ ನಗುತ್ತಿದ್ದರು. ಪ್ರತಿಯೊಬ್ಬನೂ ತನ್ನ ಬೆನ್ನು ಸ್ವಚ್ಛವಾಗಿದೆಯೆಂದೇ ಬಗೆದಿದ್ದ. ಕೆಲ ಕ್ಷಣಗಳ ನಂತರ ವಿಚಾರಶೀಲನಾದ ರಾಮಾನುಜಂ ತನ್ನ ಬೆನ್ನಿಗೂ "ಎಪ್ರಿಲ್ ಫೂಲ್" ಅಂಟಿಕೊಂಡಿದೆ ಎಂದು ತಿಳಿದುಕೊಂಡ.

ಅವನು ಅದನ್ನು ತರ್ಕದಿಂದ ಹೇಗೆ ಊಹಿಸಿದ?

ಸಮಸ್ಯೆ ೨

ಪಿಂಪಳ್ಳಿ ನಾಡಿನ ರಾಜಧಾನಿಯಲ್ಲಿ ಒಂದು ಚಚೌಕದ ಮೂರು ಮೂಲೆಗಳಲ್ಲಿ ಮೂರು ದೇವಾಲಯಗಳನ್ನೂ ನಾಲ್ಕನೇ ಮೂಲೆಯಲ್ಲಿ ಅರಮನೆಯನ್ನೂ ಕಟ್ಟಿಸಲಾಯಿತು. (ನಕ್ಷೆ ನೋಡಿರಿ.) ಆದರೆ ಭಕ್ತಾಗ್ರಣಿಯಾದ ರಾಜನು ದೇವಾ-



ಲಯಗಳಿಗೆ ಪ್ರಪ್ರಥಮವಾಗಿ ಪ್ರವೇಶಿಸುವ ಮೊದಲೇ ದೇವತೆಗಳು ಕನಸಿನಲ್ಲಿ ಕಾಣಿಸಿಕೊಂಡು ಆತ ದೇವಾಲಯಕ್ಕೆ ಹೇಗೆ ಬರಬೇಕೆಂದು ಆಜ್ಞೆ ವಿಧಿಸಿದರು. ವಿಧಿ ಹೀಗಿತ್ತು:

೧. ದಿನವೂ ರಾಜನು ಅರಮನೆಯಿಂದ ಹೊರಟು ಕ್ರಮವಾಗಿ ೧, ೨ ಮತ್ತು ೩ನೇ ದೇವಸ್ಥಾನಗಳಿಗೆ ಹೋಗಿ ಬರತಕ್ಕದ್ದು.

೨. ಅವನು ಯಾವಾಗಲೂ ಸರಳ ರೇಖೆಯಲ್ಲೇ ಸಾಗಬೇಕು. ಮತ್ತು ಬಂದ ದಾರಿಯಲ್ಲಿ ಹಿನ್ನಡೆಯಬಾರದು.

೩. ಮೂರೂ ದೇವಾಲಯಗಳ ದರ್ಶನ ಮುಗಿಸಿ ಅರಮನೆಗೆ ಮರಳಲು ಒಟ್ಟು ಮೂರು ಸರಳ ರೇಖೆಗಳಿಗಿಂತ ಹೆಚ್ಚು ಆಗಬಾರದು.

ರಾಜ ತಲೆ ಕೆರೆದುಕೊಂಡೇಕೊಂಡ. ಹೇಗೆ ಇದನ್ನು ಪೂರೈಸಬೇಕೆಂದು ಹೊಳೆಯಲಿಲ್ಲ. ಆತ ಭ್ರಮಿಷ್ಟನಂತೆ ನೆಟ್ಟಗೆ ಮೊದಲನೇ ದೇವಾಲಯಕ್ಕೆ ರಂಗನಾಥನನ್ನು ಪ್ರಾರ್ಥಿಸಿಕೊಳ್ಳಲು ಹೋದ. ಅಲ್ಲಿ ಆಗ ರಾಮಾನುಜಂ ಇದ್ದ. ರಾಜನಿಗೊದಗಿದ ಕಷ್ಟವನ್ನು ಕೇಳಿ ಆತ ಒಂದು ಉಪಾಯ ಹುಡುಕಿ ಹೀಗೆ ಹೀಗೆ ಸಾಗಿದರೆ ದೇವತೆಗಳ ಅಪ್ಪಣೆ ಪೂರೈಸಬಹುದೆಂದು ಸೂಚನೆ ಕೊಟ. ಆತ ಕೊಟ್ಟ ಸೂಚನೆಗಳಾವವು?

(ಉತ್ತರಗಳಿಗೆ ೮೮ನೇ ಪುಟ ನೋಡಿರಿ)

“ ಮುಚ್ಚಿದ ಎದೆಯ ಮಾಲೀಸು ”

ಹೃದಯಸ್ತಂಭನ ಪ್ರಕರಣಗಳಲ್ಲಿ

ಅಮೂಲ್ಯ ನೂತನ ತಂತ್ರವಾಗಿದೆ



ಪಾಲ್ ಕಿಯರ್ನಿ

ಹೃದಯಸ್ತಂಭನವಾದಾಗ ಸಹಾಯ ಹಸ್ತ

ಕೆಲ ತಿಂಗಳ ಹಿಂದೆ ಲಂಡನ್ನಿನ ನ್ಯಾಶನಲ್ ಸ್ಪೋರ್ಟಿಂಗ್ ಕ್ಲಬ್ಬಿನಲ್ಲಿ ೫೦ ವರ್ಷದ ಗೃಹಸ್ಥನೊಬ್ಬ ಇದ್ದಕ್ಕಿದ್ದಂತೆ ಕುಸಿದು ಬಿದ್ದ. ಎಲ್ಲರೂ ಅವನು ಸತ್ತನೆಂದು ಭಾವಿಸಿದರು. ಅವನ ಹೃದಯ ಬಡಿತ ನಿಂತಿತು, ನಾಡಿ ಇರಲಿಲ್ಲ. ಶ್ವಾಸೋಚ್ಛ್ವಾಸ ಸಂಪೂರ್ಣವಾಗಿ ನಿಂತು ಹೋಗಿತ್ತು. ತೀರ ಇತ್ತೀಚಿಗಿನ ವರೆಗಿನ ಲೆಕ್ಕದಲ್ಲಿ ಆ ಮನುಷ್ಯ ಮತ್ತೆ ಜೀವಿಸುವ ಆಶೆ ತೀರ ಕಡಿಮೆಯಾಗಿತ್ತು. ಅವನ ಎದೆಯ ಮೇಲೆ ಕೆಲವು ಬಲವಾದ ಗುದ್ದುಗಳನ್ನು ಕೊಟ್ಟರೆ ಅವನ ಹೃದಯ ಬಡಿತವನ್ನು ಪುನಃ ಪ್ರಾರಂಭಿಸಬಹುದಿತ್ತು. ಅಥವಾ ಶುದ್ಧ ಪ್ರಾಣವಾಯುವನ್ನು ಅವನ ಪುಪ್ಪುಸಗಳಲ್ಲಿ ತುಂಬಿದಾಗ ಹೃದಯ ಮತ್ತೆ ಬಡಿಯಲಾರಂಭಿಸಬಹುದಿತ್ತು. ಆದರೆ ಹಾಗಾಗುವ ಸಂಭವ ಬಹು ಕಡಿಮೆಯೇ. ಅವಸರದ ಕ್ರಮವೆಂದು ಅವನ ಎದೆಗೆ ಶಸ್ತ್ರಚಿಕಿತ್ಸೆಮಾಡಿ ಹೃದಯಕ್ಕೆ ಮಾಲೀಸು ಮಾಡಿ ಅದನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಬಹುದಿತ್ತು. ಇಂಥ ಶಸ್ತ್ರಕ್ರಿಯೆಗಳನ್ನು ಆಗಾಗ ಮಾಡುತ್ತಿರುವರಾದರೂ ಅತ್ಯಂತ ಸುಸಜ್ಜಿತ ಆಸ್ಪತ್ರೆಗಳಲ್ಲಿ ಕೂಡ ಈ ಬಗೆಯ ಶಸ್ತ್ರಕ್ರಿಯೆ ತುಂಬ ಗಂಡಾಂತರದ್ದೇ ಆಗಿರುತ್ತದೆ.

ಆದರೆ ಈ ಮನುಷ್ಯ ಅದೃಷ್ಟಶಾಲಿಯಾಗಿದ್ದ. ಆ ಕ್ಲಬ್ಬಿನಲ್ಲಿ ಆಗ ಇದ್ದ ಒಬ್ಬ ಡಾಕ್ಟರು “ಬ್ರಿಟಿಷ್ ಮೆಡಿಕಲ್ ಜರ್ನಲ್”ನಲ್ಲಿ ಬಂದಿದ್ದ ಒಂದು ಲೇಖನವನ್ನು ಓದಿದ್ದರು. ಅದರಲ್ಲಿ ಹೃದಯಸ್ತಂಭನವಾದಾಗ ಮಾಡಬೇಕಾದ ಅವಸರದ ಚಿಕಿತ್ಸೆಯಲ್ಲಿ ಕ್ರಾಂತಿಯನ್ನುಂಟುಮಾಡುವಂಥ ಹೊಸ ವಿಧಾನವೊಂದನ್ನು ವಿವರಿಸಲಾಗಿತ್ತು. ಶ್ವಾಸೋಚ್ಛ್ವಾಸವನ್ನು ಪುನ: ಶುರು ಮಾಡಲು ಸಾಮಾನ್ಯವಾಗಿ ಬಾಯಿಗೆ ಬಾಯಿಯಿಟ್ಟು ಪುಪ್ಪುಸಗಳಿಗೆ ಗಾಳಿ ತುಂಬುತ್ತಾರಲ್ಲ; ಅದರಷ್ಟೇ ಈ ಹೊಸ ವಿಧಾನ ಸುಲಭವಾಗಿತ್ತು. ಅಮೇರಿಕದ ಬಾಲ್ಟಿಮೋರಿನ ಜಾನ್ಸ್ ಹಾಪ್‌ಕಿನ್ಸ್

“ ರೀಡರ್ಸ್ ಡೈಜೆಸ್ಟ್ ” ನಿಂದ

ಹಾಸ್ಪಿಟಲ್‌ನಲ್ಲಿ ರೂಪುಗೊಂಡ ಈ ವಿಧಾನಕ್ಕೆ "ಮುಚ್ಚಿದ ಎದೆಯ ಮಾಲೀಸು" (Closed chest heart massage) ಎಂಬ ಹೆಸರಿದೆ. ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆಯ ಅಗತ್ಯವಿಲ್ಲ. ಯಾವ ಸಲಕರಣೆಗಳೂ ಬೇಕಾಗುವುದಿಲ್ಲ. ಹೃದಯ ವಿಕಾರದಲ್ಲಿ ಮಾತ್ರವಲ್ಲ, ಮುಳುಗಿ, ಉಸಿರು ಕಟ್ಟಿ, ವಿದ್ಯುತ್ ಆಘಾತವಾಗಿ, ರಾಸಾಯನಿಕ ವಾಯುಗಳಿಂದ ಶ್ವಾಸಕಟ್ಟಿ ಅಥವಾ ಮತ್ತಾವುದಾದರೂ ಬಗೆಯಲ್ಲಿ ಮರಣ ಪ್ರಾಪ್ತವಾದಾಗಲೂ ಈ ವಿಧಾನವನ್ನು ಉಪಯೋಗಿಸಬಹುದಾಗಿದೆ.

ಇಂಗಂಡಿನ ಆ ಕಬ್ಬಿನಲ್ಲಿ ಗತಪ್ರಾಣನಂತೆ ಬಿದ್ದಿದ್ದ ಆ ಮನುಷ್ಯನನ್ನು ಬದುಕಿಸಲೆಂದು ಆ ಡಾಕ್ಟರರು ಅವನನ್ನು ಅಂಗಾತ ಮಲಗಿಸಿದರು. ಅವನ ತಲೆಯನ್ನು ಹಿಂದಕ್ಕೆ ತಳ್ಳಿ ಗದ್ದವನ್ನು ಮಾಡಿನತ್ತ ಮೇಲಕ್ಕೆತ್ತಿದರು. ಶ್ವಾಸನಾಳಕ್ಕೆ ನಾಲಿಗೆಯಿಂದ ಅಡ್ಡಿಯಾಗದಿರಲಿ ಎಂಬುದಕ್ಕಾಗಿ ಈ ರೀತಿ ಗದ್ದವನ್ನು ಮೇಲಕ್ಕೆತ್ತಿದ್ದರು. "ನನ್ನ ಬಲ ಅಂಗೈಯ ಮೇಲ್ಭಾಗದಿಂದ ನಾನು ಅವನ ಎದೆಯ ಎಲುಬಿನ ಕೆಳಭಾಗವನ್ನು ಒತ್ತಿ ಆಮೇಲೆ ಕೈಯೆತ್ತಿದೆ ಮೊದಲಿನ ಅರ್ಧ ನಿಮಿಷದಲ್ಲಿ ಏನೂ ಪರಿಣಾಮವಾಗಲಿಲ್ಲ. ಆಮೇಲೆ ಸಾವಕಾಶವಾಗಿ ಆ ಮನುಷ್ಯನಲ್ಲಿ ಜೀವಕಳೆ ಕಾಣಿಸತೊಡಗಿತು." ಎಂದು ಡಾಕ್ಟರರು ಆಮೇಲೆ ಹೇಳಿದರು.

ರೋಗಿಯ ಹೃದಯದ ಮೇಲ್ಭಾಗದಲ್ಲಿ ಮೊದಲು ಬಲಗೈಯಿಟ್ಟು ಅದರ ಮೇಲೆ ಎಡಗೈ ಇಟ್ಟು ಈ ಬಗೆಯ ಹೃದಯದ ಮಾಲೀಸನ್ನು ಮಾಡುತ್ತಾರೆ. ಮಾಲೀಸು ಮಾಡುವವನು ತ್ವರಿತಗತಿಯಲ್ಲಿ ಎದೆಗೂಡನ್ನು ಕುಗ್ಗಿಸುವಷ್ಟು ಜೋರಾಗಿ ಅಂಗೈಯನ್ನು ಕೆಳಮುಖವಾಗಿ ಒತ್ತುತ್ತಾನೆ. ಇದರಿಂದ ಹೃದಯದಲ್ಲಿ ತುಂಬಿರುವ ರಕ್ತದಲ್ಲಿ ಕೆಲಭಾಗ ದೊಡ್ಡ ಶುದ್ಧ ರಕ್ತನಾಳಗಳಿಗೆ ಹರಿದುಹೋಗುತ್ತದೆ. ಆಮೇಲೆ ಅಂಗೈಗಳನ್ನು ಎದೆಯಿಂದ ಮೇಲಕ್ಕೆತ್ತುವುದರಿಂದ ಎದೆ ಹಿಗ್ಗಿ ದೊಡ್ಡ ಅಶುದ್ಧ ರಕ್ತನಾಳದಿಂದ ತುಸು ರಕ್ತ ಮತ್ತೆ ಹೃದಯಕ್ಕೆ ಹರಿದು ಬರುತ್ತದೆ.

ಪ್ರತಿ ಮಿನಿಟಿಗೆ ಸುಮಾರು ೭೦ ಸಲದ ವೇಗದಲ್ಲಿ ಈ ರೀತಿ ಮಾಡುತ್ತಾರೆ. ಒತ್ತುವುದು, ಬಿಡುವುದು-ಒತ್ತುವುದು ಬಿಡುವುದು. ಮಾಲೀಸು ಮಾಡುವವನಿಗೆ ಸಹಾಯ ಮಾಡಲು ಯಾರಾದರೂ ಇದ್ದರೆ ಇನ್ನೂ ಒಳ್ಳೆಯದು. ಆ ಸಹಾಯಕ ಈ ಮಾಲೀಸು ನಡೆದಾಗ ರೋಗಿಯ ಬಾಯಿಗೆ ಬಾಯಿಯಿಟ್ಟು ಪುಪ್ಪುಸಗಳೊಳಗೆ ಪ್ರಾಣವಾಯುವನ್ನು ತುಂಬಬಹುದು. (ಒಬ್ಬನೇ ಇದ್ದರೂ ಎದೆಯ ಮಾಲೀಸಿನಿಂದ ಪುಪ್ಪುಸಕ್ಕೆ ಒಂದಿಷ್ಟು ಪ್ರಾಣವಾಯು ದೊರೆತೇ ದೊರೆಯುತ್ತದೆ. ಆದರೆ ಬಾಯಿಗೆ ಬಾಯಿಯಿಟ್ಟು ಶ್ವಾಸೋಚ್ಛ್ವಾಸದ ಮೂಲಕ ಪ್ರಾಣವಾಯುವನ್ನು ತುಂಬಿದರೆ ರೋಗಿ ಗುಣವಾಗುವ ಸಂಭವ ಹೆಚ್ಚಿಗಿರುವುದಲ್ಲದೆ ಪ್ರಾಣವಾಯುವಿನ ಕೊರತೆಯಿಂದ ಅವನ ಮೆದುಳಿಗಾಗಬಹುದಾದ ವಿಕಾರದ ಸಂಭವವೂ ಬಹಳ ಕಡಿಮೆಯಾಗುತ್ತದೆ.)

ನ್ಯಾಶನಲ್ ಸ್ಪೋರ್ಟಿಂಗ್ ಕ್ಲಬ್ಬಿನಲ್ಲಿ ಹೃದಯಕ್ರಿಯೆ ನಿಂತು ಕೆಳಗೆ ಬಿದ್ದಿದ್ದಾತನಿಗೆ ಆ ಡಾಕ್ಟರರು ಈ ರೀತಿ ಒಂದೆರಡು ಮಿನಿಟುಗಳವರೆಗೆ ಹೃದಯದ ಮಾಲೀಸು ಮಾಡಿದ ನಂತರ ಆ ಮನುಷ್ಯ ನರಳ ತೊಡಗಿ ಸಾವಕಾಶವಾಗಿ ಎಚ್ಚರಾದ. ಅಂದೇ ಸಂಜೆ ಆತ ಮನೆಗೆಹೋಗಲು ಸಮರ್ಥನಾದ. ತನ್ನ ಹೆಂಡತಿಗೆ ಆತ "ನನಗೆ ಎಚ್ಚರ ತಪ್ಪಿ ಹೋಯಿತೆಂದು ಕಾಣುತ್ತದೆ" ಎಂದ. ಅವನನ್ನು ಬದುಕಿಸಿದ ಡಾಕ್ಟರರು "ಕೆಲಕಾಲ ತನ್ನ ಹೃದಯವು ಬಡಿತವನ್ನು ನಿಲ್ಲಿಸಿಬಿಟ್ಟಿತ್ತು ಎಂಬ ಮಾತು ಬಹುಶಃ ಅವನ ಕಲ್ಪನೆಗೂ ಬಂದಿರಲಿಕ್ಕಿಲ್ಲ" ಎಂದಿದ್ದಾರೆ.

ಜಾನ್ಸ್ ಹಾಪ್‌ಕಿನ್ಸ್ ಆಸ್ಪತ್ರೆಯ ಒಬ್ಬ ಇಲೆಕ್ಟ್ರಿಕಲ್ ಇಂಜನಿಯರ್ ಡಾ. ಡಬ್ಲ್ಯು. ಬಿ. ಕೋವೆನ್ ಹೋವನ್ ಎಂಬವರು 'ಜಾನ್ಸ್ ಹಾಪ್‌ಕಿನ್ಸ್ ಯುನಿವರ್ಸಿಟಿ ಸ್ಕೂಲ್ ಆಫ್ ಮೆಡಿಸಿನ್'ನ ಕೆಲವರ ಸಹಾಯದಿಂದ ಈ ಹೃದಯ ಮಾಲೀಸಿನ ವಿಧಾನವನ್ನು ಕಂಡುಹಿಡಿದಿದ್ದಾರೆ. ಮನುಷ್ಯರ ಮೇಲೆ ಪ್ರಯೋಗ ಮಾಡುವ ಮೊದಲು ಎರಡು ವರ್ಷಗಳ ಕಾಲ ಡಾಕ್ಟರರು ಇದನ್ನು ನಾಯಿಗಳಮೇಲೆ ಪ್ರಯೋಗ ಮಾಡಿ ನೋಡಿದರು.

ಒಂದು ದಿನ ಶಸ್ತ್ರಚಿಕಿತ್ಸೆ ನಡೆಯುತ್ತಿರುವಾ-

ಗಲೇ ೩೫ ವರ್ಷದ ಮಹಿಳೆಯೊಬ್ಬಳ ಹೃದಯ ನಿಂತುಹೋಯಿತು. ಅವಳ ಎದೆಗೂಡನ್ನು ಕೊಯ್ದು ತೆರೆಯದೆಯೇ ಡಾಕ್ಟರರು ಈ ಹೊಸ ವಿಧಾನದಿಂದ ಅವಳ ಎದೆಗೆ ಮಾಲೀಸು ಮಾಡಿದರು. ಎರಡು ಮಿನಿಟುಗಳ ನಂತರ ಅವಳ ನಾಡಿ ಹೊಡೆಯಲಾರಂಭಿಸಿತು. ಡಾಕ್ಟರರು ಶಸ್ತ್ರಕ್ರಿಯೆ ಮುಂದುವರಿಸಿದರು.

ಪ್ರಜ್ಞೆ ತಪ್ಪಿಸುವ ಔಷಧಿಯೊಂದನ್ನು ಕೊಡುತ್ತಿದ್ದಾಗಲೇ ೧೨ ವರ್ಷದ ಬಾಲಕನೊಬ್ಬನ ಹೃದಯ ನಿಂತುಬಿಟ್ಟಿತು. ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಲೆಂದು ಅಂಗಿಯನ್ನು ಕಳಚುತ್ತಿದ್ದಾಗಲೇ ೪೫ ವರ್ಷದವನೊಬ್ಬನ ಹೃದಯ ನಿಂತು ಅವನು ಕುಸಿದು ಬಿದ್ದ. ಕ್ಯಾನ್ಸರಿಗಾಗಿ ಆಪರೇಶನ್ ನಡೆದಿದ್ದಾಗಲೇ ೮೦ ವರ್ಷದ ಮುದುಕಿಯೊಬ್ಬಳ ಹೃದಯ ನಿಂತುಹೋಯಿತು. ಈ ಮೂರೂ ಸಂದರ್ಭಗಳಲ್ಲಿ ಜಾನ್ಸ್ ಹಾಪ್‌ಕಿನ್ಸ್ ಡಾಕ್ಟರರು "ಮುಚ್ಚಿದ ಎದೆಯ ಮಾಲೀಸಿ" ನಿಂದ ಹೃದಯ ಬಡಿತವನ್ನು ಮತ್ತೆ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಅವರು ಈ ವಿಧಾನವನ್ನು ೨೦ ಜನರ ಮೇಲೆ ಪ್ರಯೋಗ ಮಾಡಿದರು. ಅವರಲ್ಲಿ ನೂರಕ್ಕೆ ೭೦ ರಷ್ಟು ಅಂದರೆ ೧೪ ಜನರ ವಿಷಯದಲ್ಲಿ ಯಶಸ್ವಿಗಳಾದರು. ೫೬ ಆಪತ್ ಪ್ರಸಂಗಗಳ ಪೈಕಿ ೪೪ ರಲ್ಲಿ ಅವರಿಗೆ ಯಶಸ್ಸು ಸಿಕ್ಕಿತು. ಎದೆಗೆ ಶಸ್ತ್ರಚಿಕಿತ್ಸೆ ಮಾಡಿ ನೇರವಾಗಿ ಹೃದಯ ಮಾಲೀಸು ಮಾಡಿದ ಪ್ರಕರಣಗಳ ಯಶಸ್ಸಿನ ದೃಷ್ಟಿಯಿಂದ ಈ ವಿಧಾನಕ್ಕೆ ದೊರೆತ ಯಶಸ್ಸು ಗಣನೀಯವಾಗಿತ್ತು. (ಒಳ್ಳೊಳ್ಳೆ ಆಸ್ಪತ್ರೆಗಳಲ್ಲಿ ಕೂಡ ಶಸ್ತ್ರಚಿಕಿತ್ಸೆ ಮಾಡಿ ಹೃದಯಕ್ಕೆ ನೇರವಾಗಿ ಮಾಲೀಸು ಮಾಡಿದ ಪ್ರಕರಣಗಳಲ್ಲಿ ನೂರಕ್ಕೆ ೪೦ ರಷ್ಟೇ ಯಶಸ್ವಿಯಾಗಿವೆ.)

ಆದರೆ ಜಾನ್ಸ್ ಹಾಪ್‌ಕಿನ್ಸ್ ಡಾಕ್ಟರರು ಹೇಳಿರುವಂತೆ ಈ ಪರಿಣಾಮಗಳು ನೂರಕ್ಕೆ ನೂರು ಆಶಾದಾಯಕವೆನ್ನಲಾಗುವುದಿಲ್ಲ. ನಿಂತ ಹೃದಯವನ್ನು ಪುನಃ ಆರಂಭಿಸಲು ಯಾವ ವಿಧಾನವನ್ನೇ ಉಪಯೋಗಿಸಿರಲಿ, ಈ ರೀತಿ ಬದುಕಿದವರಲ್ಲಿ ಕೆಲವರಾದರೂ ಕೆಲದಿನ ಅಥವಾ ತಾಸುಗಳ ನಂತರ ಮೊದಲು ಯಾವ ಕಾರಣಕ್ಕಾಗಿ ಹೃದಯವಿಕಾರವುಂಟಾಗಿತ್ತೊ ಮತ್ತೊಮ್ಮೆ ಅದೇ ಕಾರಣದಿಂದ ಹೃದಯವಿಕಾರಕ್ಕೊಳಗಾಗಿ ಸಾಯುತ್ತಾರೆ.

ಹಾಗಿದ್ದರೂ ಈ ಹೊಸ ಮಾಲೀಸಿನ ಪರಿಣಾಮ ಎಷ್ಟು ಪ್ರಭಾವಿಯಾಗಿತ್ತೆಂದರೆ ಕಳೆದ ವರ್ಷ ೮ ತಿಂಗಳಲ್ಲಿ ಜಾನ್ಸ್ ಹಾಪ್‌ಕಿನ್ಸ್ ಆಸ್ಪತ್ರೆಯ ಸೀನಿಯರ್ ಸರ್ಜನ್ ಡಾ. ಆಲ್ಫ್ರೆಡ್ ಬ್ಲಾಲಾಕ್‌ರು ಬಾಲ್ಟಿಮೋರ್ ಅಂಬ್ಯುಲನ್ಸ್ ಸರ್ವೀಸಿನವರಿಗೆ ಈ ತಂತ್ರವನ್ನು ಕಲಿಸಿದರು. ಮೊದಲಿನ ಮೂರು ತಿಂಗಳಲ್ಲಿ ಈ ಅಂಬ್ಯುಲನ್ಸ್ ಜನರು ಬೀದಿ ಮತ್ತು ಮನೆಗಳಲ್ಲಿ ಒಮ್ಮೆಂದೊಮ್ಮೆ ಹೃದಯ ನಿಂತು ಮರಣ ಹೊಂದಿದ ಆರು ಜನರ ಮೇಲೆ ಈ ತಂತ್ರವನ್ನು ಪಯೋಗಿಸಿ ಅವರನ್ನು ಬದುಕಿಸಿದರು.

ಈಗ ಅಮೇರಿಕದ ಹಾರ್ಟ್ ಅಸೋಸಿಯೇಶನ್ನಿನವರು ಅಮೇರಿಕದಲ್ಲೆಲ್ಲ ಡಾಕ್ಟರರಿಗೆ ಈ ತಂತ್ರದ ಶಿಕ್ಷಣ ವರ್ಗಗಳನ್ನು ಏರ್ಪಡಿಸುತ್ತಾರೆ. ಈ ವರ್ಗಗಳಲ್ಲಿ ಹೇಳಿಕೊಡುವ ಪಾಠಗಳಲ್ಲಿ ಮುಖ್ಯವಾಗಿ ಈ ಮುಂದಿನ ಎಂಟು ಅಂಶಗಳನ್ನು ಒತ್ತಿ ಹೇಳಲಾಗುತ್ತದೆ:

೧) ನಾಡಿಯನ್ನು ನೋಡಿರಿ—ನಾಡಿ ಇದೆಯೆ ಎಂದು ನೋಡಲು ಮುಂಗೈಗಿಂತಲೂ ಗಂಟಲಲ್ಲಿ ಶ್ವಾಸನಾಳದ ಎರಡೂ ಮಗ್ಗಲಲ್ಲಿ ನೋಡುವುದು ಒಳ್ಳೆಯದು. ನಾಡಿ ಕೈಗೆ ಹತ್ತದಿದ್ದರೆ ಕೂಡಲೆ ಮಾಲೀಸಿಗಾರಂಭಿಸಬೇಕು. ಬೇರೆ ಸಹಾಯಕ್ಕಾಗಿ ಕಾಯಲಾಗದು. ಏಕೆಂದರೆ ಹೃದಯ ನಿಂತಾಗ ಅಥವಾ ಶ್ವಾಸ ನಿಂತಾಗ ರಕ್ತದ ಮೂಲಕ ಮೆದುಳಿಗೆ ಸಾಕಷ್ಟು ಪ್ರಾಣವಾಯು ಹೋಗದಿರುವುದೇ ಮುಖ್ಯ ಗಂಡಾಂತರವಾಗಿದೆ. ದೇಹದಲ್ಲಿ ಮಿದುಳು ಅತ್ಯಂತ ಸೂಕ್ಷ್ಮ ಅಂಗವಾಗಿದ್ದು ಅಲ್ಲಿ ಪ್ರಾಣವಾಯುವಿನ ಅಭಾವದ ಪರಿಣಾಮ ಬಹು ಬೇಗ-ಮೂರೇ ಮಿನಿಟುಗಳಲ್ಲಿ—ಕಾಣಿಸಿಕೊಳ್ಳುವುದು. ತಡವಾಗಿ ಚಿಕಿತ್ಸೆ ಸಿಕ್ಕಿದರೆ ಬದುಕಿದರೂ ಮಿದುಳಿನ ವಿಕಾರವಾಗುವ ಸಂಭವ ಹೆಚ್ಚಾಗಿರುತ್ತದೆ.

೨) ನೆಲ ಅಥವಾ ಅಂಥದೇ ಬಿರುಸಾದ ವಸ್ತುವಿನ ಮೇಲೆ ರೋಗಿಯನ್ನು ಅಂಗಾತ ಮಲಗಿಸಬೇಕು. ಹಾಸಿಗೆ ಅಥವಾ ಮಂಚ

ಉಪಯೋಗದ್ದಲ್ಲ.

೩) ತಲೆಯನ್ನು ಆದಷ್ಟು ಹಿಂದಕ್ಕೆ ತಳ್ಳಿ. ತಲೆ ಮುಂದಕ್ಕೆ ಚಾಚಿದರೆ ಮಾಲೀಸು ಮಾಡುತ್ತಿರುವಾಗಲೇ ಶ್ವಾಸ ಕಟ್ಟುವ ಸಂಭವವಿರುತ್ತದೆ.

೪) ಮಾಲೀಸು ಮಾಡುವಾಗ ನಿಮ್ಮ ಸಮಸ್ತ ಬಲವನ್ನು ಉಪಯೋಗಿಸಲು ಬರುವಂತೆ ಮೊಣಕಾಲೂರಿ ಕುಳಿತುಕೊಳ್ಳಬೇಕು. ಚಿತ್ರದಲ್ಲಿ ಕಾಣಿಸಿರುವಂತೆ ಬಲ ಅಂಗೈಯನು ಬೆರಳು ಅಗಲಿಸಿಕೊಂಡು ಅವನ್ನು ಎತ್ತರಿಸಿ ಎದೆಯ ಎಲುಬಿನ ಮೇಲಿಡಿ. ಒತ್ತಡ ಎದೆಯ ಎಲುಬಿನ ಮೇಲೆಯೆ ಬೀಳಬೇಕಲ್ಲದೆ ಪಕ್ಕೆಲುಬುಗಳ ಮೇಲೆ ಬೀಳಬಾರದು

೫) ಎಡ ಅಂಗೈಯನ್ನು ಬಲ ಅಂಗೈ ಮೇಲಿಟ್ಟು ಅದನ್ನು ಎದೆಯ ಎಲುವು ೧ ರಿಂದ ೧½ ಇಂಚಿನಷ್ಟು ಕೆಳಗೆ ಒತ್ತಲ್ಪಡುವಂತೆ ನೇರವಾಗಿ ಕೆಳಗೆ ಒತ್ತಿರಿ. ರೋಗಿ ಮಗುವಾದರೆ ಒಂದೇ ಕೈ ಉಪಯೋಗಿಸಿದರೆ ಸಾಕಾಗುವುದು. ಪ್ರಾಯಸ್ಥನ ಎದೆ ಆತ ಎಚ್ಚರದಲ್ಲಿರುವಾಗ ಒತ್ತಡಕ್ಕೊಳಗಾಗದಿದ್ದರೂ ಪ್ರಜ್ಞೆ ತಪ್ಪಿದಾಗ ಅದು ಬಹು ಸುಲಭದಲ್ಲಿ ಒತ್ತಡಕ್ಕೊಳಗಾಗುವುದು.

೬) ಒತ್ತಿದೊಡನೆಯೆ ಕೈ ಸಡಿಲು ಬಿಡಬೇಕು ಕೈಯನ್ನು ತುಸು ಮೇಲಕ್ಕೆತ್ತಬೇಕು. ಹೀಗೆಯೆ ಮಿನಿಟಿಗೆ ೬೦ ರಿಂದ ೮೦ ಸಲ ಒತ್ತುವುದು ಬಿಡುವುದು ಮಾಡಬೇಕು.

೭) ರೋಗಿಯನ್ನು ಆದಷ್ಟು ಬೇಗ ಆಸ್ಪತ್ರೆಗೊಯ್ಯಬೇಕು. ಮಾಲೀಸಿನಿಂದ ಹೃದಯ ಮೊದಲಿನಂತೆ ಬಡಿಯುವುದು, ಶ್ವಾಸೋಚ್ಛ್ವಾಸ ನಡೆಯತೊಡಗಿರುವುದು ಕಂಡು ಬಂದರೂ ಯೋಗ್ಯ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿರುವ ಸಂಭವವಿರುತ್ತದೆ.

೮) ಯೋಗ್ಯ ವೈದ್ಯಕೀಯ ಚಿಕಿತ್ಸೆ ಲಭ್ಯವಾಗುವ ವರೆಗೂ ಅಥವಾ ಆಸ್ಪತ್ರೆಗೆ ಒಯ್ಯುವ ವರೆಗೂ ಮಾಲೀಸು ಮಾಡುತ್ತಿರಬೇಕು. ಯಾರಾದರೂ ಪ್ರಾಣವಾಯುವಿನ ಪೂರೈಕೆಯನ್ನು ತರುವ ವರೆಗೂ ಬಾಯಿಗೆ ಬಾಯಿಯಿಟ್ಟು ಶ್ವಾಸೋಚ್ಛ್ವಾಸ ಮಾಡುತಿರಬೇಕು. ವೈದ್ಯಕೀಯ ಸಹಾಯ ಕೂಡಲೆ ಸಿಗುವಸಂಭವವಿಲ್ಲದಿರುವಾಗ ರೋಗಿ ಸತ್ತು ಸೆಟೆದು ಹೋಗುತ್ತಿದ್ದಾನೆಂದು ಖಾತ್ರಿಯಾಗುವ ವರೆಗೂ ಮಾಲೀಸನ್ನು ನಿಲ್ಲಿಸಲಾಗದು.

ಮನುಷ್ಯ ಪುನಃ ಜೀವಂತನಾಗದ ಸ್ಥಿತಿಯನ್ನು ಯಾವಾಗ ಮುಟ್ಟಿರುತ್ತಾನೆ ಎಂದು ಡಾಕ್ಟರರು ಹೇಳಲಾರದವರಾಗಿದ್ದರೆ. ಪ್ರಖರ ಬೆಳಕಿನಲ್ಲಿ ಕಣ್ಣುಗುಡ್ಡೆಗಳು ಆಕುಂಚನ ಹೊಂದದಿದ್ದರೆ ಮನುಷ್ಯ ಸತ್ತ ಎಂದು ಮೊದಲು ಹೇಳುತ್ತಿದ್ದರೂ ಈಗ ಅದನ್ನೆ ಕೊನೆಯ ಮಾತು ಎಂದು ಒಪ್ಪಿಕೊಳ್ಳುತ್ತಿರುವುದಿಲ್ಲ. ಹದಿಮೂರು ವರ್ಷಗಳ ಹಿಂದೆ ಸರ್ಜನ್ನರೊಬ್ಬರು ಎದೆಗೆ ಆಪರೇಶನ್ ಮಾಡಿ ಹೃದಯಕ್ಕೆ ೭೫ ಮಿನಿಟುಗಳ ವರೆಗೆ ಮಾಲೀಸು ಮಾಡಿದ ನಂತರ ರೋಗಿಯ ಹೃದಯ ಬಡಿಯಲಾರಂಭಿಸಿತು. ಜಾನ್ಸ್ ಹಾಪ್‌ಕಿನ್ಸ ಡಾಕ್ಟರರು ಇತ್ತೀಚೆಗೆ ೧೦೫ ಮಿನಿಟುಗಳ ವರೆಗೆ ಮುಚ್ಚಿದ ಎದೆಯ ಮಾಲೀಸು ಮಾಡಿ ಮತ್ತು ಪ್ರಾಣವಾಯುವನ್ನು ಕೊಟ್ಟು ಒಬ್ಬನನ್ನು ಬದುಕಿಸಿದ್ದಾರೆ. ಯೇಲ್ ವಿಶ್ವವಿದ್ಯಾಲಯದ ಶರೀರ ಶಾಸ್ತ್ರಿ ಯಾಂಡೆಲ್ ಹೆಂಡರಸನ್ನರು "ಎಷ್ಟೋ ಸಲ ದೇಹದ ಇಂಜಿನು ಕೇವಲ ತಡೆದು ನಿಂತಿರುತ್ತದಷ್ಟೇ. ಅದನ್ನು ಹ್ಯಾಂಡಲ್ ಹೊಡೆದು ಶುರು ಮಾಡಬೇಕಾಗುತ್ತದೆ," ಎಂದು ಹೇಳುತ್ತಾರೆ.

ಯೋಗ್ಯರೀತಿಯಲ್ಲಿ ಮುಚ್ಚಿದ ಎದೆಯ ಮಾಲೀಸು ಮಾಡುವುದು ಸಹಜ ರೀತಿಯಲ್ಲಿ ಶುರುವಾಗದ ಇಂಜಿನ್ನನ್ನು ಹ್ಯಾಂಡಲ್ ಹೊಡೆದು ಶುರು ಮಾಡಿದಂತೆ ಎಂಬುದು ಪ್ರತ್ಯಯಕ್ಕೆ ಬರುತ್ತಿದೆ. ★



ಸಸ್ಯಗಳೂ ನಿದ್ರಿಸುತ್ತವೆ!

" ಸರಸ್ವತಿ " ಯಿಂದ

ನಮ್ಮಂತೆ ಗಿಡಗಳೂ ಉಸಿರಾಡಿಸುತ್ತವೆ. ನಮ್ಮ ಮೈಯಲ್ಲಿ ರಕ್ತ ಸಂಚರಿಸುವಂತೆ ಗಿಡಗಳಲ್ಲಿ ರಸ - ಪ್ರವಾಹ ಹರಿಯುತ್ತಿರುತ್ತದೆ. ದುಡಿದ ಮೇಲೆ ನಾವು ದಣಿಯುತ್ತೇವೆ. ರಾತ್ರಿಯಾದೊಡನೆ ನಿದ್ರಿಸುತ್ತೇವೆ. ಗಿಡಗಳೂ ರಾತ್ರಿ ನಿದ್ರಿಸುತ್ತವೆ. ಇಡೀ ದಿನದ ದಣಿವಿನ ನಂತರ ಗಿಡಗಳು ಒಂದು ವಿಶೇಷ ಭಂಗಿಯಲ್ಲಿ ಸ್ಥಿರವಾಗಿ ರಾತ್ರಿ ಇಡೀ ಹಾಗೇ ಉಳಿಯುತ್ತವೆ. ಇದೇ ಗಿಡಗಳ ನಿದ್ದೆ.

" ಕತ್ತಲಾದ ಮೇಲೆ ಗಿಡಗಳ ಎಲೆ ಹರಿಯಬಾರದು. ಆಗ ಅವು ನಿದ್ರಿಸಿರುತ್ತವೆ" ಎಂದು ಭಾರತದ ಅಜ್ಜಿಯರು ಮಕ್ಕಳಿಗೆ ಹೇಳುತ್ತಾರೆ. ಭಾರತದಲ್ಲಿ ಈ ಕಲ್ಪನೆ ರೂಢವಾದದ್ದೇ. ಗಿಡಗಳ ನಿದ್ದೆಯ ಪರಿಚಯ ಪಾಶ್ಚಿಮಾತ್ಯ ವಿಜ್ಞಾನಿಗಳಿಗೆ ಆದದ್ದೂ ಮೊಟ್ಟಮೊದಲು ಭಾರತದಲ್ಲಿಯೆ. ೧೫೬೭ರಲ್ಲಿ ಗ್ರೇಶಿಯಸ್ ಡಿ ಹೋರ್ಟೊ ಎಂಬ ವಿಜ್ಞಾನಿ ಹುಣಸೇಮರವು ನಿದ್ರಾವಸ್ಥೆಯಲ್ಲಿರುವುದನ್ನು ಕಂಡನು. ಆದರೆ ಗಿಡಗಳ ನಿದ್ದೆಯ ಅದ್ಭುತವನ್ನು ಆಳವಾಗಿ ಅಭ್ಯಸಿಸಿ ಮೊಟ್ಟಮೊದಲು ವಿವರಿಸಿದವನು ಲಿನ್ನಿಯಸ್. ಈತ ತನ್ನ ಕೈತೋಟದಲ್ಲಿ ಒಂದು ರಾತ್ರಿ ತಿರುಗುತ್ತಿದ್ದಾಗ ಒಂದು ಕಮಲ ವೃಕ್ಷ ಅವನ ಮನಸೆಳೆಯಿತು. ಅದೇ ಮುಂಜಾನೆ ಅದರ ಹೂಗಳು ಅರಳಿದ್ದವು. ಆದರೆ ಈಗ ಅಲ್ಲಿ ಒಂದೂ ಹೂ ಕಾಣಿಸಲಿಲ್ಲ. ಅವನ್ನು ಯಾರೋ ಹರಿದು ಒಯ್ದಿದ್ದಾರೆಂದುಕೊಂಡ. ಆದರೆ ತೀರ ಸಮೀಪ ಹೋಗಿ ನೋಡಿದಾಗ ಯಾರೂ ಒಯ್ದಿಲ್ಲವೆಂದು ಆತನಿಗೆ ಗೊತ್ತಾಯಿತು. ದಿನಾಲೂ ಅದನ್ನು ನೋಡಿ ಪರೀಕ್ಷಿಸಿದ. ಆಗ ಸಂಜೆಯಾಗುತ್ತಲೇ ಅದರ ಎಲೆಗಳು ಒಂದು ವಿಶಿಷ್ಟ ಭಂಗಿಯಲ್ಲಿ ಹೂವಿನ ಒಳಭಾಗವನ್ನು (Corolla) ಮುಚ್ಚಿಬಿಡುವವೆಂದು ಆತನಿಗೆ ತಿಳಿಯಿತು. ಕಮಲವೃಕ್ಷ ಮಲಗುವ ರೀತಿ ಇದು.

ಕಮಲ ಒಂದೇ ನಿದ್ರಿಸುವುದೊ ಅಥವಾ ಬೇರೆ ಗಿಡಗಳೂ ಮಲಗುವವೊ ಎಂಬ ಪ್ರಶ್ನೆ ಹುಟ್ಟಿತು. ಅದಕ್ಕಾಗಿ ರಾತ್ರಿಯೆಲ್ಲ ಆತ ದೀವಟಿಗೆ ಹಿಡಿದುಕೊಂಡು ತನ್ನ ತೋಟದಲ್ಲಿ ತಿರುಗಾಡತೊಡಗಿದ. ಒಂದೊಂದು ಗಿಡದ ನಿದ್ರಾಸ್ಥಿತಿಯನ್ನು ಅಭ್ಯಸಿಸಲು ಬಹು ಕಾಲ ಕಳೆದ. ಆಗ ಒಂದೊಂದು ಬಗೆಯಲ್ಲಿ ಸ್ಥಿರವಾಗಿ ಬಹುತರ ಎಲ್ಲ ಗಿಡಗಳೂ ರಾತ್ರಿ ನಿದ್ರಿಸುತ್ತವೆಂದು ಆತನಿಗೆ ತಿಳಿಯಿತು.

ಗಿಡಗಳು ನಿದ್ರಿಸಿರುವಾಗ ಅಡವಿಯ ದೃಶ್ಯವೇ ಬದಲಾಗುತ್ತದೆ. ಕೆಲ ವನಸ್ಪತಿಗಳು ಮಲಗಿಕೊಂಡಾಗ ಅವುಗಳ ಗುರುತೂ ಸಿಗದಂತೆ ಅವು ರೂಪ ಧರಿಸಿರುತ್ತವೆ. ಕೆಲವು ಗಿಡಗಳು ರೆಂಬೆಗಳನ್ನು ತಮ್ಮ ಕಾಂಡಗಳ ಸಮೀಪ ಒಯ್ಯುತ್ತವೆ; ಎಲೆಗಳನ್ನು ಒಂದರ ಮೇಲೊಂದು ಇರಿಸುತ್ತವೆ. ಚಳಿಯಾಗುವುದೆಂದೇ ಹೀಗೆ ಮೈ

ಮುದುರಿಸಿಕೊಂಡಿವೆ ಏನೋ ಎನಿಸುವಂತಿರುತ್ತದೆ. ಮುಟ್ಟಲುಮುರುಕಿ ಬಳ್ಳಿಯ ರಾತ್ರಿಯ ರೂಪ ನೋಡಿದರೆ ಸಾಕು; ಇದು ನಿದ್ರಿಸಿದೆ ಎಂದು ತೋರುವಂತಿರುತ್ತದೆ. ದಣಿದ ಮನುಷ್ಯ ರೆಪ್ಪೆಗಳನ್ನು ಮುಚ್ಚಿಕೊಂಡು ವಿಶ್ರಮಿಸುವಂತೆ ಇವಾದರೂ ತಮ್ಮ ಚಿಕ್ಕ ಚಿಕ್ಕ ಟೊಂಗೆಗಳನ್ನು ಬಗ್ಗಿಸಿ ಎಲೆಗಳನ್ನು ಒಂದರ ಮೇಲೊಂದು ಊರಿ ನಿದ್ರಾಸುಖವನ್ನು ಅನುಭವಿಸುತ್ತವೆ. ಚಕೋಡವೆಂಬ ಗಿಡವೂ ಹಾಗೆಯೆ. ಅದಕ್ಕೆ ಮಳೆಗಾಲದಲ್ಲಿ ನಿದ್ದೆ ಹೆಚ್ಚು. ಮುಟ್ಟಲುಮುರುಕಿಯಂತೆ ಅದೂ ಸಂಜೆಯಾಗುತ್ತಲೇ ಎಲೆಗಳ ಮೇಲೆ ಎಲೆಗಳನ್ನು ಇಟ್ಟು ನಿದ್ರಿಸುತ್ತದೆ. ಮೋಡ ಮುಸುಕಿದ ದಿನಗಳಲ್ಲಿ ಈ ಗಿಡವನ್ನು ನೋಡಿಯೇ ಜನ ಸಂಜೆಯಾಗುತ್ತಬಂತೆಂದು ಗೊತ್ತು ಹಚ್ಚುತ್ತಾರೆ.

ಉಷ್ಣದೇಶದ ಮನುಷ್ಯರಂತೆ ಉಷ್ಣದೇಶದ ವೃಕ್ಷಗಳಾದರೂ ಆಲಸಿಗಳಾಗಿರುತ್ತವೆ. ಉತ್ತರ ಅಮೇರಿಕೆಯ ಕೊಲಂಬಿಯಾ ಪ್ರದೇಶದಲ್ಲಿ ಹರಿಯುವ ಮಗಡಾಲೆನಾ ನದಿಯ ತೀರದ ಮೇಲಿನ ಗಿಡಗಳು ತಂಪು ಹವೆಯ ಪ್ರದೇಶದ ಗಿಡಗಳಿಗಿಂತ ಹೆಚ್ಚು ತಡಮಾಡಿ ಎಚ್ಚರವಾಗುವವೆಂದು ಹೆಂಬೋಲ್ಟ್ ಎಂಬಾತ ಕಂಡುಹಿಡಿದನು. ಅಲ್ಲಿಯ ಹೂಗಳಂತೂ ಸಂಜೆಯಾಗುವ ಎಷ್ಟೋ ಗಂಟೆ ಮೊದಲೇ ಮಲಗಿಬಿಡುತ್ತವೆ. ಮತ್ತೆ ಮುಂಜಾನೆ ಎಚ್ಚರಾಗುವುದು ಯಾವಾಗ? ನಾಲ್ಕೈದು ತಾಸು ಹೊತ್ತು ಏರಿದ ಮೇಲೆ. ಇದು ಗಿಡಗಳ ಆಲಸ್ಯದ ಪರಮಾವಧಿ.

ಈ ನಿದ್ದೆಯ ಕಾರಣ ಉಷ್ಣತಾಮಾನದ ಹೆಚ್ಚುಕಡಿಮೆ ಇರಬೇಕೆಂದು ಬಹಳ ಜನ ನಂಬಿದ್ದರು. ಹಗಲು ಉಷ್ಣತೆ ಹೆಚ್ಚಿರುವಾಗ ಎಚ್ಚರಿದ್ದು ರಾತ್ರಿ ಉಷ್ಣತಾಮಾನ ಇಳಿದೊಡನೆ ಅವು ಮಲಗುವವೆಂದು ಅಭಿಪ್ರಾಯವಾಗಿತ್ತು. ಆದರೆ ಒಂದು ನಿದರ್ಶನದಿಂದ ಈ ಕಲ್ಪನೆ ಸುಳ್ಳೆಂದು ಸಿದ್ಧವಾಯಿತು. ಗ್ರೀನ್‌ಹೌಸ್‌ಗಳಲ್ಲಿ ಹಗಲೂ ರಾತ್ರಿಯೂ ಸಮಾನ ಉಷ್ಣತೆ ಇರಿಸಲಾಗಿರುತ್ತದೆ. ಆದರೆ ಅಲ್ಲಿಯ ಗಿಡಗಳು ಮಲಗುತ್ತವೆ. ಆಗ ಉಷ್ಣತೆಯು ಗಿಡಗಳ ನಿದ್ದೆಯ ಕಾರಣವಲ್ಲೆಂದು ಗೊತ್ತಾಯಿತು.

ಡಿಕಂಡಾಲ್ ಎಂಬ ವಿಜ್ಞಾನಿ ಅನೇಕ ಪ್ರಯೋಗಗಳಿಂದ ಗಿಡಗಳ ನಿದ್ದೆಗೆ ಉಷ್ಣತೆ ಕಾರಣವಲ್ಲ; ಪ್ರಕಾಶ ಎಂಬುದನ್ನು ಸಿದ್ಧಮಾಡಿದ. ಮುಟ್ಟಲುಮುರುಕಿ ಬಳ್ಳಿಯ ಮೇಲೆ ರಾತ್ರಿ ತೀವ್ರ ಪ್ರಕಾಶ ಕೆಡವಿ ನೋಡಿದ. ಅವು ಎಚ್ಚರಾದವು ಹಗಲು ಅವನ್ನು ಕತ್ತಲೆಯಲ್ಲಿ ಇರಿಸಿದ. ಅವು ಮಲಗಿದವು. ಈ ರೀತಿ ಅವನ್ನು ಮೋಸಗೊಳಿಸಿ ಹಗಲೆಲ್ಲ ನಿದ್ದೆ, ಇರುಳೆಲ್ಲ ಜಾಗರಣೆ ಮಾಡಿಸಲು ಅವನಿಗೆ ಸಾಧ್ಯವಾಯಿತು.

ಉಷ್ಣವಲಯದ ದೇಶಗಳಲ್ಲಿಯೆ ಗಿಡಗಳು ನಿದ್ರಿಸುವುದು ಹೆಚ್ಚಾಗಿ ಕಂಡುಬಂದಿದೆ. ಇವುಗಳಲ್ಲಿ ಮುಟ್ಟಲುಮುರಕಿ ಬಲು ಸೂಕ್ಷ್ಮ. *

ಮದ್ಯದ ಸ್ನಾನ

ಕವಿ ಠಾಕೂರರು ಶಾಲೆಗೆ ಹೋಗುತ್ತಿದ್ದಾಗ ಸಹಪಾಠಿಗಳೆಲ್ಲ ಇವರ ಮೈಬಣ್ಣವನ್ನು ಕಂಡು ಆಶ್ಚರ್ಯಪಡುತ್ತಿದ್ದರು. ಅಲ್ಲದೆ ಇವರಿಗೆ ಈ ಮೈಬಣ್ಣ ಬರಲು ಕಾರಣವನ್ನು ಕುರಿತು ಒಂದು ಕತೆಯುನ್ನು ಹೇಳುತ್ತಿದ್ದರು: "ಇವರ ಮನೆಯಲ್ಲಿ ಮಕ್ಕಳು ಹುಟ್ಟಿದೊಡನೆ ಅವರನ್ನು ವಿಲಾಯತಿ ಮದ್ಯ ತುಂಬಿದ ತೊಟ್ಟಿಗಳಲ್ಲಿ ಮುಳುಗು ಹಾಕಿಸುವರು. ಆದುದರಿಂದಲೇ ಇವರ ಮೈಬಣ್ಣ ಸಾಹೇಬರ (ಆಂಗ್ಲರ) ಮೈಬಣ್ಣದಂತಿದೆ."

— ರವೀಂದ್ರನಾಥ, ಎಸ್. ಬಿ

ಈ ಲೋಹದಿಂದ ಸೇತುವೆಗಳನ್ನೂ ಕಟ್ಟತೊಡಗಿದ್ದಾರೆ!

೨೦ ನೇ ಶತಮಾನದ ಲೋಹ

ಅಲ್ಯುಮಿನಿಯಂ

ಕೆ. ಎಸ್. ರಮಾನಂದ

ಭಾರತದ ಹಳ್ಳಿಹಳ್ಳಿಯಲ್ಲಿಯೂ ಬಡವರ ಬೆಳ್ಳಿ ಪಾತ್ರೆಯಾಗಿರುವ ಅಲ್ಯುಮಿನಿಯಂ ಬಡವರ ಬಂಧುವಷ್ಟೇ ಅಲ್ಲ, ಒಂದು ರಾಷ್ಟ್ರದ ಔದ್ಯೋಗಿಕ ಉನ್ನತಿಯ ಮಾಪಕವೂ ಆಗಿದೆ. ಇಂದು ವೈಜ್ಞಾನಿಕ ತಂತ್ರದ ತುತ್ತತುದಿಯನ್ನು ಮುಟ್ಟಿರುವ ರಶಿಯ, ಅಮೇರಿಕ, ಬ್ರಿಟನ್, ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಜಪಾನ್ ಗಳಲ್ಲಿ ಅಲ್ಯುಮಿನಿಯಂ ಕ್ಷೇತ್ರ ದಿನದಿನಕ್ಕೂ ವಿಸ್ತಾರವಾಗುತ್ತಿದೆ.

ಈ ಶತಮಾನದ ಮೊದಲಲ್ಲಿ ಅಲ್ಯುಮಿನಿಯಂನ ಉಪಯೋಗ ಇಡೀ ಜಗತ್ತಿನಲ್ಲಿ ಕೇವಲ ಒಂದು ಲಕ್ಷ ಟನ್ನಿನಷ್ಟಿತ್ತು. ೧೯೫೮ರಲ್ಲಿ ಅದು ೩.೬ ಕೋಟಿಗೇರಿತ್ತು. ಟೂತ್‌ಪೇಸ್ಟ್ ಟ್ಯೂಬಿನಿಂದ ರೈಲು ಡಬ್ಬಿಯ ವರೆಗೆ, ವಿಮಾನಗಳಿಂದ ಸೇತುವೆಗಳ ವರೆಗೆ ಅಲ್ಯುಮಿನಿಯಂ ಉಪಯೋಗ ಗಾತ್ರದಲ್ಲಿಯೂ ವೈವಿಧ್ಯದಲ್ಲಿಯೂ ಬೆಳೆದಿದೆ. ಅಲ್ಯುಮಿನಿಯಂ ಉಪಯೋಗದ ವಿಸ್ತರಣೆ ಕಬ್ಬಿಣದ್ದನ್ನೂ ಮೀರಿ ಮುಂದುವರಿಯುತ್ತಿರುವುದರಿಂದ ಇದನ್ನು ನಮ್ಮ ಯುಗದ ಲೋಹವೆಂದು ಕರೆಯಲು ಅಡ್ಡಿಯಿಲ್ಲ.

ಅಲ್ಯುಮಿನಿಯಂ ಉಪಯೋಗದ ಕ್ಷೇತ್ರ ಹೀಗೆ ಹೆಚ್ಚಲು ಕಾರಣಗಳಿವೆ. ಅದು ಅತಿ ಹಗುರವಾದ ಲೋಹ; ತುಕ್ಕು ಹಿಡಿಯುವುದಿಲ್ಲ. ವಿದ್ಯುತ್ ಮತ್ತು ಉಷ್ಣತಾವಾಹಕ ಗುಣದಲ್ಲಿ ಇದು ತಾಮ್ರಕ್ಕೆ ಎರಡನೆಯದು. ಇದನ್ನು ತಂತಿಯಾಗಿ ಎಳೆಯುವುದು ಬಲು ಸುಲಭ. ಪ್ರಕಾಶವನ್ನು ಪ್ರತಿಬಿಂಬಿಸುವುದರಲ್ಲಿ ಮತ್ತು ಉಷ್ಣತೆಯನ್ನು ಚದುರಿಸುವುದರಲ್ಲಿಯೂ ಇದು ಸುಲಭವಾಗಿ ಉಪಯೋಗಕ್ಕೆ ಬರುತ್ತದೆ. ವಿದ್ಯುದಾಘಾತದಿಂದ ಇದರಲ್ಲಿ ಕಿಡಿಗಳೇಳುವುದಿಲ್ಲ, ಇದು ತುಕಾಂತತೆಯನ್ನು ಹೊಂದುವುದಿಲ್ಲ. ಕಿಲುಬು ಹಿಡಿದು ವಿಷ್ಯೆಲವಾಗುವುದಿಲ್ಲ. ಎಲ್ಲಕ್ಕೂ ಮಿಗಿಲಾಗಿ ಬೇರೆ ಧಾತುಗಳೊಡನೆ ಮಿಶ್ರಣ ಮಾಡಿದಾಗ ಇದು ತೋರಿಸುವ ಗುಣಗಳು ಅದ್ಭುತವಾಗಿವೆ.

ನಮಗೆ ದೊರಕಿರುವ ರತ್ನಗಳೆಲ್ಲವೂ ಅಲ್ಯುಮಿನಿಯಮ್ಮಿನೊಡನೆ ಇತರ ಲೋಹ ಅಥವಾ ಪದಾರ್ಥಗಳ ಸಂಯೋಗದಿಂದಾದವೆಂದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಸಿಗರೇಟಿನ ಮತ್ತು ಚಾಕಲೇಟಿನ ಪ್ಯಾಕಿಂಗಿನಲ್ಲಿ ಉಪಯೋಗಿಸುವ ಆ ಮಿರಿಮಿರಿ ಕಾಗದ ಅಲ್ಯುಮಿನಿಯಂನ ತೆಳ್ಳನ್ನ ರೇಕು ಎಂದೂ ಕೆಲವರಿಗೆ ತಿಳಿದಿರಲಿಕ್ಕಿಲ್ಲ.

(ಅಲ್ಯುಮಿನಿಯಂನಿಂದ ಕಾಗದಕ್ಕಿಂತ ಹತ್ತು ಪಟ್ಟು ತೆಳ್ಳಗಾದ ರೇಕು ತೆಗೆಯಬಹುದು.) ಅಲ್ಯುಮಿನಿಯಂ ಹಗುರವಾಗಿದ್ದರೂ ಬಲು ಗಟ್ಟಿಯಾಗಿರುವುದರಿಂದ ವಿಮಾನದಲ್ಲಿ ಅದರ ಉಪಯೋಗ ಬಹುವಾಗಿದೆಯೆಂದು ಎಲ್ಲರಿಗೂ ಗೊತ್ತಿದೆ. ಎಂಜಿನ್ ಬಿಟ್ಟರೆ ವಿಮಾನದಲ್ಲಿ ಸೇಕಡಾ ೮೯ ಭಾಗ ಅಲ್ಯುಮಿನಿಯಂ ಮತ್ತು ಮೆಗ್ನೇಶಿಯಂ ಮಿಶ್ರಣವೆ.

ಭೂಮಿಯ ಕವಚದಲ್ಲಿ ಸೇಕಡಾ ೧೦ ಅಂಶ ಅಲ್ಯುಮಿನಿಯಮ್ಮೆ. ಕಬ್ಬಿಣವನ್ನೊಳಗೊಂಡು ಮತ್ತಾವ ಲೋಹವೂ ಇಷ್ಟು ಧಾರಾಳವಾಗಿಲ್ಲ. ಹೀಗಿದ್ದರೂ ಅದು ಒಂದು ಲೋಹವೆಂದು ಕಂಡುಹಿಡಿಯಲ್ಪಟ್ಟು ಒಂದೂಕಾಲು ಶತಮಾನಕ್ಕಿಂತ ಸ್ವಲ್ಪ ಹೆಚ್ಚಾಯಿತಷ್ಟೇ ಎಂಬುದು ಸೋಜಿಗವಾದರೂ ಅದಕ್ಕೆ ಕಾರಣವಿಲ್ಲದಿಲ್ಲ. ಅಲ್ಯುಮಿನಿಯಂ ನಿಸರ್ಗದಲ್ಲಿ ಶುದ್ಧ ಲೋಹರೂಪದಲ್ಲಿ, ಅದಿರಿನ ರೂಪದಲ್ಲಿ ದೊರಕುವುದಿಲ್ಲ. ಯಾವುದಾದರೂ ಬೇರೆ ವಸ್ತುವಿನೊಡನೆ ಸಂಯುಕ್ತವಾಗಿಯೇ ಅದು ದೊರೆಯುತ್ತದೆ. ೧೮೦೭ ರಲ್ಲಿ ಬ್ರಿಟಿಶ್ ವಿಜ್ಞಾನಿ ಸರ್ ಹಂಫ್ರಿಡೇವಿಗೆ ಈ ಲೋಹದ ಅಸ್ತಿತ್ವದ ಬಗ್ಗೆ ಮನವರಿಕೆಯಾಗಿ ಅವನು ಅದಕ್ಕೆ ಈಗ ಪ್ರಚಲಿತವಾದ ಹೆಸರು ಕೊಟ್ಟರೂ ೧೮೨೭ರಲ್ಲಿ ಜರ್ಮನ್ ವಿಜ್ಞಾನಿ ವ್ಹೋಲರನಿಂದಲೇ ಇದು ಮೊದಲನೇ ಬಾರಿ ಶುದ್ಧ ಲೋಹದ ರೂಪದಲ್ಲಿ ತಯಾರಿಸಲ್ಪಟ್ಟಿತು. ಆದರೆ ತಯಾರಿಕೆಯ ವೆಚ್ಚ ಅತಿ ದುಬಾರಿಯಾಗಿದ್ದುದರಿಂದ ಅದು ಒಂದು ಕುತೂಹಲಕಾರಕ ಧಾತುವಾಗಿಯೆ ಉಳಿಯಿತು. ೧೮೫೨ರಲ್ಲಿ ಇದು ಔಂಸ್ ಒಂದಕ್ಕೆ ರೂ. ೯೫ ರಂತೆ (ಬಂಗಾರಕ್ಕಿಂತಲೂ ಎಷ್ಟೋ ತುಟ್ಟಿ) ಮಾರುತ್ತಿತ್ತಂತೆ! ಚಕ್ರವರ್ತಿ ಮೂರನೇ ನೆಪೋಲಿಯನ್ನನು ಇತರ ರಾಜಾತಿಥಿಗಳಿಗೆ ಭೋಜನ ಕಾಲದಲ್ಲಿ ಚಿನ್ನ ಬೆಳ್ಳಿಯ ಚಮಚೆ ಚಾಕುಗಳನ್ನು ಒದಗಿಸುತ್ತಿದ್ದರೆ ಅತಿ ಗೌರವಾಸ್ಪದ ಅತಿಥಿಗಳಿಗಾಗಿ ಅಲ್ಯುಮಿನಿಯಂ ಚಮಚೆ ಚಾಕುಗಳನ್ನು ಮೀಸಲಾಗಿಟ್ಟಿದ್ದನಂತೆ!

ಅಲ್ಯುಮಿನಿಯಂನ ಈ ಶ್ರೀಮಂತಿಕೆಯನ್ನು ತುರಿದು ಅದನ್ನು ಸಾಮಾನ್ಯ ನಾಗರಿಕನ ಸೇವೆಗೆ ಮೊಡಗಿಸಿದ ಶ್ರೇಯಸ್ಸು ಅಮೇರಿಕದ ಹಾಲ್ ಮತ್ತು ಫ್ರಾನ್ಸಿನ ಹೆರೋ ಅವರಿಗೆ ಸಲ್ಲಬೇಕು. ಹೇರಳವಾಗಿ ದೊರಕುವ ಬಾಕ್ಸೈಟ್ ಅದಿರಿನಿಂದ ಅಗ್ಗವಾಗಿ ಅಲ್ಯುಮಿನಿಯಂ ತಯಾರಿಸುವ ವಿಧಾನವನ್ನು ಅವರು ಬೇರೆ ಬೇರೆಯಾಗಿ ಕೆಲಸ ಮಾಡಿ ಏಕಕಾಲದಲ್ಲಿ (೧೮೮೬) ಕಂಡು ಹಿಡಿದರು. ಅಲ್ಲಿಂದ ಏಳು ವರ್ಷಗಳೊಳಗೆ ಅಲ್ಯುಮಿನಿಯಂ ಎಷ್ಟು ಅಗ್ಗವಾಗಿ ಹೋಯಿತೆಂದರೆ ಇಂಗ್ಲಂಡಿನಲ್ಲಿ ಸರ್ ಆಲ್ಫ್ರೆಡ್ ಗಿಲ್ಬರ್ಟನು ಅಲ್ಯುಮಿನಿಯಂನಿಂದಲೇ ಇರೋಸ್ (ಕಾಮದೇವ) ಪ್ರತಿಮೆಯನ್ನು ಎರಕಹೊಯ್ಯಬಲ್ಲವನಾದನು. ಆಗ ಅದಕ್ಕೆ ಔಂಸಿಗೆ ಎರಡು ಪೆನ್ಸ್ ಮಾತ್ರ ಬೆಲೆ ಇತ್ತು!

ಅಲ್ಯುಮಿನಿಯಂನ ಸಾಂದ್ರತೆ ಕಬ್ಬಿಣದ ಸಾಂದ್ರತೆಯ ೧।೩ ದಷ್ಟಿರುವುದರಿಂದ ಅದು ಅನೇಕ ಉದ್ಯಮಗಳಲ್ಲಿ ಕಬ್ಬಿಣವನ್ನು ಬದಿಗೆ ಸರಿಸಿದೆ. ಈಚೆಗೆ ಲಂಡನ್ನಿನ ಭೂಗರ್ಭರೈಲಿಗಾಗಿ ೫೮೯ ಅಲ್ಯುಮಿನಿಯಂ ಕೋಚುಗಳನ್ನು ಬರ್ಮಿಂಗ್ಯಾಮ್‌ನಲ್ಲಿ ತಯಾರಿಸಲಾಗುತ್ತಿದೆ. ಅಲ್ಯುಮಿನಿಯಂ ಕೋಚು ಸ್ವಲ್ಪ ತುಟ್ಟಿಯಾದರೂ ಅದಕ್ಕೆ ತುಕ್ಕು ಹಿಡಿಯುವುದಿಲ್ಲವಾಗಿ ಬಣ್ಣ ಹಚ್ಚಬೇಕಾಗಿಲ್ಲ. ಅದನ್ನೆಳೆಯಲು ಸೇಕಡಾ ೧೨ ರಷ್ಟು ಕಡಿಮೆ ಶಕ್ತಿ ಸಾಲುವುದು.

ಇದೇ ಗುಣವನ್ನು ಮನಗಂಡು ಹಡಗು ಕಟ್ಟುವುದರಲ್ಲಿ ವಿಜ್ಞಾನಿಗಳು ಅಲ್ಯುಮಿನಿಯಂನ್ನು ಉಪಯೋಗಿಸಲು ಸಲಹೆ ಕೊಡುತ್ತಾರೆ. ಮೇಲ್ಭಾಗವನ್ನು ಅಲ್ಯುಮಿನಿಯಂನಿಂದ ನಿರ್ಮಿಸಿದ "ಓರಿಯಾನಾ" ಮತ್ತು "ಕ್ಯಾನ್‌ಬರಾ" ಎಂಬ ಎರಡು ಭಾರಿ ಬ್ರಿಟಿಶ್ ಹಡಗಗಳು ಆಗಲೇ ಸಾಗರ ಪರ್ಯಟನ ಮಾಡುತ್ತಿವೆ. ಅಲ್ಯುಮಿನಿಯಂ ಉಪಯೋಗದಿಂದ ಹಡಗಿನ ತೂಕ ಕಡಿಮೆಯಾಗುವುದರಿಂದ ಹೆಚ್ಚು ಜನ ಪ್ಯಾಸೆಂಜರರನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ತುಕ್ಕು ಹಿಡಿಯದಿರುವುದರಿಂದ ಸೇತುವೆಗಳ ನಿರ್ಮಾಣಕ್ಕೂ ಅಲ್ಯುಮಿನಿಯಂ ಉಪಯೋಗಿಸಲ್ಪಡುತ್ತಿದೆ. ಆಧುನಿಕ ಕಾರುಗಳ ಬಾಡಿಗಳನ್ನಷ್ಟೇ ಏಕೆ ಎಂಜಿನ್ ನಿರ್ಮಾಣದಲ್ಲೂ ಅದರ ಬಳಕೆ ಹೆಚ್ಚುತ್ತಿದೆ. ಗಗನ ಚುಂಬಿ ಭವನಗಳ ನಿರ್ಮಾಣದಲ್ಲೂ ಅಲ್ಯುಮಿನಿಯಂ ಪ್ರವೇಶಿಸಿದೆ. ಲಂಡನ್ನಿನ ಮಾರ್ಲೆಬಾನ್ ರೋಡಿನಲ್ಲಿರುವ ಕಾಸ್ಟ್ರಾಲ್ ಹೌಸ್ ೧೬೮ ಅಡಿ ಎತ್ತರದ ಗೋಪುರವನ್ನು ಅಲ್ಯುಮಿನಿಯಂ ಮತ್ತು ಕಾಜಿನಿಂದಲೇ ಕಟ್ಟಿದ್ದಾರೆ. ಬ್ರಿಟಿಶ್ ನಗರವಾದ ನ್ಯೂ ಕ್ಯಾಸಲ್ಲಿನಲ್ಲಿ ಹನ್ನೆರಡು ಅಂತಸ್ತುಗಳ ಸೌಧವೊಂದರ ೨/೩ ಭಾಗ ಅಲ್ಯುಮಿನಿಯಂ ಗೋಡೆಗಳಿಂದಲೇ ಕಟ್ಟಲ್ಪಡುತ್ತಿದೆ. ಪ್ರಸಿದ್ಧ ಈಟನ್ ಕಾಲೇಜಿನ ಚಾಪೆಲ್ ಮಹಡಿಯ ಮುಚ್ಚಳಿಕೆಯನ್ನು ಈಚೆಗೆ ದುರಸ್ತಿ ಮಾಡಿ ಸಂಪೂರ್ಣವಾಗಿ ಅಲ್ಯುಮಿನಿಯಂನಿಂದಲೇ ಪುನರ್ನಿರ್ಮಿಸಿದ್ದಾರೆ.

ಕಾಯಿಸಿದ ಅಲ್ಯುಮಿನಿಯಂ ಆಮ್ಲಜನಕ (ಪ್ರಾಣವಾಯು)ದೊಡನೆ ಕೂಡುವಾಗ ಅಗಾಧವಾದ ಉಷ್ಣತೆಯನ್ನು ಹೊರಸೂಸುತ್ತದೆ. ಈ ಗುಣದ ಪ್ರಯೋಜನ ಪಡೆದು ಕಬ್ಬಿಣ ಮೊದಲಾದ ಲೋಹಗಳನ್ನು ಕರಗಿಸುವ ಉದ್ಯಮಗಳಲ್ಲಿ ಅದನ್ನುಪಯೋಗಿಸುತಾರೆ. ಮದ್ದು ಗುಂಡಗಳ ನಿರ್ಮಾಣದಲ್ಲೂ ಅದರಿಂದ ಕೆಲಸ ತೆಗೆದುಕೊಂಡಿದ್ದಾರೆ. ತೈಲಶೋಧನೆಯಲ್ಲಿಯೂ ಅಲ್ಯುಮಿನಿಯಂ ನೆರವಾಗುತ್ತಿದೆ.

ಭಾರತದಲ್ಲಿ ತಾಮ್ರದ ಅದಿರಿನ ಕೊರತೆ ಬಹಳವಾಗಿದೆ. ಆದರೆ ಸುದೈವದಿಂದ ಅಲ್ಯುಮಿನಿಯಮ್ಮಿನ ಮುಖ್ಯ ಶೇಖರವಾದ ಬಾಕ್ಸೈಟ್ ಅದಿರು ಧಾರಾಳವಾಗಿದೆ. ೧೮೮೮ ರಲ್ಲಿ ಮಧ್ಯ ಪ್ರದೇಶದ ಕಟ್ನಿಯಲ್ಲಿ ಬಾಕ್ಸೈಟ್ ಅದಿರಿನ ಶೋಧವಾಯಿತು. ಇಂದು ಭಾರತದಲ್ಲಿ ಸುಮಾರು ೨೫ ಕೋಟಿ ಟನ್ ಬಾಕ್ಸೈಟ್ ಅದಿರಿನ ಸಂಗ್ರಹವಿರಬೇಕೆಂದು ಅಂದಾಜಿದೆ. ಇದರಲ್ಲಿ ಮೂರು ಕೋಟಿ ಟನ್ನುಗಳಷ್ಟು ಅದಿರಿನ ಅಸ್ತಿತ್ವ ಸಿದ್ಧವಾಗಿದೆ. ಬಿಹಾರ್, ಮಧ್ಯಪ್ರದೇಶ, ಒಡಿಸ್ಸಾ, ಮದ್ರಾಸ್, ಮೈಸೂರು, ಗುಜರಾತ್ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಇದು ಹೇರಳವಾಗಿ ಸಿಗುತ್ತದೆ.

ಏಶಿಯದಲ್ಲೇ ಪ್ರಪ್ರಥಮವಾಗಿ ಭಾರತವು ೧೯೧೦ ರಲ್ಲಿ ಅಲ್ಯುಮಿನಿಯಂ ಉತ್ಪಾದಿಸಿತಾದರೂ ಮುಂದಿನ ೨೮ ವರ್ಷಗಳಲ್ಲಿ ಇಲ್ಲಿ ಒಟ್ಟು ೧,೭೧,೦೦೦ ಟನ್ನಿನಷ್ಟು ಮಾತ್ರ ಉತ್ಪಾದನೆಯಾಯಿತು. ಸ್ವಾತಂತ್ರ್ಯಾನಂತರ ಭರದಿಂದ ಔದ್ಯೋಗಿಕ ಪ್ರಗತಿಯ ಫಲವಾಗಿ ಅದಕ್ಕೆ ಬೇಡಿಕೆ ಹೆಚ್ಚಿತು. ೧೯೬೫ ರ ಅಂಕಿ-ಸಂಖ್ಯೆಗಳ ಪ್ರಕಾರ ದೇಶದಲ್ಲಿ ೨,೧೪,೫೫೮ ಟನ್ ಅಲ್ಯುಮಿನಿಯಂ ಸಿದ್ಧವಾಯಿತು. ಇಷ್ಟಾದರೂ ಆ ವರ್ಷ ೧೯,೩೪೧ ಟನ್ ಅಲ್ಯುಮಿನಿಯಮ್ಮನ್ನು ಆಯಾತ ಮಾಡಿಕೊಂಡು ಅದಕ್ಕಾಗಿ ನಾವು ರೂ. ೫,೯೫,೭೮,೦೦೦ ವಿದೇಶಿ ವಿನಿಮಯವನ್ನು ತೆರಬೇಕಾಯಿತು.

ಬೆಳೆಯುತ್ತಿರುವ ಬೇಡಿಕೆಯನ್ನು ಗಮನಿಸಿ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಲ್ಯುಮಿನಿಯಂ ಉತ್ಪಾದನೆಗೆ ೧,೫೦,೦೦೦ ಟನ್ನಿನ ಗುರಿಯನ್ನು ನಿಗದಿ ಮಾಡಲಾಗಿದೆ. ಹಿರಾಕುಡದಲ್ಲಿ ಆಗಲೆ ಒಂದು ಕಂಪನಿ ಅಲ್ಯುಮಿನಿಯಂ ಉತ್ಪಾದಿಸುತ್ತಿದೆ. ಅಲ್ಯುಮಿನಿಯಂ ಉತ್ಪಾದನೆಗೆ ಅಗತ್ಯವಾದ ಒಂದು ಮಹತ್ವದ ಸೌಕರ್ಯವೆಂದರೆ ಅಗ್ಗವಾದ ವಿದ್ಯುತ್ತಿನ ಲಭ್ಯತೆ. ಆದ್ದರಿಂದ ಜಲವಿದ್ಯುತ್ ಸೌಕರ್ಯವಿರುವ ಕಡೆಗೇ ಅದನ್ನು ಲಾಭದಾಯಕವಾಗಿ ಉತ್ಪಾದಿಸಬಹುದು. ವಿದ್ಯುತ್ ಅಗ್ಗವಾಗಿರದ ಇಂಗ್ಲಂಡು ತನ್ನ ಅಲ್ಯುಮಿನಿಯಂ ಅಗತ್ಯದ ಬಹು ಭಾಗವನ್ನು ಕೆನಡಾದಿಂದ ತರಿಸುತ್ತಿದೆ. ಜಪಾನ್‌ನಲ್ಲಿ ಅದು ಅಗ್ಗವಾಗಿರುವುದರಿಂದ ಅದು ಅದಿರನ್ನು ವಿದೇಶಗಳಿಂದ ತರಿಸಿಕೊಂಡೂ ಅಲ್ಯುಮಿನಿಯಂ ಉತ್ಪಾದಿಸಬಲ್ಲುದಾಗಿದೆ. ಅದರಿಂದ ಉತ್ತರ ಪ್ರದೇಶದ ರಿಹಂದ್, ಮಹಾರಾಷ್ಟ್ರದ ಕೊಯ್ನಾ, ಮದ್ರಾಸಿನ ಮೆಟ್ಟೂರು, ಮೈಸೂ

ರಿನ ಕಾರವಾರ ಪ್ರದೇಶಗಳಲ್ಲಿ ವಿದೇಶಿ ಬಂಡವಳ ಮತು ತಾಂತ್ರಿಕ ಸಹಾಯದಿಂದ ಇಷ್ಟರಲ್ಲೆ ಅಲ್ಯುಮಿನಿಯಂ ಉದ್ದಿಮೆಗಳು ಏಳಲಿವೆ

ನಮ್ಮ ದೇಶದಲ್ಲಿ ಜಲವಿದ್ಯುತ್ ಕೂಡ ಸಾಕಷ್ಟು ಅಗ್ಗವಾಗಿಲ್ಲ. ಆದ್ದರಿಂದ ಸರಕಾರ ರಿಯಾಯಿತಿ ತೋರಿಸಿ ಅಲ್ಯುಮಿನಿಯಂ ಉದ್ಯೋಗದ ಬೆಳವಣಿಗೆಗೆ ನೆರವಾಗಬೇಕು. ತಾಮ್ರ ದೊರಕದ ದೇಶಗಳು ಅಲ್ಯುಮಿನಿಯಂಗೆ ಬಹಳ ಲಕ್ಷ್ಯ ಕೊಡುತ್ತಿವೆ. ಫ್ರಾನ್ಸ್ ಈ ಉದ್ದಿಮೆಯನ್ನು ವಿಶೇಷ ಕಾನೂನು ಮಾಡಿ ಪ್ರೋತ್ಸಾಹಿಸುತ್ತಿದೆ. ತಾಮ್ರ ಬೇಕಾದಷ್ಟು ದೊರಕುವ ಅಮೇರಿಕದಲ್ಲೂ ಅಲ್ಯುಮಿನಿಯಂ ಬಳಕೆ ಕಬ್ಬಿಣ ಬಿಟ್ಟು ಉಳಿದ ಲೋಹಗಳ ಬಳಕೆಯಲ್ಲಿ ಸೇಕಡಾ ೪೦ ರಷ್ಟಿದೆ. ಭಾರತದಲ್ಲಿಂದು ಅಲ್ಯುಮಿನಿಯಂಗೆ ಅಪರಿಮಿತ ಅವಕಾಶಗಳಿವೆ. ವಿಮಾನ ಉದ್ಯಮ ಬೆಳೆಯುತ್ತಿದೆ. ನಮ್ಮ ರೇಲ್ವೆಗಳ ಮೇಲಿನ ಪ್ರಯಾಣಿಕರ ಒತ್ತಡದ ನಿರಂತರ ಸಮಸ್ಯೆಯನ್ನು ಅಲ್ಯುಮಿನಿಯಂ ಕೋಚುಗಳ ನಿರ್ಮಾಣದಿಂದ ಸಾಕಷ್ಟು ಕಡಿಮೆಮಾಡಬಹುದು (ಕೋಚುಗಳ ತೂಕ ಕಡಿಮೆಯಾದರೆ ಅದೇ ಎಂಜಿನ್ನು ಹೆಚ್ಚು ಜನ ಪ್ರಯಾಣಿಕರನ್ನು ಒಯ್ಯಬಲ್ಲದು). ಹಡಗಗಳ ನಿರ್ಮಾಣಕ್ಕೆ ಅದನ್ನುಪಯೋಗಿಸಿ ವೇಗ ಹೆಚ್ಚಿಸಬಹುದು. ವಿದ್ಯುತ್‌ವಾಹಕ ತಂತಿಗಳಿಗಾಗಿ ಈಚೆಗೆ ಆ ಅಲ್ಯುಮಿನಿಯಮನ್ನೇ ಬಳಸಲಾಗುತ್ತಿದೆ. ಅಲ್ಯುಮಿನಿಯಂ ಪೆಯಿಂಟಿನ ಬಳಕೆ ಹೆಚ್ಚಾಗುತ್ತಿದೆ. ಭಾರತದ ಉತ್ತರ ಗಡಿಯಲ್ಲಿ ಸೈನಿಕ ದೃಷ್ಟಿಯಿಂದ ಸಾರಿಗೆ ರಸ್ತೆ ಮತ್ತು ಸೇತುವೆ ಕಟ್ಟಲು ಅಲ್ಯುಮಿನಿಯಂ ಹೆಚ್ಚು ಹೆಚ್ಚಾಗಿ ವಿನಿಯೋಗವಾಗಲೇಬೇಕು. ಎಣ್ಣೆ ಕ್ಯಾನುಗಳು, ಪೌಡರ್ ಡಬ್ಬಿಗಳು, ಟೂತ್‌ಪೇಸ್ಟ್ ಟ್ಯೂಬುಗಳು ಮೊದಲಾದ ಅಸಂಖ್ಯ ಪ್ಯಾಕಿಂಗ್ ವಸ್ತುಗಳಿಗೆ ಉಕ್ಕಿನ ತಗಡುಗಳಿಗಿಂತಲೂ ಅಲ್ಯುಮಿನಿಯಂನ ಉಪಯೋಗ ಹೆಚ್ಚು ಪ್ರಯೋಜನಕರವೆಂದು ಮನಗಂಡು ವಿದೇಶಗಳಲ್ಲಿ ಅದನ್ನು ಬಳಸತೊಡಗಿದ್ದಾರೆ. ಬೆಳೆಯುತ್ತಿರುವ ನಮ್ಮ ಅರ್ಥಪ್ರಣಾಲಿಯಲ್ಲಿ ಈ ಲೋಹದ ಬಗ್ಗೆ ವಿಜ್ಞಾನಿಗಳು ಹೆಚ್ಚಿನ ಸಂಶೋಧನೆಯಲ್ಲಿ ತೊಡಗುವುದು ನ್ಯಾಯವಲ್ಲವೇ? ರಶಿಯದ ವಿಜ್ಞಾನಿಗಳು ಈಚೆಗೆ ಕಿಬನಿ ಖನಿಜಗಳಿಂದ (ನೀಫ್ಯೆಲೈಟ್) ಅಲ್ಯುಮಿನಿಯಂ ತಯಾರಿಸುವ ಹೊಸ ವಿಧಾನವೊಂದನ್ನು ಕಂಡು ಹಿಡಿದಿದ್ದಾರಂತೆ. *

ನುಡಿಮುತ್ತು

ನಮ್ಮ ಹೃದಯವೆಂಬ ಗ್ರಂಥವನ್ನು ಓದಲು ಕಲಿಯುವತನಕ ಎಲ್ಲ ಗ್ರಂಥಗಳೂ ನಿರುಪಯೋಗಿ.

— ಸ್ವಾಮಿ ವಿವೇಕಾನಂದ

* * *

ಸಣ್ಣವರು ಮಾಡುವ ದೊಡ್ಡ ತಪ್ಪಿಗಿಂತ ದೊಡ್ಡವರು ಮಾಡುವ ಸಣ್ಣ ತಪ್ಪು ಹೆಚ್ಚು ವಿಷಾದಕರ.

— ಗಯಟೆ

* * *

ನಿರಾಶೆ ಕೆಲವರನ್ನು ಹಾಳು ಮಾಡಿದರೆ ಅತ್ಯಾಶೆ ಅನೇಕರನ್ನು ಹಾಳು ಮಾಡುತ್ತದೆ.

— ಬೆಂಜಮಿನ್ ಫ್ರಾಂಕ್ಲಿನ್

* * *

ತಾನು ಪ್ರೀತಿಸುವ ಪುರುಷನಿಗಾಗಿ ರುಚಿಯಾದ ಊಟ ಸಿದ್ಧಪಡಿಸಿ ಉಣಬಡಿಸಬೇಕೆಂದು ಶ್ರದ್ಧೆಯಿಂದ ಅಡುಗೆಯಲ್ಲಿ ನಿರತಳಾದ ಹೆಣ್ಣಿಗಿಂತಲೂ ಆಕರ್ಷಕವಾದ ಚಿತ್ರ ಈ ಜಗತ್ತಿನಲ್ಲಿ ಇನ್ನೊಂದಿಲ್ಲ.

ಸಂಗ್ರಹ : ಗಸುಲು



ನಂಬಲು ಕಷ್ಟವಾದ ಸತ್ಯಕಥೆ

ನಾರೀಚೋರ ಕರಡಿ

ಕ್ಯಾಪ್ಟನ್ ಮುರ್ದಾನ್ ಅಲಿ

ಗೋಡೆಯಂತೆ ನೇರವಾಗಿ ಎದ್ದು ನಿಂತ ಆ ಗುಡ್ಡದ ಕೆಳಗೆ ಒಂದು ಆಳವಾದ ಹಳ್ಳ ಹರಿಯುತ್ತಿತ್ತು. ಮಳೆಗಾಲದ ದಿನಗಳಲ್ಲಿ ಅದು ಸಿಟ್ಟಿಗೆದ್ದ ಸರ್ಪವೊಂದು ಭುಸುಗುಡುತ್ತ ಹೋಗುತ್ತಿರುವಂತೆ ಭಯಂಕರವಾಗಿ ಕಾಣಿಸುತ್ತಲಿತ್ತು. ಇಡೀ ಜಗತ್ತೆಲ್ಲ ತನ್ನ ಅಜಿಂಕ್ಯ ಪದವನ್ನು ಒಪ್ಪಿಕೊಂಡಿದೆಯೊ ಎನ್ನುವಷ್ಟು ಗರ್ವದಿಂದ ಆ ಹಳ್ಳ ವಿಶಾಲ ವೃಕ್ಷಗಳ ನಡುವೆ ಸ್ವಚ್ಛಂದವಾಗಿ ಹರಿಯುತ್ತಿತ್ತು. ಹಳ್ಳದ ದಂಡೆಯಲ್ಲಿದ್ದ ಆನೆಗಳಿಗಿಂತಲೂ ದೊಡ್ಡದಾದ ಬಂಡೆಗಲ್ಲುಗಳ ಮೇಲೆ ಬಟ್ಟೆ ಒಗೆಯುತ್ತಿದ್ದ ಅಗಸರ ಮಟ್ಟಿಗಂತೂ ಹಳ್ಳ ಅಜಿಂಕ್ಯವಾಗಿಯೇ ಇತ್ತು. ಮಳೆಗಾಲದಲ್ಲಿ ಎಂದು ಮಹಾಪೂರ ಬಂದೀತು ಎಂಬ ನಿಯಮವಿರದ್ದರಿಂದ ಆ ದಿನಗಳಲ್ಲಿ ಅಗಸರಿಗೆ ಹಳ್ಳವಿದ್ದೂ ಇಲ್ಲದಂತಾಗಿರುತ್ತಿತ್ತು.

ಮಳೆಗಾಲದ ಇಂಥ ದಿನಗಳಲ್ಲಿಯೆ ಒಮ್ಮೆ ಈ ಹಳ್ಳ ಅಗಸರ ಜೀವನದಲ್ಲಿ ಇತಿಹಾಸವನ್ನು ರಚಿಸಿತು. ಅದರಿಂದಾಗಿ ಈ ಗುಡ್ಡಗಾಡು ಪ್ರದೇಶದ ಬೇಟೆಗಾರರೆಲ್ಲ ಒಂದು ವರ್ಷವಿಡೀ ಬೆವರು ಸುರಿಸುವಂತಾಯಿತು. ಹಳ್ಳದ ಆಚೆ ಈಚೆ ಪಕ್ಕದಲ್ಲಿ ದಟ್ಟವಾದ ಅಡವಿಯಿದೆ. ಅಡವಿಯಲ್ಲಿ ಕಾಡುಮೃಗಗಳು ಹೇರಳವಾಗಿದ್ದವು. ಹುಲಿ-

ಚಿರತೆಗಳು ಅಗಸರ ಕರ್ಮಕ್ಷೇತ್ರದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದವು. ಆದರೆ ಈ ಸಲ ನಡೆದಂಥ ಘಟನೆ ಎಂದೂ ಜರುಗಿದ್ದಿಲ್ಲ. ಅಂದು ಜದ್ದೂ ಅಗಸನ ಇಬ್ಬರು ತರುಣ ಪತ್ನಿಯರು ಬಟ್ಟೆಯ ಗಂಟುಗಳ ಸಹಿತ ಇದ್ದಕ್ಕಿದ್ದಂತೆ ಮಾಯವಾಗಿಬಿಟ್ಟಿದ್ದರು.

ಜನ ಮೊದಲು ಈ ಮಾತನ್ನು ನಂಬಲೇ ಇಲ್ಲ. ಅಗಸರ ಮಾತುಗಳನ್ನೇನು ನಂಬಲು ಬರುತ್ತದೆಯೆ? ಆದರೆ ಜದ್ದೂನ ಹೆಂಡಂದಿರು ಮಾಯವಾದದ್ದನ್ನೂ ಅಲ್ಲಗಳೆಯುವಂತಿರಲಿಲ್ಲ. ಈ ಮಳೆಗಾಲದ ಒಂದು ಸಂಜೆ ಜದ್ದೂ ತೊಳೆದ ಅರಿವೆಗಳ ಗಂಟುಗಳೊಂದಿಗೆ ತಿರುಗಿ ಬರುತ್ತಿದ್ದಾಗ ಆವನಿಂದ ಹಿಂದೆ ಐವತ್ತೇ ಗಜ ದೂರದಲ್ಲಿದ್ದ ಅವನ ಇಬ್ಬರು ಹೆಂಡಂದಿರು ತಲೆಯ ಮೇಲೆ ಹೊತ್ತುಕೊಂಡಿದ್ದ ಗಂಟುಗಳ ಸಹಿತ ಅದೃಶ್ಯರಾಗಿಬಿಟ್ಟಿದ್ದರು.

ಒಂದು ವಾರವಿಡೀ ಪೋಲೀಸರು ಶೋಧ ನಡೆಸಿದರು. ಅಡವಿಯ ಮೂಲೆ ಮೂಲೆಗಳಲ್ಲಿ ಹುಡುಕಿದರು. ಸಂಶಯದ ಮೇಲೆ ಕೆಲವರನ್ನು ಬಂಧಿಸಿದರು. ಆದರೆ ಆ ಇಬ್ಬರು ಹೆಂಗಸರು ಎಲ್ಲಿ ಹೋದರು ಎಂಬುದು ಗೊತ್ತಾಗಲೇ ಇಲ್ಲ. ಒಂದು-ಎರಡು-ಮೂರು-ನಾಲ್ಕು ತಿಂಗಳುಗಳು ಕಳೆದವು. ಆದರೆ ನಾಪತ್ತೆಯಾದ ಹೆಂಗಸರ ಸುಳಿವು ಎಲ್ಲಿಯೂ ಹತ್ತಲಿಲ್ಲ. ಅಡವಿಯ ಅಧಿಕಾರಿಗಳು ಶಕ್ತಿಮೀರಿ ಪ್ರಯತ್ನಿಸಿದರು, ಪ್ರಯೋಜನವಾಗಲಿಲ್ಲ.

ಇದು ಸಂಭವಿಸಿ ಏಳು ತಿಂಗಳಾಗಿತ್ತು. ಒಬ್ಬ ರೈತನ ಹುಡುಗಿ ತಲೆಯ ಮೇಲೆ ದೊಡ್ಡದೊಂದು ಹುಲ್ಲಿನ ಹೊರೆಯನ್ನು ಹೊತ್ತುಕೊಂಡು ಬರುತ್ತಿದ್ದಾಗ ತನ್ನೆಡೆಗೆ ವೇಗದಿಂದ ಬರುತ್ತಿದ್ದ ಕರಡಿಯೊಂದು ಅವಳ ಕಣ್ಣಿಗೆ ಬಿತ್ತು. ಹುಡುಗಿ ಹುಲ್ಲಿನ ಹೊರೆಯನ್ನು ಅಲ್ಲೇ ಚೆಲ್ಲಿ ಚೀರುತ್ತ ಕೂಗುತ್ತ ತಾನು ಬಂದ ದಿಕ್ಕಿನಲ್ಲೆ ಓಡಿದಳು. ಆ ತರುಣ ಹುಡುಗಿಯ ಚೀತ್ಕಾರ ಹಳ್ಳದ ಆಚೆ ಈಚೆ ದಂಡೆಗಳಲ್ಲಿ ಬಹುದೂರ ಕೇಳಿಸಿತು. ಅವಳ ಎದುರಿನಲ್ಲಿ ಸಾಕ್ಷಾತ್ ಮೃತ್ಯು ಬರುತ್ತಲಿತ್ತು. ಸುತ್ತಲೂ ನಿರ್ಜನ ಪ್ರದೇಶ. ಹುಡುಗಿ ಓಡಿಯೂ ಬಹುದೂರ ಓಡಲಾಗಲಿಲ್ಲ. ಕರಡಿ ಬಂದದ್ದೇ ಅವಳನ್ನು ತೋಳ್ತೆಕೈಯಲ್ಲಿ ಬಲವಾಗಿ ಹಿಡಿದುಕೊಂಡಿತು. ಹುಡುಗಿ ಇನ್ನಷ್ಟು ಜೋರಾಗಿ, ವಿಕಾರವಾಗಿ ಅರಚಿಕೊಂಡಳು.

ಅವಳ ಈ ಕೂಗನ್ನು ಇಬ್ಬರು ಹುಡುಗರು ಕೇಳಿದರು. ತಾವು ಮೇಯಿಸಲು ತಂದಿದ್ದ ಆಡುಗಳನ್ನು ಹುಡುಕುತ್ತ ಹುಡುಕುತ್ತ ಅವರು ಹಾದಿತಪ್ಪಿ ಅಲೆಯತೊಡಗಿದ್ದರು. ಅವರಲ್ಲೊಬ್ಬನಿಗೆ ೧೨, ಇನ್ನೊಬ್ಬನಿಗೆ ೧೪ ವರ್ಷಗಳಾಗಿದ್ದವು. ಅವರಿಬ್ಬರಿಗೂ ಅದೇನು ಪ್ರೇರಣೆಯಾಯಿತೋ ಇಬ್ಬರೂ ಕೂಗು ಕೇಳಿಬಂದ ಕಡೆಗೆ ಓಡಿದರು. ಬಹುಶಃ ಅಸಹಾಯ ಸ್ತ್ರೀಯ ರಕ್ಷಣೆಗೆ ಧಾವಿಸಬೇಕೆನ್ನುವ ಪುರುಷಸಹಜ ಪ್ರವೃತ್ತಿ ಅವರನ್ನು ಪ್ರೇರೇಪಿಸಿರಬೇಕು. ಹುಡುಗರ ಬಳಿ ಶಸ್ತ್ರಾಸ್ತ್ರವಿರಲಿ, ದೊಣ್ಣೆ ಕೂಡ ಇರಲಿಲ್ಲ. ಕರಡಿ ಹುಡುಗಿಯನ್ನು ತೋಳ್ತೆಕೈಯಲ್ಲಿ ಬಂಧಿಸಿ ಅವಳನ್ನು ಎಳೆದೊಯ್ಯುವ ಪ್ರಯತ್ನದಲ್ಲಿದ್ದಾಗ ಈ ಇಬ್ಬರು ಹುಡುಗರು ಓಡುತ್ತ ಅಲ್ಲಿಗೆ ಬಂದರು.

ಆ ದೃಶ್ಯವನ್ನು ಕಂಡು ಹುಡುಗರಿಬ್ಬರೂ ನಡುಗಿ ಹೋದರು. ಕ್ಷಣಕಾಲ ಭಯದಿಂದ ಮೂರ್ಛೆ ಹೋಗಿದ್ದ ಆ ಹುಡುಗಿಗೆ ಎಚ್ಚರ ಬಂದು ಮತ್ತೆ ಚೀರಿದಳು. ಕರಡಿ ಹುಡುಗರನ್ನು ಕಂಡಿತು. ಸಿಟ್ಟಿನಿಂದ, ದರ್ಪದಿಂದ ಗುರುಗುಟ್ಟಿತು. ಹುಡುಗರಿಬ್ಬರೂ ಕ್ಷಣಾರ್ಧದಲ್ಲಿ ಒಂದು ನಿರ್ಧಾರಕ್ಕೆ ಬಂದರು. ನೆಲದ ಮೇಲೆ ಬಿದ್ದಿದ್ದ ಕಲ್ಲುಗಳನ್ನೆತ್ತಿ ಕರಡಿಯನ್ನು ಹೊಡೆಯತೊಡಗಿದರು. ಕರಡಿ ಗರ್ಜಿಸಿ ಅವರತ್ತ ಓಡಿತು. ಆದರೆ ಹುಡುಗರ ಕಲ್ಲೆಸೆತ ಎಷ್ಟು ತೀವ್ರವೂ ಗುರಿಸಾಧಿಸುವುದೂ ಆಗಿತ್ತೆಂದರೆ ಕರಡಿಗೆ ಮುಂದೆ ಬರುವುದಾಗಲಿಲ್ಲ.

ಹುಡುಗಿ ಕರಡಿಯ ಕೈಯಿಂದ ಪಾರಾಗಿದ್ದಳು.

ಅವಳು ಜೀವವುಳಿಸಿಕೊಳ್ಳಲೆಂದು ಓಡತೊಡಗಿದಳು. ಅಷ್ಟರಲ್ಲಿ ಆ ಹುಡುಗರು "ನಿಲ್ಲು, ಓಡಬೇಡ. ನಮ್ಮ ಸಂಗಡ ಬಾ ಓಡಿ ಎಲ್ಲಿಗೆ ಹೋಗುವಿ? ಅಲ್ಲಿ ಹಾದಿಯಲ್ಲಿ ಚಿರತೆಯೊಂದು ಆಡನ್ನು ತಿನ್ನುತ್ತ ಕುಳಿತಿದೆ" ಎಂದು ಕೂಗಿದರು. ಹುಡುಗಿ ಓಡತೊಡಗಿದ್ದನ್ನು ಕಂಡ ಕರಡಿ ಅವಳ ಹಿಂದೆಯೆ ಓಡಿ ಹುಡುಗರು ಕಲ್ಲನ್ನೆತ್ತಿಕೊಳ್ಳುವ ಮೊದಲೇ ಹುಡುಗಿಯನ್ನೆತ್ತಿಕೊಂಡು ಅಂತರ್ಧಾನವಾಗಿಬಿಟಿತು. ಹುಡುಗರಿಬ್ಬರೂ ಬಲು ಧೈರ್ಯದಿಂದ ಸಮೀಪದಲ್ಲೆಲ್ಲ ಹುಡುಕಾಡಿದರು. ಆದರೆ ಕರಡಿ ಮತ್ತು ಹುಡುಗಿಯ ಪತ್ತೆ ಹತ್ತಲಿಲ್ಲ.

ಹುಡುಗರಿಬ್ಬರಿಗೂ ದಣಿವಿಗಿಂತಲೂ ಹೆಚ್ಚಾಗಿ ಭಯದಿಂದ ಎದೆ ಹೊಡೆದುಕೊಳ್ಳುತ್ತಿತ್ತು. ಆದರೆ ಅವರ ಊರಿನ ಹುಡುಗಿ ಒಬ್ಬಳು ಕಾಣೆಯಾಗಿದ್ದಳು. ಅಲ್ಲಿಂದ ಹೋಗಲು ಅವರಿಗೆ ಮನಸ್ಸೇ ಆಗದೆ ಅವರಿಬ್ಬರೂ ಒಂದು ಎತ್ತರದ ಗಿಡವನ್ನೇರಿ ಕುಳಿತರು.

ಮಧ್ಯರಾತ್ರಿಯಾಯಿತು. ನಡುನೆತ್ತಿಗೆ ಬಂದ ಚಂದ್ರನ ಪ್ರಕಾಶದಲ್ಲಿ ಅಡವಿ ಬೆಳಗಿತು. ತಮ್ಮ ತಮ್ಮ ಬಿಲಗಳಿಂದ ಹೊರಬಿದ್ದು ಮೊಲಗಳು ಹಸಿರು ಹುಲ್ಲಿನ ಮೇಲೆ ಕುಣಿಯತೊಡಗಿದವು. ಎಲ್ಲಿಂದ ಬಂದವೊ ಏನೋ ನೂರಾರು ಗೂಗೆಗಳು ಹುಡುಗರು ಕುಳಿತಿದ್ದ ಗಿಡದ ಟೊಂಗೆಗಳ ಮೇಲೆ ತೂಗಾಡತೊಡಗಿದವು. ಆದರೆ ಮುಂದೆ ೧೫ ಮಿನಿಟುಗಳಲ್ಲಿ ಆ ಹುಡುಗರು ಕಂಡ ದೃಶ್ಯವು ಹೆದರಿಕೆಯಿಂದ ಅವರ ಪ್ರಾಣ ಹೋಗುವಷ್ಟು ಭೀಕರವಾಗಿತ್ತು. ಅವರಿಬ್ಬರ ಕಣ್ಣುಗಳು ಇನ್ನೇನು ಒಡೆದು ಹೋಗುವವೊ ಎಂಬಷ್ಟು ಅಗಲವಾದವು. ಗವಿಯೊಂದರಿಂದ ಒಂದು ಕರಡಿ ಹೊರಗೆ ಬಂದಿತ್ತು. ಅದರ ಅಕ್ಕಪಕ್ಕದಲ್ಲಿ ಇಬ್ಬರು ಸ್ತ್ರೀಯರು ಇದ್ದರು. ಹೆಣ್ಣು ಕರಡಿಗಳಲ್ಲ — ನಿಜವಾಗಿಯೂ ಸ್ತ್ರೀಯರು. ಇಬ್ಬರೂ ಪೂರ್ಣ ಬತ್ತಲೆಯಾಗಿದ್ದರು. ಕರಡಿ ಆ ಇಬ್ಬರು ಹೆಂಗಸರೊಂದಿಗೆ ಈ ಹುಡುಗರು ಕುಳಿತಿದ್ದ ಗಿಡದ ಕಡೆಗೇ ಬಂತು.

ಹುಡುಗರಿಬ್ಬರೂ ಕಂಪಿಸುತ್ತಿದ್ದರು. ಅವರಲ್ಲಿ ದೊಡ್ಡವ "ಹೆದರಬೇಡ. ಇವು ದೆವ್ವಗಳು. ಆದರೆ ನಮಗೇನೂ ಮಾಡಲಾರವು. ನಾವಿಬ್ಬರೂ ಬಾಲಬ್ರಹ್ಮಚಾರಿಗಳು. ಹನುಮಂತದೇವರು ನಮ್ಮನ್ನು ರಕ್ಷಿಸುತ್ತಾನೆ" ಎಂದ. ಕರಡಿ ಇನ್ನಿಷ್ಟು ಸಮೀಪದಲ್ಲಿ ಬಂದು ಒಂದು ಶಿಲಾಖಂಡದ ಮೇಲೆ ಕುಳಿತಿತು. ಆ ಇಬ್ಬರು ಹೆಂಗಸರು ಅದರ ಅಕ್ಕಪಕ್ಕದಲ್ಲಿ ಕುಳಿತುಕೊಂಡರು. ಹುಡುಗರಿಬ್ಬರೂ ಗಿಡದ ಟೊಂಗೆಯನ್ನು ಇನ್ನಿಷ್ಟು ಗಟ್ಟಿಯಾಗಿ ಹಿಡಿದುಕೊಂಡರು. ಶ್ವಾಸ ಬಿಡುವ ಧೈರ್ಯ ಕೂಡ ಅವರಿಗಿರಲಿಲ್ಲ. ಭಯದಿಂದ ಬೆವತು ಅವರ ಮೈ ಸ್ನಾನ ಮಾಡಿದವರಂತೆ ತೊಯ್ದು ಹೋಗಿತ್ತು.

ಒಂದರ್ಧ ಗಳಿಗೆ ಅಲ್ಲಿ ಕುಳಿತು ಕರಡಿ ಆ ಹೆಂಗಸರೊಂದಿಗೆ ಹೊರಟುಹೋಯಿತು. ಬೆಳಗಾಗಲು ಇನ್ನೊಂದು ತಾಸೆರಡು ತಾಸು ಇದೆ ಎನ್ನುವಾಗ ಆ ಹುಡುಗರಿಗೆ ಹಳ್ಳದ ದಂಡೆಯಲ್ಲಿ ಎರಡು ಹಿಲಾಲುಗಳು ಕಾಣಿಸಿದವು. ತುಸು ಹೊತ್ತಿನಲ್ಲಿ ಏಳೆಂಟು ಮನುಷ್ಯಾಕೃತಿಗಳು ಅವರಿಗೆ ಗೋಚರವಾದವು. ಗಟ್ಟಿಯಾಗಿ ಮಾತಾಡುತ್ತಲಿದ್ದ ಅವರ ಶಬ್ದಗಳೂ ಅವರಿಗೆ ಅಸ್ಪಷ್ಟವಾಗಿ ಕೇಳಿಸತೊಡಗಿದವು. ಹುಡುಗರಿಬ್ಬರೂ ಟೊಂಗೆಯನ್ನು ಭದ್ರವಾಗಿ ಹಿಡಿದುಕೊಂಡು ನಿಂತು ಗಟ್ಟಿಯಾಗಿ ಕೂಗಿದರು. ಬರುತ್ತಿದ್ದವರಿಗೆ ಕೇಳಿಸಿರಬೇಕು—ಅವರು ಕೂಗು ಎತ್ತಲಿಂದ ಬಂದಿರಬೇಕು ಎಂದು ಅಜಮಾಯಿಸ ತೊಡಗಿದರು. ಹುಡುಗರಿಬ್ಬರು ಮತ್ತೆ ಕೂಗಿದರು. ಆ ಜನರು ಕೂಡ ಕೂಗುತ್ತ ಇತ್ತಲೇ ಬರತೊಡಗಿದರು. ಅವರು ಗಿಡದ ಬಳಿ ಬಂದಾಗ ಹುಡುಗರು ಕೆಳಗಿಳಿದು ಬಂದು ತಾವು ಅನುಭವಿಸಿದ್ದನ್ನೆಲ್ಲ, ಕಂಡದ್ದನ್ನೆಲ್ಲ ಹೇಳಿದರು.

*

ಇದಾದ ಮೂರನೆಯ ದಿನ ಕಮಿಶನರ್ ಸಾಹೇಬರ ದೂತನೊಬ್ಬ ನನಗೊಂದು ಆಜ್ಞೆ

ಯನ್ನು ತಂದು ಕೊಟ್ಟ. ನಾನು ನನ್ನ ನೌಕರ ಮತ್ತು ನಾಯಿಯೊಡನೆ ಆ ಊರಿಗೆ—ರಾಮ ಖಂಡಿಗೆ ಹೋದೆ. ಅಂದು ರಾತ್ರಿ ಬಹಳ ಹೊತ್ತಿನ ವರೆಗೆ ಊರವರೊಡನೆ ಚರ್ಚಿಸಿದೆ. ಆ ಹುಡುಗರನ್ನೂ ಕರೆಸಿ ಮಾತಾಡಿದೆ. ಅವರು ತೋರಿದ್ದ ಧೈರ್ಯ-ಸಾಹಸಗಳಿಂದ ಪ್ರೀತನಾಗಿದ್ದ ನಾನು ಅವರನ್ನು ಅಪ್ಪಿಕೊಂಡು 'ಶಹಬಾಸ್' ಎಂದೆ.

ಆದರೆ ಹತ್ತು ದಿನಗಳ ವರೆಗೆ ಅಡವಿಯ ಸಂದು-ಸಂದುಗಳಲ್ಲಿ ಹುಡುಕಿದರೂ ನನಗೆ ಆ ಕರಡಿಯಾಗಲಿ, ಅದರ ಜೊತೆಯಿದ್ದ ಹೆಂಗಸರಾಗಲಿ ಕಾಣಿಸಲಿಲ್ಲ. ತುಂಬ ಪೇಚಿಗೆ ಸಿಲುಕಿದೆ. ಇಡೀ ಊರೇ ಭಯಭೀತವಾಗಿತ್ತು. ಹಗಲು ಹೊತ್ತಿನಲ್ಲಿ ಕೂಡ ಜನ ಒಬ್ಬರೇ ಮನೆಯಿಂದ ಹೊರಬೀಳಲು ಅಂಜುತ್ತಿದ್ದರು. ಒಂದು ದಿನ ಮಧ್ಯಾಹ್ನ ನಾನು ಊಟ ಮಾಡಿ ಮಲಗುವ ವಿಚಾರದಲ್ಲಿದ್ದಾಗ ಆ ಹುಡುಗರಿಬ್ಬರು—ಲಾಲು ಮತ್ತು ಕಾಳು—ಓಡುತ್ತ ಬಂದು ನದಿಯ ಪಕ್ಕದ ಗುಡ್ಡದ ಆಚೆಕಡೆಗಿರುವ ಗುಡ್ಡದಲ್ಲಿ ಕರಡಿ ಮತ್ತು ಇಬ್ಬರು ಹೆಂಗಸರು ಓಡಿ ಹೋಗುತ್ತಿರುವುದನ್ನು ಕಂಡೆವಾಗಿ ಹೇಳಿದರು.

ಬಂದೂಕನ್ನೆತ್ತಿಕೊಂಡು ನಾಯಿಯ ಸಹಿತ ಆ ಹುಡುಗರ ಹಿಂದೆಯೆ ಹೊರಟೆ. ಸಂಜೆ ೫ ರ ಸುಮಾರಿಗೆ ಆ ಹುಡುಗರು ಹೇಳಿದ್ದ ಸ್ಥಳಕ್ಕೆ ಬಂದೆವು. ಅಲ್ಲಿ ನೆಲದ ಮೇಲೆ ಒಂದು ಪ್ರಾಣಿ ಮತ್ತು ಇಬ್ಬರು ಮನುಷ್ಯರ ಹೆಜ್ಜೆಗಳ ಗುರುತನ್ನು ಕಂಡು ನಮ್ಮೆಲ್ಲರ ಶ್ರಮ ಸಾರ್ಥಕವಾದಂತೆನಿಸಿತು. ಕಾಳೂನ ಹೆಗಲ ಮೇಲೆ ನನ್ನ ಚೀಲವಿತ್ತು. ಠಾಕೂರರ ಆಳಿನ ಕೈಯಿಂದ ಕಸಿದುಕೊಂಡು ಬಂದಿದ್ದ ಭರ್ಚಿಯೊಂದು ಲಾಲೂನ ಕೈಲಿತ್ತು.

ನಾವು ಶೋಧ ಕಾರ್ಯಕ್ಕೆ ತೊಡಗಿದೆವು. ಕರಡಿ ಹೋದ ಕಡೆಗೇ ಹೊರಟೆವು. ತುಸು ಹೊತ್ತಿನಲ್ಲಿ ಮತ್ತೆ ನಮಗೆ ಆ ಪದ ಚಿಹ್ನಗಳು- ನಡುವೆ ಕರಡಿಯ ಹೆಜ್ಜೆ, ಅಕ್ಕಪಕ್ಕದಲ್ಲಿ ಮನುಷ್ಯರ ಹೆಜ್ಜೆ-ಕಂಡವು. ರಾತ್ರಿ ಸಮೀಪಿಸುತ್ತಿದ್ದರೂ ಗುರುತನ್ನು ಕಂಡ ನಾವು ಮುಂದುವರಿದೆವು.

ಸುಮಾರು ಎರಡು ಮೂರು ಫರ್ಲಾಂಗುಗಳಷ್ಟು ಹಾದಿಯನ್ನು ಆ ಬಯಲಿನಲ್ಲಿ ನಡೆದ ಬಳಿಕ ಮೂರುನಾಲ್ಕು ವಿಶಾಲ ಬಂಡೆಗಳ ನಡುವೆ ನಮಗೊಂದು ಗುಹೆ ಕಾಣಿಸಿತು. ಅದರ ಸುತ್ತಲೂ ಮುಳ್ಳು ಗಿಡಗಂಟೆಗಳಿದ್ದವು. ಲಾಲೂಗೆ ಏನೊ ಸಂಶಯ ಬಂದು ಅತ ನಾಯಿಯೊಡನೆ ಅಲ್ಲಿಗೆ ಹೋದ. ಆದರೆ ಕ್ಷಣಾರ್ಧದಲ್ಲಿ ಓಡಿ ತಿರುಗಿ ಬಂದು "ಅಲ್ಲಿ-ಅ-ಲ್ಲಿ, ಹುಲಿ ತನ್ನ ಮರಿಗಳೊಂದಿಗೆ ಕುಳಿತಿದೆ" ಎಂದ. ಆತ ಥರ-ಥರ ನಡುಗುತ್ತಿದ್ದ.

ನನಗೆ ಅವನ ಮಾತಿನಲ್ಲಿ ನಂಬಿಕೆಯಾಗದೆ ನಾನು ಆ ಗುಹೆಯತ್ತ ಹೋದೆ. ಒಂದು ಧಷ್ಟಪುಷ್ಟವಾದ ಹುಲಿ ತನ್ನೆರಡು ಮರಿಗಳೊಡನೆ ಅಲ್ಲಿ ನಿಜವಾಗಿಯೂ ಕುಳಿತಿತ್ತು. ನನ್ನನ್ನು ಕಂಡು ಅದು ಗುರುಗುಟ್ಟಿತು. ಆದರೆ ಕುಳಿತಲ್ಲಿಂದ ಏಳಲಿಲ್ಲ. ನಾನು ನಿಂತು ನೋಡತೊಡಗಲು ಹುಲಿ ಮರಿಗಳನ್ನು ತನ್ನ ಬಳಿ ಎಳೆದುಕೊಂಡು ಮತ್ತೆ ಗುರುಗುಟ್ಟಿತು. ಇನ್ನಲ್ಲಿ ಇರುವುದು ಒಳಿತಲ್ಲವೆಂದು ಯೋಚಿಸಿದೆ. ಬೇಟೆಯಾಡಲೆಂದು ನಾನು ಬಂದಿರಲೂ ಇಲ್ಲ. ಮತ್ತೆ ಇದುವರೆಗೆ ತಾಯಿಯನ್ನು ಕೊಂದ ಪಾಪ ನನ್ನಿಂದ ಘಟಿಸಿಯೂ ಇಲ್ಲ.

ಹುಲಿಯನ್ನು ಅದರ ಪಾಡಿಗೆ ಬಿಟ್ಟು ಹೊರಟೆವು. ಬಹಳಷ್ಟು ಏರಿ ಇಳಿದು ನಾವೊಂದು ದಿನ್ನೆಯ ಮೇಲೆ ನಿಂತು ಸುತ್ತಲೂ ನೋಡಿದೆವು. ಅಲ್ಲಿ ಪಶ್ಚಿಮ ದಿಕ್ಕಿನಲ್ಲಿದ್ದ ಒಂದು ಗಿಡದ ಮೇಲೆ ಕುಳಿತು ರಾತ್ರಿ ಕಳೆಯಲು ನಿರ್ಧರಿಸಿದೆವು.

ಆದರೆ ದೈವಸಂಕೇತ ಬೇರೆಯಿತ್ತು. ನಾವು ಕುಳಿತು ಹತ್ತು-ಹದಿನೈದು ನಿಮಿಷಗಳಾಗುವಷ್ಟರಲ್ಲಿ ಮನುಷ್ಯರು ಅತ್ತಂತೆ ಕೇಳಿಸಿತು. ನಾವು ಗಿಡದಿಂದಿಳಿದು ಆ ಧ್ವನಿ ಬಂದತ್ತ ನಿಶ್ಶಬ್ದವಾಗಿ ನಡೆದೆವು. ಅಳುವ, ಹೊಡೆಯುವ ಶಬ್ದ ಸ್ಪಷ್ಟವಾಗಿ ಕೇಳತೊಡಗಿದ್ದರಿಂದ ನಮ್ಮ ಮಾರ್ಗ

ಸರಿಯಾಗಿತ್ತೆಂದು ಅನಿಸಿತು. ನಾವು ತುಸು ಮುಂದೆ ನಡೆದು ನಿಂತಾಗ ಕೇಳಿಬರುತ್ತಿದ್ದ ಅಳುವಿನ ಧ್ವನಿ ನಿಜವಾಗಿಯೂ ಮನುಷ್ಯರದೇ ಎಂದು ಖಾತ್ರಿಯಾಯಿತು. ಟಾರ್ಚ್ ಹೊತ್ತಿಸಿಕೊಂಡು ಮುಂದೆ ನಡೆದೆವು. ಕಾಲೂನ ಕೈಯಲ್ಲಿ ಟಾರ್ಚ್, ಲಾಲೂನ ಕೈಯಲ್ಲಿ ಭರ್ಚಿ, ನನ್ನ ಕೈಯಲ್ಲಿ ಬಂದೂಕು. ನಮ್ಮೆಲ್ಲರ ಮುಂದೆ ನಾಯಿ. ಗಿಡಗಂಟಿಗಳು ತೀರ ದಟ್ಟವಾಗಿದ್ದುದರಿಂದ ಒಬ್ಬರ ಹಿಂದೆ ಒಬ್ಬರು ನಡೆಯಬೇಕಾಗಿತ್ತು. ತುಸು ದೂರ ಹೋದ ಮೇಲೆ ನಾನು ಟಾರ್ಚ್ ಇಸಕೊಂಡು ಎಲ್ಲರೂ ನನ್ನ ಹಿಂದೆ ಬರಬೇಕೆಂದು ಹೇಳಿ ಮುಂದೆ ನಡೆದೆ. ಟಾರ್ಚಿನ ಬೆಳಕು ಕಂಡು ಗವಿಯ ಒಳಗೆ ನಡೆದ ಕೋಲಾಹಲ ತುಸು ಹೆಚ್ಚಾಗಿ ಬಳಿಕ ಯಾರೋ ಓಡಿಹೋದ ಸಪ್ಪಳ ಕೇಳಿಸಿತು. ನನ್ನ ಎದುರು ದೊಡ್ಡ ಬಂಡೆಯೊಂದಿತ್ತು. ಟಾರ್ಚಿನ ಬೆಳಕಿನಲ್ಲಿ ಅದರ ಪಕ್ಕದಲ್ಲಿ ಯಾರೋ ಓಡುತ್ತಿರುವುದನ್ನು ಕಂಡೆ.

ಬಹಳ ಪ್ರಯತ್ನಪಟ್ಟ ಮೇಲೆ ಆ ಬಂಡೆಗಲ್ಲನ್ನು ಬದಿಗೆ ಉರುಳಿಸುವುದು ಸಾಧ್ಯವಾಯಿತು. ಗವಿಯ ಬಾಗಿಲಿಗೆ ಅದು ಅಡ್ಡವಾಗಿತ್ತು. ಬಂಡೆಗಲ್ಲು ಬದಿಗೆ ಸರಿದಾಗ ಟಾರ್ಚಿನ ಬೆಳಕಿನಲ್ಲಿ ಗವಿಯಲ್ಲಿ ಎರಡು ನಗ್ನ ಮಾನವೀ ಆಕೃತಿಗಳು ಚೀರುತ್ತಿರುವುದು ಕೇಳಿಸಿತು. ನಾನು ಒಳಹೊಕ್ಕೆ. ಅವರಿಬ್ಬರೂ ನನ್ನ ಮೇಲೆರಗಿ ಉಗುರುಗಳಿಂದ ಪರಚತೊಡಗಿದರು. ಬೇಗನೆ ಕಾರ್ಯ ಮುಗಿಸುವುದು ಒಳ್ಳೆಯದೆಂದು ಯೋಚಿಸಿದೆ. ಅವರ ಚೀರಾಟದಿಂದ ಆಗ ಅಲ್ಲಿರವ ಕರಡಿ ಓಡಿಬರುವ ಸಂಭವವಿತ್ತು. ನಾನು ಆ ಹೆಂಗಸರಿಬ್ಬರ ಬಾಯಿಗೆ ಬಟ್ಟೆ ಕಟ್ಟಿದೆ. ಬಂದೂಕು ತೋರಿಸಿ ಹೆದರಿಸಲು ಅವರಿಬ್ಬರ ವಿರೋಧ ಪೂರ್ಣ ನಿಂತು ಹೋಯಿತು.

ಗವಿಯೊಳಗೆ ಇನ್ನೂ ಮುಂದೆ ನಡೆದು ನೋಡಿದಾಗ ಮೂಲೆಯಲ್ಲಿ ಒಬ್ಬ ತರುಣಿ ಪೂರ್ಣ ನಗ್ನಳಾಗಿ ಹೆಣದಂತೆ ಬಿದ್ದುಕೊಂಡಿರುವುದನ್ನು ಕಂಡೆ. ಲಾಲೂ ಅವಳ ಗುರುತು ಹಿಡಿದ. ಕರಡಿ ಹೊತ್ತುಕೊಂಡು ಹೋಗಿದ್ದ ರೈತನ ಹುಡುಗಿಯೇ ಅವಳಾಗಿದ್ದಳು. "ಎಲಾ ಸತ್ತುಹೋಗಿದ್ದಾಳೇನು?" ಎಂದು ಕಾಳೂ ಚೀರಿದ. ನಾನು ನೋಡಿದೆ. ಅವಳ ಶ್ವಾಸೋಚ್ಛ್ವಾಸ ನಡೆದಿತ್ತು. ಕೈಕಾಲುಗಳು ಬೆಚ್ಚಗಿದ್ದವು. ನಾವು ಅವಳನ್ನು ಗವಿಯ ಹೊರಗೆ ತಂದು ಮಲಗಿಸಿದೆವು. ಟಾರ್ಚಿನ ಬೆಳಕಿನಲ್ಲಿ ಅವಳ ಮುಖದ ಮೇಲೆಲ್ಲ ಉಗುರಿನ ಗಾಯಗಳು ಕಂಡವು. ಉಳಿದ ಆ ಇಬ್ಬರು ಹೆಂಗಸರು ಜದ್ದೂ ಅಗಸನ ಹೆಂಡಂದಿರಾಗಿದ್ದರು.

ನಾನು ರೈತನ ಹುಡುಗಿಯನ್ನು ಹೆಗಲ ಮೇಲೆ ಹೊತ್ತುಕೊಂಡೆ. ಕಾಳೂ, ಲಾಲು ಆ ಇಬ್ಬರು ಹೆಂಗಸರ ಕೈ ಹಿಡಿದುಕೊಂಡರು. ಎಲ್ಲರೂ ಅಲ್ಲಿಂದ ವೇಗವಾಗಿ ನಡೆದೆವು. ಬೆಳಗಿನ ಜಾವ ನಾಲ್ಕು ಗಂಟೆಯ ಸುಮಾರಿಗೆ ಹಳ್ಳದ ದಂಡೆಯನ್ನು ಮುಟ್ಟಿದೆವು. ರೈತನ ಹುಡುಗಿಗೆ ಎಚ್ಚರ ಬಂದಿದ್ದರೂ ಅವಳಿನ್ನೂ ಬಲು ನಿತ್ರಾಣಳಾಗಿದ್ದಳು. ಹಳ್ಳವನ್ನು ತಲುಪಿದ ಮೇಲೆ ನಾವು ಒಂದಿಷ್ಟು ವಿಶ್ರಮಿಸಿದೆವು. ಬಳಿಕ ಮೂವರು ಹೆಂಗಸರಿಗಾಗಿ ಸೀರೆ ಕುಪ್ಪಸಗಳನ್ನು ತರಲು ನಾನು ಕಾಳೂ, ಲಾಲೂರನ್ನು ಹಳ್ಳಿಗೆ ಓಡಿಸಿದೆ. *

ದಾಡಿಗಳ ಸಂತೆ

ದಾಡಿಗಳ ಸಂತೆ ಎಲ್ಲಿಯಾದರೂ ಇದ್ದೀತೆ? ಎಂದರೆ ನನ್ನನ್ನು ಮಂಕನೆಂದೀರಿ. ಆದರೆ ಇದು ಮಾತ್ರ ಸತ್ಯ. ಪಂಜಾಬಿನ ಸಿಂಹ ರಣಜಿತ್‌ಸಿಂಗನ ಕಾಲದಲ್ಲಿ ಲಾಹೋರ್ ನಗರದ ಉದ್ಯಾನವೊಂದರಲ್ಲಿ ವರ್ಷಕೊಮ್ಮೆ ದಾಡಿಗಳ ಸಂತೆ ನೆರೆಯುತ್ತಿತ್ತು.

ಅತ್ಯಂತ ಸುಂದರವಾದ ಹಾಗೂ ಉದ್ದವಾದ ದಾಡಿಗಳನ್ನುಳ್ಳವರಿಗೆ ನಗದು ನೂರು ರೂ. ಬಹುಮಾನ ಮತ್ತು ಆ ದಾಡಿಯನ್ನು ಮಾಲೀಸು ಮಾಡಲು ದಿನವಹಿ ಎಂಟು ಆಣೆಗಳ ಭತ್ತೆ ದೊರೆಯುತ್ತಿತ್ತು.

—ರವೀಂದ್ರನಾಥ ಎಸ್. ಬಿ.

ಪ್ರಾಣಪ್ರಿಯ ಅಂಧಕಾರ

ಕಾಕಾ ಕಾಲೇಲಕರ

ಗೋವೆಯ ರಾಜಧಾನಿ ಪಣಜಿಯಲ್ಲಿ ಒಮ್ಮೆ ಭಾಷಣ ಮಾಡುತ್ತಲಿದ್ದೆ. ಸ್ಥಳ ಕಡಿಮೆಯಿತ್ತು, ಸಭಿಕರು ಹೆಚ್ಚಾಗಿದ್ದರು. ಹಾಗಿದ್ದರೂ ಜನ ಶಾಂತರಾಗಿ ಕುಳಿತಿದ್ದರು. ನನ್ನ ಭಾಷಣ ಸಾಹಿತ್ಯವನ್ನು ಕುರಿತಾದದ್ದು. ಜನ ಏಕಾಗ್ರ ಚಿತ್ತದಿಂದ ಕೇಳುತ್ತಲಿದ್ದರು. ಭಾಷಣ ನಡೆದಿದ್ದಾಗ ಅಕಸ್ಮಾತ್ತಾಗಿ ವಿದ್ಯುದ್ದೀಪಗಳು ಆರಿ ಹೋಗಿ ಕೋಣೆಯಲ್ಲಿ ಅಮಾವಾಸ್ಯೆಯ ಅಂಧಕಾರ ವ್ಯಾಪಿಸಿತು. ಕೆಲವರು ಪೆಟ್ರೊಮ್ಯಾಕ್ಸ್ ತರಲೆಂದು ಓಡಿದರೆ ಬೇರೆ ಕೆಲವರು ಇನ್ನಿತರ ಸೂಚನೆಗಳನ್ನು ಮಾಡಿದರು. ತುಸು ಹೊತ್ತಿನ ಮೇಲೆ ನಾನೆಂದೆ: "ಬಂಧುಗಳೇ, ಬೆಳಕಿನ ಅಗತ್ಯವಾದರೂ ಏನಿದೆ? ನೀವು ನನ್ನನ್ನು ನೋ-ಡಿದ್ದೀರಿ, ನಾನು ನಿಮ್ಮೆಲ್ಲರನ್ನು ನೋಡಿದ್ದೇನೆ. ನಾವೆಲ್ಲ ನಮ್ಮ ವಿಷಯದಲ್ಲಿ ತಲ್ಲೀನರಾಗಿ ಹೋಗಿದ್ದೇವೆ. ಎಲ್ಲರೂ ಅವರವರ ಸ್ಥಳದಲ್ಲಿ ಆರಾಮಾಗಿ ಕುಳಿತಿದ್ದಾರೆ. ಕೆಲವರು ನಿಂತಿದ್ದಾರೆ. ಕತ್ತಲೆಯಲ್ಲಿ ಭಾಷಣವನ್ನೇಕೆ ಮುಂದುವರಿಸಬಾರದು? ಭಾಷಣದ ನಂತರ ಸಭಿಕರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡುವುದು ನನ್ನ ಪದ್ಧತಿ. ಪ್ರಶ್ನೋತ್ತರಗಳನ್ನೂ ನಾವು ಕತ್ತಲೆಯಲ್ಲಿ ನಡೆಸಬಹುದು. ಮುಖದ ಮೇಲಿನ ಭಾವ ಕಾಣಿಸುವುದಿಲ್ಲವೆಂಬುದು ನಿಜವಾದರೂ ಧ್ವನಿಯ ಮೇಲಿಂದ ಒಬ್ಬರೊಬ್ಬರ ಭಾವ ಮತ್ತು ಉದ್ದೇಶಗಳು ಅರ್ಥವಾಗದೆ ಉಳಿಯವು."

ನನ್ನ ಈ ಸರಳ ಮಾತು ಶ್ರೋತೃಗಳಿಗೆ ಒಪ್ಪಿಗೆಯಾಯಿತು. ಎಲ್ಲರೂ ಶಾಂತರಾಗಿ ಏಕಾಗ್ರಚಿತ್ತದಿಂದ ಭಾಷಣ ಕೇಳತೊಡಗಿದರು. ನಿಜವಾಗಿ ಹೇಳುವುದಾದರೆ ಅಂದಿನ ಭಾಷಣ ಮತ್ತು ಆ ಮೇಲೆ ನಡೆದ ಪ್ರಶ್ನೋತ್ತರಗಳು ಎಂದಿಗಿಂತ ಹೆಚ್ಚು ಆಕರ್ಷಕವೂ ಜನಪ್ರಿಯವೂ ಆದವು. ಸಭೆಯ ಕೆಲಸ ಮುಗಿದ ಮೇಲೆ ಆಭಾರ ಪ್ರದರ್ಶನದ ಸಮಯದಲ್ಲಿ ಯಾರೋ ಮೇಣಬತ್ತಿಯನ್ನು ತಂದರು. ಮೇಣಬತ್ತಿಯ ಹಿಂದೆಯೆ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತ ಪೆಟ್ರೊಮ್ಯಾಕ್ಸ್‌ಗಳೂ ಬಂದವು. ಅವು ಒಮ್ಮಿಂ-ದೊಮ್ಮೆ ಜನರನ್ನು ದಂಗು ಮಾಡಿದವು. ಈ ಪೆಟ್ರೊಮ್ಯಾಕ್ಸ್‌ಗಳಿಂದ ಸಭಿಕರಿಗೆ ತಮ್ಮ ತಮ್ಮ ಚಪ್ಪಲಿ ಬೂಟುಗಳನ್ನು ಹುಡುಕಿಕೊಳ್ಳಲು ತುಂಬ ಸಹಾಯವಾಯಿತು ಎಂದು ಒಪ್ಪಿಕೊ-ಳ್ಳಲೇಬೇಕು.

ಈ ಒಂದು ಚಿಕ್ಕ ಘಟನೆಯನ್ನು ಇಷ್ಟೊಂದು ವರ್ಣಿಸುವ ಅಗತ್ಯವಿರಲಿಲ್ಲ. ಆದರೆ ಆ ಸಭೆಯಲ್ಲಿ ನನಗೆ ಹೊಸತೊಂದು ಅನುಭವ ಬಂತು. ಕತ್ತಲೆಯಲ್ಲಿ ಭಾಷಣಕಾರ ಮತ್ತು ಸಭಿಕರ ನಡುವೆ ಹೆಚ್ಚು ಆತ್ಮೀಯತೆ ಉಂಟಾಯಿತು. ಏಕೆಂದರೆ ಕತ್ತಲೆಯಲ್ಲಿ ಜನ ಆತುರರಾಗಿ ಏಕಾಗ್ರಚಿತ್ತದಿಂದ ಭಾಷಣ ಕೇಳಿ ಮಾರ್ಮಿಕ ಪ್ರಶ್ನೆಗಳನ್ನು ಕೇಳುತ್ತಾರೆ; ಸರಿಯಾದ ಉತ್ತರ ಸಿಕ್ಕೊಡನೆ ಅದರ ಗೌರವವನ್ನೂ ಮಾಡುತ್ತಾರೆ

'ಭಾರತ ವಾಣಿ' ಯಿಂದ

ಇಷ್ಟಾದರೂ ಯಾರಿಗೂ ಯಾರ ಮುಖವೂ ಕಾಣುತ್ತಿರುವುದಿಲ್ಲವೆಂಬುದೇ ಇದರಲ್ಲಿಯ ವಿಶೇಷ. ಬಹುಶಃ ಈ ವಿಶೇಷದಿಂದಾಗಿಯೆ ನಾವೆಲ್ಲ ಹೆಚ್ಚು ನಿಕಟರಾದೆವು. ಯಾರಿಗೂ ಯಾರೂ ಕಾಣುತ್ತಿರಲಿಲ್ಲವಾದ್ದರಿಂದ ಪ್ರತಿ-ಯೊಬ್ಬರಿಗೂ ಇನ್ನೊಬ್ಬರ ವಿಷಯದಲ್ಲಿ ಸಹಾನುಭೂತಿ ಹುಟ್ಟಿತ್ತು ಮತ್ತು ಕತ್ತಲೆ ತಂದೊಡ್ಡಿದ ವಿಘ್ನವನ್ನು ನಿವಾರಿಸಲು ಪ್ರತಿಯೊಬ್ಬನೂ ತನ್ನ ದೊಡ್ಡಿಸ್ತನ, ಮಮತೆ ಸದ್ಭಾವಗಳ ಗಂಟನ್ನು ಬಿಚ್ಚಿ ಮುಕ್ತ ಹಸ್ತದಿಂದ ಉಪಯೋಗಿಸುತ್ತಲಿದ್ದ. ಈ ಅಂಧಕಾರ ಒಂದು ರೀತಿಯಲ್ಲಿ ಉಪಕಾರವನ್ನೇ ಮಾಡಿತು ಎಂದು ನನಗನಿಸಿತು. ಕತ್ತಲೆಯ ಈ ಶಕ್ತಿಯತ್ತ ನನ್ನ ಗಮನ ಪ್ರಥಮತಃ ಈ ರೀತಿಯಲ್ಲಿ ಹರಿಯಿತು.

'ತಮಸೋ ಮಾ ಜ್ಯೋತಿರ್ಗಮಯ'– ಕತ್ತಲೆಯಿಂದ ನನ್ನನ್ನು ಬೆಳಕಿಗೆ ಒಯ್ಯಿ– ಯಾವ ದಿನ ಉಪನಿಷತ್ತಿನಲ್ಲಿಯ ಈ ಪ್ರಾರ್ಥನೆಯನ್ನು ಓದಿದೆನೋ ಅದೇ ದಿನ ಈ ಜಗತ್ತಿನಲ್ಲಿ ಅಂಧಕಾರ ಮತ್ತು ಪ್ರಕಾಶಗಳು ಪರಸ್ಪರ ಭಿನ್ನವಾದ ಆದರೆ ಸರ್ವವ್ಯಾಪಿಯಾದ ಮಹಾ ತತ್ತ್ವಗಳು ಎಂಬುದು ನನಗೆ ತಿಳಿದುಬಂದು ಪ್ರಕಾಶದ ಬಗ್ಗೆ ನನ್ನ ಭಕ್ತಿ ದ್ವಿಗುಣಿತವಾಯಿತು. ಜೊತೆಗೇ ಅಂಧಕಾರವೂ ಒಂದು ವ್ಯಾಪಕವಾದ ಹೆಚ್ಚು ಕಡಿಮೆ ಸಾರ್ವಭೌಮ ತತ್ವವೆಂಬುದು ಸ್ಪಷ್ಟವಾಗಿ ಅದರ ಮಹತ್ವವೂ ಮನದಲ್ಲಿ ಬಿಂಬಿಸಿತು. ಆಧ್ಯಾತ್ಮಿಕ ದೃಷ್ಟಿಯಲ್ಲಿ ನಾವು ಅಜ್ಞಾನವನ್ನು ಅಂಧಕಾರವೆಂದು ಕರೆಯುತ್ತೇವೆ. ಸಮಗ್ರ ಜೀವನದ ವಿಚಾರ ಮಾಡಿದಾಗ ಜಗತ್ತಿನ ಅಂಧಕಾರ ಮತ್ತು ಹೃದಯಾಕಾಶದ ಅಜ್ಞಾನಗಳು ಭಿನ್ನವಾದ ವಸ್ತುಗಳಾಗಿರದೆ ಒಂದೇ ಎಂಬುದು ಆಗ ನನಗೆ ಅರಿವಾಯಿತು.

ಆಮೇಲೊಮ್ಮೆ ಒಂದು ಕುಟುಂಬದ ಮೇಲೆ ದಾರುಣ ಪ್ರಸಂಗವೊಂದು ಬಂದೆರಗಿದಾಗ ಮನೆಯಲ್ಲಿಯ ದೊಡ್ಡವರೆಲ್ಲ ದುಃಖದಲ್ಲಿ ಮುಳುಗಿ ಹೋದದ್ದನ್ನೂ ಹುಡುಗರು ಮಾತ್ರ ನಗುತ್ತ-ಆಡುತ್ತ ನಡನಡುವೆ ತಾಯಿಯನ್ನು ಕಾಡಿಸುತ್ತ ಇರುವುದನ್ನೂ ಕಂಡಾಗ " ಈ ಮಕ್ಕಳಿಗೆ ತಮ್ಮ ಕುಟುಂಬದ ಮೇಲೆ ಬಂದಿರುವ ಸಂಕಟದ ಕಲ್ಪನೆ ಕೂಡ ಬರುವುದಿಲ್ಲವೆಂಬುದು ಭಗವಂತ ಅನುಗ್ರಹಿಸಿರುವ ಎಂಥ ಮಹಾಕೃಪೆ" ಎಂದು ಮನಸ್ಸಿಗನಿಸಿತು. ಒಂದು ವೇಳೆ ಈ ಮಕ್ಕಳಿಗೇನಾದರೂ ಪರಿಸ್ಥಿತಿಯ ಅರಿವು ಆಗಿದ್ದರೆ, ಕಷ್ಟದ ಭೀಕರತೆ ತಿಳಿದಿದ್ದರೆ ಅವರ ಕೋಮಲ ಮನಸ್ಸಿಗೆ ಭಯಂಕರ ಆಘಾತವಾಗಿ ಅವರು ಪ್ರಾಣವನ್ನೇ ನೀಗಬಹುದಿತ್ತು. ಕೋಳಿಯ ಮರಿ ಪೂರ್ಣ ಆಕಾರ ತಾಳುವ ವರೆಗೆ ಅದರ ರಕ್ಷಣೆಗಾಗಿ ತತ್ತಿಯ ಕವಚವಿರುವಂತೆ ಮನಸು ಗಟ್ಟಿಯಾಗುವ ವರೆಗೆ ಮಕ್ಕಳಿಗೆ ಈ ಅಜ್ಞಾನದ ಕವಚವನ್ನು ಕೊಟ್ಟಿರುತ್ತಾನೆ ದೇವರು. ಇದಾತನ ಅನಂತ ಕೃಪೆಯೆಂದೇ ತಿಳಿಯಬೇಕು.

ಯಾವುದು ಸಾರ, ಯಾವುದು ಅಸಾರ ಎಂಬುದು ಜಗತ್ತಿನಲ್ಲಿಯ ಎಲ್ಲ ಜನರಿಗೆ ಒಮ್ಮೆಲೆ ಗೊತ್ತಾಗಿಬಿಟ್ಟರೆ ಜಗತ್ತಿನ ಘಟನಾವಳಿಯೆ ನಿಂತುಹೋದೀತು. ಮನುಷ್ಯ ಅಸಾರವನ್ನೆ ಸಾರವೆಂದು ತಿಳಿದುಕೊಂಡು ನಡೆಯುತ್ತಾನೆ. ಇದರಿಂದಲೇ ಅವನಿಗೆ ಸಾಮಾನ್ಯ ಜೀವನದಲ್ಲಿ ರುಚಿಯೆನಿಸುತ್ತದೆ. ಅಂದರೆ ಎಲ್ಲ ಕೆಲಸಗಳೂ ಒಳ್ಳೆಯವಾಗಿರುತ್ತವೆ ಎಂದೇನೂ ಅಲ್ಲ. ಜೀವನವಿಡೀ ಮನುಷ್ಯರು ಪರಸ್ಪರರನ್ನು ದ್ವೇಷಿಸುತ್ತಾರೆ. ರಾಷ್ಟ್ರದ ತಲೆಮಾರುಗಳು ಈ ದ್ವೇಷವನ್ನು ಜ್ವಲಂತವಾಗಿಡುತ್ತವೆ. ಮತ್ತು ಮಹಾಯುದ್ಧಕ್ಕೆ ಆಮಂತ್ರಣವಿತ್ತು ಸಂಹಾರದ ಮಹೋತ್ಸವವನ್ನು ನೆರವೇರಿಸುತ್ತವೆ. ಇವೆಲ್ಲ ಅಜ್ಞಾನದ ಚೇಷ್ಟೆಗಳೇ ಅಲ್ಲವೆ? ಆದ್ದರಿಂದಲೇ ಪ್ರಾಚೀನ ಕಾಲದಿಂದಲೂ ಮಾನವನು " ತಮ-ಸೋ ಮಾ ಜ್ಯೋತಿರ್ಗಮಯ" ಎಂದು ಪ್ರಾ-ರ್ಥನೆ ಮಾಡುತ್ತಿದ್ದಾನೆ.

ತತ್ವದರ್ಶಿಗಳಾಗಿ ಅಥವಾ ತತ್ವಜಿಜ್ಞಾಸುಗಳಾಗಿ ನಾವು ಜೀವನದ ವಿಚಾರ ಮಾಡುವಾಗ ಜೀವನ ಮತ್ತು ಮೃತ್ಯು ಎರಡೂ ಪರಸ್ಪರ

ಪೂರಕ, ಪರಸ್ಪರ ಪೋಷಕ ಮತ್ತು ಸಮಾನ ಆವಶ್ಯಕ ತತ್ವಗಳಾಗಿವೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಕೇವಲ ಅಜ್ಞಾನ ಮತ್ತು ಜ್ಞಾನದ ಮಾತಷ್ಟೇ ಹೀಗಿಲ್ಲ. ಅಂಧಕಾರ ಮತ್ತು ಪ್ರಕಾಶದ ಮಾತೂ ಹಾಗೆಯೆ. ಅಜ್ಞಾನದ ಅರ್ಥ ಕಡಿಮೆ ಅಥವಾ ಅಪೂರ್ಣಜ್ಞಾನ, ಭ್ರಾಮಕ ಜ್ಞಾನ; ಅಂಧಕಾರವೆಂದರೆ ಕಡಿಮೆ ಪ್ರಕಾಶ, ಅಪೂರ್ಣ ಪ್ರಕಾಶವೆಂದೇ ಅರ್ಥ ಮಾಡಬೇಕು. ರಾತ್ರಿ ನಮಗೆ ಕಾಣಿಸದಿರುವಾಗ ಬೆಕ್ಕಿಗೆ ಕಾಣಿಸುತ್ತದೆ. ಅದು ಇಲಿಯ ಮೇಲೆ ಸರಿಯಾಗಿ ಎರಗುತ್ತದೆ. ನಮಗೆ ಪ್ರಕಾಶ ಅಪೂರ್ಣವಾಗಿದ್ದರೂ ಬೆಕ್ಕಿಗೆ ಅದು ಸಾಕಾಗುತ್ತದೆ. ಅದರ ಬದಲು ಹಗಲಿನ ಪ್ರಕಾಶ ಬೆಕ್ಕಿಗೆ (ಸಿಂಹಕ್ಕೆ ಕೂಡ) ಅಗತ್ಯಕ್ಕಿಂತಲೂ ಹೆಚ್ಚಾಗಿರುವುದರಿಂದ ಅದರ ಕಣ್ಣು ಕುಕ್ಕಿಬಿಡುತ್ತದೆ. ನಿಸರ್ಗದ ಏರ್ಪಾಡು ಹೀಗಿದೆ. ಕ್ಯಾಮರಾದ ಕಣ್ಣುಗಳನ್ನು ಹೇಗೆ ದೊಡ್ಡದು ಸಣ್ಣದು ಮಾಡಲು ಬರುವುದೋ ಅದರಂತೆ ಕೆಲವು ಪ್ರಾಣಿಗಳು ತಮ್ಮ ಕಣ್ಣುಗಳ ಡೈಫ್ರಾಮುಗಳನ್ನು ಪ್ರಕಾಶದ ಮಾನಕ್ಕನುಸರಿಸಿ ಸಣ್ಣದೊಡ್ಡದು ಮಾಡಲು ಸಮರ್ಥವಾಗಿರುತ್ತವೆ. ಯಾವವು ಹೀಗೆ ಮಾಡಲಾರವೊ ಅಂಥ ಪ್ರಾಣಿಗಳಿಗೆ ಅತಿ ಪ್ರಕಾಶದ ಅಂಧಕಾರವನ್ನು ಸಹಿಸಬೇಕಾಗುತ್ತದೆ.

ಧ್ವನಿಯ ವಿಚಾರವೂ ಹೀಗೆಯೆ ಇದೆ. ಧ್ವನಿಯ ಅಲೆಗಳಿರುತ್ತವೆ. ಧ್ವನಿಯ ಅಲೆಗಳು ಇರಬೇಕಾದ್ದಕ್ಕಿಂತ ಕಡಿಮೆಯಾಗಿದ್ದರೆ ನಮಗೆ ಕೇಳಿಸುವುದಿಲ್ಲ. ಅದರಂತೆ ಅಲೆಗಳ ಸಂಖ್ಯೆ ತೀರ ಹೆಚ್ಚಾದಾಗಲೂ ಸಪ್ಪಳ ಕೇಳಿ ಬರುವುದಿಲ್ಲ. ಅಂದ ಮೇಲೆ ಕತ್ತಲೆಗೂ ಈ ಮಾತು ಏಕೆ ಅನ್ವಯಿಸುವುದಿಲ್ಲ? ಗೀತೆಯಲ್ಲಿ

ಯಾ ನಿಶಾ ಸರ್ವಭೂತಾನಾಂ
ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗರ್ತಿ ಭೂತಾನಿ
ಸಾ ನಿಶಾ ಪಶ್ಯತೋ ಮುನೇಃ ॥

ಎಂದು ಹೇಳಿದೆ.

ಆಧ್ಯಾತ್ಮದ ಕ್ಷೇತ್ರದಲ್ಲಿ ಭಗವಾನ್ ಶಿವನು ಪರಮ ಜ್ಞಾನಿ ಯೋಗೀಶ್ವರ. ವ್ಯವಹಾರದಲ್ಲಿ ಅವನ ಬುದ್ಧಿ ಓಡುವುದಿಲ್ಲ ಎಂದು ಪುರಾಣಕಾರರು ಹೇಳುತ್ತಾರೆ. ಮನುಷ್ಯನ ಜ್ಞಾನಸಪ್ತಕ ಮತ್ತು ಮಹಾದೇವನ ಜ್ಞಾನಸಪ್ತಕ ಬೇರೆ ಬೇರೆಯಾಗಿರಬೇಕು. ಮನುಷ್ಯ ತನ್ನ ಕಂಠದಿಂದ ಬಹಳವೆಂದರೆ 'ಸಾ-ರೆ-ಗ-ಮ-ಪ-ಧ-ನಿ-ಸಾ' ದ ಮೂರೇ ಸಪ್ತಕಗಳನ್ನು ಹೊರಡಿಸಬಲ್ಲ. ಮಂದ್ರಕ್ಕಿಂತ ಕೆಳಗೆ ಇಳಿಯಲಾರ. ತಾರಸಪ್ತಕಕಿಂತಲೂ ಮೇಲಕ್ಕೆ ಹೋಗಲಾರ. ಇದು ಕಂಠದ ಮಾತಾಯಿತು. ಕಿವಿಯ ವಿಷಯದಲ್ಲೂ ಇದೇ ರೀತಿ ಎರಡೂ ಕಡೆ ಗಡಿಯಿರುತ್ತದೆ. ಅಂದಮೇಲೆ ಜ್ಞಾನದ ವಿಚಾರದಲ್ಲಿ ಏಕಿರಬಾರದು?

ಇನ್ನು ಮತ್ತೆ ಕತ್ತಲೆಯ ಕಡೆ ಹೊರಳೋಣ. ತುಸು ವಿನೋದವಾಗಿ, ತುಸು ತಾತ್ವಿಕ ರೀತಿಯಲ್ಲಿ ನಾನೊಂದು ಸಲ, "ಯಾವ ಸ್ಥಿತಿಯಲ್ಲಿ ಕಡಿಮೆ ಕಾಣಿಸುವುದೋ ಅದಕ್ಕೆ ಅಂಧಕಾರವೆಂದರೆ ಮತ್ತು ಹೆಚ್ಚು ಕಾಣಿಸುವ ಸ್ಥಿತಿಗೆ ಪ್ರಕಾಶವೆಂದರೆ ಹಗಲಿನಲ್ಲಿ ಬಿಳಿ ಅಂಧಕಾರ ವ್ಯಾಪಿಸಿರುತ್ತದೆ. ಅದರಿಂದ ಪೃಥ್ವಿ ಮತ್ತು ಸೂರ್ಯ ಎಂಬ ಎರಡು ಖಗೋಲಗಳು ಕಾಣಿಸುತ್ತವೆ. ಅದರ ಬದಲು ರಾತ್ರಿಯಲ್ಲಿ ಕೃಷ್ಣಪ್ರಕಾಶ ಎರಡೂ ಕಡೆ ಹಬ್ಬಿರುತ್ತದೆ. ಇದರಿಂದ ನಮಗೆ ಆಕಾಶದಲ್ಲಿ ನಾವು ನಕ್ಷತ್ರ, ತಾರಾಪುಂಜವೆಂದು ಕರೆಯುವ ಲಕ್ಷಗಟ್ಟಲೆ ಖಗೋಲಗಳು ಕಾಣಿಸುತ್ತವೆ. ದುರ್ಬೀನಿನ ಸಹಾಯದಿಂದ ನಾವು ಈ ಕೃಷ್ಣ ಪ್ರಕಾಶವನ್ನು ಎಷ್ಟೋ ಪಟ್ಟು ಹೆಚ್ಚಿಸಿಕೊಳ್ಳುತ್ತೇವೆ. ಅದರಿಂದ ನಮಗೆ ಆಕಾಶದ ಸೂಕ್ಷ್ಮಾತಿಸೂಕ್ಷ್ಮ ನಕ್ಷತ್ರಗಳೂ ಕಾಣಿಸುತ್ತವೆ. ಹಗಲಿನ ಶ್ವೇತ ಅಂಧಕಾರ ಇಷ್ಟವೋ ಅಥವಾ ರಾತ್ರಿಯ ವಿಶ್ವವ್ಯಾಪಿ ಕೃಷ್ಣ ಪ್ರಕಾಶವನ್ನು ಪರಮ ಸ್ನೇಹಿತನೆನ್ನಬೇಕೋ ಎಂಬುದನ್ನು ಯೋಚಿಸಿ, ಆಲೋಚಿಸಿ ನಿಶ್ಚಿತ ಮಾಡಿಕೊಳ್ಳಬೇಕು" ಎಂದಿದ್ದೆ.

ಶಾಂತಿನಿಕೇತನದಲ್ಲಿ ಮಹರ್ಷಿ ದೇವೇಂದ್ರನಾಥ ಠಾಕೂರರು ರಾತ್ರಿಯ ಪ್ರಾರ್ಥನೆಯ ಸಮಯದಲ್ಲಿ ದೀಪವನ್ನು ನಂದಿಸುತ್ತಿದ್ದರು. ಶ್ರೀ ರವೀಂದ್ರನಾಥರು ಕೂಡ ಇದೇ ಪರಂಪರೆಯನ್ನು ಕಾಯ್ದುಕೊಂಡು ಬಂದಿದ್ದರು. ಶಾಂತಿನಿಕೇತನದ ಈ ಪದ್ಧತಿ ಗಾಂಧೀಜಿಗೆ ಎಷ್ಟು ಮೆಚ್ಚಿಕೆಯಾಯಿತೆಂದರೆ ಅವರು ಕೂಡ ಪ್ರಾತಃಕಾಲದ ಮತ್ತು ಸಾಯಂಕಾಲದ ಪ್ರಾರ್ಥನೆಗಳಲ್ಲಿ ದೀಪ ಉರಿಸುವುದನ್ನು ನಿಲ್ಲಿಸಿಬಿಟ್ಟರು.

ಎಷ್ಟೋ ಯೋಗಿಗಳು ಸಂಜೆಯ ಪ್ರಕಾಶ ಕ್ಷೀಣವಾಗಿ ಕತ್ತಲೆ ಹೆಚ್ಚತೊಡಗಿದ ಮೇಲೆಯೆ ಧ್ಯಾನಸ್ಥರಾಗಿ ಕೂಡ್ರುತ್ತಾರೆ. ಏಕೆಂದರೆ ಏಕಾಗ್ರತೆ ಮತ್ತು ಅಂತರ್ಮುಖ ವೃತ್ತಿಗೆ ಕತ್ತಲೆ ವಿಶೇಷ ಪೋಷಕವಾಗಿದೆ.

ಈಗಿನ ದಿನಗಳಲ್ಲಿ ವಿದ್ಯುತ್‌ದೀಪಗಳು ಕತ್ತಲೆಯ ಭೀಷಣ ಸಂಹಾರವನ್ನು ಗೈದು ಮನದ ಶಾಂತಿಯನ್ನು ಹೊಡೆದೋಡಿಸಿ ಅದರ ಬದಲು ಉತ್ತೇಜನವನ್ನು ಉಂಟುಮಾಡುತ್ತಿವೆ. ಈ ಪ್ರಕಾಶದಿಂದ ರಾತ್ರಿ ಹಗಲಾಗುತ್ತಿದ್ದರೆ ಏನೂ ಜಗಳವಿರಲಿಲ್ಲ. ಆದರೆ ಈ ಉತ್ತೇಜನ ಹೇಗಿದೆಯೆಂದರೆ ಹಗಲೂ ಕೆಲಸ ಮಾಡಗೊಡುವುದಿಲ್ಲ. ರಾತ್ರಿ ವಿಶ್ರಾಂತಿಯನ್ನು ಹೊಂದಲು ಅಥವಾ ಗುಪ್ತ ವಾರ್ತಾಲಾಪಕ್ಕೆಯಲೂ ಬಿಡುವುದಿಲ್ಲ. ಕೇವಲ ಉತ್ತೇಜನೆ ಮತ್ತು ಕೃತ್ರಿಮತೆಯನ್ನು ಹೆಚ್ಚಿಸುವುದಷ್ಟೇ ಅದರ ಉದ್ದೇಶವಿದೆ. ಇದರಿಂದ ಮನುಷ್ಯ ಮಾಡಬಾರದ್ದನ್ನೂ ಮಾಡಲು ತತ್ಪರನಾಗುತ್ತಾನೆ. ಇಂಥ ಸಮಯದಲ್ಲಿ ಯಾವುದೇ ಶುದ್ಧ ನಿರ್ಣಯವನ್ನು ಮಾಡುವುದು ಹೆಚ್ಚುಕಡಿಮೆ ಅಶಕ್ಯವಾಗಿ ಬಿಡುತ್ತದೆ.

ಇಂಥ ವಿಷಮ ಪರಿಸ್ಥಿತಿಯಲ್ಲಿ ಯಾವ ರಾಷ್ಟ್ರನಾಯಕನೇ ಆಗಲಿ ಅಥವಾ ರಾಯಭಾರಿಯೇ ಆಗಲಿ, ಅಂತರ್‌ರಾಷ್ಟ್ರೀಯ ಪ್ರಶ್ನೆಗಳ ಉತ್ತರವನ್ನು ಕಂಡುಹಿಡಿದರೆ ಅವನನ್ನು ಯೋಗಿಯೆಂ ಎನ್ನಬೇಕಾಗುವುದು. ಅಥವಾ ವಿಷದ ಪ್ರಾಣಿಗೆ ವಿಷವೇರುವುದಿಲ್ಲವೆನ್ನುತ್ತಾರಲ್ಲ, ಹಾಗೆಯೆ ಇರ ಬೇಕು ಈ ಮಾತು.

ಇಂದು ನಡೆದಿರುವ ಅಂತರ್‌ರಾಷ್ಟ್ರೀಯ ಕಲಹಾದಿಗಳಲ್ಲಿ ಯೋಗಿಯ ಸೌಮ್ಯಬುದ್ಧಿಯಿದೆಯೆಂದು ಯಾರು ಹೇಳಬಲ್ಲರು ? ಇಡೀ ಜಗತ್ತಿನಲ್ಲಿ ನಾನಾವಿಧವಾದ ಉತ್ತೇಜನಗಳ ಕೋಲಾಹಲ ಮುಸಗಿದೆ. ಈ ವಾತಾವರಣದಲ್ಲಿ ಎಲ್ಲವೂ ಧ್ವಂಸವಾಗುತ್ತಲಿದೆ. ಆದ್ದರಿಂದ ಈ ಕೃತ್ರಿಮ ಪ್ರಕಾಶವು ಮನುಷ್ಯನ ಕಲ್ಯಾಣಕ್ಕೆ ಸಹಾಯಕವಾಗಿದೆ ಎಂದು ಖಂಡಿತವಾಗಿ ಹೇಳಲು ಬಾರದು.

ದೇವಾ, ಇಂಥ ಪ್ರಕಾಶದಿಂದ ನಮ್ಮನ್ನು ಶಾಂತಿದಾಯಕ ಕತ್ತಲೆಯತ ನಡೆಸು— ಎಂಬ ಪ್ರಾರ್ಥನೆಯನ್ನು ಮಾಡಬೇಕಾದ ದಿನಗಳು ಈಗ ಖಂಡಿತ ಬಂದಿವೆ. ಪ್ರಾಕೃತಿಕ ಪ್ರಕಾಶದಲ್ಲಿ ಮಾನವತೆ ಇರುತ್ತದೆ. ಮತ್ತು ಚಿಂತನೆಗಾಗಿ ಸಮಯವೂ ದೊರೆಯುತ್ತದೆ. ನೈಸರ್ಗಿಕ ಪ್ರಕಾಶ ಮತ್ತು ಕತ್ತಲೆ ಎರಡೂ ದೈವದತ್ತ ಪ್ರಸಾದವಾಗಿವೆ. ಎರಡರಲ್ಲೂ ಮಾನವನ ವ್ಯಕ್ತಿತ್ವ ವಿಕಾಸಗೊಂಡು ಶುದ್ಧವಾಗುತ್ತದೆ. ಇದರಲ್ಲಿ ಪ್ರಕಾಶವು ಪ್ರವೃತ್ತಿಪರಾಯಣವಾದರೆ ಗಡಿಬಿಡಿ ಹುಟ್ಟಬಲ್ಲದು. ಅಂಧಕಾರದಲ್ಲಿ ಆತ್ಮಪರೀಕ್ಷೆಗಾಗಿ ಸಮಯ ಸಿಗುವುದರಿಂದ ಅದು ಸಾಧನೆಗೆ ಹೆಚ್ಚು ಅನುಕೂಲವಾಗಿದೆ.

ಅಂಧಕಾರವು ಭಾವನಾತ್ಮಕವಾಗಿರಲಿ ಅಥವಾ ಅಭಾವನಾತ್ಮಕವಾಗಿರಲಿ ಮನುಷ್ಯನ ಮನಸ್ಸು, ಹೃದಯ ಮತ್ತು ಆತ್ಮಗಳಿಗೆ ಪೋಷಕ ವಸ್ತುವಾಗಿದೆ. ಅನೇಕ ಬಂಧನಗಳನ್ನು ಹರಿದು ಮುಕ್ತಿಯನ್ನು ಕೊಡುವ ಹಿತಕರ ವಸ್ತುವಾಗಿದೆ. *

ನಗೆಮಲ್ಲಿಗೆ

ಹೆಂಡತಿ- ಏನ್ರಿ, ನಿಮ್ಮ ಬಟ್ಟೆಬರೆ ಇರುವ ಟ್ರಂಕನ್ನು ತೆಗೆದುಕೊಂಡು ಹೊರಟಿರಲ್ಲ! ಏನು ಆಫೀಸಿಗೆ ಹೋಗುತ್ತೀರೊ ಅಥವಾ ಊರಿಗೆ ಹೋಗುತ್ತೀರೊ ?

ಗಂಡ- ಆಫೀಸಿಗೇ ಹೋಗುತ್ತೇನೆ.

ಹೆಂಡತಿ- ಹಾಗಾದರೆ ಈ ಟ್ರಂಕು ಯಾಕೆ ?

ಗಂಡ- ಇಂದು ಮುಂಜಾನೆ ರಾಮರಾಯರ ಮನೆಗೆ ಹೋಗಿದ್ದೆನಲ್ಲ, ಅಗ ಬಟ್ಟೆಗಳಿಗೆ ಬದಲಾಗಿ ಭಾಂಡೆ ಕೊಡುವವ ಬಂದಿರುವುದನ್ನು ಕಂಡೆ. ಅವನೇನಾದರೂ ನಾನಿಲ್ಲದಾಗ ನಮ್ಮ ಮನೆಗೆ ಬಂದುಗಿಂದಾನೆಂದು ಈ ಟ್ರಂಕು ನನ್ನ ಜೊತೆಗೆ ಒಯ್ಯುತ್ತಿದ್ದೇನೆ.

*

ಬ್ರೇಲ್ ಲಿಪಿಯನ್ನು ಅಭ್ಯಾಸ ಮಾಡ ತೊಡಗಿದ ರಾಮರಾಯರನ್ನು ಕಂಡು ಶಂಕರರಾಯರು ಗಾಭರಿಯಿಂದ, "ಏನು, ಕುರುಡರಾಗುತ್ತೀರೆಂದು ಡಾಕ್ಟರರು ಹೇಳಿದ್ದಾರೆಯೇ?" ಎಂದು ಕೇಳಿದರು.

"ಇಲ್ಲ. ಇಲೆಕ್ಟ್ರಿಕ್ ಬಿಲ್ ಉಳಿಸುವ ಯೋಚನೆ ಮಾಡುತ್ತಿದ್ದೇನೆ."

*

ಸುಬ್ಬಯ್ಯ ಶೆಟ್ಟರು ಊರಿನಲ್ಲೆಲ್ಲಾ ಅತಿ ಜಿಪುಣರೆಂದು ಹೆಸರು ಪಡೆದಿದ್ದರು. ಒಂದು ಸಾರಿ, ಅವರು ಊರಿನ ಡಿ. ಸಿ. ಯವರ ಜೊತೆ ಕಾವೇರಿ ನದಿಯ ಬಳಿ ನಿಂತಿದ್ದರು. ಶೆಟ್ಟರ ಜಿಪುಣತನ ಊರಿಗೇ ಪ್ರಸಿದ್ಧವಾಗಿದ್ದರಿಂದ, ಡಿ. ಸಿ. ಯವರು ಅವರನ್ನು ರೇಗಿಸಲು, "ನೋಡಿ ಶೆಟ್ರೆ, ಈ ನದಿಯೊಳಕ್ಕೆ ನಾಣ್ಯ ಹಾಕಿದರೆ ಬಹಳ ಪುಣ್ಯವಂತೆ; ಹಾಕೋಣವೇ ?" ಎನ್ನುತ್ತಾ, ತಮ್ಮ ಜೇಬಿನಿಂದ ನಾಲ್ಕಾಣೆ ನಾಣ್ಯವನ್ನು ತೆಗೆದು ನದಿಗೆ ಎಸೆದರು. ಆದರೆ ಶೆಟ್ಟರು ಮಾತ್ರ ತಮ್ಮ ಕೋಟು ಜೇಬುಗಳಲ್ಲೆಲ್ಲಾ ತಡಕಾಡುತ್ತಿದ್ದರು.

"ಏಕೆ ಶೆಟ್ಟರೇ, ನಾಣ್ಯ ಸಿಗಲಿಲ್ಲವೇನು? ನಾನು ಬೇಕಾದರೆ ಕೊಟ್ಟಿರುತ್ತೇನೆ" ಎಂದರು ನಗುತ್ತ ಡಿ. ಸಿ.

"ಇಲ್ಲ, ಇಲ್ಲ... ಹಾಗೇನೂ ಇಲ್ಲ.." ತಕ್ಷಣ ಶೆಟ್ಟರು ನುಡಿದರು, "ತೂತು ಮೂರು ಕಾಸೇನೋ ಸಿಕ್ಕಿತು... ಆದರೆ ನದಿಯೊಳಕ್ಕೆ ಅದನ್ನು ಇಳಿಬಿಡಲು ಸಾಕಷ್ಟು ಉದ್ದವಾಗಿರುವ ದಾರವನ್ನು ಹುಡುಕುತ್ತಿದ್ದೇನೆ ಅಷ್ಟೆ!"

— ಸಿ. ಮಾಲಿನಿ ವಾಮನರಾವ್

*

ಆ ಹುಡುಗ ಸೋಮಾರೀಂದ್ರೆ ಸೋಮಾರಿ. ಒಂದು ದಿನ ಅಂಗಡಿ ಮಾಲಿಕ ಆತನನ್ನು ಕರೆದ, ಹೀಗೆ ಹೇಳಿದ:

"ನೋಡು ತಮ್ಮಾ, ನೀನು ಇಲ್ದೆ ಇದ್ದಿದ್ರೆ ನಾವು ಈ ಅಂಗಡೀನ ಹ್ಯಾಗೆ ನಡೆಸಿಕೊಂಡು ಬರೋಕೆ ಸಾಧ್ಯ ಅಂತ ಒಂದೊಂದ್ಸಲ ಭಯವಾಗುತ್ತೆ. ಆದರೆ ಅದು ಸಾಧ್ಯವೇ ಅಂತ ಮುಂದಿನ ಸೋಮವಾರದಿಂದಲೇ ಪರೀಕ್ಷೆ ಮಾಡೋಣಂತಿದೀನಿ."

*

ಗಂಡ: ಈ ಸಾಲಗಾರರಿಗೆ ಕೊಡಬೇಕಾದ ದುಡ್ಡಿನ ಪಟ್ಟಿ ನೋಡಿದರೆ ಸಾಕು. ರಾತ್ರಿ ಎಲ್ಲಾ ನಿದ್ದೇನೆ ಬರೊಲ್ಲ...

ಹೆಂಡತಿ: ಅಯ್ಯೊ, ಸುಮ್ಮನಿರಿ ಸಾಕು. ನಿಮಗೆ ಸಾಲ ಕೊಟ್ಟೋರು ಮಾತ್ರ ಸುಖವಾಗಿ ನಿದ್ರೆ ಮಾಡ್ತಿದಾರೆಂದುಕೊಂಡ್ರ?

ತಂದೆ: ಮಗೂ, ನೀನು ಮದುವೆ ಮಾಡ್ಕೊಳ್ಳೊ ಹಾಗಿದ್ರೆ ನಿನ್ನೆ ನಮ್ಮ ನೇಗೆ ಬಂದಿದ್ನಲ್ಲಾ ಆ ಹುಡುಗನನ್ನೆ, ಮಾಡಿಕೊ, ಬಹಾಳ ಸಂಭಾವಿತ, ಬಹಾಳ ಒಳ್ಳೆ ಹುಡುಗ...

ಮಗಳು: ನಿಂಗೆ ಹ್ಯಾಗೆ ಗೊತಪ್ಪ?

ತಂದೆ: ನೋಡು. ಅವನು ನಮ್ಮನೇಗೆ ಬರೋಕೆ ಶುರುಮಾಡಿ ಒಂದು ಒಂದೂವರೆ ವರ್ಷವೇ ಆಗಿರಬೇಕು. ಆಗಿನಿಂದಲೂ ನಾನು ಅವನಿಂದ ಸಾಲ ಇಸ್ಕೋತ್ಲೇ ಇದ್ದೇನೆ. ಆದರೂ ನಮ್ಮನೇಗೆ ಬರತ್ಲೇ ಇದ್ದಾನೆ....

*

ಕಳೆಯುವ ಲೆಕ್ಕ ಹೇಳಿಕೊಡುತ್ತಿದ್ದ ಮೇಡಂ ಕೇಳಿದಳು. "ನೋಡಮ್ಮ ನಿನಗೆ ಹತ್ತು ಬೆರಳಿವೆ. ಎಡಗೈಲಿ ಮೂರು ಬೆರಳು ಹೋಗಿ ಬಿಟ್ಟರೆ ಏನಾಗುತ್ತದೆ ಹೇಳು?"

ಮುದ್ದು ಶಿಷ್ಯಳು ಹೇಳಿದಳು: "ಪಿಟೀಲು ಬಾರಿಸಲಿಕ್ಕಾಗಲ್ಲ ಮೇಡಂ."

—ಹಲ್ಲಾಡಿ ಕೇಶವ ಪ್ರಭು

*

ಘಂಟೆ ಬಾರಿಸುತ್ತಲೇ ಪ್ರೊಫೆಸರರು ಕ್ಲಾಸಿನಲ್ಲಿ ಪ್ರವೇಶಿಸಿದರು. ಉದಾಸರಾದ ಪ್ರೊಫೆಸರರು ಆ ದಿನ ಯಾವ ಪಾಠವನ್ನು ಹೇಳಲೂ ಮನಸ್ಸು ಮಾಡಲಿಲ್ಲ. ವಿದ್ಯಾರ್ಥಿಗಳೋ ತಮ್ಮ ಪಾಠ ಓದಿ ಮನನ ಮಾಡಿಕೊಂಡೇ ಬಂದಿದ್ದರು.

"ಪ್ರೊಫೆಸರರು ಯಾವುದೇ ಪ್ರಶ್ನೆ ಕೇಳಲಿ, ನಾವು ಉತ್ತರಿಸುವೆವು!" ಎಂಬ ದಮಕಿನಲ್ಲಿಯೇ ವಿದ್ಯಾರ್ಥಿಗಳಿದ್ದರು!

ಪ್ರೊಫೆಸರರು ಎದ್ದು ನಿಂತು "ಒಳ್ಳೇದು! ಯಾರಿಗೆ ತಾವು ಕತ್ತೆಗಳೆಂದೆನಿಸುವುದೋ ಅವರು ಎದ್ದು ನಿಲ್ಲಿರಿ!"

ಯಾರೂ ಎದ್ದು ನಿಲ್ಲಲಿಲ್ಲ. ಕೆಲ ವೇಳೆಯ ನಂತರ ವಿದ್ಯಾರ್ಥಿಯೊಬ್ಬನು ಸಾವಕಾಶವಾಗಿ ಎದ್ದು ನಿಂತ....

ಪ್ರೊಫೆಸರರು "ಏನು ನೀನು ಕತ್ತೆ-ಯೋ?" ಎಂದರು.

"ಊಹೂಂ! ಅಲ್ಲ ಸಾರ್!" ಅವನು ಉತ್ತರಿಸಿದ.

"ಮತ್ತೇಕೆ ಎದ್ದು ನಿಂತಿರುವಿ?" ಪ್ರೊಫೆಸರರು ಪ್ರಶ್ನಿಸಿದರು.

"ಏನು ಮಾಡಲಿ ಸಾರ್! ನೀವೊಬ್ಬರೇ ಎದ್ದು ನಿಂತುದನ್ನು ಕಂಡು ಇಡೀ ಕ್ಲಾಸ್ ನಕ್ಕಿತು! ಅದಕ್ಕಾಗಿಯೇ ನಾನೊಬ್ಬನು ಎದ್ದು ನಿಂತೆ!"

—ಕೆ. ಎಸ್. ಪೂರ್ಣಚಾರ

*

ಇಬ್ಬರು ತರುಣ ಮಿತ್ರರು ಸಮುದ್ರದಲ್ಲಿ ನಾವೆಯೊಂದರಲ್ಲಿ ಪ್ರವಾಸ ಮಾಡುತ್ತಿದ್ದರು. ಮಾತಿನಲ್ಲಿ ಮೈಮರೆತು ದೂರದ ವರೆಗೆ ಹೋದಾಗ ಕತ್ತಲಾಗತೊಡಗಿತ್ತು. ಕತ್ತಲಲ್ಲಿ ಆ ತರುಣ ಪ್ರವಾಸಿಕರ ನಾವೆ ಹೊಯ್ದಾಡಿ ಅರ್ಧ ಮುಳುಗುವುದರಲ್ಲಿತ್ತು. ಒಬ್ಬ ತರುಣ ಹೌಹಾರಿ ಆಕಾಶದತ್ತ ಮುಖ ಮಾಡಿ ಕೈ-ಜೋಡಿಸಿ "ಹೇ ಪರಮೇಶ್ವರನೆ, ನಾನಿದುವರೆಗೆ ಎಷ್ಟೊ ಪಾಪ ಮಾಡಿರಬಹುದು. ಇದೊಂದು ಬಾರಿ ನನ್ನನ್ನು ಜೀವದಿಂದು-ಳಿಸಿದರೆ ನಿನಗೆ ವಚನ ಕೊಡುವೆ— ಮುಂದೆ ನಾನೆಂದೂ ಪಾಪ....." ಅವನ ಮಾತನ್ನು ಅರ್ಧಕ್ಕೆ ತಡೆದು ಆ ಇನ್ನೊಬ್ಬ ತರುಣ ನುಡಿದ:

"ನಿಲ್ಲು. ಈಗಲೇ ವಚನ ಕೊಡಬೇಡ! ನಮ್ಮನ್ನುಳಿಸಲು ಇನ್ನೊಂದು ನಾವೆ ಇತ್ತ ಬರುವಂತಿದೆ." —"ಅಂಬಿಕಾ"

ಅಣುಬಾಂಬು ಇದನ್ನುಮೂಲೆಗೊತ್ತಿತೇ?

ಯಮದೂತ ತೊಗಲುಬಾವಲಿಗಳು



ಅಮೇರಿಕವು ಅಣುಬಾಂಬನ್ನು ಶೋಧಿಸಿದ್ದರಿಂದಲೇ ಪ್ರಬಲ ಪ್ರತಾಪಿಯಾದ ಜಪಾನು ಶರಣಾಗತವಾಯಿತು, ದ್ವಿತೀಯ ಮಹಾಯುದ್ಧ ಸಮಾಪ್ತಿಗೆ ನಾಂದಿಯಾಯಿತು ಎಂದು ಜಗತ್ತು ತಿಳಿದಿದೆ. ಇದು ಸತ್ಯವೂ ಹೌದು. ಆದರೆ ಅಣುಬಾಂಬಿನ ಶೋಧವಾಗಿರದಿದ್ದರೂ ಜಪಾನು ಅಮೇರಿಕಕ್ಕೆ ಮಣಿಯಲೇ ಬೇಕಾದಂಥ ಪ್ರಸಂಗವಿತ್ತು. ಡಾ. ಲಿಟಲ್ ಎಸ್. ಆಡಮ್ಸ್ ಎಂಬವರು ಟೋಕಿಯೊ ನಗರವನ್ನು ಸುಟ್ಟುಭಸ್ಮ ಮಾಡಿ ಜಪಾನು ಶರಣು ಬರುವಂತೆ ಮಾಡುವ ಅಪೂರ್ವ ವಿಧಾನವೊಂದನ್ನು ಹುಡುಕಿದ್ದರು.

ತೊಗಲುಬಾವಲಿಗಳ ಮೂಲಕ ಟೋಕಿಯೊವನ್ನು ಧ್ವಂಸ ಮಾಡಬೇಕು ಎನ್ನುವುದೇ ಡಾ. ಆಡಮ್ಸ್‌ರ ಸೂಚನೆಯಾಗಿತ್ತು. ಏನು ಹುಚ್ಚಾಟ ಎಂದು ನಗಬೇಕಾಗಿಲ್ಲ. ಟೋಕಿಯೊ ನಗರವನ್ನು ಸುಟ್ಟುಬೂದಿ ಮಾಡುವ ಅಸ್ತ್ರಗಳನ್ನು ಹೊತ್ತೊಯ್ಯಲು ತೊಗಲುಬಾವಲಿಗಳನ್ನು ಯೋಜಿಸಬೇಕು ಎಂದು ಡಾ. ಆಡಮ್ಸ್ ಹೇಳಿದ್ದರು. ಪ್ರತಿಯೊಂದೂ ಒಂದೊಂದು ಔಂಸು ಭಾರದ ಅತ್ಯಂತ ಜ್ವಾಲಾಗ್ರಹಿ ವಸ್ತುಗಳ ಪುಟ್ಟ ಬಾಂಬನ್ನು ಹೊತ್ತ ಲಕ್ಷಾವಧಿ ತೊಗಲುಬಾವಲಿಗಳನ್ನು ಪ್ಯಾರಾಶೂಟಗಳ ಮೂಲಕ ಟೋಕಿ-

ವಿವಿಧ ಮೂಲಗಳಿಂದ

ಯೊ ನಗರದಲ್ಲಿ ಇಳಿಸಿಬಿಟ್ಟರೆ ಈ ವಿನಾಶ ಕಾರ್ಯ ಜರುಗಿಬಿಡುತ್ತಿತ್ತು.

೧೯೪೧, ಡಿಸೆಂಬರ್ ೭ ರಂದು ಮಧ್ಯಮ ವಯಸ್ಸಿನ ಸರ್ಜನ್ನರೂ ಸಂಶೋಧಕರೂ ಆದ ಲಿಟಲ್ ಎಸ್. ಆಡಮ್ಸರು ಪೆನ್‌ಸಿಲ್ವಾನಿಯಾದ ತಮ್ಮ ಮನೆಯಿಂದ ಕಾರಿನಲ್ಲಿ ವಾಶಿಂಗ್ಟನ್ನಿಗೆ ಹೊರಟಿದ್ದರು. ಕಾರಿನ ರೇಡಿಯೊದಿಂದ ಕಾರ್ಯಕ್ರಮಗಳು ಕೇಳಿ ಬರುತ್ತಿದ್ದವಾದರೂ ಡಾಕ್ಟರರ ಮನಸ್ಸೆಲ್ಲ ಅಮೇರಿಕದ ಮರುಭೂಮಿಯಲ್ಲಿ ಹುಲ್ಲು ಬೆಳೆಯುವಂತೆ ಮಾಡುವುದು ಹೇಗೆ ಎಂಬ ವಿಚಾರದಲ್ಲಿ ಮುಳುಗಿತ್ತು.

ಕಾರ್ಯಕ್ರಮದಲ್ಲಿ ಪರ್ಲ್‌ಹಾರ್ಬರ್ ದುರಂತದ ಸುದ್ದಿ ಬಂತು. ಜಪಾನೀಯರ ಈ ಸಾಹಸದ ಸುದ್ದಿ ವಿಚಾರ ಮಗ್ನರಾದ ಡಾಕ್ಟರರನ್ನು ಬಡಿದೆಬ್ಬಿಸಿತು. ವಾಶಿಂಗ್ಟನ್ನಿನಲ್ಲಿ ಅವರು ತಮ್ಮ ಹೊಟೆಲ್ಲಿಗೆ ಹೋಗದೆ ಅಮೇರಿಕದ ಕಾಂಗ್ರೆಸ್ಸಿನ ಸದಸ್ಯ ಜೆನಿಂಗ್ಸ್ ರಾಂಡೋಲ್ಫರ ಮನೆಗೆ ಹೋದರು. ಡಾಕ್ಟರ್ ಆಡಮ್ಸ್ ಹೋದವರೇ ಬಾಗಿಲಿನಿಂದಲೆ "ತೊಗಲುಬಾವಲಿಗಳು! ಇದಕ್ಕಿರುವ ಒಂದೇಒಂದು ಉತ್ತರವೆಂದರೆ ತೊಗಲು ಬಾವಲಿಗಳು" ಎಂದರು.

ರಾಂಡೋಲ್ಫರಿಗೆ ಆಶ್ಚರ್ಯವಾಯಿತು. ಡಾಕ್ಟರರನ್ನು ಅವರು ಒಂದು ಖುರ್ಚಿಯಲ್ಲಿ ಕೂಡ್ರಿಸಿದರು. ಡಾಕ್ಟರರು ತಮ್ಮ ವಿಚಿತ್ರ ಉದ್ಗಾರದ ವಿವರಣೆಯನ್ನೀಯತೊಡಗಿದರು :

"ನಾನು ಹುಚ್ಚನೆಂದು ನೀವು ತಿಳಿದುಕೊಳ್ಳಬೇಕಾದ್ದಿಯಿಲ್ಲ. ಆದರೆ ನಾನು ಹೇಳಲೇಬೇಕಾದ್ದನ್ನು ಹೇಳುವೆ. ಎರಡು ತಿಂಗಳ ಹಿಂದೆ ನಾನು ಕಾರ್ಲ್ಸ್‌ಬಾಡ್ ಕ್ಯಾವರ್ನ್ಸ್‌ಗೆ ಹೋಗಿದ್ದೆ. ಮೂರೂಸಂಜೆಯ ಹೊತ್ತಿಗೆ ಗವಿಯೊಂದರಿಂದ ಸಹಸ್ರಗಟ್ಟಲೆ ಸಂಖ್ಯೆಯಲ್ಲಿ ತೊಗಲುಬಾವಲಿಗಳು ಹಾರಿ ಬಂದುದನ್ನು ಕಂಡೆ. ಆ ದೃಶ್ಯ ಭಯಾನಕವೇ ಆಗಿತ್ತು. ಆ ಒಂದೇ ಒಂದು ಗವಿಯಲ್ಲಿ ಎಷ್ಟು ಬಾವಲಿಗಳಿದ್ದವೆಂದರೆ ಒಳಗಿನವೆಲ್ಲ ಹೊರಬರಲು ಮೂರು ತಾಸುಗಳೇ ಬೇಕಾದವು. ತೊಗಲುಬಾವಲಿಗಳ ಗೊಬ್ಬರ ವಿಚಾರವೊಂದು ನನ್ನ ತಲೆಯಲ್ಲಿದ್ದುದರಿಂದ ನಾನು ಅವುಗಳ ಬಗ್ಗೆ ಚೌಕಶಿ ಮಾಡಿದೆ.

"ಹಕ್ಕಿಗಳು ಮತ್ತು ಹಾರುವ ಹುಳಗಳಿಗಿಂತ ಬಾವಲಿಗಳೇ ಹೆಚ್ಚು ಸಮರ್ಥವಾಗಿ ಹಾರಬಲ್ಲವು ಎಂಬುದು ನಿಮಗೆ ಗೊತ್ತಿರಬೇಕು. ಹೆಣ್ಣುಬಾವಲಿ ನಾಲ್ಕು ಮರಿಗಳನ್ನು ಕಟ್ಟಿಕೊಂಡು ಹಾರುತ್ತದೆ. ಈ ಮರಿಗಳ ತೂಕ ತಾಯಿಯ ತೂಕಕ್ಕೆ ಇಮ್ಮಡಿಯಾಗಿರುತ್ತದೆ. ಬಾವಲಿಗಳು ಯಾವಾಗಲೂ ಕತ್ತಲೆಯ ಸ್ಥಳವನ್ನೆ ಹುಡುಕಿ ಆಶ್ರಯಪಡೆಯುತ್ತವೆ.

"ಒಂದು ಮಾತನ್ನು ಯೋಚಿಸಿ. ಪ್ರತಿಯೊಂದೂ ಒಂದು ಔಂಸು ಭಾರದ ಸ್ಫೋಟಕ ಬಾಂಬನ್ನು ಹೊತ್ತ ಹತ್ತು ಲಕ್ಷ ಬಾವಲಿಗಳನ್ನು ಟೋಕಿಯೊ ನಗರದಲ್ಲಿ ಪ್ಯಾರಾಶೂಟಗಳಿಂದ ರಾತ್ರಿ ಕಾಲದಲ್ಲಿ ಇಳಿಸಿಬಿಟ್ಟರೆ ಏನಾದೀತು ಹೇಳಿ. ಅವೆಲ್ಲವೂ ಬೆಳಗಾಗುವುದರೊಳಗೆ ನಗರದ ಮೂಲೆಮೂಲೆಯಲ್ಲೂ ಆಶ್ರಯದ ಸ್ಥಾನ ಹುಡುಕಿಕೊಂಡು ಅಡಗಿ ಕುಳಿತುಕೊಳ್ಳುವವು. ಇನ್ನು ಇಪ್ಪತ್ತುನಾಲ್ಕು ತಾಸುಗಳಲ್ಲಿ ನಿಮ್ಮ ನಗರ ಸುಟ್ಟುಬೂದಿಯಾಗುವುದು ಎಂಬ ಎಚ್ಚರಿಕೆಯನ್ನೀಯುವ ಹಸ್ತಪ್ರತಿಗಳನ್ನು ಚಲ್ಲಿ ಜನರನ್ನು ಉಳಿಸಬಹುದು. ಮನೆಗಳು, ಶಸ್ತ್ರಾಸ್ತ್ರ ಕಾರಖಾನೆಗಳು, ಸೈನಿಕ ಠಾಣ್ಯಗಳು ಎಲ್ಲ ನಾಶವಾದ ಮೇಲೆ ಜಪಾನರು ಶರಣು ಬಂದೇ ಬರುತ್ತಾರೆ."

ರಾಂಡೋಲ್ಫರು ತಮ್ಮ ವರ್ಚಸ್ಸಿನಿಂದ ಅಧ್ಯಕ್ಷ ರೂಜವೆಲ್ಟರ ಕಿವಿಗೆ ಈ ಸುದ್ದಿ ಹಾಕಿದರು. ಅವರಿಗೆ ಅದರಲ್ಲಿ ಆಸಕ್ತಿಯುಂಟಾಯಿತು. ಪರ್ಲ್‌ಹಾರ್ಬರ್ ದುರಂತ ಸಂಭವಿಸಿ ಐದು ವಾರಗಳು ಕಳೆದವು ಎನ್ನುವಷ್ಟರಲ್ಲಿ ೧೯೪೨, ಜನವರಿ ೧೨ ರಂದು "ಆಡಮ್ಸ್ ಯೋಜನೆ" ಅತ್ಯಂತ ಗುಪ್ತ ರೀತಿಯಲ್ಲಿ ಪ್ರಾರಂಭವಾಯಿತು.

ಹಣ ಕೈಗೆ ಬಂದಿರದಿದ್ದರೂ ಡಾ. ಆಡಮ್ಸ್ ಕೆಲಸಕ್ಕಾರಂಭಿಸಿದರು. ತಜ್ಞರಿಂದ ಅವರು

ಅಮೇರಿಕದಲ್ಲಿ ೨೫೦ ಜಾತಿಯ ಬಾವಲಿಗಳಿದ್ದಾವೆಂದೂ ಆದರೆ ಸ್ಫೋಟಕ ಬಾಂಬನ್ನೊಯ್ಯಲು ಎಲ್ಲಕ್ಕಿಂತ ಮೆಕ್ಸಿಕನ್ ಬಾವಲಿಯೆ ಹೆಚ್ಚು ಯೋಗ್ಯವಾಗಬಹುದೆಂದೂ ಕೇಳಿಕೊಂಡರು. ಮೆಕ್ಸಿಕೋದ ನಿರ್ಜನ ಗವಿಗಳಲ್ಲಿ ಈ ಬಾವಲಿಗಳು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ವಾಸಿಸುತ್ತಿದ್ದವು. ಅಲ್ಲಿ ಅವುಗಳನ್ನು ಅಧಿಕ ಸಂಖ್ಯೆಯಲ್ಲಿಯೂ ಗುಪ್ತವಾಗಿಯೂ ಹಿಡಿಯಬಹುದಾಗಿತ್ತು. ಒಂದು ಔಂಸು ತೂಕದ ಬಾವಲಿ ಒಂದು ಔಂಸು ತೂಕದ ಬಾಂಬನ್ನು ಒಯ್ಯುವುದು. ವಾಶಿಂಗ್ಟನ್ನಿನ ವೈಜ್ಞಾನಿಕರು ಒಂದು ಔಂಸು ತೂಕದ ಬಾಂಬನ್ನು ತಯಾರಿಸಲಾರರೇ !

ಒಂದು ಬಾವಲಿ ಒಂದೇ ಒಂದು ರಾತ್ರಿಯಲ್ಲಿ ತನ್ನ ತೂಕದ ೧೨ ಪಟ್ಟು ತೂಕದಷ್ಟು ಕೀಟಕಗಳನ್ನು ಭಕ್ಷಿಸಿ ಜೀರ್ಣಿಸಿಕೊಳ್ಳುವದೆಂದು ಗೊತ್ತಾದಾಗ ಈ ಯೋಜನೆಗೆ ಅಪಮೃತ್ಯುವಿನ ಭಯ ಕಾಣಿಸಿತು. ವಿಮಾನ ದಾಳಿಯಲ್ಲಿ ಉಪಯೋಗಿಸುವ ಹತ್ತು ಲಕ್ಷ ಬಾವಲಿಗಳಿಗೆ ದಿನದ ಆಹಾರವೆಂದು ೩೦೦ ಟನ್ ಕೀಟಕಗಳನ್ನು ಒದಗಿಸಬೇಕು. ಅಮೇರಿಕದ ಇಡೀ ನೌಕಾಪಡೆ ಕೂಡ ಜಪಾನದ ಮೇಲೆ ದಾಳಿ ಮಾಡುವದಕ್ಕಾಗಿ ಒಯ್ಯುವ ಬಾವಲಿಗಳಿಗಾಗಿ ಅವು ಅಲ್ಲಿಗೆ ಮುಟ್ಟುವವರೆಗೆ ಬೇಕಾಗುವಷ್ಟು ಆಹಾರವನ್ನು ಒಯ್ಯುವುದು ಸಾಧ್ಯವಿರಲಿಲ್ಲ. ಮತ್ತೆ ಅಷ್ಟೊಂದು ಬೃಹತ್ ಪ್ರಮಾಣದಲ್ಲಿ ಕೀಟಕಗಳನ್ನು ಹಿಡಿಯುವ ಪ್ರಶ್ನೆಯೂ ಇದ್ದಿತು.

ಆ ಮೇಲೆ ಪ್ರಯೋಗಗಳು ಇನ್ನೊಂದು ಮಾತನ್ನು ತೋರಿಸಿಕೊಟ್ಟವು ಉಷ್ಣತಾಮಾನವನ್ನು ೫೦°ಗಳಿಗೆ ಇಳಿಸಿದ ಕೂಡಲೆ ಬಾವಲಿಗಳು ಶೀತನಿದ್ರೆ (hibernation) ಗೊಳಗಾದವು. ಅದರಿಂದ ಆಹಾರದ ಸಮಸ್ಯೆ ಇಲ್ಲವಾಯಿತು ನಿಜ ಆದರೆ ಮತ್ತೊಂದು ವಿಪತ್ತು ಕಾದಿತ್ತು. ಹಾರ್ವರ್ಡ್‌ನಲ್ಲಿಯ ಬಾವಲಿಗಳು ವಿಮಾನ ಪ್ರವಾಸಕ್ಕೆ ಒಗ್ಗಲಿಲ್ಲ. ಮೇಲಿನಿಂದ ಇಳಿಸಿದಾಗ ಅವು ನೆಲಕ್ಕೆ ಅಪ್ಪಳಿಸಿದವೇ ವಿನಾ ಸರಿಯಾಗಿ ಇಳಿಯಲಿಲ್ಲ. ಡಾ. ಆಡಮ್ಸರು ಅದಕ್ಕೂ ಪರಿಹಾರ ಹೇಳಿದರು. ಬಾವಲಿಯನ್ನು ಕೆಳಕ್ಕಿಳಿಸಿದಾಗ ಅದಕ್ಕೆ ಹಾರುವ ಗತಿ ಪಡೆಯಲು ಕನಿಷ್ಠ ಮೂವತ್ತು ಅಡಿ ಸ್ಥಳವಾದರೂ ಬೇಕು. ಆದ್ದರಿಂದ ಅವನ್ನು ಸಾಕಷ್ಟು ಎತ್ತರದಿಂದ ಕೆಳಗಿಳಿಸಬೇಕು ಎಂದರವರು. ಅವರ ಹೇಳಿಕೆಯಂತೆ ಪ್ರಯೋಗ ಮಾಡಿದಾಗ ಈ ವಿಘ್ನವೂ ದೂರಾಯಿತು.

ಇನ್ನು ಬಾವಲಿಗಳು ತಮಗೆ ಕಟ್ಟಿದ ಬಾಂಬುಗಳನ್ನು ಬೇರ್ಪಡಿಸುವುದು ಹೇಗೆ ? ಬಾಗಿಲು ಮುಚ್ಚಿದ ಕೋಣೆಯಲ್ಲಿ ಪ್ರಯೋಗ ನಡೆಸಿದಾಗ ಬಾಂಬು ಹೊತ್ತ ಬಾವಲಿ ಸುರಕ್ಷಿತ ಸ್ಥಳ ದೊರೆತೊಡನೆ ಅಂಗಾತಾಗಿ ಮಲಗಿ ಕಚ್ಚಿ, ಉಗುರಿನಿಂದ ಪರಚಿ ಬಾಂಬನ್ನು ತನ್ನ ದೇಹದಿಂದ ಪ್ರತ್ಯೇಕಿಸುವುದು ಎಂದು ಕಂಡುಬಂದಿತು. ಆದರೆ ದೀರ್ಘ ಅಂತರದ ಪ್ರವಾಸದ ನಂತರ ದಣಿದ ಬಳಿಕವೂ ಬಾವಲಿ ಹೀಗೇ ಮಾಡಬಲ್ಲುದೇ ಎಂಬುದು ಸಮಸ್ಯೆಯಾಗಿತ್ತು.

ಆಗ ಒಬ್ಬ ತರುಣ ವಿಜ್ಞಾನಿ ಪ್ರಯೋಗಕ್ಕಾಗಿ ನೌಕಾಪಡೆಯ ಹ್ಯಾಂಗರುಗಳು ಸಿಕ್ಕರೆ ಅನುಕೂಲವೆಂದು ಸೂಚಿಸಿದ. ಹ್ಯಾಂಗರುಗಳ ವ್ಯವಸ್ಥೆಯಾಯಿತು. ಪ್ರಯೋಗಕ್ಕೆ ಆರಂಭವಾಯಿತು. ಬಾಂಬು ಹೊತ್ತ ಬಾವಲಿ ೨೦ ಮೈಲು ದೂರದ ವರೆಗೆ ಹಾರಬಲ್ಲುದು ಎಂದು ತಿಳಿಯಿತು. ಸಾಮಾನ್ಯ ಸ್ಥಿತಿಯಲ್ಲಿ ಒಟ್ಟೊಟ್ಟಾಗಿ ಹಾರುವ ಬಾವಲಿಗಳು ಬಾಂಬು ಕಟ್ಟಿದಾಗ ಅದೇಕೊ ನಾಚಿಕೊಂಡಂತಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಹಾರುತ್ತಿದ್ದವು. ಹತ್ತು ಲಕ್ಷ ಬಾವಲಿಗಳನ್ನು ಟೋಕಿಯೊದಲ್ಲಿ ಬಿಟ್ಟರೆ ಅವು ಹತ್ತು ಲಕ್ಷ ಸ್ಥಳಗಳನ್ನು ಹುಡುಕಿಕೊಂಡೇ ಕೂಡ್ರುವವಲ್ಲದೆ ಗುಂಪುಗುಂಪಾಗಿ ಆಶ್ರಯ ಪಡೆಯುವುದಿಲ್ಲ ಎಂದು ಸಿದ್ಧವಾಯಿತು.

ಸಂಭಾವ್ಯ ಅಡ್ಡಿ ಆತಂಕಗಳನ್ನೆಲ್ಲ ಯೋಚಿಸಿ ನಿವಾರಣೆಯ ಉಪಾಯಗಳನ್ನು ಕಂಡುಹಿಡಿದು ಕೊನೆಯ ಪ್ರಯೋಗದ ಸಿದ್ಧತೆ ಮಾಡಲ್ಪಟ್ಟಿತು.

ಟೆಕ್ಸಾಸಿನ ಎಲ್ ಪಾಸೊ ಎಂಬಲ್ಲಿ ೧೧೨೦ ಬಾವಲಿಗಳನ್ನು ನಕಲಿ ಬಾಂಬು ಸಹಿತ ೨೫,೦೦೦ ಅಡಿಗಳ ಎತ್ತರದಿಂದ ಪ್ಯಾರಾಶೂಟಿನಲ್ಲಿ ಇಳಿಸಿದರು.

ಆ ಮೇಲೆ ನಿಜ ಬಾಂಬುಗಳ ಸಹಿತವಾದ ಪ್ರಯೋಗಕ್ಕೆ ಕೈಹಾಕಿದರು. ಕಾರ್ಲ್ಸ್‌ಬಾಡಿನ ದಕ್ಷಿಣದಲ್ಲಿ ೧೨೫೦ ಚೌರಸ ಮೈಲು ವಿಸ್ತೀರ್ಣವಾದ ಬಟ್ಟ ಬಯಲಿನಲ್ಲಿ ನಿಜಬಾಂಬುಗಳಿದ್ದ ಬಾವಲಿಗಳನ್ನು ಇಳಿಸಿದರು. ಪ್ರಯೋಗ ಯಶಸ್ವಿಯಾಯಿತು.

ಈ ಘಟ್ಟದಲ್ಲಿ ದುರಂತವೊಂದು ಸಂಭವಿಸಿತು. ಸೈನ್ಯಶಾಖೆ ವರಿಷ್ಠರ ಮನವರಿಕೆಗಾಗಿ ಕೆಲ ಫೋಟೋಗಳನ್ನು ಕಳಿಸಲು ನಿಶ್ಚಯಿಸಿ ಕಾರ್ಲ್ಸ್‌ಬಾಡಿನ ವಿಮಾನ ನಿಲ್ದಾಣಕ್ಕೆ ಕೆಲವು ಫೊಟೋಗ್ರಾಫರರನ್ನು ಕಳಿಸಿತು. ಅವರು ಬಾವಲಿಗಳ, ಅವುಗಳನ್ನು ಒಯ್ಯುವ ಪೆಟ್ಟಿಗೆಗಳ, ವಿಮಾನುಗಳ, ಬಾಂಬುಗಳ, ವೈಮಾನಿಕರ ಫೋಟೋಗಳನ್ನು ತೆಗೆದರು.

ಈ ಫೋಟೋಗ್ರಾಫರರು ಆಮೇಲೆ ಬಾವಲಿಗಳ ಶೀತ ನಿದ್ದೆ ಕೋಣೆಗೆ ಹೋಗಿ ಒಂದಿಪ್ಪತ್ತು ಬಾವಲಿಗಳಿಗೆ ನಿಜಬಾಂಬನ್ನು ಕಟ್ಟಿ ಹೊರಗೆ ತಂದು ಫೋಟೋ ತೆಗೆಯುವ ಉದ್ದೇಶದಿಂದ ಅವನ್ನು ಒಂದು ತಂತಿಗೆ ಕಟ್ಟಿದರು. ಆದರೆ ಹೀಗೆ ಮಾಡುವಾಗ ಡಾ. ಆಡಮ್ಸರು ಟ್ಯಾಂಬಾಂಬಿನ ಬಗ್ಗೆ ಹೇಳಿದ್ದ ಸುರಕ್ಷಿತತೆ ವಿಧಾನವನ್ನೂ ಶೀತ ನಿದ್ದೆಗೊಳಗಾಗಿರುವ ಬಾವಲಿಯಲ್ಲಿ ಮರುಭೂಮಿಯ ಸೂರ್ಯ ಮಾಡಬಹುದಾದ ಚಮತ್ಕಾರವನ್ನೂ ಮರೆತರು.

ಫೋಟೊಗ್ರಾಫರರು ಕ್ಯಾಮರಾ ಸಜ್ಜುಗೊಳಿಸುತ್ತಿದ್ದಂತೆಯೆ ತಂತಿಗೆ ತೂಗಿಹಾಕಿದ್ದ ಬಾವಲಿಗಳು ನಿದ್ದೆಯಿಂದೆಚ್ಚತ್ತು ಹಾರಿಹೋದವು. ಅವುಗಳನ್ನು ಹುಡುಕಲು ಮಾಡಿದ ಯತ್ನವೆಲ್ಲ ವಿಫಲವಾಯಿತು. ಕೂಡಲೆ ಅಗ್ನಿಶಾಮಕ ದಲಗಳನ್ನು ಕಾವಲಿಡಲಾಯಿತು. ಬೆಂಕಿ ಹಬ್ಬದಂತೆ ಮುಂಜಾಗ್ರತೆಗಳನ್ನು ವಹಿಸಲಾಯಿತು.

ಆದರೆ ಯಾವುದೂ ಉಪಯೋಗವಾಗಲಿಲ್ಲ. ವಿಮಾನ ನಿಲ್ದಾಣದ ಮುಖ್ಯ ಹ್ಯಾಂಗರು ಮೊದಲು ಅಗ್ನಿಗಾಹುತಿಯಾಯಿತು. ಆ ಮೇಲೆ ಅಲ್ಲಿಯ ಕಚೇರಿ, ನೀರು ತುಂಬಿಟ್ಟ ಟಾಕಿ ಎಲ್ಲ ಸುಟ್ಟು ಹೋದವು.

ಬಾವಲಿಗಳ ಸಾಮರ್ಥ್ಯಕ್ಕೆ ಸಾಕ್ಷಿಯೇನೋ ಸಿಕ್ಕಿತ್ತು. ಆದರೆ ಈ ಬಾವಲಿಗಳು ಡಾ. ಆಡಮ್ಸರ ಯೋಜನೆಯನ್ನೇ ಸುಟ್ಟುಹಾಕಿಬಿಟ್ಟವು. ಫೋಟೊಗ್ರಾಫರರ ಮೂರ್ಖತನವನ್ನು ಬದಿಗೆ ಸರಿಸಿ ವರಿಷ್ಠಾಧಿಕಾರಿಗಳು "ಈ ಯೋಜನೆಯ ಕಾರ್ಯವನ್ನು ಇಲ್ಲಿಗೆ ನಿಲ್ಲಿಸಿಬಿಡಲಾಗಿದೆ" ಎಂದರು.

ಇದಾದದ್ದು ೧೯೪೩ರ ವಸಂತ ಋತುವಿನಲ್ಲಿ. ಈ ೧೬ ತಿಂಗಳು ಡಾ. ಆಡಮ್ಸರು ಈ ಯೋಜನೆಗಾಗಿ ಅವಿಶ್ರಾಂತವಾಗಿ ದುಡಿದಿದ್ದರು. ಇಷ್ಟಾದರೂ ನೌಕಾಪಡೆ ಡಾ. ಆಡಮ್ಸರ ಸಹಾಯಕ್ಕೆ ಬಂತು. ಆದರೆ ಕೆಲ ತಿಂಗಳ ನಂತರ ಮತ್ತೆ ಯೋಜನೆಯ ಕಾರ್ಯವನ್ನು ನಿಲ್ಲಿಸಲು ಅಪ್ಪಣೆಯಾಯಿತು.

ಮುಂದೆ ಎರಡು ವರ್ಷಗಳ ವರೆಗೆ ಡಾ. ಆಡಮ್ಸರಿಗೆ ಮನಃಸ್ವಾಸ್ಥ್ಯವಿರಲಿಲ್ಲ. ಅಷ್ಟರಲ್ಲಿ ಹಿರೊಶಿಮಾ ಮತ್ತು ನಾಗಾಸಾಕಿಯ ಮೇಲೆ ಅಣುಬಾಂಬು ಬಿತ್ತು. ಪ್ರಬಲ ಸಂಹಾರಕ ಅಸ್ತ್ರ ಮಾನವನ ಕೈಗೆ ಬಂದಿತು.

ಈ ಅಣುಬಾಂಬೇ ಡಾ. ಆಡಮ್ಸರ ಬಾವಲಿ ಯೋಜನೆಯನ್ನು ತಿರಸ್ಕರಿಸುವುದಕ್ಕೆ ಕಾರಣವಾಯಿತೇ ? ಉತ್ತರ ರಹಸ್ಯವಾಗಿಯೆ ಇದೆ.

ಡಾ. ಆಡಮ್ಸರು ಮಾತ್ರ ಎದೆಗುಂದಿ ಕೈಚೆಲ್ಲಲಿಲ್ಲ. ತಮ್ಮ ೬೫ ನೆಯ ವಯಸ್ಸಿನಲ್ಲಿ ಅಂದರೆ ೧೯೪೭ ರಲ್ಲಿ ಹೊಸ ಶೋಧವೊಂದಕ್ಕೆ ಕೈಹಾಕಿ ಯಶಸ್ವಿಗಳಾದರು. ಅವರು ವಿಮಾನದಿಂದ ಹುಲ್ಲಿನ ಬೀಜ ಬಿತ್ತುವ ತಂತ್ರವನ್ನು ಶೋಧಿಸಿದರು. ಇದರಿಂದ ಮರುಭೂಮಿಯ ಎಷ್ಟೋ ಪ್ರದೇಶದಲ್ಲಿ ಸಮೃದ್ಧವಾದ ಹುಲ್ಲುಗಾವಲು ಎದ್ದು ನಿಲ್ಲುವಂತಾಗಿದೆ. *

ಇಟಲಿಯ ಈ ಧೀರೋದಾತ್ತನನ್ನು ಮೀರಿಸುವವರು
ಈ ಪ್ರಪಂಚದಲ್ಲಿ ಕಡಿಮೆ

ಮಹಾದೇಶಭಕ್ತ ಗಾರಿಬಾಲ್ಡಿ

ಪಾವೆಂ.

ಯಾವನೇ ಇಟಾಲಿಯನ್ನನ ಮುಂದೆ ಗಾರಿಬಾಲ್ಡಿಯ ಹೆಸರು ಹೇಳಿರಿ, ಆತನ ದೇಶಾಭಿಮಾನ ಉಕ್ಕೇರಿ ಹರಿಯುತ್ತದೆ. ಸಾಮಾನ್ಯ ಕುಲದಲ್ಲಿ ಹುಟ್ಟಿ, ನಾವಿಕನಾಗಿ ಕೆಲಸಮಾಡಿ, ಸ್ವಾತಂತ್ರ್ಯಯೋಧರ ಸೇನಾನಿಯಾಗಿ ಪರಿವರ್ತನೆ ಹೊಂದಿ, ಹರಿಹಂಚಾಗಿ ಪರಾಧೀನವಾಗಿದ್ದ ತನ್ನ ನಾಡನ್ನು ಏಕೀಕೃತ ಮತ್ತು ಸ್ವತಂತ್ರಗೊಳಿಸಿದ ಈ ಇಟಾಲಿಯನ್ ದೇಶಭಕ್ತನಷ್ಟು ನಿಃಸ್ವಾರ್ಥ ನಾಯಕರು ಯಾವ ದೇಶದಲ್ಲಾದರೂ ಅಪರೂಪವಾಗಿಯೇ ಸಿಗಬಹುದು.



ಜೂಲಿಯಸ್ ಸೀಜರ್‌ನಂಥ ಜಗದೇಕವೀರನನ್ನು ಪಡೆದ ಇಟಲಿ ೧೯ನೇ ಶತಮಾನದ ಆರಂಭದಷ್ಟು ಹೊತ್ತಿಗೆ, ಒಂದು "ಭೌಗೋಲಿಕ ಶಬ್ದ" ವಾಗಿ ಮಾತ್ರ ಉಳಿದಿತ್ತು. ನೆಪೋಲಿಯನ್ನನ ವಿಜಯಯಾತ್ರೆಯ ನಂತರ ಇಟಲಿಗೆ ಒಂದು ಸರಕಾರವಿರಲಿಲ್ಲ. ಆಸ್ಟ್ರಿಯನ್ ಸಾಮ್ರಾಜ್ಯ ಇಟಲಿಯ ಅರ್ಧ ಭಾಗವನ್ನು ಕಬಳಿಸಿತು. ಫ್ರೆಂಚರು ಒಂದು ಭಾಗವನ್ನು ತೆಗೆದುಕೊಂಡಿದ್ದರು. ಉಳಿದ ಭಾಗಗಳು ಅವರಿಬ್ಬರ ಕೈಗೊಂಬೆಗಳಲ್ಲಿ ಹಂಚಿಹೋಗಿದ್ದವು. ಸಂವಿಧಾನಾತ್ಮಕ ಆಳಿಕೆಗಳಾವವೂ ಉಳಿದಿರಲಿಲ್ಲ. ಎಲ್ಲೆಲ್ಲಿಯೂ ದಬ್ಬಾಳಿಕೆ ನಡೆದಿತ್ತು. ಸ್ವಾತಂತ್ರ್ಯ ಮತ್ತು ಐಕ್ಯಪ್ರೇಮಿಗಳು ಅಲ್ಲೊಂದು ಇಲ್ಲೊಂದು ಬಂಡಾಯವೆಬ್ಬಿಸುತ್ತಿದ್ದುದು ದಬ್ಬಾಳಿಕೆಗಾರರಿಗೆ ರಾಷ್ಟ್ರೀಯ ಭಾವನೆಯನ್ನು ಮಗ್ಗಲು ಮುರಿಯುವಂತೆ ಹತ್ತಿಕ್ಕಲು ಒಳ್ಳೇನೆವವಾಗುವುದಕ್ಕಿಂತ ಹೆಚ್ಚೇನೂ ಸಾಧಿಸುತ್ತಿರಲಿಲ್ಲ. ಕೆಲಕಾಲ ಫ್ರೆಂಚರ ಸೆರೆಯಾಳಾಗಿದ್ದ ಪೋಪನು ಈಗ ಇಟಲಿಯ ಮಧ್ಯಭಾಗದಲ್ಲಿ ಕ್ರಾಂತಿಕಾರರ ಭಯದಿಂದ ಗುಪ್ತ ಪೋಲೀಸರ ರಾಜ್ಯಭಾರವನ್ನು ನಡೆಸಿದ್ದನು. ದಕ್ಷಿಣ ಇಟಲಿ ಮತ್ತು ಸಿಸಲಿ ದ್ವೀಪಗಳನ್ನಾಳುತ್ತಿದ್ದ ಬೋರ್ಬನ್ ರಾಜ ಎರಡನೇ ಫ್ರಾನ್ಸಿಸ್ ಪ್ರಜೆಗಳ ಚಳವಳಿಯನ್ನು ಹತ್ತಿಕ್ಕಲು ಒಂದೇ ದಿನ ಮೆಸೀನಾ ನಗರದಲ್ಲಿ ಬಾಂಬುಗಳನ್ನೆಸೆದು ಸಾವಿರಾರು ಹೆಣಗಳು ಬೀದಿಯಲ್ಲಿ ಬೀಳುವಂತೆ ಮಾಡಿ

"ರಾಜಾಬೊಂಬ" ಎಂದು ಹೆಸರು ಗಳಿಸಿದ್ದ. ಇಟಾಲಿಯನ್' ಎಂದು ಹೇಳಬಹುದಾದ ಒಂದೇ ಆಳಿಕೆಯು ಪೀಡ್‌ಮಾಂಟ್ ಮತ್ತು ಸಾರ್ಡಿನಿಯಾದಲ್ಲಿತ್ತು. ಅದು ದುರ್ಬಲವಾಗಿತ್ತು. ಅದರ ವಿಸ್ತಾರವೂ ಕಡಿಮೆಯಿತ್ತು.

ಈ ಪಾಡಿನಲ್ಲಿದ್ದ ಇಟಲಿಯಲ್ಲಿ ಜೋಸೆಫ್ ಗಾರಿಬಾಲ್ಡಿ ಬಾಲ್ಯವನ್ನು ಕಳೆದಿದ್ದ. ೧೮೦೭ ಜುಲೈ ೪ ರಂದು ನೈಸ್ ಪಟ್ಟಣದಲ್ಲಿ ಜನ್ಮತಾಳಿದ ಆತನ ಮೇಲೆ ಇಟಲಿಯ ಏಕೀಕರಣ ಮತ್ತು ಯುರೋಪಿನ ಪುನರುಜ್ಜೀವನವನ್ನು ಕ್ರಾಂತಿ ಮತ್ತು ಗಣರಾಜ್ಯ ಸ್ಥಾಪನೆಯಿಂದ ಮಾಡಬೇಕೆಂದು ಸಾರುತ್ತ ಸೆರೆಮನೆಯನ್ನೂ ದೇಶಾಂತರವಾಸವನ್ನೂ ಅನುಭವಿಸುತ್ತಿದ್ದ ತರುಣ ದೇಶಭಕ್ತ ಜೋಸೆಫ್ ಮ್ಯಾಜಿನಿಯ ಪ್ರಭಾವ ಬಿತ್ತು. ಗಾರಿಬಾಲ್ಡಿಯಂತೆ ಸಾರ್ಡಿನಿಯದವನೇ ಆಗಿದ್ದ ಮ್ಯಾಜಿನಿ ತನ್ನ ಅರಸನಿಗೆ ಇಟಲಿಯ ಏಕೀಕರಣಕ್ಕಾಗಿ ಯುದ್ಧಸನ್ನಾಹ ಮಾಡೆಂದು ಉಪದೇಶಿಸಿ ವಿಫಲನಾಗಿ ಈಗ ರಾಜಸತ್ತೆಯನ್ನುರುಳಿಸುವ ಹಂಚಿಕೆಯಲ್ಲಿ ತೊಡಗಿದ್ದ. ಮ್ಯಾಜಿನಿಯ "ತರುಣ ಇಟಲಿ"ಯ ಚಳವಳಿಯಲ್ಲಿ ಸೇರಿ ಗಾರಿಬಾಲ್ಡಿ ಮ್ಯಾಜಿನಿಯನ್ನು ಕಂಡು ಅವನ ಪ್ರಚೋದನೆಯಂತೆ ಸಾರ್ಡಿನಿಯದ ನೌಕಾಪಡೆಯನ್ನು ಸೇರಿದ.

ಅವರ ಹಂಚಿಕೆ ಮ್ಯಾಜಿನಿ ತನ್ನ ತರುಣ ಯೋಧರೊಡನೆ ಪೀಡ್‌ಮಾಂಟನ್ನು ಪ್ರವೇಶಿಸುತ್ತಿರುವಾಗ ಗಾರಿಬಾಲ್ಡಿ ನೌಕಾದಳದಲ್ಲಿ ಬಂಡಾಯವೆಬ್ಬಿಸಬೇಕೆಂಬುದಾಗಿತ್ತು. ಆದರೆ ಈ ಫಿತೂರಿ ಅಕಾಲದಲ್ಲೇ ಸರಕಾರಕ್ಕೆ ತಿಳಿದು ಬಂದು ಗಾರಿಬಾಲ್ಡಿ ಫ್ರಾನ್ಸಿಗೆ ಪಲಾಯನ ಮಾಡಬೇಕಾಯಿತು. ಮಿಲಿಟರಿ ನ್ಯಾಯಾಲಯವೊಂದು ಅವನಿಗೆ ೧೮೩೪ ರಲ್ಲಿ ಗೈರಹಾಜರಿಯಲ್ಲಿ ಮರಣದಂಡನೆ ವಿಧಿಸಿತು. ಆತ ಮಾತೃಭೂಮಿಗೆ ಮರಳುವ ಆಸೆ ತೊರೆದು ೧೮೩೬ ರಲ್ಲಿ ದಕ್ಷಿಣ ಅಮೇರಿಕಕ್ಕೆ ಪಲಾಯನ ಮಾಡಿದ.

೨೯ ರ ತರುಣ ಗಾರಿಬಾಲ್ಡಿಗೆ ಇದು ಕ್ರಾಂತಿ ಚಳವಳಿಯ ಪ್ರಥಮ ಅನುಭವವಾಗಿತ್ತು. ಅಂದಿನಿಂದ ಆತ ಇಟಲಿ ಪೂರ್ತಿ ಏಕೀಕೃತವಾಗಿ ಸ್ವತಂತ್ರವಾಗುವ ವರೆಗೆ ತನ್ನ ಹೋರಾಟದಲ್ಲಿ ಗಳಿಸಿದ ಅಪಜಯಗಳೆಷ್ಟು ವಿಪುಲವಾಗಿದ್ದವೋ ವಿಜಯಗಳೂ ಅಷ್ಟೇ ರೋಮಾಂಚಕವಾಗಿದ್ದವು.

ತನ್ನ ತಾಯ್ನಾಡಿನ ಸ್ವಾತಂತ್ರ್ಯಕ್ಕೆಷ್ಟು ಉತ್ಸಾಹದಿಂದ ಹೋರಾಡಲು ಆತ ಸಿದ್ಧನಾಗಿದ್ದನೋ ಅಷ್ಟೇ ಅನ್ಯದೇಶಗಳ ಸ್ವಾತಂತ್ರ್ಯಕ್ಕಾಗಿ ರಕ್ತ ಸುರಿಸಲು ಗಾರಿಬಾಲ್ಡಿ ಸಿದ್ಧನಾಗಿದ್ದ. ಬ್ರಾಜಿಲಿನಲ್ಲಾತ ಕೆಲ ಚಿಕ್ಕ ನಾವೆಗಳನ್ನು ಸಿದ್ಧಗೊಳಿಸಿ ಸಾರಿಗೆ ವ್ಯವಹಾರದಲ್ಲಿ ತೊಡಗಿದ್ದಾಗ ಪೋರ್ತುಗೀಸ್ ಸಮ್ರಾಟನ ವಿರುದ್ಧ ದಂಗೆಯೆದ್ದು ಸ್ವಾತಂತ್ರ್ಯ ಸಾರಿದ ರಿಯೋಗ್ರಾಂಡ್ ಡೊಸೂಲ್ ಮತ್ತು ಸಾಂತಾ ಕಟರಿನಾ ಪ್ರಾಂತಗಳಿಗೆ ತನ್ನ "ನೌಕಾಪಡೆ"ಯ ನೆರವು ನೀಡಿ ಹಲವು ಕದನಗಳಲ್ಲಿ ಸರಕಾರಿ ಪಡೆಗಳನ್ನು ಸೋಲಿಸಿ ರಿಯೋಗ್ರಾಂಡ್ ಪ್ರಾಂತದಿಂದ ಪದವಿಗಳನ್ನು ಸಂಪಾದಿಸಿದ. ಕೊನೆಗೆ ಕ್ರಾಂತಿಯನ್ನು ನಿರ್ನಾಮ ಮಾಡಿದ ಬ್ರಾಜಿಲ್‌ನ ನೌಕಾಪಡೆ ಗಾರಿಬಾಲ್ಡಿಯನ್ನು ಬೆನ್ನಟ್ಟುತ್ತಿದ್ದಾಗ ಸೆನರ್ ರಿಬೆರೋ ಎಂಬೊಬ್ಬ ಹಗ್ಗದ ವ್ಯಾಪಾರಿಯ ಸುಂದರಿ ಮಗಳು ಅನಿತಾಳನ್ನು ಅವಳ ತಂದೆಯ ಸರ್ಪಕಾವಲಿರುವಾಗಲೂ ಅಪಹರಿಸಿಕೊಂಡೊಯ್ದು ಆತ ಮದುವೆಯಾಗಿ ಸ್ವಾತಂತ್ರ್ಯವೀರನಷ್ಟೇ ಅಲ್ಲ, ಪ್ರೇಮವೀರನೂ ಆದ.

ಈ ಹದಿನೆಂಟು ವರ್ಷದ ತರುಣಿ ಜೀವವಿರುವವರೆಗೂ ಗಾರಿಬಾಲ್ಡಿಯ ಸ್ವಾತಂತ್ರ್ಯಸಮರಗಳಲ್ಲಿ ಸಹಭಾಗಿಯಾಗಿ ಕೊನೆಗೆ ಇಟಲಿಗಾಗಿ ಪ್ರಾಣಾರ್ಪಣ ಮಾಡಲಿದ್ದಳು. ಅವನ ಹಡಗುಗಳ ಮೇಲೆ ತೋಫಿನ ಮಳೆಗರೆದಾಗ ಗಾಯಗೊಂಡ ನಾವಿಕರನ್ನು ಅವಳು ಆರೈಕೆ ಮಾಡಿದಳು ಮತ್ತು ಅವರ ಬದಲು ತೋಪುಖಾನೆಯನ್ನು ತಾನೇ ನಡೆಸಿದಳು. ಬ್ರಾಜಿಲ್ಲಿನ ಪಡೆಗಳಿಂದ ಬೆಂಬತ್ತಲ್ಪಟ್ಟವನಾಗಿ ಗಾರಿಬಾಲ್ಡಿ

ಇಂದಿನ ದಿನ ನಾಳೆ ಹೊನ್ನಾಗಿ ಮೂಡುವುದು

ಅಕ್ಷರಾಭ್ಯಾಸ ಮಾಡುವ ಎಳೆಯ
ಬಾಲಕನಲ್ಲಿ ಮೂಡುವ ಜ್ಞಾನದ ಚಿಕ್ಕ ಒರತೆಯೇ
ಮುಂದೆ ಮಹಾನ್ ನದಿಯಾಗಿ ಹರಿಯುವುದು.
ಅವನು ಬೆಳೆದಂತೆ ಗಳಿಸುವ ಅನುಭವ ವಂಶದಿಂದ
ವಂಶಕ್ಕೆ ಬರುವ ನಿಧಿಯಾಗುವುದು.
ಇಲ್ಲಿ ಬಾಲಕನು ಬೆಳೆಯುವನು... ಇದುವೆ ಮನೆ.

ಮನೆಯಲ್ಲಿ ಮೂಡುವನು ನಾಳೆಯ ಮಾನವನು.
ಆಶಾಪೂರ್ಣವು ನಾಳೆಯ ದಿನ...ಬದುಕಿನ ಬವಣೆಗಳ
ತುಸುವಾದರೂ ಕಡಿಮೆಗೊಳಿಸುವ, ಆನಂದವನ್ನು
ತುಸುವಾದರೂ ಹೆಚ್ಚಿಸುವ ನಾಳೆಯ ದಿನ.



ಸಾಬೂನುಗಳು, ಆಹಾರಗಳು, ಶೃಂಗಾರಸಾಧನಗಳು
-ಇವನ್ನು ಒದಗಿಸುವುದು, ಇಂದು ಮತ್ತು ಎಂದೆಂದೂ ಗೃಹಸೇವಾನಿರತ ಹಿಂದುಸ್ಥಾನ್ ಲೀವರ್

PR. 23-50 KN

ಕಾಡು ಗುಡ್ಡಗಳಲ್ಲಿ ಪಲಾಯನ ಮಾಡುವಾಗ ಬಸಿರಿಯಾಗಿದ್ದ ಅನಿತಾ ನಿರ್ಭಯವಾಗಿ ಅವನೊಡನೆ ಕೈಹಿಡಿದು ನಡೆದಳು.

ಬ್ರಾಜಿಲಿನಿಂದ ಪಾರಾಗಿ ಉರುಗುವೆಯಲ್ಲಿ ನೆಲಸಿದ ಮೇಲೆ ಗಾರಿಬಾಲ್ಡಿಯನ್ನು ಜಗತ್ಪ್ರಸಿದ್ಧನಾಗಿ ಮಾಡಿದ ಘಟನೆಗಳು ಜರುಗಿದವು. ಅರ್ಜೆಂಟಿನಾವು ೧೮೪೩ ರಲ್ಲಿ ಉರುಗುವೆಯ ಮೇಲೆ ದಾಳಿ ಮಾಡಿದಾಗ ತಾನು ನೆಲಸಿದ ದೇಶದ ಸ್ವಾತಂತ್ರ್ಯವನ್ನು ಕಾಪಾಡಿದವನು ಗಾರಿಬಾಲ್ಡಿಯೆ. ಆತ ಉರುಗುವೆಯಲ್ಲಿದ್ದ ಕೆಲ ನೂರು ಇಟಾಲಿಯನ್ನರನ್ನು "ವಿದೇಶಿ ದಲ" ವಾಗಿ ಸಂಘಟಿಸಿದ. ಹೆಂಡಂದಿರು ಬೇರಾವ ಬಟ್ಟೆ ಸಿಗದ್ದಕ್ಕೆ ಕೆಟ್ಟುಹೋದ ಕೆಂಪು ಬಟ್ಟೆಯ ತುಂಡುಗಳನ್ನು ಜೋಡಿಸಿ ಅವರಿಗಾಗಿ ಸಮವಸ್ತ್ರಗಳನ್ನು ಹೊಲಿದರು. ಅವನ್ನು ಧರಿಸಿ ರಣಾಂಗಣಕ್ಕೆ ಇಳಿದ ಗಾರಿಬಾಲ್ಡಿಯ ತರುಣರು ೧೮೪೬ ರಲ್ಲಿ ಅರ್ಜೆಂಟಿನಾದ ಪಡೆಗಳನ್ನೆದುರಿಸಿ ದೈತ್ಯರಂತೆ ಹೋರಾಡಿದರು. ರಾಜಧಾನಿಯ ಬಾಗಿಲ ವರೆಗೆ ಬಂದಿದ್ದ ಆಕ್ರಮಣಕಾರರು ಈ ದೇಶಾಭಿಮಾನಿಗಳಿಂದ ಸೆರೋ ಮತ್ತು ಸಾನ್ ಅಂತೋನಿಯೋಗಳಲ್ಲಿ ಪೂರ್ಣವಾಗಿ ಸೋಲಿಸಲ್ಪಟ್ಟರು.

ಗಾರಿಬಾಲ್ಡಿಯ ವಿಜಯದುಂದುಭಿ ಇಟಲಿಯಲ್ಲಿ ಮಾರ್ಮೊಳಗಿತು. ಕ್ರಾಂತಿಕಾರಿಗಳ ಹತಾಶಾಭಾವ ಮಾಯವಾಗಿ ಅವರು ಹುರಿದುಂಬಿದರು. ಆತ ಇಟಲಿಗೆ ಮರಳಿ ೧೮೪೮ ಜೂನ್‌ನಲ್ಲಿ—ಮರಣದಂಡನೆ ಸಾರಲ್ಪಟ್ಟು ೧೬ ವರ್ಷಗಳ ನಂತರ— ನೈಸ್ ನಗರದಲ್ಲಿಳಿದಾಗ ಜನಜಂಗುಳಿ ಹುಚ್ಚೆದ್ದು ಅವನನ್ನು ಸ್ವಾಗತಿಸಿತು. "ತರುಣ ಇಟಲಿ" ಯ ಸದಸ್ಯರು ಅವನಿಗಾಗಿ ಸಾಯಲೂ ಸಿದ್ಧರಾಗಿದ್ದರು. ಸಾರ್ಡಿನಿಯದ ರಾಜ ಚಾರ್ಲ್‌ಸ್ ಆಲ್ಬರ್ಟ್‌ನ ಮೌಢ್ಯದ ಫಲವಾಗಿ ಇಟಲಿಯ ಏಕಮಾತ್ರ ಸ್ವತಂತ್ರ ರಾಜ್ಯಕ್ಕೆ ವಿಪತ್ತು ಬಂದಿತ್ತು. ಪಟ್ಟಕ್ಕೆ ಬಂದೊಡನೆ ಮ್ಯಾಜಿನಿತನಗಿತ್ತ ಸ್ವಾತಂತ್ರ್ಯದ ಕರೆಯನ್ನು ಕಿವುಡುಗೇಳಿದ್ದ ಈ ರಾಜನಿಗೆ ಈಗ ಮುಪ್ಪಿನಲ್ಲಿ ಒಮ್ಮೆಲೆ ಇಟಲಿಯ ಜನರಲ್ಲಿ ತಾನು ಜನಪ್ರಿಯನಾಗಬೇಕೆಂಬ ಹುಮ್ಮಸವೆದ್ದು ಆತ ಆಸ್ಟ್ರಿಯನ್ ಸಾಮ್ರಾಜ್ಯದೊಡನೆ ಕಾಲು ಕೆರೆದು ಜಗಳ ತೆಗೆದಿದ್ದ. ಕೌಂಟ್ ರಾಡೆಟ್ಸ್ಕಿಯ ವಿಜಯಿ ಆಸ್ಟ್ರಿಯನ್ ಪಡೆಗಳು ಸಾರ್ಡಿನಿಯದ ಮೇಲೇರಿ ಬರುತ್ತಿದ್ದವು. ಈ ಇಕ್ಕಟ್ಟಿನಲ್ಲಿ ಸಿಕ್ಕಿದ ರಾಜ ಗಾರಿಬಾಲ್ಡಿಯ ಮರಣದಂಡನೆಯನ್ನು ಜಾರಿಗೆ ತರಲು ಧೈರ್ಯ ಮಾಡದಿದ್ದರೂ ಗಾರಿಬಾಲ್ಡಿ ಈ ದೇಶಾಭಿಮಾನಿ ಯುದ್ಧದಲ್ಲಿ ತನ್ನ ಸೇವೆಯನ್ನು ಸ್ವೀಕರಿಸಬೇಕೆಂದು ಬಿನ್ನೈಸಿದರೆ ಅದಕ್ಕೊಪ್ಪಲಿಲ್ಲ. ಗಾರಿಬಾಲ್ಡಿ ಹಿಂಜರಿಯಲಿಲ್ಲ. ೩೦೦೦ ತರುಣರನ್ನು ಕಲೆಹಾಕಿ ಅವರನ್ನು ಕೆಂಪಂಗಿಗಳಿಂದ ಅಲಂಕರಿಸಿ ಅವರನ್ನು ಕೂಡಿಕೊಂಡು ಸ್ವತಂತ್ರವಾಗಿ ಆಸ್ಟ್ರಿಯನ್ನರನ್ನೆದುರಿಸಿದ. ಆದರೆ ರಾಜನ ಪಡೆಗಳು ಕುಸ್ಟೋಜಾದಲ್ಲಿ ಭೀಕರ ಸೋಲು ತಿಂದು ಆಸ್ಟ್ರಿಯನ್ನರೊಡನೆ ಶಾಂತಿ ಒಪ್ಪಂದ ಮಾಡಿಕೊಂಡ ಮೇಲೆ ಆತ ಸ್ವಿಜರ್ಲಂಡಿಗೆ ಪಲಾಯನ ಮಾಡಬೇಕಾಯಿತು.

ಆದರೆ ಗಾರಿಬಾಲ್ಡಿ ಬೇಗನೆ ಇಟಲಿಗೆ ಮರಳಿದ್ದ, ಈ ಸಲ ರೋಂ ನಗರಕ್ಕೆ. ಪೋಪ್ ಒಂಬತ್ತನೇ ಪಾಯಸ್ ಮೇಲೆ ಜನ ರೇಗಿ ದಂಗೆಯೆದ್ದು ಪ್ರಜಾತಂತ್ರವಾದಿ ತ್ರಿಮೂರ್ತಿ ಸಮಿತಿಯೊಂದನ್ನು ಸ್ಥಾಪಿಸಿಕೊಂಡು ಪೋಪನ ಅಪಾರ ಭೂಮಿಗಳನ್ನು ಬಡವರಿಗೆ ಹಂಚುವ ಎತ್ತುಗಡೆಯಲ್ಲಿ ತೊಡಗಿದ್ದರು. ಅವರಿಗೆ ಹೆದರಿ ಸಿಸಿಲಿಯ ಅರಸನ ಆಶ್ರಯಕ್ಕಾಗಿ ಗೇಟಾಕ್ಕೆ ಪೋಪ್ ಓಡಿ ಹೋಗಿದ್ದ. ರೋಂನಲ್ಲಿ ಪೋಪನ ಸಾರ್ವಭೌಮತ್ವವನ್ನು ಪುನಃ ಪ್ರಸ್ಥಾಪಿಸುವ ಸಲುವಾಗಿ ಪ್ರಬಲ ಯುರೋಪಿಯನ್ ಸಮ್ರಾಟರು ಧಾವಿಸಿ ಬಂದರು. ಆಸ್ಟ್ರಿಯನ್ ಪಡೆಗಳು ಉತ್ತರ ಮತ್ತು ಪೂರ್ವದಿಂದ ಅಂಕೋನಾ ಬೊಲೊನಾಗಳನ್ನು ಆಕ್ರಮಿಸಿ ಮುನ್ನುಗ್ಗಿದವು. ದಕ್ಷಿಣದಿಂದ ನಿಯಾಪಾಲಿಟನ್ನರು, ಸಿಸಿಲಿಯ ರಾಜನ ಕಡೆಯವರು ರೋಮನ್ ಪ್ರದೇಶದ[…]

ನುಗ್ಗಿದರು. ಫ್ರಾನ್ಸಿನ ಜನರಲ್ ಔದಿನೋ ಹತ್ತುಸಾವಿರ ಸೈನಿಕರೊಡನೆ ಸಿವಿತಾವಾಛಿಯಾದಲ್ಲಿ ಇಳಿದು ರೋಂವನ್ನು ಸುತ್ತುವರಿದನು.

ಇದು ಗಾರಿಬಾಲ್ಡಿಯ ಮಹಾ ಮುಹೂರ್ತಗಳಲ್ಲೊಂದಾಗಿತ್ತು. ಆತ ತನ್ನ ಕೆಂಪಂಗಿಗಳನ್ನು ಮತ್ತೆ ಕಲೆಹಾಕಿದ. ಇವರ ಹಿಂದೆ ನಾಗರಿಕರೂ ರೈತರೂ ಹುಡುಗರೂ ಸಾಗಿದ್ದರು. ಎಲ್ಲ ಸೇರಿ ೨,೦೦೦ ಜನರ ಈ ಹುಂಬಗುಂಪು ಸಾನ್ ಪಂಕ್ರಾಜಿಯೋದ ರಕ್ಷಣೆಗೆ ನಿಂತದ್ದನ್ನು ನೋಡಿ ಫ್ರೆಂಚ್‌ಸೇನಾಪತಿ ಕೌತುಕದಿಂದ ನಕ್ಕ. ಆದರೆ ಈ "ಹುಂಬ" ರಿಗಿಂತ ಮೂರೂವರೆ ಪಟ್ಟು ಹೆಚ್ಚಾಗಿದ್ದ ತನ್ನ ಸೈನಿಕರು ಹಗಲೆಲ್ಲ ಹೋರಾಡಿದರೂ ಒಂದು ಹೆಜ್ಜೆ ಮುಂದಿಡಲಾಗದೆ ತೀವ್ರ ಸೋಲನನ್ನನುಭವಿಸಿದಾಗ ೧೮೪೯ ಮಾರ್ಚ್ ೩೦ ರಂದು ಜನರಲ್ ಔದಿನೋ ಯುದ್ಧವಿರಾಮವನ್ನು ಅಪೇಕ್ಷಿಸಬೇಕಾಯಿತು.

ಈ ಒಂದು ವಾರದ ವಿರಾಮವನ್ನುಪಯೋಗಿಸಿಕೊಂಡು ಗಾರಿಬಾಲ್ಡಿ ನಿಯಾಪಾಲಿಟನ್ನರ ಮೇಲೆ ತನ್ನ ಸ್ವಯಂ ಸೇವಕರನ್ನು ತಿರುಗಿಸಿದ. "ರಾಜಾಬೊಂಬಾ" ನ ಸೈನಿಕರು ಎಷ್ಟು ವೇಗದಿಂದ ಓಡಿದರೆಂದರೆ ಗಾರಿಬಾಲ್ಡಿ ಅವರ ರಾಜ್ಯದ ಗಡಿಯ ವರೆಗೂ ಬೆನ್ನಟ್ಟಿದ. ಈ ಕಡೆ ಪುನಃ ಫ್ರೆಂಚರು ಹೊಸದಾಗಿ ದಾಳಿಯನ್ನಾರಂಭಿಸಿದರು. ಹೋರಾಟ ರಾಕ್ಷಸೀ ಸ್ವರೂಪದ್ದಾಗಿತ್ತು. ಗಾರಿಬಾಲ್ಡಿಯ " ಹುಂಬರು " ಪಂಕ್ರಾಜಿಯೋ ಮಹಾದ್ವಾರದ ಬಳಿ ಫ್ರೆಂಚ್ ತೋಪುಗಳನ್ನು ಅಪ್ರತಿಮವಾಗಿ ಎದುರಿಸಿದರು. ಗಾರಿಬಾಲ್ಡಿಯ ಕೆಂಪಂಗಿಗಳು ಒಬ್ಬೊಬ್ಬರಾಗಿ ಬಲಿಯಾದರು. ಆದರೆ ಫ್ರೆಂಚರು ಕೊನೆಯದಾಗಿ ಅವರ ಪ್ರತಿಭಟನೆಯನ್ನು ಮುರಿಯಬೇಕಾದರೆ ಏಳು ವಾರಗಳು ಸಂದಿದವು.

ಈ ಚರಿತ್ರಾರ್ಹ ಕದನದಂತೆಯೆ ಕ್ರಾಂತಿಕಾರಿ ರೋಂನ ಶರಣಾಗತಿಯ ನಂತರ ಗಾರಿಬಾಲ್ಡಿ ಮತ್ತು ಅವನ ಅನುಯಾಯಿಗಳು ಶತ್ರುಗಳು ಇಕ್ಕಿದ ಬಲೆಯಿಂದ ನುಸುಳಿ ಪಾರಾದ ಬಗೆಯೂ ಒಂದು ಚರಿತ್ರಾರ್ಹ ಸಾಧನೆಯಾಗಿಯೆ ಇಟಾಲಿಯನ್ ಇತಿಹಾಸದಲ್ಲಿ ಉಳಿದುಕೊಂಡಿದೆ. ತನ್ನ ಸಾವಿರ ಮಿಕ್ಕಿದ ಬೆಂಬಲಿಗರೊಡನೆ ಆತ ಅಪೆನ್ನೈನ್ ಪರ್ವತಗಳನ್ನು ಅತಿ ಮಾನುಷ ಸಾಹಸದಿಂದ ಏರಿ ಆಸ್ಟ್ರಿಯ, ಫ್ರಾನ್ಸ್, ಸ್ಪೇನ್, ನೇಪಲ್ಸ್‌ಸೈನ್ಯಗಳು ಅವನನ್ನು ನಾಲ್ಕೂ ಸುತ್ತಲಿಂದ ಆವರಿಸುತ್ತಿದ್ದಂತೆ, ಸಾವಿರ ಗಂಡಾಂತರಗಳಿಗೆ ಸಿಲುಕಿ ಒಂದು ಚಿಕ್ಕ ನಾವೆಯಲ್ಲಿ ಜಿನೋವಾಕ್ಕೆ ಪಾರಾಗಿ ಹೋದ.

ಬಲಿದಾನ ಅಸಾಮಾನ್ಯವಾಗಿತ್ತು. ಅವನ ವೀರ ರಮಣಿ ಅನಿತಾ ಬಸಿರು ಹೊತ್ತುಕೊಂಡು ಅವನೊಡನೆ ಕಾಳಗದ ಕಣದಲ್ಲಿ ಹೆಗಲಿಗೆ ಹೆಗಲು ಹಚ್ಚಿ ದುಡಿದು, ಪಲಾಯನದಲ್ಲಿ ಅವನ ಪಕ್ಕದಲ್ಲೇ ಸಾಗುತ್ತ, ಕೊನೆಗೆ ಆ ಬಿರುಬೇಸಗೆಯಲ್ಲಿ ಶ್ರಮವನ್ನು ತಾಳಲಾರದೆ ಮಡಿದಳು. ಅವನ ಅನುಯಾಯಿಗಳಲ್ಲಿ ಬಹುಜನರು ಆಸ್ಟ್ರಿಯನ್ನರ ಕೈಗೆ ಸಿಕ್ಕಿ ಗುಂಡಿನ ಬಾಯಿಗೆ ಆಹುತಿಯಾದರು. ಇಪ್ಪತ್ತು ವರ್ಷಗಳ ಜೀವನ ಸಂಗಿನಿಯನ್ನೂ ಹತ್ತಿರದ ಗೆಳೆಯರನ್ನೂ ಕಳೆದುಕೊಂಡು ಏಕಾಂಗಿಯಾದ ಗಾರಿಬಾಲ್ಡಿ ಅಮೇರಿಕಕ್ಕೆ ಸಾಗಿದ.

ಐದು ವರ್ಷ ಕಾಲ ಈ ದೇಶಭಕ್ತ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ರಾಜಕೀಯ ನಿರಾಶ್ರಿತನಾಗಿದ್ದು ಮತ್ತೆ ತನ್ನ ನಾವಿಕ ಜೀವನವನ್ನಾರಂಭಿಸಿ ಸಪ್ತ ಸಾಗರಗಳನ್ನು ಸುತ್ತಿದ. ಈ ನಡುವೆ ಇಟಲಿಯಲ್ಲಿ ಪುನಃ ಆಶೋದಯದ ಘಟನೆಗಳು ಪ್ರಾರಂಭವಾಗಿದ್ದವು. ಮೂಢ ರಾಜ ಚಾರ್ಲ್ಸ್ ಆಲ್ಬರ್ಟ್ ಸಿಂಹಾಸನ ತ್ಯಾಗ ಮಾಡಿ ಮಗ ಎರಡನೇ ವಿಕ್ಟರ್ ಇಮ್ಯಾನುಯೆಲ್ ಪಟ್ಟಕ್ಕೆ ಬಂದಿದ್ದ. ಸ್ವತಃ ಪ್ರಜಾತಂತ್ರವಾದಿಯಾಗಿದ್ದ ಆತನಿಗೆ ಯುರೋಪಿನ ಇತಿಹಾಸದಲ್ಲಿ ಕಾರ್ಡಿನಲ್ ರಿಚ್ಲ್ಯು ನಂತರ ಅತಿ ಮಹಾ ಮುತ್ಸದ್ದಿಯೆನಿಸಿದ ಕೌಂಟ್ ಕಾವರ್ ಪ್ರಧಾನ ಮಂತ್ರಿಯಾಗಿ ದೊರೆತಿದ್ದ. ಆತ ಜನತೆಯನ್ನು ಆಡಳಿತದಲ್ಲಿ ಹೆಚ್ಚುಹೆಚ್ಚು ವಿಶ್ವಾಸಕ್ಕೆ ತೆಗೆದು

ಕೊಂಡಿದ್ದ. ಸಾರ್ಡಿನಿಯದ ಅರಸರ ನೇತೃತ್ವದಲ್ಲಿ ಇಟಲಿಯನ್ನು ಪುನರಪಿ ಏಕೀಕರಿಸುವ ಹೊಸ ಚಳವಳಿಯೊಂದು ಪ್ರಾರಂಭವಾಗಿತ್ತು.

ಈ ಆಶಾದಾಯಕ ವಾತಾವರಣದಲ್ಲಿ ಗಾರಿಬಾಲ್ಡಿ ಅಮೇರಿಕದಿಂದ ಮರಳಿ ೧೮೫೪ ರಲ್ಲಿ ಕಪ್ರೇರಾ ಎಂಬ ಚಿಕ್ಕ ದ್ವಿಪವನ್ನು ಕೊಂಡು ಅಲ್ಲಿ ಕೃಷಿ ಮಾಡುತ್ತ ಏಕಾಂಗಿ ಜೀವನವನ್ನು ಪ್ರಾರಂಭಿಸಿ ಅವಕಾಶವನ್ನು ಕಾಯತೊಡಗಿದ.

ಆತ ನಾಲ್ಕೇ ವರ್ಷ ಕಾಯಬೇಕಾಯಿತು. ಕೌಂಟ್ ಕಾವರನ ಮುತ್ಸದ್ದಿತನ ಫಲಿಸಿತ್ತು. ಅವನು ಫ್ರಾನ್ಸಿಗೂ ಆಸ್ಟ್ರಿಯಕ್ಕೂ ನಡುವೆ ಉಂಟಾದ ಮನಸ್ತಾಪದ ಪ್ರಯೋಜನ ಪಡೆದು ಫ್ರಾನ್ಸಿನ ಲುಯಿ ನೆಪೋಲಿಯನ್ನನನ್ನು ಸಾರ್ಡಿನಿಯದ ಪಕ್ಷಕ್ಕೆ ಒಲಿಸಿಕೊಂಡಿದ್ದ. ಆತ ಗಾರಿಬಾಲ್ಡಿಯನ್ನು ಕರೆಸಿ ಆಸ್ಟ್ರಿಯದೊಡನೆ ಪ್ರಾರಂಭವಾಗಲಿರುವ ಹೊಸ ಯುದ್ಧಕ್ಕೆ ಬೆಂಬಲ ಕೋರಿದ.

೧೮೫೯ ರಲ್ಲಿ ಯುದ್ಧ ಬಂತು. ಆಲ್ಪೈನ್ ಪರ್ವತದ ಕಣಿವೆಗಳನ್ನು ರಕ್ಷಿಸುವ ಹೊಣೆ ಗಾರಿಬಾಲ್ಡಿಗೊಪ್ಪಿಸಲ್ಪಟ್ಟಿತು. ಗಾರಿಬಾಲ್ಡಿಯ ಹೆಸರೇ ತರುಣರನ್ನು ರೋಮಾಂಚಿತಗೊಳಿಸಿತು. ಅವನ ಸ್ವಯಂಸೇವಕ ಪಡೆಗೆ ಸಾವಿರಗಟ್ಟಳೆಯಲ್ಲಿ ಜನ ಸೇರಿದರು. ಉತ್ತರದ ಗಿರಿದುರ್ಗಗಳಲ್ಲಿ ಗಾರಿಬಾಲ್ಡಿಯ ಆಲ್ಪೈನ್ ಬೇಟೆಗಾರರು ಆಸ್ಟ್ರಿಯದ ಸೈನ್ಯಗಳನ್ನು ತತ್ತರಗೊಳಿಸಿದರು. ಮೇ ೮ ರಂದು ಆತ ಆಸ್ಟ್ರಿಯನ್ನರನ್ನು ಕಾಸೇಲಿನಲ್ಲಿ ಸೋಲಿಸಿ ಬೆನ್ನಟ್ಟಿದ. ಮೇ ಅಂತ್ಯದೊಳಗೆ ಆತ ಅವರನ್ನು ಟೈರೋಲ್ ತನಕ ಓಡಿಸಿ ಆಲ್ಪೈನ್ ಪರ್ವತ ಪ್ರದೇಶವನ್ನೆಲ್ಲ ಬಂಧವಿಮುಕ್ತಗೊಳಿಸಿದ.

ಉತ್ತರ ಇಟಲಿ ಬಂಧಮುಕ್ತವಾಗಿತ್ತು. ದಕ್ಷಿಣ ಇನ್ನೂ ಪರಾಧೀನವಾಗಿತ್ತು. ಆದರೆ ಅಲ್ಲಿಯ ಜನರಲ್ಲಿ ದೇಶಾಭಿಮಾನ ಉಕ್ಕಿ ಹರಿಯುತ್ತಿತ್ತು. "ರಾಜಾ ಬೊಂಬ"ನ ಮಗ ಫ್ರಾನ್ಸಿಸ್ ಈಗ ಸಿಸಿಲಿಯ ದೊರೆಯಾಗಿದ್ದ.
ಸಾರ್ಡಿನಿಯಾದೊಡನೆ ಸೇರಿ ಇಟಲಿಯ ಐ
ಸಾಧಿಸಬೇಕೆಂಬ ತನ್ನ ಜನತೆಯ ಅಪೇಕ್ಷೆಯನ
ಧಿಕ್ಕರಿಸಿ ಆತ ಸೆರೆಮನೆಗಳನ್ನು ತುಂಬಿದ್ದ.

ತನ್ನ ದ್ವೀಪನೆಲೆಯಲ್ಲಿ ಕುಳಿತು ಗಾರಿಬಾ
ಸಿಸಿಲಿ ಮತ್ತು ನಿಯಾಪಾಲಿಟಾನಿಯದ ವಿಮೋ
ನೆಯ ಹಂಚಿಕೆ ಸಿದ್ಧಗೊಳಿಸಿದ. ರಾಜಾ ವಿಕ್ಟ
ಇಮ್ಯಾನ್ಯುವೆಲ್ ಮತ್ತು ಅವನ ಪ್ರಧಾನಿ
ಯೋಜನೆಗೆ ಒಳಗಿಂದೊಳಗೆ ಆಶೀರ್ವಾ
ವಿತ್ತರೂ ತಮ್ಮ ಹೆಸರಿನಲ್ಲಿ ಈ ಕಾರ್ಯ ಬೇ
ವೆಂದೂ ತಮ್ಮ ಸಹಾಯ ಸಿಗದೆಂದೂ ಹೇ
ದರು.

ಗಾರಿಬಾಲ್ಡಿ ಹಿಂಜರಿಯಲಿಲ್ಲ. ಮೇ ೧೧,೧೮
ರಂದು ಆತ ತನ್ನ ೧,೦೬೭ ಕೆಂಪಂಗಿ ಸ್ವಯ
ಸೇವಕರೊಂದಿಗೆ ಹಡಗಿನಲ್ಲಿ ಸಿಸಿಲಿ ದ್ವೀಪ
ಪಶ್ಚಿಮ ದಂಡೆಯಲ್ಲಿರುವ ಮಾರ್ಸಲಾದಲ್ಲಿಳಿ
ಈ ಸೈನ್ಯವನ್ನು "ಗಾರಿಬಾಲ್ಡಿಯ ಸಾವಿ
ಎಂದು ಇಂದಿಗೂ ಅಭಿಮಾನದಿಂದ ನೆನೆ
ತ್ತಾರೆ.

ಗಾರಿಬಾಲ್ಡಿಯ ಆಗಮನದ ಸುದ್ದಿಯಿಂದ
ಲಿಯಲ್ಲಿ ವಿದ್ಯುತ್ಸಂಚಾರ ಮೂಡಿತು. ಮೂ
ದಿನಗಳಲ್ಲಿ ಮೂರುಸಾವಿರ ದೇಶಭಕ್ತರು
ನನ್ನು ಕೂಡಿಕೊಂಡರು. ಗಾರಿಬಾಲ್ಡಿ ಸಾಲೆ
ನಗರವನ್ನು ಪ್ರವೇಶಿಸಿ ವಿಕ್ಟರ್ ಇಮ್ಯಾ
ಯೆಲ್ಲನ ಹೆಸರಲ್ಲಿ ತನ್ನ "ಸರ್ವಾಧಿಕಾರ" ವ
ಘೋಷಿಸಿದ. ತನ್ನ ಪಡೆಗಳನ್ನು ಗುಡ್ಡಗಾ
ಗಳಲ್ಲಿ ಚದರಿಸಿ ಆತ ಸರಕಾರಿ ಸಂಪರ್ಕಗಳ
ಕತ್ತರಿಸಿದ. ಒಂದು ಕಡಿದಾದ ಪರ್ವತದ
ಲಲ್ಲಿ ಸಾವಿರಾರು ಸರಕಾರಿ ಸೈನಿಕರು ಅ
ತಂಡದ ಮೇಲೆ ಅನಿರೀಕ್ಷಿತವಾಗಿ ಗುಂಡಿನ
ಪ್ರಾರಂಭಿಸಿದರು. ಗಾರಿಬಾಲ್ಡಿಯ ಮಗ
ಯಾಗಿ ಅಸಂಖ್ಯ ಸ್ವಯಂಸೇವಕರು ಉ
ದರು. ಆದರೆ ಗಾರಿಬಾಲ್ಡಿ ಬಿಚ್ಚು ಕತ್ತಿ ಹಿ
"ಅಖಂಡ ಇಟಲಿ, ಇಲ್ಲವೆ ಸಾವು!" ಎ
ಘೋಷಿಸಿ ಮುನ್ನುಗ್ಗಿದ. ಸರಕಾರಿ ಪಡೆ
ಹೇಳಹೆಸರಿಲ್ಲದಂತೆ ನಿರ್ನಾಮವಾಗಿ ಹೋ

ಸರಿಯಾಗಿ ಎರಡು ವಾರಗಳಲ್ಲಿ ಆತ ರಾಜಧಾನಿ ಪಾಲೆರ್ಮೋದ ಮಹಾದ್ವಾರದಲ್ಲಿ ನಿಂತಿದ್ದ. ರಾಜಧಾನಿಯ ಜನ ಅವನ ಪಕ್ಷದಲ್ಲಿ ದಂಗೆಯೆದ್ದರು. ಮೂರುದಿನಗಳ ಹೋರಾಟದಲ್ಲಿ ರಾಜಾ ಫ್ರಾನ್ಸಿಸನ ೨೦,೦೦೦ ಪಡೆಗಳು ನಗರವನ್ನು ರಕ್ಷಿಸಲಾರದೆ ತೋಫುಗಳಿಂದ ಅರ್ಧ ನಗರವನ್ನು ನಾಶಗೊಳಿಸಿ ಆ ಮೇಲೆ ಶರಣುಬಂದವು.

ಅಲ್ಲಿಂದ ಆತ ಸಮುದ್ರದಾಟಿ ನಿಯಾಪಾಲಿಟನ್ ಪ್ರದೇಶದ ಮೇಲೆ ದಾಳಿಯಿಟ್ಟ. ಸಿಸಿಲಿಯ ಆಕ್ರಮಣವನ್ನು ದಂಗಾಗಿ ನೋಡುತ್ತಲಿದ್ದ ಯುರೋಪು ಭೂಖಂಡದ ಭಾಗದಲ್ಲಿ ಗಾರಿಬಾಲ್ಡಿಯ ಸಾಹಸವನ್ನು ಕಂಡು ಇನ್ನಷ್ಟು ವಿಸ್ಮಯಗೊಂಡಿತು. ಮೂರು ದಿನಗಳಲ್ಲಿ ಆತ ಮಿಲಾಜೋ ಕೋಟೆಯನ್ನು ಗೆದ್ದ. ಅನಂತರ ಮೆಸಿನಾ ಶರಣಾಗತವಾಯಿತು. ಫ್ರಾನ್ಸಿಸನ ೧,೫೦,೦೦೦ ಸುಸಜ್ಜಿತ ಸೈನ್ಯದಲ್ಲೀಗ ೧,೦೦,೦೦೦ ಮಾತ್ರ ಉಳಿದಿತು. ಅದನ್ನಟ್ಟುತ್ತ ಗಾರಿಬಾಲ್ಡಿ ಮುನ್ನುಗ್ಗಿದ. ಅವನನ್ನು ತಡೆಯುವ ಶಕ್ತಿ ಯಾರಲ್ಲಿಯೂ ಇದ್ದಲ್ಲ. ಸೆಪ್ಟೆಂಬರ ೭ ರಂದು ಆತ ನೇಪಲ್ಸ್ ಪ್ರವೇಶಿಸಿ ತಾತ್ಕಾಲಿಕ ಸರಕಾರ ಸ್ಥಾಪಿಸಿದ. ಫ್ರಾನ್ಸಿಸ್ ತನ್ನ ಅಳಿದುಳಿದ ಸೈನ್ಯದೊಡನೆ ನೇಪಲ್ಸ್ ಬಿಟ್ಟೋಡಿದ.

ಕೆಲ ದಿನಗಳ ವರೆಗೆ ಈ ಅದ್ಭುತ ವಿಜಯ ಇಮ್ಯಾನ್ಯುವೆಲ್ ಮತ್ತು ಆವನ ಮಂತ್ರಿಗಳ ಹೃದಯದಲ್ಲಿ ಅಂಜಿಕೆಯನ್ನೇ ಹುಟ್ಟಿಸಿತ್ತು. ಗಾರಿಬಾಲ್ಡಿ ಏನು ಹೇಳುವನೋ ಅದೇ ಆದೀತೆಂಬಂತೆ ಅಂದಿನ ಪರಿಸ್ಥಿತಿಯಿತ್ತು. ಆತ ರಾಜಸತ್ತೆಯನ್ನು ಮೆಚ್ಚುವುದಿಲ್ಲೆಂಬ ಭಾವನೆಯಿತ್ತು. ಗಾರಿಬಾಲ್ಡಿ ಪ್ರಜಾರಾಜ್ಯವನ್ನು ಘೋಷಿಸುವನೇ? ಸೀಜರನಂತೆ ತಾನೇ ಸರ್ವಾಧಿಕಾರಯಾಗುವನೇ?

ಆದರೆ ಹಾಗಾಗಲಿಲ್ಲ. ೧೮೬೦ ನವೆಂಬರ್ ೭ ರಂದು ಆತ ವಿಕ್ಟರ್ ಇಮ್ಯಾನುವೆಲ್ ಸಹಿತ ನೇಪಲ್ಸ್ ನಗರವನ್ನು ಔಪಚಾರಿಕವಾಗಿ ಪ್ರವೇಶಿಸಿದ. ತನ್ನ ಖಡ್ಗವನ್ನು ಆತನ ಪಾದದಲ್ಲಿಟ್ಟು "ನಿನಗೆ ವಿಧೇಯನಾಗಿರುವೆ" ಎಂದು ಸಾರಿದ.

ಅನಂತರ ತನಗೆ ಅರಸನು ಕೊಡಮಾಡಿದ ಬಿರುದು-ಬಾವಲಿಗಳನ್ನೂ ಕಾಣಿಕೆ-ಉಡುಗೊರೆಗಳನ್ನೂ ನಿರಾಕರಿಸಿ, ತನ್ನ ಸೈನಿಕರನ್ನು ರಾಜನಿಗೊಪ್ಪಿಸಿ ಗಾರಿಬಾಲ್ಡಿ ತನ್ನ ದ್ವೀಪನಿವಾಸಕ್ಕೆ ಮರಳಿದ. ಇದು ಅವನ ಜೀವನದ ಅನುಪಮ ಕ್ಷಣವಾಗಿತ್ತು. ಆತ ಇಟಲಿಯನ್ನು ವಿಮೋಚನೆಗೊಳಿಸಿ ಏಕೀಕರಿಸಿದ್ದ. ಮತ್ತು ಯಾವ ಅಧಿಕಾರಲಾಲಸೆಯನ್ನೂ ಇಟ್ಟುಕೊಳ್ಳದೆ ಸರ್ವವನ್ನೂ ರಾಜನಿಗೊಪ್ಪಿಸಿ ಹೊರಟಿದ್ದ. ಆತನೀಗ ರಾಜ್ಯವನ್ನಷ್ಟೇ ಗೆದ್ದಿರಲಿಲ್ಲ, ತನ್ನನ್ನೂ ಗೆದ್ದುಕೊಂಡಿದ್ದ.

ಗಾರಿಬಾಲ್ಡಿ ಮತ್ತೂ ೨೦ ವರ್ಷ ಬದುಕಿದ. ರೋಂ ನಗರವೊಂದು ಇನ್ನೂ ಸಾಮ್ರಾಜ್ಯದೊಳಗೆ ಸೇರಿಲ್ಲವೆಂಬ ದುಃಖ ಅವನನ್ನು ತನ್ನ ಏಕಾಂತ ಜೀವನದಲ್ಲಿ ಕೊರೆಯುತ್ತಿತ್ತು. (ಅನಿತಾಳ ಮರಣದ ಹತ್ತು ವರ್ಷದ ನಂತರ ಆಲ್ಪೈನ್ ಯುದ್ಧದಲ್ಲಿ ತನಗೆ ನೆರವಾದ ಕೌಂಟೆಸ್ ರೈಮಂಡಿಯನ್ನು ಆತ ಮದುವೆಯಾಗಿದ್ದರೂ ಆ ಮದುವೆ ತಾಳಿರಲಿಲ್ಲ.) ಆದರೆ ೧೮೮೨ ಜೂನ್ ೨ ರಂದು ಆತ ಸಾಯುವ ಸ್ವಲ್ಪ ಮೊದಲು ರೋಂ ಸಾಮ್ರಾಜ್ಯದೊಳಗೆ ಸೇರಿ ಅವನ ಆ ಇಚ್ಛೆಯನ್ನೂ ಪೂರ್ಣ ಮಾಡಿತು.

*

ನೀವು ಬಲ್ಲಿರಾ?

ನಕ್ಷತ್ರಗಳ ಖರತ್ವವು ಅವುಗಳ ವರ್ಣಗಳಿಂದ ಸೂಚಿತವಾಗುತ್ತದೆ. ಉದಾಹರಣೆಗೆ- ನೀಲ ಮತ್ತು ಶ್ವೇತವರ್ಣದ ನಕ್ಷತ್ರಗಳು ಕೆಂಬಣ್ಣದ ನಕ್ಷತ್ರಗಳಿಗಿಂತಲೂ ಅಧಿಕ ಶಾಖವುಳ್ಳದ್ದಾಗಿರುತ್ತವೆ.

—ಎಂ. ಬಿ. ಆರ್. ಪ್ರಸಾದ್

ಎಫೆಲ್ಲನ ಅನುಪಮ ಗೋಪುರ

ಕ್ಯಾಪ್ಟನ್ ಎಂ. ಜಿ. ಕೆ ಮೂರ್ತಿ



ಫ್ರಾನ್ಸಿನ ರಾಜಧಾನಿಯಾದ ಪ್ಯಾರೀಸ್ ನ
ರಕ್ಕೆ ವರ್ಷಂಪ್ರತಿ ಭೆಟ್ಟಿ ಕೊಡುವ ಹತ್ತ
ಲಕ್ಷ ಪ್ರವಾಸಿಕರಾರೂ ಎಫೆಲ್ ಗೋಪುರವನ
ನೋಡದೆ ಮರಳುವುದಿಲ್ಲ. ಅದು ಅಸಾಧ್ಯ
ಸೈ. ಏಕೆಂದರೆ ಪ್ರವಾಸಿಗಳು ಎಷ್ಟೋ ಮೈ
ದೂರದಲ್ಲಿರುವಾಗಲೇ ಅದು ಅವರ ದೃ
ಯನ್ನು ಸೆಳೆಯುತ್ತದೆ. ರಾಜಧಾನಿಯಲ್ಲಿ ಎ
ಹೋದರೂ ಅದು ಕಾಣುತ್ತದೆ. ಅದರ ತು
ತುದಿಯನ್ನೇರಿ ಒಂದು ಸಾವಿರ ಅಡಿ ಕೆಳಗಿರು
ಜಗತ್ತಿನ ಅತಿ ಸುಂದರ ನಗರಗಳಲ್ಲೊಂದೆಂ
ಹೆಸರಾದ ಪ್ಯಾರೀಸಿನ ಹಕ್ಕಿನೋಟವನ್ನು ಪಡೆ
ವರು ಅದನ್ನೆಂದೂ ಮರೆಯುವಂತಿಲ್ಲ. ಈ ಅ
ಭವವನ್ನು ಪಡೆಯುವ ಸಂಧಿಯನ್ನು ಕಳೆದುಕೆ
ಳ್ಳುವ ಪ್ರವಾಸಿಕರೂ ಅಪರೂಪವೇ.

ಕೇವಲ ಕಬ್ಬಿಣದಿಂದಲೇ ರಚಿಸಿದ
ಉದಗ್ರವಾದ ಕಟ್ಟಡ ಪ್ಯಾರೀಸಿನ ಜನಕ್ಕೆ ಅ
ಮಾನವಾಗಿದೆ. ಸಹಜವೇ. ಈ ಜಗತ್ಪ್ರಸಿ
ವಾದ ಗೋಪುರವನ್ನು ೭೨ ವರ್ಷಗಳ ಹಿಂ
ಕಟ್ಟಿದಾಗ ಅದು ರಚನೆಯಲ್ಲೂ ಕಲ್ಪನೆಯಲ್ಲ
ಪ್ರಪಂಚದ ಅತ್ಯಾಶ್ಚರ್ಯಕರವಾದ ಲೋಹ
ಕಟ್ಟಡವೆಂದು ಪರಿಗಣಿಸಲ್ಪಟ್ಟಿತ್ತು. ೯೮೪ ಅ
ಎತ್ತರಕ್ಕೆ ನಿಮಿರಿನಿಂತ ಎಫೆಲ್ ಸ್ತೂಪವ
ಕಟ್ಟಿ ನಾಲ್ವತ್ತು ವರ್ಷಗಳ ವರೆಗೆ ಅದು ಪ್ರ
ಚದ ಅತಿ ಎತ್ತರವಾದ ಕಟ್ಟಡವಾಗಿತ
ಇಂದಿಗೂ ಅದು ಯುರೋಪಿನ ಅತಿ ಎತ್ತ
ಕಟ್ಟಡ, ಮತ್ತು ಜಗತ್ತಿನ ಮೂರನೇ
ಎತ್ತರ ಕಟ್ಟಡ. ಅಮೇರಿಕದ ಎಂಪಾಯ
ಸ್ಟೇಟ್ ಕಟ್ಟಡ (೧೪೭೨ ಅಡಿ), ಕ್ರೈಸ್ಲ
ಕಟ್ಟಡ (೧೧೦೦ ಅಡಿ) ಇವೆರಡೇ ಎಫೆ
ಗೋಪುರವನ್ನು ಮೀರಿಸಿವೆ.

ತನ್ನ ನಿರ್ಮಾಪಕನಾದ ಅಲೆಕ್ಸಾಂಡ
ಗಸ್ಟಾವ್ ಎಫೆಲ್ಲನ ಹೆಸರನ್ನು ಚಿರಸ್ಥಾ
ಯಾಗಿ ಮಾಡಿದ ಈ ಗೋಪುರದ ಕೀ
ಯನ್ನು ನೋಡಿ " ನಾನೇ ಕರುಬುವಂತಾಗಿ
ಎಂದು ಆತ ತನ್ನ ಕೊನೆಯ ದಿನಗಳಲ್ಲಿ
ಹೇಳಿದ್ದನಂತೆ. ಗಸ್ಟಾವ್ ತನ್ನ ಕಾಲದ

ಪ್ರತಿಭಾಶಾಲಿ ಎಂಜಿನಿಯರನೆನಿಸಿದ್ದ. ಮೊದಲೊಮ್ಮೆ ಪಾಲಿಟೆಕ್ನಿಕ್ ಪ್ರವೇಶ ಪರೀಕ್ಷೆಯಲ್ಲಿ ನಪಾಸಾಗಿ ದಡ್ಡನೆಂದು ಗಣಿಸಲ್ಪಟ್ಟಿದ್ದ ಗಸ್ತಾವ್ ೨೯ ನೇ ವಯಸ್ಸಿನಲ್ಲಿ ತನ್ನ ಕಾಲದ ಎಂಜನಿಯರಿಂಗ್ ತಂತ್ರಗಳನ್ನು ಧಿಕ್ಕರಿಸಿ ನವೀನತಮ ರೇಲ್ವೆ ಸೇತುವೆಯನ್ನು ಉಕ್ಕಿನಿಂದ ನಿರ್ಮಿಸಿ ಸೇತುವೆ ನಿರ್ಮಾಣದಲ್ಲಿ ಕ್ರಾಂತಿಯನ್ನು ತಂದೊಡ್ಡಿದವನಾಗಿದ್ದ. ಅನಂತರ ಆತನು, ಉಳಿದವರೆಲ್ಲ ಅಸಾಧ್ಯವೆಂದು ಬಗೆದಿದ್ದ ಭಾರಿ ಭಾರಿ ಕಬ್ಬಿಣದ ಸೇತುವೆ, ಚಲಿಸುವ ಗುಮ್ಮಟ, ಚಲಿಸುವ ಸೇತುವೆ, ಒತ್ತಿದ ಗಾಳಿ (Compressed air) ಯಿಂದ ಗುಂಡು ಕಂಬಗಳನ್ನು ಅಸ್ತಿವಾರಕ್ಕೆ ತಳ್ಳುವುದು ಮೊದಲಾದ ಅದ್ಭುತ ಕೆಲಸಗಳನ್ನು ಮಾಡಿ ತೋರಿಸಿದ್ದ. ಅವನ ನವೀನ ಕಲ್ಪನೆಗಳು ಇಂದಿನ ಎಂಜನಿಯರಿಂಗ್ ತಂತ್ರಗಳ ಮೇಲೆ ಪ್ರಚಂಡ ಪರಿಣಾಮ ಮಾಡಿವೆ.

ಅಮೇರಿಕದ ನ್ಯೂಯಾರ್ಕ್ ನಗರದಲ್ಲಿ ಸಮುದ್ರತೀರದಲ್ಲಿ ನಿಲ್ಲಿಸಲಾಗಿರುವ ೧೫೦ ಅಡಿ ಎತ್ತರದ "ಸ್ವಾತಂತ್ರ್ಯ ದೇವತೆ"ಯ ಮಹಾ ತಾಮ್ರ ವಿಗ್ರಹವು ಗಾಳಿಯ ಹೊಡೆತಕ್ಕೆ ತಾಳುವಂತೆ ಅದಕ್ಕಾಗಿ ಭಾರಿ ಚೌಕಟ್ಟೊಂದನ್ನು ಕಬ್ಬಿಣದಿಂದ ರಚಿಸುವ ಕಾರ್ಯದಲ್ಲಿ ಮಗ್ನನಾಗಿದ್ದಾಗ ಗಸ್ತಾವ್ ಎಫೆಲ್ಲನಿಗೆ ತನ್ನ ನಾಡಿನ ಕೀರ್ತಿಗಾಗಿ ಒಂದು ಗೋಪುರವನ್ನು ನಿರ್ಮಿಸುವ ವಿಚಾರ ಹೊಳೆಯಿತಂತೆ. ಪ್ಯಾರೀಸಿನಲ್ಲಿ ೧೮೮೯ ರಲ್ಲೊಂದು ಅಂತಾರಾಷ್ಟ್ರೀಯ ಪ್ರದರ್ಶನವನ್ನು ಏರ್ಪಡಿಸಬೇಕೆಂದು ಫ್ರೆಂಚ್ ಉದ್ಯೋಗಪತಿಗಳು ಯೋಚಿಸುತ್ತಿದ್ದಾಗ್ಗೆ ತನ್ನ ಯೋಚನೆಯನ್ನು ಕಾರ್ಯರೂಪಕ್ಕಿಳಿಸಲು ಅವನಿಗೆ ಅವಕಾಶ ದೊರೆಯಿತು. ಅವನ ಕೈಕೆಳಗೆ ೪೦ ಎಂಜನೀಯರರೂ ನಕ್ಷೆಗಾರರೂ ಎರಡು ವರ್ಷ ದುಡಿದು ಅಪ್ರತಿಮವಾದ ೩೦೦ ಮೀಟರ್ ಎತ್ತರದ ಗೋಪುರದ ರೂಪರೇಖೆಗಳನ್ನು ಸಿದ್ಧಪಡಿಸಿದರು.

ಎಫೆಲ್ ಗೋಪುರಕ್ಕಾಗಿ ಉಪಯೋಗಿಸಿದ ಕಬ್ಬಿಣ ಮತ್ತು ಉಕ್ಕಿನ ತೂಕ ಏಳು ಸಾವಿರ ಟನ್ನಿಗಿಂತಲೂ ಹೆಚ್ಚು. ಕಬ್ಬಿಣದ ತೊಲೆಗಳ ಸಂಖ್ಯೆ ೧೫,೦೦೦; ಅಗಳಿ (bolt) ಗಳ ಸಂಖ್ಯೆ ೨೫ ಲಕ್ಷ. ಇಷ್ಟು ಭಾರವಾದ ಕಬ್ಬಿಣವನ್ನೊಳಗೊಂಡಿದ್ದರೂ ಈ ಕಟ್ಟಡದ ಗಾತ್ರಕ್ಕೆ ಅದು ಹಗುರವೆಂದೇ ಹೇಳಬೇಕು. ಅದರ ಗದ್ದಿ ಕಲ್ಲಿನ ಪೀಠಕ್ಕೆ ೩೧ ಚದರ ಗಜ ಅಂಕಣದ ನಾಲ್ಕು ಕಲ್ಲು ಕಂಬಗಳು ಆಧಾರ ಕೊಟ್ಟಿವೆ. ಈ ಕಲ್ಲಿನ ತಳದಿಂದ ಕಬ್ಬಿಣದ ಜಾಲಿ ಕೆಲಸದ ನಾಲ್ಕು ಪ್ರಚಂಡ ಕಂಬಗಳು ಪ್ರತಿ ಪಕ್ಕವೂ ೩೩೬ ಅಡಿಯಷ್ಟಿರುವ ಒಂದು ಭಾರಿ ಚಚೌಕದ ನಾಲ್ಕು ಮೂಲೆಗಳಿಂದ ಇಳಿಜಾರಾಕೃತಿಯಲ್ಲಿ ಮೇಲೆದ್ದು ಸಾಗುತ್ತ ೯೯೦ ಅಡಿ ಎತ್ತರದಲ್ಲಿ ಸಂಧಿಸಿ ಒಂದೇ ಕಂಬವಾಗಿ ಪರಿಣಮಿಸಿವೆ. ಬೇರೆ ಬೇರೆ ಅಂತಸ್ತುಗಳಲ್ಲಿ ನೋಟಪಾಟಗಳಿಗಾಗಿ ಮೂರು ಭಾರಿ ಕಟ್ಟೆಗಳಿವೆ. ಕೆಳಗಿನಿಂದ ಈ ಮಾಳಿಗೆಗಳಿಗೆ ಹೋಗುವ ಸಂದರ್ಶಕರಿಗಾಗಿ ಸೋಪಾನ ಮಾರ್ಗವೂ ಇದೆ, ಏರಿಳಿಸುವ ಲಿಫ್ಟ್‌ಗಳೂ ಇವೆ.

ಎಫೆಲ್ ಗೋಪುರದ ಕೆಲಸ ೧೮೮೭ ರಲ್ಲಿ ಪ್ರಾರಂಭವಾಗಿ ಮುಗಿಯಲು ಎರಡು ವರ್ಷ ಕಾಲ ಹಿಡಿಯಿತು. ಅದಕ್ಕೆ ಬಂದ ವಿಘ್ನಗಳು ಎಫೆಲ್ಲನಿಗಿಂತ ಕಡಿಮೆ ಧೈರ್ಯಶಾಲಿಗಳನ್ನು ಸೋಲಿಸಿ ಬಿಡಬಹುದಾಗಿತ್ತು. ಮೊದಲು ಆತ ಪ್ರದರ್ಶನ ಸಮಿತಿಯವರ ಮುಂದೆ ತನ್ನ ಯೋಜನೆಯನ್ನಿಟ್ಟಾಗ ಅವರು ಅದರ ಖರ್ಚಿನ ಅಗಾಧತೆಯನ್ನು ನೋಡಿ ಗಾಬರಿಯಾಗಿ ಜಾರಿಕೊಂಡರು. ಗಸ್ತಾವನು ಸರಕಾರವನ್ನು ಬಿನ್ನವಿಸಿಕೊಂಡನು. ಸರಕಾರ ಒಪ್ಪಿತು. ಆದರೆ ಇಷ್ಟು ಅಗಾಧವಾದ ಗೋಪುರವನ್ನು ಎಂದಿಗೂ ಮುಗಿಸಲು ಸಾಧ್ಯವಿಲ್ಲೆಂದೂ ಅದು ಕಳಚಿಕೊಂಡು ಬಿದ್ದು ಹೋಗಬಹುದೆಂದೂ ಇಲ್ಲವೆ ಗಾಳಿಯ ಹೊಡೆತಕ್ಕೆ ಬಗ್ಗಿ ಕೆಳಗೆ ನೆಲಸಿದ ಸಾವಿರಾರು ಜನರ ಮೇಲೆ ಒಡೆದು ಬಿದ್ದು ಅನಾಹುತ ಮಾಡ

ಎಫೆಲ್ ಗೋಪುರದ ಕೌತುಕಗಳು

* ಪ್ರತಿವರ್ಷ ಸುಮಾರು ೧೨ ಜನ ಎಫೆಲ್ ಗೋಪುರದಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಈ ಘಟನೆಗಳನ್ನು ನೋಡುವ ಸಂಭವವನ್ನೇ ನಿರೀಕ್ಷಿಸುತ್ತ ಮೊದಲನೇ ಅಂತಸ್ತಿನ ಹೊಟೆಲಿನಲ್ಲಿ ಕೆಲ ಪ್ರಾಣಿಗಳು ದಿನವೂ ಕಾಯುತ್ತಾರಂತೆ. ಏಕೆಂದರೆ ಗೋಪುರದ ಮೇಲಿಂದ ಧುಮುಕಿದವರು ಹೆಚ್ಚಾಗಿ ಮೊದಲನೇ ಅಂತಸ್ತಿನ ಹೊಟೆಲಿನ ಹೊರ ಬಾಲ್ಕನಿಗೆ ಅಪ್ಪಳಿಸುತ್ತಾರೆ!


* ಎವರೆಸ್ಟ್ ಏರಲು ಹೋದ ಸಾಹಸಿಕರಂತೆ ಎಫೆಲನ್ನು ಏರಲು ಹವಣಿಸುವವರು ಇದ್ದಾರೆ. ೧೯೫೪ ರಲ್ಲಿ ಆಲ್ಫ್ರೇಡ್ ಥೋಮನೆಕ್ಸನೆಂಬ ೨೨ ವರ್ಷದ ಜರ್ಮನ್ ತರುಣ ಅದರ ಕಂಬಿಗಳನ್ನು ಬರಿಗೈಯಿಂದ ಹಿಡಿದುಕೊಂಡು ಮೆಲ್ಲಗೆ ಏರುತ್ತ ತುತ್ತ ತುದಿಯನ್ನು ಮುಟ್ಟಿದ. ಈ ಸಾಹಸಕ್ಕೆ ಅವನಿಗೆ ೧೦ ತಾಸುಗಳು ಹಿಡಿದವು.

ಬಹುದೆಂದೂ ಕೂಗೆದ್ದುದರಿಂದ ಸರಕಾರ ಅದಕ್ಕೆ ಬೇಕಾದ ಪೂರ್ತಿ ದ್ರವ್ಯ ಸಹಾಯ ಮಾಡಲು ಹಿಂಜರಿಯಿತು. ಹೀಗಾಗಿ ೨ ಲಕ್ಷ ಪೌಂಡು ಖರ್ಚಿನಲ್ಲಿ ೬೦ ಸಾವಿರಪೌಂಡಷ್ಟೇ ಸರಕಾರದಿಂದ ಬಂತು. ಎಫೆಲ್ ಹೆದರದೇ ತಾನೇ ಸಾಲ ಮಾಡಿ ಉಳಿದ ಹಣವನ್ನು ಸಂಗ್ರಹಿಸಿದನು. ಇದಕ್ಕಾಗಿ ೨೦ ವರ್ಷ ಪರ್ಯಂತ ಗೋಪುರದ ಪ್ರವೇಶಧನವು ಎಫೆಲ್ಲನಿಗೇ ಸಿಗಬೇಕೆಂದು ಸರಕಾರ ರಿಯಾಯಿತಿ ತೋರಿಸಿತು.

ಹನ್ನೆರಡು ತಿಂಗಳ ಶ್ರಮದ ನಂತರ ಎರಡೂವರೆ ಎಕರೆ ನೆಲವನ್ನಾಕ್ರಮಿಸಿದ ಕೆಳ ಅಂತಸ್ತಿನ ಉದ್ದಾಮ ಕಮಾನುಗಳು ಪೂರ್ಣವಾದಾಗ ಮತ್ತೊಂದು ಕೂಗೆದ್ದಿತು. ಪ್ಯಾರೀಸಿನ ಲಲಿತ ಕಲಾ ಮಂಡಲಿಗಳು ಇದು ಪ್ಯಾರೀಸಿನ ಸೌಂದರ್ಯವನ್ನು ಹಾಳುಗೆಡಹುವ "ವಿಕಟರೂಪಿನ ಭೂತ" ದಂತಾಗಲಿದೆ; ಅದನ್ನು ಕಿತ್ತು ಹಾಕಬೇಕು, ಎಂದವು. ಎಫೆಲ್ ಯಾವುದಕ್ಕೂ ಹೆದರದೆ ಕೆಲಸ ಮುಂದುವರಿಸಿದನು.

೧೮೮೯ ಮಾರ್ಚ್ ತಿಂಗಳಲ್ಲಿ ಗೋಪುರ ಪೂರ್ಣವಾಗಿ ಜಯಘೋಷ. ತೋಫುಗಳ ಸಲಾಮುಗಳ ನಡುವೆ ಎಫೆಲ್ ಫ್ರೆಂಚ ರಾಷ್ಟ್ರ ಧ್ವಜವನ್ನು ಅದರ ಶಿಖರದಲ್ಲಿ ಹಾರಿಸಿ ಜಗತ್ತಿನಲ್ಲಿ ಯಾವ ದೇಶದ ಧ್ವಜವೂ ಇಷ್ಟೆತ್ತರ ಹಾರುತ್ತಿಲ್ಲವೆಂದು ಸಾರಿದಾಗ ಅವನು ಎಂಥ ಸಾಹಸಿಯೆಂದೂ ಅವನ ರಚನಾಕ್ರಮ, ಎಣಿಕೆ, ಲೆಕ್ಕಾಚಾರಗಳು ಎಷ್ಟು ಸಮಂಜಸವಾಗಿದ್ದವೆಂದೂ ಪ್ರಮಾಣಿತವಾಯಿತು.

ಪ್ಯಾರೀಸ್ ಪ್ರದರ್ಶನವು ೧೯೦೦ ರಲ್ಲಿ ಮುಗಿದ ನಂತರವೂ ಈ "ವಿಕಟ ಭೂತ" ವನ್ನು ಕಿತ್ತುಹಾಕಬೇಕೆಂಬ ಚಳವಳಿ ನಡೆಯುತ್ತಲೇ ಇತ್ತು. ಬ್ರಿಟಿಶ್ ಸಾಹಿತಿ ಬರ್ನಾರ್ಡ್‌ಶಾ ಕೆಲವು ಕಾಲ ಎಫೆಲ್‌ಸ್ತೂಪದ ಬಳಿ ಒಂದು ಮನೆಯಲ್ಲಿ ವಾಸಿಸುತ್ತಿದ್ದ. ಒಮ್ಮೆ ಅವನ ಸ್ನೇಹಿತರಲ್ಲೊಬ್ಬನು "ಇಷ್ಟು ವಿಕಾರವಾದ ಗೋಪುರದ ಬಳಿ ನೀನು ವಾಸವಾಗಿರುವುದು ನನಗೆ ಆಶ್ಚರ್ಯವುಂಟುಮಾಡಿದೆ" ಎಂದು ಹಂಗಿಸಿದನಂತೆ. ಅದಕ್ಕೆ ನಾನು "ಗೋಪುರಕ್ಕೆ ಅತಿ ಸಮೀಪದಲ್ಲಿರುವುದರಿಂದ ತನಗೆ ಅದನ್ನು ನೋಡುವ ಅವಕಾಶವೇ ಬಂದಿಲ್ಲ" ಎಂದನಂತೆ ಶಾ! ಆದರೆ ಬರಬರುತ್ತ ಪ್ಯಾರೀಸ್ ನಿವಾಸಿಗಳಿಗೆ ಈ ಗೋಪುರದ ನೋಟ ರೂಢಿಯಾಗಿ ಅದರ ಮೇಲೆ ಒಂದು ವಿಧವಾದ ಮಮತೆ ಹುಟ್ಟಿತು. ಅದು ಒಂದು ರಾಷ್ಟ್ರೀಯ ಸ್ಮಾರಕವಾಗಿ ಉಳಿಯಿತು.


ಹಳದಿ
LUX
Yellow
ಹಸುರು
LUX
Green
ನೀಲ
LUX
Blue
ನಸುಗೆಂಪು
LUX
Pink
ಕಾಮನಬಿಲ್ಲಿನ ನಾಲ್ಕು ಬಣ್ಣಗಳಲ್ಲಿ ನನ್ನ ಲಕ್ಸ್ -ಹೌದು, ಬಿಳಿಬಣ್ಣದಲ್ಲಿ ಕೂಡ ಇದೆ'
ಎಂದು ಅನ್ನುತ್ತಾಳೆ
ಎಂ. ಎನ್. ರಾಜಂ
LTS. 82-X29 KN
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ


ಅದು ಪೂರ್ತಿಯಾದಂದಿನಿಂದಲೂ ಪ್ರತಿ ವರ್ಷ ಲಕ್ಷಗಟ್ಟಳೆ ಪ್ರವಾಸಿಕರನ್ನಾಕರ್ಷಿಸುತ್ತಿದೆ. ಮೊದಲನೇ ವರ್ಷವೇ ೧೯,೬೮,೨೮೭ ಜನ ಅದರ ಶಿಖರವನ್ನು ಹತ್ತಿದರು. ಆ ಸಂಖ್ಯೆ ಇಂದಿಗೂ ಮೀರಿಲ್ಲ. ೧೯೩೭ ರ ಪ್ಯಾರಿಸ್ ಪ್ರದರ್ಶನಕ್ಕೆ ೮,೩೦,೦೦೦ ಜನ ಬಂದರು. ಸಂದರ್ಶಕರ ಸೌಲಭ್ಯಕ್ಕಾಗಿ ಮೊದಲನೇ ಅಂತಸ್ತಿನಲ್ಲೊಂದು ಹೊಟೆಲ್ ಕೂಡ ಇದೆ. ನೋಟಕರ ಸಂಖ್ಯೆ ಋತುಮಾನವನ್ನವಲಂಬಿಸಿದೆ. ಸೆಕೆ ಕಾಲದಲ್ಲಿ ಶಿಖರದಲ್ಲಿ ತಂಗಾಳಿಯನ್ನು ಸ್ವಾದಿಸಲು ಹೆಚ್ಚು ಜನರು ಬರುತ್ತಾರೆ. ಇತರ ಕಾಲಗಳಲ್ಲಿ ಬಿರುಗಾಳಿಯ ರಭಸದಿಂದ ಕಟ್ಟೆಗಳು ಜೋಲಾಡುವುದು ಅನುಭವಕ್ಕೆ ಬರುತ್ತದೆ. ಅತ್ಯಂತ ಚಳಿಯಿರುವಾಗಲೂ ಜನ ಬರುವುದು ಪೂರ್ತಿ ನಿಲ್ಲುವುದಿಲ್ಲ. ೧೯೩೮ ರಲ್ಲಿ ಮಿತಿಮೀರಿದ ಚಳಿಯಿಂದ ಎರಡನೇ ಅಂತಸ್ತಿನ ಮೇಲೆ ಹತ್ತಲು ಅಸಾಧ್ಯವಾಗಿದ್ದಾಗಲೂ ಐದು ಮಂದಿ ಗೋಪುರವನ್ನು ಹತ್ತಲು ಹೋದರು.

ಎಫೆಲ್ ಗೋಪುರ ವರಮಾನದ ದೃಷ್ಟಿಯಿಂದಲೂ ಅತ್ಯಂತ ಯಶಸ್ವಿಯಾಗಿದೆ. ಪ್ರವೇಶ ಶುಲ್ಕದಿಂದ ಉತ್ಪತ್ತಿಯಾದ ಹಣದಿಂದ ಒಂದೇ ವರ್ಷದಲ್ಲಿ ಎಫೆಲ್ ಮಾಡಿದ ಸಾಲವೆಲ್ಲ ತೀರಿಹೋಗಿತ್ತು. ಇಂದಿಗೂ ಪ್ರವೇಶ ಫೀ, ಮುನಸಿಪಾಲಟಿಯ ವರ್ಗಣಿ, ದೀಪದಿಂದ ಬೆಳಗುವ ಜಾಹಿರಾತುಗಳಿಂದ ಅಪಾರ ಹಣ ಬರುತ್ತದೆ. (ವಾರ್ಷಿಕ ಲಾಭ ಸುಮಾರು ರೂ. ೧,೭೦,೦೦೦) ವೆಚ್ಚವೂ ಬಹಳ. ಕಾಯಂ ನೌಕರರ ಸಂಬಳ, ಲಿಫ್ಟಿನ ದುರಸ್ತಿ ಮೊದಲಾದ ಖರ್ಚುಗಳಿವೆ. ಏಳೆಂಟು ವರ್ಷಗಳಿಗೊಮ್ಮೆ ಗೋಪುರಕ್ಕೆಲ್ಲ ಬಣ್ಣ ಬಳಿಯಬೇಕಾದರೆ ಕನಿಷ್ಠ ೩೦ ಟನ್ ಪೇಯಿಂಟ್ ಬೇಕಾಗುತ್ತದೆ! ಗೋಪುರದ ವ್ಯವಹಾರವನ್ನು ಒಂದು ಕಂಪೆನಿ ನೋಡಿಕೊಳ್ಳುತ್ತದೆ. ಎಫೆಲ್ ಅದನ್ನು ಸ್ಥಾಪಿಸಿದಾಗ ಒಂದು ಪಾಲಿನ ಬೆಲೆ ೫೦೦ ಫ್ರಾಂಕ್ ಇತ್ತು. ಈಗ ಅದರ ಬೆಲೆ ೨೦,೦೦೦ ಫ್ರಾಂಕುಗಳಿಗಿಂತಲೂ ಹೆಚ್ಚು. ಮೂರು ನಾಲ್ಕು ವರ್ಷಗಳ ಹಿಂದೆ ಕಂಪೆನಿ ತನ್ನ ಪಾಲುಗಾರರಿಗೆ ಹಂಚಿದ ಲಾಭವೇ ೨೧ ಲಕ್ಷ ಫ್ರಾಂಕ್‌ಗಳಷ್ಟಿತ್ತು.

ಇಂದು ಎಫೆಲ್ ಗೋಪುರ ಫ್ರೆಂಚ್ ಜೀವನದ ಒಂದು ಅಪರಿಹಾರ್ಯ ಅಂಗವಾಗಿ ಹೋಗಿದೆ. ಮೊದಲನೇ ಮಹಾ ಯುದ್ಧಕಾಲದಲ್ಲಿ ಅದು ಸೈನಿಕ ಅವಲೋಕನದ ಸ್ಥಾನವಾಗಿ ಉಪಯೋಗಿಸಲ್ಪಟ್ಟಿತು. ಅನೇಕ ತರದ ಸಂಶೋಧನೆಗಳ ಕೇಂದ್ರ ಅದಾಗಿದೆ. (ಸ್ವತಃ ಎಫೆಲ್‌ನೇ ಅಲ್ಲೊಂದು ಭೌತಶಾಸ್ತ್ರ ಪ್ರಯೋಗಶಾಲೆಯನ್ನು ನಡೆಸಿ ವಾಯುಯಾನಕ್ಕೆ ಅವಶ್ಯವಾದ ಮಹತ್ವದ ಶೋಧಗಳನ್ನು ನಡೆಸಿದ್ದನು.) ಅದರ ಶಿಖರದಲ್ಲಿರುವ ಗಾಜಿನ ಮನೆಯಲ್ಲಿ ಹವಾಮಾನ ಸಂಶೋಧನೆಗಳಾಗುತ್ತಿವೆ. ವಯರ್‌ಲೆಸ್ ಕೇಂದ್ರವೊಂದು ಅಲ್ಲಿದೆ. ಟೆಲಿವಿಜನ್ ಪ್ರಸಾರದ ಮಳಿಗೆಯೂ ಅಲ್ಲೇ ಇದೆ. ವಿಮಾನದ ಪ್ಯಾರಾಶೂಟ್‌ಗಳ ಪ್ರಯೋಗಗಳೂ ಎಫೆಲ್ ಗೋಪುರದಿಂದ ನಡೆಯುತ್ತಿವೆ. ಕೆಲಕಾಲ ಹಿಂದೆ ಒಬ್ಬ ಧೈರ್ಯಶಾಲಿಯು ಹೊಸ ತರದ ಪ್ಯಾರಾಶೂಟ್‌ನ್ನು ಹಿಡಿದು ಗೋಪುರ ಶಿಖರದಿಂದ ಕೆಳಗೆ ಧುಮುಕಿದಾಗ ಅದು ತೆರೆಯದೆ ಹೋದುದರಿಂದ ಅವನು ಕೆಳಗೆ ಅಪ್ಪಳಿಸಿ ನುಚ್ಚು ನೂರಾಗಿ ಹೋದುದುಂಟು. ಈ ಗೋಪುರದ ಮೇಲಿಂದ ಕಾಗದದ ವಿಮಾನಗಳನ್ನು ಹಾರಿಸಿದರೆ ಅವು ಎಷ್ಟು ಹೊತ್ತು ಹಾರಾಡುತ್ತವೆಂದರೆ ಅವುಗಳ ಪ್ರಗಮನವನ್ನು ನೋಡುತ್ತ ಇರಲು ಬೈನಾಕ್ಯುಲರೇ ಬೇಕಾಗುತ್ತದೆ- ಎಂದರೆ ಅದೆಷ್ಟು ಎತ್ತರವಿದೆ ಎಂದೂಹಿಸಬಹುದು. *

ಹಣವು ಬರುವಾಗ ಎರಡು ಕಾಲಿನಿಂದ ಬರುತ್ತದೆ; ಹೋಗುವಾಗ ನೂರು ಕಾಲಿನಿಂದ ಓಡುತ್ತದೆ.

ಸಂಗ್ರಹ : ಗ. ಸು. ಉ.



ಒಂದು ತಿಳಿ ಹರಟೆ

ಮಂತ್ರಿಗಳು ಅದೃಶ್ಯರಾದಾಗ...!

ಎಂ. ಟಿ. ಜೋಶಿ

ಮಿಸ್ಟರ್ ನಾಯಿಕ್, ನಿನ್ನೆ ರಾತ್ರಿಯ ಅಮಲು ಪೂರ್ತಿಯಾಗಿ ಇಳಿದಿದೆ ತಾನೆ? ನಿಮ್ಮ ಹೇಳಿಕೆಯ ಪರಿಣಾಮವನ್ನು ಚನ್ನಾಗಿ ವಿಚಾರಿಸಿದ್ದೀರಾ? ಮಂತ್ರಿಗಳು ಕಾಣೆಯಾಗುವದೆಂದರೆ ರಾಜ್ಯದ ಪೋಲೀಸ ಖಾತೆಗೇ ಅವಮಾನ."

ರಾಜ್ಯದ ಪೋಲೀಸ ಪರಿಷ್ಕರಾದ (I. G. P.) ವೇಲಾಯುಧನ್‌ರ ಮುಖವು ಕೋಪದಿಂದ ಕೆಂಪೇರಿತ್ತು. ಒಂದು ದಿನದ ಮಟ್ಟಿಗೆ ರಾಜಧಾನಿಯಲ್ಲಿ ಸರಕಾರೀ ಮತ್ತು ಸರಕಾರೇತರ ಸಂಧಾನಗಳನ್ನು ದೃಢಪಡಿಸುವದಕ್ಕಾಗಿ ಪ್ರವಾಸ ಕೈಕೊಂಡಿದ್ದ ನೆರೆ ರಾಜ್ಯದ ಕೃಷಿ ಮಂತ್ರಿಗಳು ಅದೃಶ್ಯರಾಗಿರುವರೆಂಬ ಸುದ್ದಿಯು ಅಧಿಕಾರಿಗಳನ್ನು ಭಯಾಶ್ಚರ್ಯಗಳಿಂದ ದಂಗುಗೊಳಿಸಿತು. ಡೆಪ್ಯುಟಿ ಐ.ಜಿ.ಪಿ. ಗಳಾದ ನಾಯಿಕರು ಮಂತ್ರಿವರ್ಯರು ಒಂದು ತಾಸಿನಿಂದ ಕಣ್ಮರೆಯಾಗಿದ್ದಾರೆಂಬ ಸಂಗತಿಯನ್ನು ಐ.ಜಿ.ಪಿ. ಯವರಿಗೆ ತಿಳಿಸಿದರು.

"ಡೆಪ್ಯುಟಿ"ಗಳಾದರೂ ಶೀಘ್ರ ಕೋಪಿಗಳೇ.

ಕೈಕೆಳಗಿನ ಅಧಿಕಾರಿಗಳು ಅವರ ಎದುರಿನಲ್ಲಿ ಗಾಳಿಯ ಹೊಡೆತಕ್ಕೆ ಸಿಕ್ಕು ಕಂಪಿಸುವ ತರ ಗೆಲೆಗಳಂತೆ ತತ್ತರಿಸುತ್ತಿದ್ದರು. ಆದರೆ ಈಗ ಅವರು ಐ. ಜಿ. ಪಿ ಯವರ ಮುಂದೆ ಬೆಕ್ಕಿನೆದು-ರಿನಲ್ಲಿ ನಿಂತ ಇಲಿಯಂತಾಗಿದ್ದರು.

"ಎರಡು ಗಂಟೆಗಳ ಟೈಮ್ ಕೊಡುತ್ತೇನೆ. ಆ ಅವಧಿಯಲ್ಲಿ ಮಂತ್ರಿಗಳನ್ನು ಇದ್ದಲ್ಲಿಂದ ಪತ್ತೆ ಹಚ್ಚಲೇ ಬೇಕು. ಮತ್ತೊಂದು ವಿಷಯ. ಇದನ್ನು ಅತ್ಯಂತ ಗೌಪ್ಯವಾಗಿಡಬೇಕು. ಏನೇ ಆಗಲೀ ಪತ್ರಿಕೆಗಳು ಮತ್ತು ಮಂತ್ರಿಮಂಡಳವು ಇದರ ವಾಸನೆಯನ್ನು ಹಿಡಿಯದಂತೆ ಎಚ್ಚರ ವಹಿಸಬೇಕು. ನೀವಿನ್ನು ಹೋಗಬಹುದು."

ಐ. ಜಿ. ಪಿ. ಯವರೇನೋ "ನೀ ವಿ ನ್ನು ಹೋಗಬಹುದು." ಎಂದರು. ಆದರೆ ಅವರ ಮಾತಿನ ಶೈಲಿ ಮತ್ತು ಮುಖಭಾವ "ಮೂರ್ಖ, ತೊಲಗಾಚೆ," ಎಂದು ಸೂಚಿಸುತ್ತಿದ್ದವು.

"ಬೂಟ್ಸು"ಗಳ 'ಖಟ್' ಧ್ವನಿಗೆ ಸರಿಹೊಂದು ವಂತೆ ಡಿ. ಐ. ಜಿ. ತಮ್ಮ ವರಿಷ್ಠರಿಗೆ ಪೋಲೀಸ ಸಲಾಮಿಯನ್ನರ್ಪಿಸಿ ಹೊರನಡೆದರು. ಆದರೆ ಆ ಸಲಾಮಿನಲ್ಲಿ ಒಂದು ತರದ ಕಂದುತ್ತಿರುವ ದಿಟ್ಟ ತನವು ಗೋಚರವಾಗುತ್ತಿತ್ತು. ಅಲ್ಲಿಂದ ತೆರ-ಳಿದುದೇ ತಡ ಡಿ.ಆಯ್. ಜಿ. ಮೂಷಕ ಮುಖ ವಾಡವನ್ನು ಬದಿಗಿರಿಸಿ ತಮ್ಮ ನಿಜಸ್ವರೂಪವನ್ನು ತೋರಿಸಿದರು. ಅವರ ಸಿಂಹಗರ್ಜನೆಗೆ ಒಬ್ಬ ದೈವಗೇಡಿಯಾದ ಹೆಡ್ ಕಾನಸ್ಟೇಬಲ್‌ನು ಗುರಿ ಯಾದನು. ಡಿ. ಆಯ್. ಜಿ.ಯವರು ಈ ಬಡ ಪ್ರಾಣಿಯನ್ನು ಅವಾಚ್ಯ ಶಬ್ದಗಳಿಂದ ಬೈದು, ಮಂತ್ರಿಗಳ ಗೊತ್ತುಗುರಿಗಳನ್ನು ಪತ್ತೆ ಹಚ್ಚ ದಿದ್ದರೆ ಅವನ ಭವಿಷ್ಯ ಕರಾಳವಾದೀತೆಂದು ಬೆದ ರಿಸಿದರು.

'ಮಂತ್ರ ಪುಷ್ಪ'ಗಳಿಂದಲಂಕೃತನಾಗಿ ಹಿಂದಿ-ರುಗಿದ ಮೇಲೆ ಹೆಡಕಾನ್ಸಸ್ಟೇಬಲ್‌ನು ಪ್ರಥಮ ವಾಗಿ ಕಂಡ ನತದೃಷ್ಟನೇ ಅಂದು ಮಂತ್ರಿ ವರ್ಯರು ಅದೃಶ್ಯರಾದರೆಂದು ಹೇಳಲಾದ ಕೂಟಿನಲ್ಲಿ 'ಡ್ಯೂಟಿ' ಮಾಡುತ್ತಿದ್ದ 'ಪೋಲೀಸ ಕಾನಸ್ಟೇಬಲ್'. ಮೇಧಾವಿಗಳಾದ ಓದುಗರು ಅವರಿಬ್ಬರ ನಡುವೆ ಏನು ನಡೆಯಿತೆಂಬುದನ್ನು ಸುಲಭವಾಗಿ ಊಹಿಸಬಹುದು.

ಒದೆತಗಳನ್ನು ತಿಂದ ಕಾನಸ್ಟೇಬಲ್‌ನ ಹೆಂಡ ತಿಯು ಆ ರಾತ್ರಿ ತನ್ನ ಭುಜದ ಮೇಲೆ ಬಾಸುಂ ಡೆಗಳೇಕೆ ಎದ್ದವು, ತನ್ನ ಬಲಗಿವಿಯೇಕೆ ಚಿವು-ಟಲ್ಪಟ್ಟಿತು ಎಂಬುದನ್ನು ಅರಿಯಲಾರದೇ ಹೋದರೂ "ಇದೂ ಒಂದು ಪೋಲೀಸ್ ಲಹರಿ" ಎಂದು ಸುಮ್ಮನಾದಳು.

*

ರಾಜಧಾನಿಯ ಬೇರೊಂದು ಭಾಗದಲ್ಲಿ ಇದಕ್ಕೆ ತದ್ವಿರುದ್ಧವಾದ ಪ್ರಕರಣವು ನಡೆದಿತು.

"ನಿಮ್ಮಲ್ಲಿ ನನಗೆ ಅಚಲವಾದ ವಿಶ್ವಾಸವಿದೆ ಕೃಷ್ಣಮೂರ್ತಿಗಳೇ. ನಿಮ್ಮ ಹುಡುಗನಿಗೆ ನನ್ನ ಧನ್ಯವಾದಗಳನ್ನು ತಿಳಿಸಿರಿ."

ಪ್ರಧಾನ ಸಂಪಾದಕರ ಇಚ್ಛೆಯಂತೆ ಪ್ರಮುಖ ವರದಿಗಾರರಾದ ಕೃಷ್ಣಮೂರ್ತಿಗಳು ಕಾಣೆ ಯಾದ ಮಂತ್ರಿಗಳ ಹಿಂದೆ ಬಿಡಲ್ಪಟ್ಟ ಮತ್ತು ಅವರು ಅದೃಶ್ಯರಾದದುನ್ನು ವರದಿ ಮಾಡಿದ ಸುದ್ದಿಗಾರ ನಾರದನಿಗೆ ವಿಶೇಷ ಧನ್ಯವಾದಗಳ-ನ್ನರ್ಪಿಸಿದರು. ತಮ್ಮ ಕಾಲುಶತಮಾನದ ಅನು ಭವದ ಮೇಲಿಂದ ಇಂಥ ಸುದ್ದಿಯನ್ನು ಹೇಗೆ ಜೀವಂತವಾಗಿಡಬೇಕೆಂಬ ಬಗ್ಗೆ ಮುಖ್ಯ ವರದಿ ಗಾರರು ನಾರದನಿಗೆ ಅಮೂಲ್ಯವಾದ ಸಲಹೆಗಳ ನ್ನೀಯಲು ಮರೆಯಲಿಲ್ಲ.

ದಿನಪತ್ರಿಕೆಯ ಸಂಜೆ ಆವೃತ್ತಿಯು 'ದೊಡ್ಡ ದೊಡ್ಡ ಕಪ್ಪು ತಲೆಕಟ್ಟುಗಳಿಂದ ಕಂಗೊಳಿಸು ತ್ತಿತ್ತು. ಉದಾ :—

"ನವಕಿಷ್ಕಿಂದ ರಾಜ್ಯದ ಕೃಷಿಮಂತ್ರಿ ಮಾನ್ಯ . . . . . . ರವರ ಅದೃಶ್ಯ. ರಕ್ಷಣಾ ವಿಭಾಗದ ಜಾಗರೂಕತೆಯಲ್ಲಿ ಸಡಿಲು. ಪೋಲೀಸ ವರಿ-ಷ್ಠರು ಡಿ. ಆಯ್. ಜಿ. ಗಳ ಮೇಲೆ 'ಮಂತ್ರ ಪುಷ್ಪ'ಗಳನ್ನೆರೆದರು."

ದಿನಪತ್ರಿಕೆಯ ಕೆಲಸಗಾರರು ಆದಿನ ವಿಶೇಷ ಉತ್ಸಾಹದಲ್ಲಿದ್ದರು. ಗೂರ್ಖಾ, ಲಿಫ್ಟಮನ್,

ಆಫೀಸ್ ಪೇದೆ, ಮುಂತಾದವರು ಚಿಕ್ಕ ಚಿಕ್ಕ 'ಬಕ್ಷೀಸ್'ಗಳನ್ನು ಗಿಟ್ಟಿಸಿದರು. ಸುದ್ದಿಗಾರರು ಮತ್ತು ಉಪಸಂಪಾದಕರಿಗೆ ಚೊಕ್ಕಟವಾದ 'ಬೋನಸು' ಕೊಡುವೆವೆಂದು ಪತ್ರಿಕೆಯ ಒಡೆಯರು ಆಶ್ವಾಸನವಿತ್ತರು. ನಾರದನನ್ನು ಕೆಲವು ಕಿಡಿಗೇಡಿಗಳು "ಸ್ಕೂಪಮನ್" ಎಂದು ಕರೆದರು. ಅವನಾದರೋ ಸ್ವಭಾವತಃ ಮಹಾ ಜಿಪುಣ. ಆದರೆ ಇಂದು ಅವನು ದಾನಶೂರನಂತೆ ಐದು ರೂಪಾಯಿಗಳ ನೋಟೊಂದನ್ನು ವೆಚ್ಚ ಮಾಡಿ ಸಹೋದ್ಯೋಗಿಗಳಿಗೆ ಚಹ ಕುಡಿಸಿದನು.

ಆ ದಿನ ಸಂಜೆ ಶ್ರೀಮತಿ ನಾರದರು ಅನೇಕ ವರ್ಷಗಳನಂತರ ಮುಡಿಯಲ್ಲಿ ಘಮಘಮಿಸುವ ಸೂಜಿ ಮಲ್ಲಿಗೆಯ ಮಾಲೆಯನ್ನು ಧರಿಸಿದರು.

*

ಇತ್ತ ಪೋಲೀಸ ಖಾತೆಯು ಮಂತ್ರಿವರ್ಯರ ನೆಲೆಯನ್ನು ಗೊತ್ತುಹಚ್ಚಲು ವಿಶ್ವಪ್ರಯತ್ನ ನಡೆಸಿತ್ತು. ರಾಜ್ಯದ ಪ್ರತಿಯೊಂದು ಮೂಲೆಯಲ್ಲಿಯ ಪೋಲೀಸ ನಿಲ್ದಾಣಕ್ಕೆ ಟೆಲಿಫೋನ್ ಮತ್ತು ವಾಯರಲೆಸ್ ಮೂಲಕ ಸಂದೇಶಗಳನ್ನು ಬಿತ್ತರಿಸಲಾಯಿತು. ಕುಚೇಷ್ಟೆಯನ್ನು ಕೆರಳಿಸುವ ನಾಪತ್ತೆಯ ಸುದ್ದಿಯು ಹಬ್ಬದಂತೆ ತಡೆಯಲು ಪ್ರಬಲವಾದ ಕ್ರಮಗಳನ್ನು ಕೈಕೊಳ್ಳಬೇಕೆಂದು ಅಧಿಕಾರಿಗಳಿಗೆ ಅಬ್ಬರದ ನುಡಿಗಳಲ್ಲಿ ಅಪ್ಪಣೆ ವಿಧಿಸಲಾಯಿತು. ನಗರದ ಜನಸಂದಣಿಯು ಹೆಚ್ಚಾಗಿರುವ ಕೂಟುಗಳಲ್ಲಿ ಪಾದಚಾರಿಗಳು, "ಕುಯ್ಯೋ . . . ." ಎಂದು ಕೂಗುತ್ತ ತ್ವರಿತವಾಗಿ ಹೊರಳುವ ಪೋಲೀಸ ಕಾರುಗಳಿಂದ ಪಾರಾಗಲು ಮಹಾ ಸಾಹಸವನ್ನೇ ಮಾಡುತ್ತಿದ್ದರು.

ಗಡಿ ಪ್ರದೇಶಗಳ ಕಾವಲಗಿದ್ದ ಪೋಲೀಸರು ತಮ್ಮ ಟೊಂಕಪಟ್ಟಿಯ "ಬಕ್ಕಲ್" ಗಳನ್ನು ಚನ್ನಾಗಿ ತಿಕ್ಕಿದರು; ಬಂದೂಕುಗಳಿಗೆ ಎಣ್ಣೆ ಕುಡಿಸಿದರು ಮತ್ತು ಅವುಗಳಿಗೆ ಸಿಕ್ಕಿಸಿದ "ಬಾಯೋನೆಟ್"ಗಳನ್ನು ತೀಕ್ಷ್ಣವಾಗಿ ಮಸೆದರು. ಸಾದಾ ಬಟ್ಟೆಯನ್ನು ತೊಟ್ಟ ಸಿ. ಆಯ್. ಡಿ. ಪೋಲೀಸರು ಜುಗಾರಿಯ ಕೇಂದ್ರ, ವೇಶ್ಯಾಗೃಹ ಮತ್ತು ಶೆರೆಭಟ್ಟಿಗಳ ಮೇಲೆ ಮುತ್ತಿಗೆ ಹಾಕಿದರು; ಸಮುದ್ರದಾಳದಲ್ಲಿ ಮುಳುಗಿದರು; ಉಸುಕಿನಲ್ಲಿ ಮೊಳಕೈಯುದ್ದ ತೂತುಗಳನ್ನು ಕೊರೆದರು. ಆದರೆ ಈ ಎಲ್ಲ ಸ್ಥಳಗಳಲ್ಲಿ ಜೂಜಾಡುವ ಸಲಕರಣೆಗಳು, ತುಟಿಗೆಂಪು ಹಚ್ಚಿಕೊಳ್ಳುವ ಹೆಂಗಸರು, ಪೀಪಾಯಿಗಳು ತುಂಬು ವಷ್ಟು ಹೆಂಡ, ಮೀನ ಮತ್ತು ಏಡಿ ಮುಂತಾದ ಪದಾರ್ಥಗಳೇ ದೊರಕಿದವು; ಹೊರತು ಕಣ್ಮರೆಯಾದ ಮಾನ್ಯ ಮಂತ್ರಿಗಳ ಸುಳಿವೇ ಸಿಗಲಿಲ್ಲ.

*

"ಹೀಗೇ ಎಂದು ನಾನು ನಿಶ್ಚಯವಾಗಿ ಹೇಳಲಾರೆ ಸಾರ್. ಆದರೆ ಹೀಗೂ ಇರಬಹುದು ಎಂದು ನನ್ನ ಅನುಮಾನ. ೧೦/೨ ಬ್ಲಾಕಿನ ಎರಡನೇ ನಂಬರಿನ ಕೋಣೆಯಲ್ಲಿರುವ ರೋಗಿಯು ಈ ವಿಷಯದ ಮೇಲೆ ಬೆಳಕನ್ನು ಚೆಲ್ಲಬಹುದು. ಮುಂಜಾವಿನ ಚಹದ ಸಮಯದಲ್ಲಿ ಈ ಮನುಷ್ಯನು ನೀವು ಹುಡುಕುತ್ತಿರುವ ವ್ಯಕ್ತಿಯು ತಾನೆ ಆಗಿರುವೆನೆಂದು ಏನೇನೋ ಬಡಬಡಿಸುತ್ತಿದ್ದನೆಂದು ನನ್ನ ಮೊದಲನೇ ಉಪಸಹಾಯಕನು ತನ್ನ ವರದಿಯಲ್ಲಿ ತಿಳಿಸಿದ್ದಾನೆ. ಆ ರೋಗಿಯು ತನ್ನ ಪರಾಕ್ರಮಗಳ ಮೇಲೆ ಒಂದು ಹಾಡನ್ನು ಗುಣುಗುಣುಸುತ್ತಿದ್ದನಂತೆ. ಅದರಲ್ಲಿ ಅವನು ಹಿಂದಿನ ಚುನಾವಣೆಯಲ್ಲಿ ಆರಿಸಿ ಬಂದ ರೀತಿಯನ್ನೂ ವಿವರಿಸಿದ್ದನಂತೆ. ಒಂದು ವಿಲಕ್ಷಣ ಸಂಗತಿ ಎಂದರೆ ೨ ನೇ ನಂಬರ ಕೋಣೆಯ ರೋಗಿಯೂ ನಾಪತ್ತೆಯಾದ ಮಂತ್ರಿಗಳೂ ಒಂದೇ ಹಳ್ಳಿಯವರಿದ್ದು, ಅವರಿಬ್ಬರಲ್ಲಿ ಅನೇಕ ಸಂಗತಿಗಳು ಸಾಮಾನ್ಯವಾಗಿವೆ. ಇನ್ನೊಂದು ವಿಷಯ. ಈ ರೋಗಿಯನ್ನು ಇಲ್ಲಿ ಈ ಮೊದಲು ಕಂಡ ನೆನಪು ಯಾರಿಗೂ ಇಲ್ಲ. ಹೂಂ . . . ಹೂಂ. . . . ಆಗಲಿ ಸಾರ್ . . . Yes . . . ನೀವೇನೂ ಆ ಬಗ್ಗೆ ಚಿಂತಿಸಬೇಡಿ. ಧಾಂಡಿಗರಾದ ಗೂರ್ಖಾಗಳನ್ನು ಸುತ್ತುಮುತ್ತಲೂ ನಿಲ್ಲಿಸಿದ್ದರಿಂದ ಹೊರಗಿನವರಾರೂ ಒಳಗೆ ಬರಲಾರರು ಊಂಹು, ಪತ್ರಿಕಾಪ್ರತಿನಿಧಿಗಳೂ ಒಳಗೆ

ನುಸುಳಲಾರರು."

ಆಸ್ಪತ್ರೆಯ ಮುಖ್ಯ ಆರೋಗ್ಯಾಧಿಕಾರಿಗಳು ನಿಡಿದಾದ ನಿಟ್ಟುಸಿರು ಬಿಟ್ಟು 'ರಿಸೀವ್ವರ್' ಕೆಳಗಿಟ್ಟರು. ಆಚೆಯ ಬದಿಗಿದ್ದ ರಾಜ್ಯದ ಮುಖ್ಯ ಮಂತ್ರಿಗಳೂ ಅದನ್ನೇ ಅನುಕರಿಸಿದರು.

ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಈ ಮಾದರಿಯ ಸುದ್ದಿಯು ಪ್ರಕಟವಾಗಿತ್ತು

"ಮಾನ್ಯ ಮಂತ್ರಿಗಳ ನಾಪತ್ತೆಯು ರಾಜಧಾನಿಯನ್ನೆಲ್ಲ ವಿಸ್ಮಯಗೊಳಿಸಿದೆ."

"ಅದೃಶ್ಯರಾದ ಮಂತ್ರಿಗಳು ಸರಕಾರೀ ಹುಚ್ಚಾಸ್ಪತ್ರೆಯಲ್ಲಿ ಆರೈಕೆ ಹೊಂದುತ್ತಿರುವುದಾಗಿ ವದಂತಿ."

*

ಅಧಿಕಾರಿಗಳೂ ಅಧಿಕಾರೇತರರೂ ಮಂತ್ರಿವರ್ಯರ ನಾಪತ್ತೆಯ ಬಗ್ಗೆ ನಾನಾ ತರದ ಊಹೆಗಳನ್ನು ಮಾಡಿದರು. ಇಂಥ ಊಹೆಗಳಲ್ಲೊಂದು ಮಂತ್ರಿಗಳು ಭಾರತದ ಪ್ರಸಿದ್ಧ ನಟಿ ಮಿಸ್ ಮಾಧುರಿದೇವಿಯೊಡನೆ 'ಹೊಟೆಲ್ ಅಪ್ಸರಾ'ದಲ್ಲಿ ಅರ್ಧತಾಸಿನ ಕೆಳಗೆ ಕಾಣಿಸಿಕೊಂಡರೆಂದಿತ್ತು. ಈ ಬಗ್ಗೆ "ಚಿತ್ರ ವಿಚಿತ್ರ'ವೆಂಬ ಚಲಚಿತ್ರ ವಾರಪತ್ರಿಕೆಯಲ್ಲಿ ಸುದೀರ್ಘ ಸುದ್ದಿಯು ಪ್ರಕಟವಾಗಿತ್ತು. ಅದರ ಸಾರಾಂಶ:

"ಚಲಚಿತ್ರ ಉದ್ದಿಮೆಯ ಅಧಿಕೃತ ವಕ್ತಾರನೊಬ್ಬನು ಈ ಪತ್ರಿಕೆಯ ವಿಶೇಷ ಸುದ್ದಿಗಾರನಿಗಿತ್ತ ಸಂದರ್ಶನದಲ್ಲಿ ಕಣ್ಮರೆಯಾದ ಮಂತ್ರಿಗಳ ಬಗ್ಗೆ ಇತ್ತೀಚಿಗೆದ್ದ 'ಗುಲ್ಲ'ನ್ನು ದೃಢೀಕರಿಸಿದನು. ಮಂತ್ರಿಗಳು ನಟಿ ಮಾಧುರಿದೇವಿಯೊಡನೆ ವಿವಾಹ ಮಾಡಿಕೊಳ್ಳುವ ಯೋಚನೆಯಲ್ಲಿರುವರೆಂದೂ ವಿವಾಹದ ನಂತರ ಮಾಧುರೀದೇವಿಯು ನಾಯಕಿಯಾಗಿ ಅಭಿನಯಿಸುವ ಮತ್ತು ಭಾರತದ ಮುಖಂಡನೊಬ್ಬನ ಕಷ್ಟನಷ್ಟಗಳನ್ನು ಚಿತ್ರಿಸುವ ಚಿತ್ರಪಟವನ್ನು ನಿರ್ಮಿಸುವರೆಂದೂ ವಕ್ತಾರನು ಹೇಳಿದನು"

ಚಲಚಿತ್ರಕ್ಕೆ ಮೀಸಲಾದ ಮತ್ತೊಂದು ಪತ್ರಿಕೆಯು ಮೇಲಿನ ವಾರ್ತೆಯನ್ನು ಅಲ್ಲಗಳೆದಿತ್ತು. ಹೆಸರಾಂತ ನಟಿಯ ಸಂಗಡ ಕಾಣಿಸಿಕೊಂಡ ವ್ಯಕ್ತಿಯು ಕಾಣೆಯಾದ ಮಂತ್ರಿಗಳಾಗಿರದೆ ಅನೇಕ ಮಿಠಾಯಿ ಕಾರಖಾನೆಗಳ ಒಡೆಯನಾದ ಒಬ್ಬ ಕೋಟ್ಯಾಧೀಶ "ಭಯ್ಯಾ" ಇರುವನೆಂದು ಈ ಪತ್ರಿಕೆಯ ವರದಿಗಾರನ ಹೇಳಿಕೆಯಿತ್ತು. ಮಿಠಾಯಿ ಕಾರಖಾನೆಗಳ ಒಡೆಯನನ್ನೇ ಮಂತ್ರಿಗಳೆಂದು ತಪ್ಪಾಗಿ ಗ್ರಹಿಸಲು ಅವರಿಬ್ಬರಲ್ಲಿಯ ಕೆಲವು ಸಾಮಾನ್ಯ ಸಂಗತಿಗಳೇ ಕಾರಣವೆಂದು ಅವನು ಬರೆದಿದ್ದನು

೧ ಇಬ್ಬರೂ ಸ್ಥೂಲದೇಹಿಗಳಾಗಿದ್ದರು.

೨ ಇಬ್ಬರೂ ನಾವೆಯಾಕಾರದ ಬಿಳೀ ಟೊಪ್ಪಿಗೆಗಳನ್ನು ಧರಿಸಿದ್ದರು.

೩ ಇಬ್ಬರ ನಾಸಿಕಾಗ್ರಗಳೂ ಸಂಪತ್ತು ಮತ್ತು ಅಧಿಕಾರಗಳ ಪ್ರತೀಕವಾದ "ಜೊಂ-ಡಿಂಗ ಮೀಶೆ" ಯಿಂದ ಕಂಗೊಳಿಸುತ್ತಿದ್ದವು. ಮತ್ತು

೪ ಇಬ್ಬರೂ ತಮ್ಮ ಜೀವನಗಳಲ್ಲಿ ತೃಪ್ತಿಯ ಪರಿಪೂರ್ಣತೆಯನ್ನು ಅನುಭವಿಸಿದವರಂತೆ ತೋರುತ್ತಿದ್ದರು.

*

ಹೀಗೆ ಮಂತ್ರಿಗಳು ಅದೃಶ್ಯರಾದ ಬಗ್ಗೆ ಅಲ್ಲೋಲಕಲ್ಲೋಲವೆದ್ದಾಗ ಒಬ್ಬ ವ್ಯಕ್ತಿಯು ಮಾತ್ರ ಏನೂ ಆಗದವರಂತೆ ನಿರ್ಲಿಪ್ತನಾಗಿದ್ದನು. ಅವನೇ ಬೋಳುತಲೆಯ, ಮೆಳ್ಳುಗಣ್ಣಿನ, ಕುಳ್ಳದೇಹದ, ಆಪ್ತಕಾರ್ಯದರ್ಶಿ ಮುನಿಮಾ-ಣಿಕ್ಯಂ. ಎಲ್ಲ ಪ್ರಮುಖ ಪತ್ರಿಕೆಗಳ ಪ್ರತಿನಿಧಿಗಳು ಅವನನ್ನು ಸಂದರ್ಶಿಸಿದರು. ಅರ್ಧ ಡಜನ್ನಿಗೆ ಕಡಿಮೆಯಿಲ್ಲದಷ್ಟು ಪೋಲಿಸ ಅಧಿಕಾರಿಗಳು ಅವನಿಗೆ ಅಸಂಬದ್ಧ ಪ್ರಶ್ನೆಗಳನ್ನು ಕೇಳಿದರು. ಈ ಎಲ್ಲದಕ್ಕೂ ಮುನಿಮಾಣಿಕ್ಯಂನ ಉತ್ತರವು ಒಂದೇತೆರನಾಗಿತ್ತು— ಪ್ರಶ್ನಾರ್ಥಿಗಳ ಕಣ್ಣುಗುಡ್ಡೆಗಳನ್ನು ಕೊರೆದು ಅವರ ತಲೆಯ ಹಿಂಭಾಗದಿಂದ ಹೊರಬೀಳುವ ತೀಕ್ಷ್ಣ ನೋಟ. ಪ್ರಶ್ನಾರ್ಥಿಗಳೂ ಸಂದರ್ಶಕರೂ ತಮ್ಮ ಕರುಳು ಕುಯ್ದಿದೆ ಎಂದು ಭ್ರಮಿಸಿ ಹೊಟ್ಟೆ

ಯನ್ನು ಬಲವಾಗಿ ಅದುಮಿ ಹಿಡಿದುಕೊಂಡು ಕಾಲಿಗೆ ಬುದ್ಧಿ ಹೇಳುತ್ತಿದ್ದರು.

ಪರಿಸ್ಥಿತಿ ಹೀಗಿರುವಾಗ ಕಾಲಯಂತ್ರದಲ್ಲಿ ಮೊಳೆಯೊಂದು ಸಡಿಲಾಯಿತು. ಅದರಿಂದ ಕೆಲವರಿಗೆ ಅನುಕೂಲವಾದರೆ ಇನ್ನೂ ಕೆಲವರಿಗೆ ಅದು ಮುಳುವಾಯಿತು.

ಮುನಿಮಾಣಿಕ್ಯಂ ಸರಕಾರೀ ಅತಿಥಿಗೃಹದಲ್ಲಿ ಅಂದು ರಾತ್ರಿ ಸಮೀಚೀನವಾದ ಭೋಜನವನ್ನು ತೀರಿಸಿಕೊಂಡು ವಿಶ್ರಮಿಸುತ್ತಿದ್ದಾಗ ತಲೆಬಾಗಿಲಲ್ಲಿ ಕರೆಘಂಟೆಯು ಬಾರಿಸಿತು. ಆಪ್ತ ಕಾರ್ಯದರ್ಶಿಯು ಎದ್ದು ಹೋಗಿ ಪೋಲೀಸ್ ಅಧಿಕಾರಿಯೊಬ್ಬನನ್ನು ಬರಮಾಡಿಕೊಂಡನು. ಅವನೇ ಸಬ್ ಇನಸ್ಪೆಕ್ಟರ್ ಸುಂದರ್‍ರಾಜಯಂಗಾರ್ (ಆಪ್ತಮಿತ್ರರಿಗೆ ಪಿ. ಎಸ್. ಆಯ್. ಅಯ್ಯಂಗಾರ). ಅವರಿಬ್ಬರೂ ಲಂಗೋಟಿ ಗೆಳೆಯರಂತೆ. ಮುನಿಮಾಣಿಕ್ಯಂ ಅವನ ಕಿವಿಯಲ್ಲಿ ಏನೋ ರಹಸ್ಯವನ್ನು ಉಸುರಿದನು. ಅದನ್ನು ಕೇಳಿ ಅಯ್ಯಂಗಾರಿಯ ಹರಳೆಣ್ಣೆ ಕುಡಿದಂತಿದ್ದ ಮುಖವು ಒಮ್ಮೆಲೆ ಅರಳಿತು.

ಪಿ.ಎಸ್.ಆಯ್. ಅಯ್ಯಂಗಾರಿಯು ಕೂಡಲೇ ತನ್ನ ಮೇಲಿನ ಇನಸ್ಪೆಕ್ಟರನ ಮನೆಗೆ ಓಡಿದನು. ಅವರಿಬ್ಬರೂ ಕೂಡಿ ಡಿ. ಆಯ್. ಜಿ. ನಾಯಿಕರ ಬಂಗಲೆಗೂ ಆ ಮೇಲೆ ಆ ಮೂವರು ಐ. ಜಿ. ಪಿ. ವೇಲಾಯುಧನ್‌ರ ಬಂಗಲೆಗೂ ಧಾವಿಸಿದರು.

ಐ. ಜಿ. ಪಿ. ಒಂದು ಕ್ಷಣ ಅಪ್ರತಿಭರಾದರು. ನಂತರ ಸಾವರಿಸಿಕೊಂಡು, "ಅಂ! ಪ್ರಾತಃಕಾಲದಿಂದಲೂ ಅಲ್ಲಿಯೇ . . . ." ಎಂದು ಉದ್ಗಾರ ತೆಗೆದರು ಡೊಳ್ಳು ಹೊಟ್ಟೆಯ ಮೇಲೆ ಅಗಲವಾದ ಅಂಗೈಯನ್ನು ಆಡಿಸುತ್ತ.

"ನಾವಿಲ್ಲಿ ಇಡೀ ದೇಶವನ್ನೇ ತಲೆ ಕೆಳಗೆ ಮಾಡುತ್ತಿದ್ದೇವಲ್ಲ. ನಾನಂತೂ ಇದನ್ನು ನಂಬಲಾರೆ," ಎಂದರು ಡಿ. ಐ. ಜಿ.

"ಆದದ್ದಾರೂ ಏನಯ್ಯ?" ಇನಸ್ಪೆಕ್ಟರ್ ಸಾಹೇಬರ ತಾಳ್ಮೆಯು ಮಿತಿಮೀರಿತ್ತು.

"ಎಲ್ಲ ದೊಡ್ಡ ಮನುಷ್ಯರಂತೆ ಈ ಮಂತ್ರಿಗಳೂ ಕೆಲವು ಸಲ ಜನತೆಯ ಪ್ರೀತಿಪ್ರದರ್ಶನಕ್ಕೆ ಬೇಸರಪಡುತ್ತಾರಂತೆ," ಪಿ.ಎಸ್.ಆಯ್. ಅಯ್ಯಂಗಾರಿ ವಿವರಿಸಿದನು. "ಜನತೆಯಿಂದ ದೂರವಿದ್ದು ಕೆಲವು ಗಂಟೆಗಳನ್ನು ತಮ್ಮದೇ ಆಗಿ ಕಳೆಯಲು ಅವರು ಅನೇಕ ಉಪಾಯಗಳನ್ನು ಕಲ್ಪಿಸಿದ್ದಾರೆ. ಅವುಗಳಲ್ಲಿ ಸ್ನಾನ ಗೃಹವೂ ಒಂದು. ಮಂತ್ರಿವರ್ಯರ ಸ್ನಾನಗ್ರಹವೆಂದರೆ ಬರೀ ತೈಲಾಂಭ್ಯಂಜನದ ಸಮಸ್ತ ಸಲಕರಣೆಗಳನ್ನೊಳಗೊಂಡ ಒಂದು ಕೊಠಡಿಯಲ್ಲ. ಅದರ ಒಂದು ಪಕ್ಕಕ್ಕೆ ಶಯನಾಗೃಹ ಮತ್ತೊಂದು ಬದಿಗೆ ಪತ್ತೇದಾರಿ ಕಾದಂಬರಿಗಳನ್ನು ಮೊದಲುಮಾಡಿ ಅಧ್ಯಾತ್ಮದ ಮೇಲೆ ಎಲ್ಲ ಹೊತ್ತಿಗೆಗಳುಳ್ಳ ಚೊಕ್ಕದಾದ ಗ್ರಂಥಾಲಯವುಂಟು. ಬೇರೊಂದು ಭಾಗದಲ್ಲಿ ಕೊರವಂಜಿಯ ಕಿನ್ನರಿಯನ್ನೊಳಗೊಂಡು ಅನೇಕ ಬಗೆಯ ವಾದ್ಯಗಳಿವೆ.

"ಮಂತ್ರಿಗಳು ಸ್ನಾನಕ್ಕಿಳಿದಿದ್ದಾರೆಂದರೆ ಅವರು ತಮ್ಮ "ಸ್ನಾನಗೃಹ"ದಲ್ಲಿ ತೈಲಾಭಿಷೇಕದ ಸುಖ ಸವಿಯುತ್ತಿರಬಹುದು. "ಬಸಂತ ಬಹಾರ"ದಲ್ಲಿಯ ಒಂದು ಪದವನ್ನು ತನ್ಮಯತೆಯಿಂದ ಆಲಿಸುತ್ತಿರಬಹುದು ಇಲ್ಲವೆ ನುಡಿಸುತ್ತಿರಬಹುದು. ಪತ್ತೇದಾರಿಯ ಸುಳಿಯಲ್ಲಿ ಇಲ್ಲವೆ ಆಧ್ಯಾತ್ಮದ ಪ್ರಭಾವದಲ್ಲಿ ಸಿಕ್ಕು ಒದ್ದಾಡುತ್ತಿರಬಹುದು. ಅಥವಾ ಅವರು ತಮ್ಮ ರಾಜಮಂಚದ ಮೇಲೆ ಒರಗಿ ಸುಖವಾಗಿ ನಿದ್ರಿಸುತ್ತಿರಬಹುದು. ಮಾನ್ಯಮಂತ್ರಿಗಳು ಏನೇ ಮಾಡುತ್ತಿರಲಿ ಒಂದು ಮಾತು ಮಾತ್ರ ನಿಜ. ಅವರು ಸ್ನಾನಕ್ಕಿಳಿದಿದ್ದಾರೆಂದು ವಿಶೇಷ ಪ್ರಕಟಣೆ ಬಿತ್ತರಿಸಲ್ಪಟ್ಟರೆ ಮಂತ್ರಿಗಳು ಇನ್ನೂ ನಾಲ್ಕು ತಾಸುಗಳವರೆಗೆ ಹೊರಬರುವದಿಲ್ಲವೆಂದರಿತುಕೊಂಡು ಪೋಲೀಸಿನವರು ಮನೆಯಲ್ಲಿ ನಿಶ್ಚಿಂತೆಯಿಂದ ವಿಶ್ರಮಿಸಬಹುದು."

*

ಕಣ್ಮರೆಯಾದ ಮಂತ್ರಿಗಳ ಪತ್ತೆ ಹತ್ತಿದುದಕ್ಕಾಗಿ ವ್ಯಸನ ಪಟ್ಟವರಲ್ಲಿ ಸುದ್ದಿಗಾರ ನಾರದನೂ ಒಬ್ಬನಾಗಿದ್ದನು. *



ಪ್ರತಿನಿತ್ಯ ನೀವೆಷ್ಟು ಮಾತಾಡುತ್ತೀರಿ?

ನೀವು ವಾಚಾಳಿಗಳೂ ಅಲ್ಲ, ಹತ್ತು ಮಾತಾಡಿದರೆ ಒಂದು ಉತ್ತರ ಕೊಡುವ "ಗುಮ್ಮನಗುಸಕ"ರೂ ಅಲ್ಲವಾದರೆ ನೀವು ಪ್ರತಿನಿತ್ಯ ಎಷ್ಟು ಮಾತಾಡುತ್ತೀರಿ? ಅಂದಾಜಿದೆಯೆ?

ಪ್ರೊಫೆಸರರು, ಶಿಕ್ಷಕರು, ವ್ಯಾಪಾರಿಗಳು, ವಕೀಲರೇ ಮುಂತಾದವರು ಉಳಿದವರಿಗಿಂತ ಹೆಚ್ಚು ಮಾತಾಡುತ್ತಾರೆ ಎಂದು ಹೇಳಬಹುದು. ಏಕೆಂದರೆ ಮಾತನಾಡುವುದೇ ಅವರ ಉದ್ಯೋಗದ ಒಂದು ಪ್ರಮುಖ ಅಂಶವಾಗಿದೆ. ಇನ್ನು ಕೆಲವರಿಗೆ ಅವರಿಗಿರುವ ವಿಶಿಷ್ಟ ಕೆಲಸದ ಮೂಲಕ ಹೆಚ್ಚಾಗಿ ಮಾತನಾಡುವ ಪ್ರಸಂಗವೇ ಬರುವುದಿಲ್ಲ. ಈ ಬಗೆಯ ವಿಶಿಷ್ಟಜನರನ್ನು ಬಿಟ್ಟರೆ ಉಳಿದವರಲ್ಲೊಬ್ಬನಾದ ಸಾಮಾನ್ಯ ಮನುಷ್ಯ ಪ್ರತಿನಿತ್ಯ ಎಷ್ಟು ಮಾತಾಡುತ್ತಾನೆ? ಒಂದೈದು ಸಾವಿರ ಶಬ್ದಗಳನ್ನು ಎನ್ನುತ್ತೀರಾ? ಇಲ್ಲ. ನೀವು ಪ್ರತಿದಿವಸ ಏನಿಲ್ಲೆಂದರೂ ಸುಮಾರು ಮೂವತ್ತು ಸಾವಿರ ಶಬ್ದಗಳನ್ನು ಮಾತಾಡುತ್ತೀರಿ.

ಇದು ಅತಿಶಯೋಕ್ತಿಯಲ್ಲ. ಮೂವತ್ತು ಸಾವಿರ ಶಬ್ದಗಳನ್ನು ಮಾತಾಡುತ್ತೀರಿ ಎಂದಾಗ ನೀವು "ಛೆ! ಛೆ! ಇದು ಕೇವಲ ಅತಿಶಯೋಕ್ತಿ ಇರಬೇಕು" ಎಂದು ಅಂದುಕೊಂಡಿರಬಹುದು. ಇವಿಷ್ಟು ಶಬ್ದಗಳನ್ನು ಉಚ್ಚರಿಸಲು ನಿಮಗೆ ಎಷ್ಟು ವೇಳೆ ಹಿಡಿಯಿತು ನೋಡಿದಿರೇನು? ನಾಲ್ಕು ಸೆಕಂಡುಗಳು ಮಾತ್ರ. ನಾಲ್ಕು ಸೆಕಂಡುಗಳಲ್ಲಿ ನೀವು ಆರು ಶಬ್ದಗಳನ್ನಾಡಿದಿರಿ. ಅಂದರೆ ಮಿನಿಟಿಗೆ೯೦ಕ್ಕಿಂತ ಹೆಚ್ಚು ಶಬ್ದಗಳನ್ನು ಸಹಜವಾಗಿ ಆಡುತ್ತೀರಿ. ಈಗ ಲೆಕ್ಕ ಹಾಕಿರಿ. ಪ್ರತಿನಿತ್ಯ ಎಂಟು ತಾಸು ನಿದ್ದೆಯಲ್ಲಿ ಕಳೆದವು ಎಂದರೆ ಉಳಿದ ಹದಿನಾರು ತಾಸುಗಳಲ್ಲಿ ನೀವು ಸುಮಾರು ಒಂದು ಮೂರಾಂಶದಷ್ಟು ಹೊತ್ತು ಅಂದರೆ ಐದು ತಾಸು ಏನಾದರೂ ಮಾತಾಡುತ್ತ ಇರುತ್ತೀರಿ. ಮಿನಿಟಿಗೆ ೯೦ ಎಂದರೂ ತಾಸಿಗೆ ೫೪೦೦ ಶಬ್ದಗಳಾದವು. ಐದು ತಾಸಿಗೆ ೨೭೦೦೦ ಶಬ್ದಗಳಾಗಲಿಲ್ಲವೆ? ನಾವು ಆಡುವ ಎಲ್ಲ ವಾಕ್ಯಗಳಲ್ಲೂ "ಅತಿಶಯೋಕ್ತಿ" ಎಂಬಂಥ ದೊಡ್ಡ ಶಬ್ದಗಳಿರುವುದಿಲ್ಲ. ಇದರಿಂದ ನಾವು ಪ್ರತಿನಿತ್ಯ ಹೆಚ್ಚು ಕಡಿಮೆ ಮೂವತ್ತು ಸಾವಿರ ಶಬ್ದಗಳನಾಡುತ್ತೇವೆ ಎಂದರೆ ಅದೇನೂ ಹೆಚ್ಚಲ್ಲ.

ಸಾಮಾನ್ಯವಾದ ಗತಿಯಲ್ಲಿ ಒಬ್ಬಾತ ಒಂದು ಮಿನಿಟಿಗೆ ನೂರಾ ಇಪ್ಪತ್ತೈದು ಶಬ್ದಗಳನ್ನು ಸಹಜವಾಗಿ ಆಡುತ್ತಾನೆ. ಅಂದಮೇಲೆ ಪ್ರತಿನಿತ್ಯ ಒಬ್ಬಾತ ೩೦,೦೦೦ ಶಬ್ದಗಳನ್ನಾಡುತ್ತಾನೆ ಎಂದರೆ ಅತಿಶಯೋಕ್ತಿಯೂ ಅಲ್ಲ, ತಪ್ಪು ಲೆಕ್ಕವೂ ಅಲ್ಲ.

ಗಂಡಸರಿಗಿಂತ ಹೆಂಗಸರು ಹೆಚ್ಚು ಮಾತಾಡುತ್ತಾರೆ ಎಂದು ಬಹುಕಾಲದಿಂದಲೂ ಒಂದು

ತಿಳುವಳಿಕೆಯಿದೆ. ಆದರೆ ಪ್ರತ್ಯಕ್ಷ ಪ್ರಯೋಗ ಮಾಡಿ ಇದನ್ನು ನಿರ್ಧರಿಸಿದವರಾರೂ ಇಲ್ಲ. ಮೂವತ್ತು ತಾಸುಗಳವರೆಗೆ ಒಂದೇ ಸವನೆ ಮಾತಾಡುತ್ತ ವಿಕ್ರಮ ಸ್ಥಾಪಿಸಿದ ಕೆಲ ಸ್ತ್ರೀಯರ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಸ್ತ್ರೀಯರು ಹೆಚ್ಚು ಮಾತಾಡುತ್ತಿರಬೇಕು, ಏಕೆಂದರೆ ಅದರಿಂದ ಅವರ ಸೌಂದರ್ಯ ರಕ್ಷಣೆಯಾಗುತ್ತದೆ ಎಂಬ ಶೋಧವನ್ನು ಕೂಡ ಇತ್ತೀಚೆಗೆ ಒಬ್ಬ ಸ್ತ್ರೀ ಸೌಂದರ್ಯ ತಜ್ಞರು ಪ್ರಕಟಿಸಿದ್ದರು. ನಾಲ್ಕು ಜನ ಹೆಂಗಸರು ಒಟ್ಟಿಗೆ ಕೂಡಿದರೆ ಅವರ ಮಾತಿನ ಗದ್ದಲದಿಂದ ತಲೆ ಚಿಟ್ಟು ಹಿಡಿಯುತ್ತದೆ ಎಂದು ಗಂಡಸರು ಆರೋಪಿಸುತ್ತಾರೆ. ಆದರೆ ನಾಲ್ವರು ಮಿತ್ರರು ಒತ್ತಟ್ಟಿಗೆ ಸೇರಿದಾಗ ಹರಟೆಯ ಭರದಲ್ಲಿ ಗದ್ದಲವೆಬ್ಬಿಸುವುದಿಲ್ಲವೆ? ಮಾತಾಡುವುದರಲ್ಲಿ ಹೆಂಗಸರು ಗಟ್ಟಿ ಅಥವಾ ಗಂಡಸರು ಗಟ್ಟಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ದಿನವಿಡೀ ನಾವು ಮಾತಿನ ಗುಂಡುಗಳನ್ನು ಹಾರಿಸುವುದೇಕೆ? ಏನಾದರೂ ಮಾತಾಡಬೇಕು ಎಂಬ ಬಯಕೆ ಹೃದಯದಲ್ಲಿ ಸದಾ ಮೂಡುತ್ತಿರುತ್ತದೆ. ಅದು ಯಾಕೆ?

ಮೊದಲನೆಯದಾಗಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲೆಂದು ನಾವು ಮಾತಾಡುತ್ತೇವೆ. ಇದು ಸ್ವಾಭಾವಿಕವಿರುವಂತೆ ಅಗತ್ಯವಾದದ್ದೂ ಹೌದು. ಅತ್ಯಂತ ತೀವ್ರವಾದ ಮತ್ತು ಯಾತನಾಮಯವಾದ ಭಾವನೆಗಳಿಗೆ ಶಬ್ದರೂಪವನ್ನು ಕೊಟ್ಟಾಗ ಅವುಗಳ ತೀವ್ರತೆ ಕಡಿಮೆಯಾಗುತ್ತದೆ. ಅದೇ ಈ ಭಾವನೆಗಳನ್ನು ಆಡಿ ತೋರಿಸದೆ ಬಿಟ್ಟಲ್ಲಿ ಅವೇನೂ ನಷ್ಟವಾಗುವುದಿಲ್ಲ. ಅವು ಮನಸ್ಸಿನಲ್ಲಿ ಸುಪ್ತವಾಗಿದ್ದು ಬಳಿಕ ಒಮ್ಮಿಲ್ಲೊಮ್ಮೆ ಭಯಂಕರವಾದ ರೀತಿಯಲ್ಲಿ ಉದ್ರೇಕಗೊಂಡು ಸ್ಫೋಟವಾಗುವವು. ಆಗ ಏನಾದರೊಂದು ಅವಿವೇಕದ ಕೃತಿ ಮನುಷ್ಯನಿಂದ ಜರುಗಬಹುದು. ಇಲ್ಲವೆ ಹತ್ತಿಕ್ಕಲ್ಪಟ್ಟ ಭಾವನೆಗಳ ಮೂಲಕ ತಲೆನೋವಿನಿಂದ ಹಿಡಿದು ಅರ್ಧಾಂಗ ವಾಯುವಿನ ವರೆಗಿನ ಯಾವುದಾದರೊಂದು ರೋಗ ಉಂಟಾಗಬಹುದು.

ಸರಕ್ಕನೆ ಸಿಟ್ಟಿಗೆದ್ದು ಬಯ್ದು ರಂಪ ಮಾಡುವವರ ಸಿಟ್ಟು ಅಷ್ಟೇ ಬೇಗ ಇಳಿದು ಬಿಡುವದು. ಆದರೆ ತಮ್ಮ ಸಿಟನ್ನು ಆಡಿ ತೋರಿಸದೆ ಇರುವವರು ಎಂದಾದರೂ ಕೋಪಾತಿರೇಕದಿಂದ ಅರಿವು ತಪ್ಪಿ ಮಾತಾಡಿದರೆ ಅವರ ಶಬ್ದಗಳಲ್ಲಿ ಮರ್ಮಭೇದಕವಾದ ಹರಿತವಿರುತ್ತದೆ. ಅವರ ಮಾತುಗಳಿಗೆ ತುತ್ತಾದವನ ಅಂತಃಕರಣ ಕುದಿಯುವದರ ಜೊತೆಗೆ ಈ ಶಬ್ದಗಳನ್ನಾಡಿದವರೂ ಅವುಗಳನ್ನಾಡಿದ್ದಕ್ಕಾಗಿ ಹಿಂದಿನಿಂದ ಪಶ್ಚಾತ್ತಾಪಪಟ್ಟುಕೊಳ್ಳುತ್ತಾರೆ. ನಮ್ಮ ಭಾವನೆಗಳನ್ನು ಯೋಗ್ಯ ಸಮಯದಲ್ಲಿ ಶಬ್ದಗಳ ರೂಪದಲ್ಲಿ ವ್ಯಕ್ತಪಡಿಸುವದರಿಂದ ಎಷ್ಟೋ ತಪ್ಪು ತಿಳುವಳಿಕೆಗಳು ದೂರವಾಗುವವಲ್ಲದೆ ಪರಸ್ಪರ ಸಂಬಂಧವೂ ಕೆಡುವುದಿಲ್ಲ.

ನಮ್ಮ ಭಾವನೆಗಳನ್ನು ಆಡಿ ತೋರಿಸುವಾಗ ಎದುರಿಗೆ ಯಾರಾದರೂ ಇರಲೇಬೇಕು ಎಂದೇನೂ ಇಲ್ಲ. ಹತ್ತಿರ ಯಾರೂ ಇಲ್ಲದಿದ್ದರೂ ನಾವು ನಮ್ಮ ತೀವ್ರ ಭಾವನೆಗಳಿಗೆ ಶಬ್ದಗಳ ರೂಪ ಕೊಡುತ್ತೇವೆ. ಮನೆಯಲ್ಲಿ ನೀವು ಒಬ್ಬರೇ ಇರುವ ಪ್ರಸಂಗ ಬಂದು ನೀವು ಒಲೆ ಹೊತ್ತಿಸುವ ಗದ್ದಲಕ್ಕೆ ತೊಡಗಿದ್ದೀರಿ ಎನ್ನಿರಿ. ಆಗ ಕಟ್ಟಿಗೆ ಬೇಗ ಹೊತ್ತಿಕೊಳ್ಳದೆ ಕಣ್ಣಲ್ಲಿ ಹೊಗೆ ತುಂಬಿದಾಗ ನೀವು ಭಾವನಾವೇಗದಿಂದ ಏನಾದರೂ ಆಡುತ್ತೀರಿ. ಆ ಶಬ್ದಗಳು ಪುಸ್ತಕದಲ್ಲಿ ಪ್ರಕಟಿಸಲು ಬರುವಂತಿರುವುದಿಲ್ಲವೆಂಬ ಮಾತು ಬೇರೆ.

ಎಷ್ಟೋ ಸಲ ನಾವು ನಮ್ಮಷ್ಟಕ್ಕೇ ಮಾತಾಡಿಕೊಳ್ಳುತ್ತೇವೆ. ಬಾಯಿಂದ ಶಬ್ದಗಳು ಹೊರಹೊರಡದಿದ್ದರೂ ನಮ್ಮಷ್ಟಕ್ಕೆ ಮನಸ್ಸಿನಲ್ಲಿಯೇ ಮಾತಾಡಿಕೊಳ್ಳುತ್ತೇವೆ. ಹೊಸದೊಂದು ನಿಶ್ಚಯ ಮಾಡಿದಾಗ ಮನಸ್ಸಿನಲ್ಲಿಯೆ ನಮ್ಮೊಂದಿಗೆ ಮಾತಾಡುತ್ತೇವೆ. ಕನ್ನಡಿಯ ಎದುರಿಗೆ ನಿಂತು ಕೂದಲು ಹಿಕ್ಕಿಕೊಳ್ಳುತ್ತಿರುವಾಗ ನಿಮ ಹೊಟೆ ದೊಡ್ಡದಾಗುತ ನಡೆದಿರುವುದು, ಮುಖ

ಸುಕ್ಕುಗಟ್ಟುತ್ತಿರುವುದೂ ಕಾಣಿಸುತ್ತದೆ. ಆಗ ನೀವು ಮನಸ್ಸಿನಲ್ಲಿಯೆ "ಮತ್ತೇನು! ವ್ಯಾಯಾಮ ಇಲ್ಲ. ಚಹ ಕುಡಿಯುವುದಕ್ಕೆ ಮಿತಿಯಿಲ್ಲ. ಊಟಕ್ಕೆ ಹೊತ್ತು ವೇಳೆ ಇಲ್ಲ. ಹೀಗಾಗದೆ ಮತ್ತೇನಾದೀತು?" ಎಂದು ಅಂದುಕೊಳ್ಳುತ್ತೀರಿ ತಾನೇ.

ನೀವು ಪೇಟೆಯಲ್ಲಿ ಹೊರಟಾಗ ಯಾರೋ ಒಬ್ಬರು ನಿಮ್ಮ ಮುಂದೆ ಹಾಯ್ದು ಹೋಗುತ್ತಾರೆ. "ಎಲ್ಲಿಯೊ ನೋಡಿದ್ದೇನೆ ಇವನನ್ನು" ಎಂದು ಅನಿಸುತ್ತದೆ. ಆದರೆ ಎಲ್ಲಿ ಎಂದು ನಿಮ್ಮಷ್ಟಕ್ಕೇ ಕೇಳಿಕೊಂಡು ನೆನಪು ಮಾಡಿಕೊಳ್ಳುತ್ತೀರಿ. ಮನಸ್ಸಿಗೆ ಎಲ್ಲಿರಬಹುದು ಎಂದು ಕೇಳುತ್ತೀರಿ. ನೆನಪಾಯಿತು ಎಂದೊಡನೆ "ಎಲಾ! ಹೌದಲ್ಲ!" ಎನ್ನುತ್ತೀರಿ.

ನಿತ್ಯ ಜೀವನದಲ್ಲಿ ಎಷ್ಟೋ ಪ್ರಶ್ನೆಗಳುದ್ಭವಿಸುತ್ತವೆ. ಅವುಗಳ ವಿಚಾರ ಮಾಡುತ್ತ ನೀವು ನಿಮ್ಮೊಂದಿಗೆ ಮಾತಾಡಿಕೊಳ್ಳುತ್ತೀರಿ ಎಂದು ತುಸು ಗಮನಿಸಿದರೆ ನಿಮ್ಮ ಲಕ್ಷ್ಯಕ್ಕೆ ಬಂದೀತು. ನಮ್ಮ ಮನಸ್ಸಿನೊಳಗಿನ ಸಂದಿಗ್ಧ ಕಲ್ಪನೆಗಳಿಗೆ ಸ್ಪಷ್ಟ, ನಿಶ್ಚಿತ ರೂಪ ಕೊಡಲು ನಾವು ಮಾತಾಡುತ್ತೇವೆ.

ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವಾಗ, ನಮ್ಮಲ್ಲಿ ಬೇಸರಪಟ್ಟುಕೊಂಡಿರುವವರನ್ನು ಹೇಗೆ ಸಮಾಧಾನ ಪಡಿಸಬೇಕು ಎಂದು ಯೋಚಿಸುತ್ತಿರುವಾಗ ನಮ್ಮ ವಿಚಾರಗಳು ಶಬ್ದರೂಪವಾಗಿರುತ್ತವೆ.

ಪರಸ್ಪರರ ವಿಚಾರಗಳನ್ನರಿತುಕೊಳ್ಳಲೆಂದು ನಾವು ಭಾಷೆಯ ವಿಕಾಸವನ್ನು ಮಾಡಿಕೊಂಡಿದ್ದೇವೆ. ನಮ್ಮ ಅಗತ್ಯಗಳನ್ನು ನಾವು ಶಬ್ದಗಳಲ್ಲಿ ವ್ಯಕ್ತಪಡಿಸುತ್ತೇವೆ. ನಾವು ಯಾರನ್ನೇ ಆಗಲಿ "ಏನು ಕ್ಷೇಮವಷ್ಟೆ?" ಎಂದು ಕೇಳುವಾಗಲೆಲ್ಲ ನಮ್ಮಿಬ್ಬರ ನಡುವಿನ ಶಾಂತತೆ ಅಥವಾ ಮೌನವನ್ನು ದೂರ ಸರಿಸುತ್ತೇವೆ. ಸಮಾಜದ ಮತ್ತೊಬ್ಬ ವ್ಯಕ್ತಿಯೊಡನೆ ಸಂಬಂಧವನ್ನಿಟ್ಟುಕೊಳ್ಳುವುದಕ್ಕಾಗಿ, ಪರಸ್ಪರರ ನಡುವಿನ ಅಂತರವನ್ನು ಇಲ್ಲದಂತೆ ಮಾಡಿಕೊಳ್ಳಲು ನಾವು ಶಬ್ದರೂಪೀ ಭಾಷೆಯನ್ನು ಉಪಯೋಗಿಸುತ್ತೇವೆ.

ನಮ್ಮ ವ್ಯವಹಾರ ನಡೆಯುವುದು, ನಮ್ಮ ಮನರಂಜನೆಯಾಗುವುದು, ನಮ್ಮ ಸುಖದುಃಖಗಳಿಗೆ ಕಾರಣವಾಗುವುದು, ಈ ಶಬ್ದಗಳೇ. ನಾವು ಪ್ರತಿನಿತ್ಯ ಮಾತಾಡುವ ಸರಾಸರಿ ಮೂವತ್ತು ಸಾವಿರ ಶಬ್ದಗಳಲ್ಲಿ ಎಷ್ಟು ನಿಷ್ಪ್ರಯೋಜಕವಾದವುಗಳು, ಎಷ್ಟು ದುರುಪಯೋಗ ಮಾಡಿಕೊಂಡಂಥವು ಎಂಬುದನ್ನು ಸಹಸಾ ಯಾರೂ ವಿಚಾರಿಸುತ್ತಿರುವುದಿಲ್ಲ. ಈ ವಿಚಾರವನ್ನು ಮಾಡಿ ಆಡುವ ಶಬ್ದಗಳ ಸಾರ್ಥಕತೆಯನ್ನು ಮಾಡಿಕೊಂಡೆವಾದರೆ ಜೀವನ ಈಗಿರುವದಕ್ಕಿಂತ ಎಷ್ಟೋ ಉತ್ತಮವಾದೀತು, ಸಂತೋಷದ್ದಾದೀತು, ಸಾರ್ಥಕವಾದೀತು. ★

'&' ಎಂಬುದು, ಒಂದು ಪದವನ್ನು ಸೂಚಿಸಲು ಉಪಯೋಗಿಸುತ್ತಿದ್ದ ಅತ್ಯಂತ ಪ್ರಾಚೀನ ಸಂಕೇತ. ಅದು ಕ್ರಿ. ಪೂ. ೬೩ ರಲ್ಲಿ ರೋಮನ್ ಮಾರ್ಕಸ್ ಟೈರೋ ಎಂಬುವವನು ನಿರ್ಮಿಸಿದ ಐದು ಸಾವಿರ ಸಂಕೇತಗಳ ಪ್ರಪ್ರಥಮ ಶೀಘ್ರಲಿಪಿಯಲ್ಲಿ ಒಂದಾಗಿದ್ದು, ಸುಮಾರು ಒಂದು ಸಾವಿರ ವರ್ಷಗಳ ಕಾಲ ಬಳಕೆಯಲ್ಲಿದ್ದಿತು. ಆ ಐದು ಸಾವಿರ ಸಂಕೇತಗಳಲ್ಲಿ ಇಂದಿಗೂ ಜೀವಂತವಾಗಿರುವ ಈ ಏಕೈಕ ಸಂಕೇತ, ಇಂದು ನೂರಾರು ಭಾಷೆಗಳಲ್ಲಿ 'ಮತ್ತು' ಎಂಬರ್ಥದಲ್ಲಿ ಉಪಯೋಗಿಸಲ್ಪಡುತ್ತಿದೆ.

— ಎಂ. ಬಿ. ಆರ್. ಪ್ರಸಾದ್

ಎಷ್ಟು ರುಚಿಕರ!



ಮನೆಗಳಿಗೆ—ಹೋಟೆಲುಗಳಿಗೆ

ಬ್ರೂಕ್ ಬಾಂಡ್
ಸ್ಪೆಷಲ್ ಹೋಟೆಲ್ ಬ್ಲೆಂಡ್

ಡಸ್ಟ್ ಟೀ

- ★ ಪ್ರತಿ ಪೊಟ್ಟಣ ನಿಮಗೆ ಹೆಚ್ಚು ಬಟ್ಟಲು ಉತ್ತಮ ಚಹವನ್ನು ನೀಡುವುದು
- ★ ತೇವ ತಗಲದಂತೆ ಪೊಟ್ಟಣ ಕಟ್ಟುವಿಕೆಯ ನಿಮಿತ್ತ ಅತ್ಯಂತ ಪರಿಶುದ್ಧವಾಗಿರುವುದು
- ★ ಮಿಲಿಯಗಟ್ಟಲೆ ಮನೆಗಳಲ್ಲಿ ಇದನ್ನು ಕುಡಿದು ಆನಂದ ಪಡೆಯುತ್ತಿದ್ದಾರೆ

3 ಗಾತ್ರಗಳಲ್ಲಿ ದೊರೆಯುತ್ತದೆ

500 ಗ್ರ್ಯಾಮ್, 100 ಗ್ರ್ಯಾಮ್,
50 ಗ್ರ್ಯಾಮ್

JWT 386

ಯೌವನದ ಮದ

ಮೂಲ ಬಂಗಾಲಿ :
ಬನಫೂಲ

ಪಾಪ, ಅವನ ತಪ್ಪಿದ್ದಿಲ್ಲ. ಈ ವಯಸ್ಸಿನಲ್ಲಿ ಎಲ್ಲ ಹುಡುಗರೂ ಹಾಗೆಯೆ ಮಾಡುತ್ತಾರೆ. ಜೈವಿಕ ನಿಯಮದಂತೆ ಯೌವನ ಧರ್ಮವೇ ಅದು. ಸ್ವಲ್ಪ ಎದೆ ಉಬ್ಬಿಸಿಕೊಂಡು ನಡೆಯಬೇಕು, ತಲೆಯೆತ್ತಿಕೊಂಡು ನಿಲ್ಲಬೇಕು ಎಂಬ ಭಾವನೆ. ಹಾವಭಾವದದಲ್ಲಿ ಚಲನವಲನಗಳಲ್ಲಿ ಪೌರುಷದ ಹಿರಿಮೆ ಒಡೆದು ಕಾಣಬೇಕು. ಹೆಣ್ಣು ಎಲ್ಲಾದರೂ ತನ್ನನ್ನು ಕಂಡರೆ ಆಹಾ, ಎಂಥ ಹುಡುಗ ! ಎಂಬುದಾಗಿ ಒಳಗೊಳಗೇ ಅಂದುಕೊಳ್ಳಬೇಕು. ನಿಷ್ಕಾರಣವಾಗಿ ಕಿವಿಯ ಬಳಿ ಬಿಸಿಯೇರುವುದು, ಮಾಂಸಖಂಡಗಳು ಸ್ಫುರಿಸುವುದು, ಧಮನಿ ಧಮನಿಯಲ್ಲಿ ರಕ್ತ ಧಾವಿಸತೊಡಗುವುದು, ಯೌವನ ಕಾಲದಲ್ಲಿ ಎಲ್ಲರಿಗೂ ಆಗುವ ಅನುಭವವೇ. ಇದೇ ನಿಯಮ. ಕಾರಣವಿರಲಿ ಇಲ್ಲದಿರಲಿ ಆಡಂಬರ ಪೂರ್ವಕವಾಗಿ ತನ್ನನ್ನು ಪ್ರದರ್ಶಿಸಿಕೊಳ್ಳದೆ ಹೋದರೆ ಅದಕ್ಕೆ ಸಮಾಧಾನವೇ ಇಲ್ಲ.

ಆ ಹುಡುಗ ಬಡಕಲೆಂದರೆ ಬಡಕಲಾಗಿದ್ದ. ಆ ದಿನ ಪ್ಲಾಟ್‌ಫಾರ್ಮಿನ ಮೇಲೆ ಈ ರೋಗ-ಗ್ರಸ್ತನಂಥ ಹುಡುಗ ಮಾಡುತ್ತಿದ್ದದ್ದು ಯೌವನದ ಸನಾತನ ವೃತ್ತಿಯ ಮಹಿಮೆಯಲ್ಲದೆ ಬೇರೇನೂ ಆಗಿರಲಿಲ್ಲ. ನಿರ್ವಿಕಾರ ದೃಷ್ಟಿ



ಯಿಂದ ನೋಡಿದರೆ ಹುಡುಗನಲ್ಲಿ ಅಂಥ ವಿಶೇಷವೇನೂ ಇರಲಿಲ್ಲ. ಸಾದಾ ಟ್ವಿಲ್‌ಶರ್ಟ್ ಧರಿಸಿದ್ದ. ಹತ್ತೊಂಭತು ಇಪ್ಪತ್ತು ವಯಸ್ಸಾಗಿರಬಹುದು. ಮೀಸೆ ಮೂಡುತ್ತಿತ್ತಷ್ಟೇ. ಕಾಲಿಗೆ ಅಗ್ಗದರದ ಆದರೆ ಚೂಟಿಯಾಗಿ ಕಾಣುವ ಒಂದು ಜತೆ ಚಪ್ಪಲಿ.

ಸ್ವಲ್ಪ ದೂರ, ಒಂದು ಬೆಂಚಿನ ಮೇಲೆ ಎಳೆ ವಯಸ್ಸಿನ ತರುಣಿಯೊಬ್ಬಳು ಕುಳಿತಿದ್ದಾಳೆ.

ಸ್ಟೇಶನ್ ಬಲು ಚಿಕ್ಕದು. ಪ್ಲಾಟ್‌ಫಾರ್ಮಿನಲ್ಲಿ ನಾಲ್ಕೈದು ಜನ ಗಾಡಿಗಾಗಿ ಕಾಯುತ್ತಿದ್ದರು. ಅವರಲ್ಲಿ ಇಬ್ಬರು ಸಂತಾಲಿ ಆದಿವಾಸಿಗಳು. ಅವರು ಗಂಟುಮೂಟೆ ಸಹಿತ ತುಸು ದೂರದಲ್ಲಿ ಕುಳಿತಿದ್ದರು. ಉಳಿದಿಬ್ಬರಲ್ಲಿ ಒಬ್ಬ ಈ ಬಡಕಲು ತರುಣ, ಇನ್ನೊಬ್ಬಳು ಆ ತರುಣಿ. ಒಬ್ಬಿಬ್ಬರು ಕೂಲಿಯಾಳುಗಳೂ ಫೇರಿವಾಲರೂ ಅತ್ತಿತ್ತ ತಿರುಗುತ್ತಿದ್ದರು. ರೇಲ್ವೆ ನೌಕರರು ತಮ್ಮ ತಮ್ಮ ಕೋಣೆಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ಈ ನೀರಸ ವಾತಾವರಣದಲ್ಲಿಯೂ ಆ ತರುಣನ ಮನಸಿನಲ್ಲಿ ಏನೋ ಒಂದು ಹುರುಪು ನಿಷ್ಕಾರಣವಾಗಿ ತಲೆಯೆತ್ತಿತು.

ಆತ ಆ ತರುಣಿಯನ್ನು ಹಿಂದೆಂದೂ ನೋಡಿರಲಿಲ್ಲ. ಬಹುಶಃ ಅವನ ಹುರುಪು ಅದರಿಂದಲೇ ಹುಟ್ಟಿರಬೇಕು.

ಹುಡುಗ ದನಿಯೇರಿಸಿ ನಿಷ್ಕಾರಣ ಒರಟು ಸ್ವರದಿಂದ ಕೂಗಿದ: "ಕೂಲಿ, ಏಯ್ ಕೂಲಿ!"

ಒಬ್ಬ ಕೂಲಿ ಬಂದ. "ಏನು ಸಾಹೇಬ್?" ಎಂದ.

"ನಮ್ಮ ಸಾಮಾನು ಗಾಡಿಯಲ್ಲಿ ಒಯ್ದಿಡು, ತಿಳಿಯಿತೆ?"

"ಅಚ್ಛಾ ಸಾಬ್!"

"ಏನು ಕೊಡಬೇಕು?"

"ಒಂದಾಣೆ ಸಾಬ್!"

"ಒಂದಾಣೆ ಯಾಕೆ, ನಾಲ್ಕಾಣೆ ತೆಗೆದುಕೊ. ಒಳ್ಳೇ ಡಬ್ಬಿ ನೋಡಿ ಸಾಮಾನು ಇಡು, ತಿಳಿಯಿತೆ?"

ಆಶ್ಚರ್ಯಗೊಂಡ ಕೂಲಿ, "ಒಳ್ಳೇದು ಸಾಬ್" ಎಂದ.

"ಒಳ್ಳೇ ಡಬ್ಬಿ ನೋಡಬೇಕು ಮತ್ತೆ?"

"ನೋಡುತ್ತೇನೆ ಸಾಬ್."

ತರುಣ ಕೂಲಿಯ ಬೆನ್ನು ಚಪ್ಪರಿಸಿದ.

"ನಿಮ್ಮ ಸಾಮಾನು ಯಾವುದು ಸಾಬ್?"

ಒಂದು ಚಿಕ್ಕ ಸೂಟ್‌ಕೇಸ್ ಹೊರತು ಮತ್ತೇನೂ ಅವನ ಹತ್ತಿರ ಇರಲಿಲ್ಲ. ಅದನ್ನೇ ಕೂಲಿಯವನಿಗೆ ತೋರಿಸಿ ತರುಣ ಮತ್ತೆ ಕೇಳಿದ, "ಗಾಡಿ ಲೇಟೇನೋ ಇವತ್ತು?"

"ಅರ್ಧ ಗಂಟೆ ಲೇಟಾಗುತ್ತೆ ಸಾಬ್."

"ನಾನು ರಿಪೋರ್ಟ್ ಮಾಡುತ್ತೇನೆ."

ಯಾರ ಮೇಲೆ ಯಾರ ಹತ್ತಿರ ರಿಪೋರ್ಟ್ ಎಂದು ಅವನು ಹೇಳಲಿಲ್ಲ.

ಕೂಲಿ ಹೊರಟುಹೋದ.

ತರುಣ ದರ್ಪದಿಂದ ಕೆಂಗಣ್ಣು ಮಾಡಿಕೊಂಡು ತರುಣಿಯ ಮುಂದೆ ಕೆಲ ಕ್ಷಣಗಳವರೆಗೆ ಅತ್ತಿಂದಿತ್ತ ಇತ್ತಿಂದತ್ತ ತಿರುಗಿದ. ಅನಂತರ ರೋಷ ಸ್ವಲ್ಪ ಇಳಿದ ಮೇಲೆ ಮುಖ ಅರಳಿಸಿಕೊಂಡು ಸಿಳ್ಳು ಹಾಕಲಾರಂಭಿಸಿದ. ಆ ಮೇಲೆ ಅಧಿಕಾರ ವಾಣಿಯಿಂದ ಕೂಗಿದ: "ಸೋಡಾ, ಏಯ್ ಸೋಡಾ! ಇಧರ್ ಆವೊ!"

ಸೋಡಾವಾಲಾ ಹತ್ತಿರ ಬಂದ.

"ಒಂದು ಸೋಡಾ ಕೊಡು. ಬೇಗ!"

"ಎರಡಾಣೆ ಆಗುತ್ತೆ ಸಾರ್!"

"ಪರವಾಯಿಲ್ಲ ಕೊಡು."

ಹೀಗೆ ಹೇಳಿ ಆತ ಆ ಹುಡುಗಿಯ ಕಡೆಗೊಮ್ಮೆ ಕಳ್ಳನೋಟ ಹರಿಸಿದ. ಹುಡುಗಿಯೂ ಅವನನ್ನೇ ನೋಡುತ್ತಿದ್ದಳೆಂದು ಬೇರೆ ಹೇಳಬೇಕಾಗಿಲ್ಲ. ಒಮ್ಮೆಲೆ ಕಣ್ಣಿಗೆ ಕಣ್ಣು ಕೂಡಿ ಅವಳು ತತ್‌ಕ್ಷಣ ದೃಷ್ಟಿಯನ್ನು ಬೇರೆಡೆಗೆ ಹೊರಳಿಸಿದಳು.

"ಲೀಜಿಯೆ ಸಾಬ್!"

ನೊರೆನೊರೆಯಾದ ಸೋಡಾಬಾಟಲಿಯನ್ನೆತ್ತಿ ಕೃಶ ಯುವಕ ಹೆಮ್ಮೆಯಿಂದ ಮುಖ ಮೇಲೆ

ಮಾಡಿ ಸೋಡಾಪಾನ ಮಾಡಿದ. ಸೋಡಾಪಾನ ದಲ್ಲಿಯೂ ಒಂದು ಪೌರುಷ !

ಈ ನಡುವೆ ಒಬ್ಬ ಹುರಿಗಡಲೆ ಮಾರುವಾತ ಹಾಜರಾದ.

ಹುಡುಗಿ ಅವನನ್ನು ಸನ್ನೆಯಿಂದ ಕರೆದು ಹುರಿಗಡಲೆ ಕೊಳ್ಳುತ್ತಿರುವುದನ್ನು ನೋಡಿ ತರುಣ ಆ ಕಡೆ ಮುಂದುವರಿದ.

"ಹುರಿಗಡಲೆಗೆ ಏನಯ್ಯಾ ದರ?"

"ಪುಡಕಿಗೆ ಒಂದು ಬಿಲ್ಲೆ ಸಾಬ್!"

"ಒಂದು ಪುಡಕಿಗೆ ಒಂದು ಬಿಲ್ಲೆ! ಈ ಸೈಜಿನ ಪುಡಕಿ ಬಿಲ್ಲೆಗೆ ನಾಲ್ಕು ಕೇಳಿದರೂ ತಪ್ಪಲ್ಲ. ಸಿಂಪ್ಲಿ ಎ ಕಟ್ ಥ್ರೋಟ್. ನಾಲ್ಕು ಪುಡಕಿ ಕೊಡುತ್ತೀಯಾ?"

"ಸಾಧ್ಯವಿಲ್ಲ ಸಾರ್."

"ಸಾಧ್ಯವಿಲ್ಲ, ಅಂದರೆ?"

ಹುರಿಗಡಲೆಯಾತ ಹೇಳಿದ: "ಕಡಲೇ ಬೆಲೆ ವಿಪರೀತ ಏರಿದೆ ಸಾರ್!"

"ಕಡಲೆಯ ಬೆಲೆ ಈಗ ಎಷ್ಟಿದೆ? ಹೇಳು, ಲೆಕ್ಕ ನೋಡಿಬಿಡುವಾ."

"ಅದೆಲ್ಲಾ ಕೆಲಸಕ್ಕೆ ಬಾರದ ಮಾತು ತೆಗೆದು ಕೊಂಡು ಏನು ಮಾಡೋದಿದೆ ಸಾಬ್? ನಿಮಗೆ ಕಡಲೆಪುರಿ ಬೇಕೋ ಹೇಳಿ. ಎಷ್ಟು ಪುಡಕಿ?"

ಹುಬ್ಬುಗಂಟಿಕ್ಕಿ ತರುಣ ಒಮ್ಮೆ ಹುರಿಗಡಲೆ ಯವನನ್ನು ನೆತ್ತಿಯಿಂದ ಪಾದದ ವರೆಗೆ ನೋ-ಡಿದ. ಆ ಮೇಲೆ ಹೇಳಿದ "ಎಷ್ಟು ಪುಡಕಿ? ನಿನ್ನ ಹತ್ತಿರ ಇರೋ ಹುರಿಗಡಲೆಯೆಲ್ಲ ಕೊಳ್ಳೋ ಸಾಮರ್ಥ್ಯ ನನಗಿದೆ ತಿಳಿಯಿತೆ? ನಾನು ಅಂದರೆ ಏನೂಂತ ಮಾಡಿದ್ದಿ?"

ಉತ್ತರವಾಗಿ ಹುರಿಗಡಲೆಯಾತ ಹಲ್ಲು ಕಿರಿದು ನಕ್ಕ.

"ನಗುತ್ತೀಯಾ? ಎಷ್ಟು ಕಡಲೆ ಇದೆ ನಿನ್ನ ಹತ್ತಿರ? ಬೆಲೆ ಎಷ್ಟು?"

"ಒಂದು ರೂಪಾಯಿ ಸಾರ್."

ತರುಣ ಪರ್ಸ್ ಬಿಚ್ಚಿ ಒಂದು ರೂಪಾಯಿ ತೆಗೆದು ಠಣ್ಣೆಂದು ಅವನ ಮುಂದೆ ಒಗೆದ. ಹುರಿ ಗಡಲೆಯಾತ ಇಷ್ಟು ನಿರೀಕ್ಷಿಸಿರಲಿಲ್ಲ. ಯಾವ ಮನೋವೃತ್ತಿ ತರುಣನನ್ನು ಕುಣಿಸುತ್ತದೆಂದು ಆ ಹುಂಬನಿಗೇನು ಅರ್ಥವಾದೀತು? ರೂಪಾಯಿ ತೆಗೆದುಕೊಂಡು ಹೊರಟು ಹೋದ.

ಆದರೆ ಇಷ್ಟೆಲ್ಲ ಹುರಿಗಡಲೆ ತೆಗೆದುಕೊಂಡು ಏನು ಮಾಡಬೇಕೆಂದು ತರುಣನಿಗೆ ಪೇಚು ಬಂತು. ಸ್ವಲ್ಪ ಇತಿಮಿತಿ ಮಾಡಿ ತರುಣಿಗೆ ನುಡಿದ: "ನೀವು ಇನ್ನೂ ಸ್ವಲ್ಪ ತೆಗೆದುಕೊಳ್ಳಿ, ರಲ್ಲ."

"ಬೇಡ ಬೇಡ. ನನಗೆ ಇಷ್ಟೇ ಸಾಕು."

ತರುಣಿ ಸಂಕೋಚದಿಂದ ತಲೆ ಅಲ್ಲಾಡಿ-ಸಿದಳು.

"ಇಷ್ಟೆಲ್ಲಾ ತೆಗೆದುಕೊಂಡು ನಾನೇನು ಮಾ-ಡಲಿ? ನೀವೂ ಒಂದಿಷ್ಟು ಇಟ್ಟುಕೊಳಿ."

ಕೆಲ ಪುಡಕಿ ಹುರಿಗಡಲೆಯನ್ನು ತರುಣ ಒತ್ತಾಯ ಮಾಡಿ ಅವಳ ಮುಂದೆ ಬೆಂಚಿನ ಮೇಲೆ ಇಟ್ಟ. ಅವನ ಕಣ್ಣೋಟದಿಂದ ಅವಳು ತುಂಬ ಸಂಕೋಚಪಟ್ಟುಕೊಂಡಳು. ಆದರೆ ಪಾಪ, ಅವಳು ಏನೂ ಮಾಡುವ ಹಾಗಿರಲಿಲ್ಲ. ನಾಚಿಕೆ ಯಿಂದ ಕಣ್ಣು ತಗ್ಗಿಸಿ ಕುಳಿತುಕೊಳ್ಳುವುದಲ್ಲದೆ ಅವಳಿಗೆ ಬೇರಾವ ಯೋಗ್ಯ ಉಪಾಯವೂ ಹೊಳೆಯಲಿಲ್ಲ.

ಉಳಿದ ಹುರಿಗಡಲೆಯ ಪುಡಿಕೆಗಳನ್ನೆಲ್ಲ ಸೂಟ್‌ಕೇಸಿನ ಮೇಲಿಟ್ಟು ತರುಣ ನಗುಮೊಗ ದಿಂದ ಹೇಳಿದ: "ಗಾಡಿ ಬರುವುದರೊಳಗೆ ನಿಧಾ ನವಾಗಿ ಮುಗಿಸಿರಿ. ನೀವು ಎಲ್ಲಿಗೆ? ಈ ಗಾಡಿ ಯಲ್ಲೆ ತಾನೆ ಹೋಗುವುದು?"

ಹುಡುಗಿ ತುಂಬಾ ನಾಚಿಕೊಂಡು ಮೆಲ್ಲಗೆ "ಮುಂದಿನ ಗಾಡಿಗೆ ಹೋಗುತ್ತೇನೆ" ಎಂದಳು.

"ಓ ಹೀಗೋ?"

ತರುಣ ಸ್ವಲ್ಪ ಹೊತ್ತು ಹಾಗೇ ನಿಂತಿದ್ದು ಪುನಃ ಅತ್ತಿಂದಿತ್ತ ಯಾತಾಯಾತದಲ್ಲಿ ತೊಡ-ಗಿದ. ಎದೆ ಹಿಗ್ಗಿಸಿ ತಲೆಯೆತ್ತಿ ಅಹೇತುಕವಾಗಿ ಪುಲಕಿತನಾಗುತ್ತ ಆತ ತಿರುಗಾಡುತ್ತಿದ್ದ.

ಮತ್ತೆ ನಿಂತ. ಆ ಮೇಲೆ ಕೊರಳು ಕೊಂಕಿಸಿ

ತೋಳಿನ ಮಾಂಸಖಂಡವನ್ನುಬ್ಬಿಸಿ ನೋಡ ತೊಡಗಿದ. ಮಾಂಸಖಂಡ ಹೇಳಿಕೊಳ್ಳುವಂತಿರಲಿಲ್ಲವೆನ್ನಿ. ಆದರೂ ಇದ್ದಷ್ಟನ್ನು ಉಬ್ಬಿಸುವುದಕ್ಕೇನಡ್ಡಿ ?

ಸಿಳ್ಳು ಹಾಕಿದ. ಇದ್ದಬಿದ್ದ ಮೀಸೆಯ ಮೇಲೆ ಒಂದೆರಡು ಸಲ ಕೈಯಾಡಿಸಿದ.

ಅನಂತರ ಅವನಿಗೆ ಪ್ಲಾಟ್‌ಫಾರ್ಮಿನ ಆ ಪಕ್ಕದಲ್ಲಿ ಕೃಷ್ಣಚೂಡಾ ವೃಕ್ಷದ ಪುಷ್ಪಿತ ಟೊಂಗೆಯೊಂದು ಇತ್ತ ಬಾಗಿರುವುದು ಕಾಣಿಸಿತು. ಒಡನೆ ಅಲ್ಲಿಗೆ ಹೋಗಿ ಜಿಗಿಜಿಗಿದು ಆ ಟೊಂಗೆಯನ್ನು ಹಿಡಿದು ಹೂ ಕೊಯ್ಯುವ ಯತ್ನ ಪ್ರಾರಂಭಿಸಿದ.

ಕೆಲ ನಿಮಿಷ ಸಾಹಸಪಟ್ಟ ನಂತರ ಕೆಲ ಹೂಗಳೂ ಸಿಕ್ಕಿದವೆನ್ನಿ.

ದಣಿದ ಶರೀರದಿಂದ ಆತ ಒಂದು ಗೊಂಚಲು ಕೃಷ್ಣಚೂಡಾ ಪುಷ್ಪದೊಡನೆ ಪುನಃ ತರುಣಿಯ ಬಳಿ ಬಂದು ನಿಂತ.

ಗಾಡಿ ಬಂತು.

ಕೂಲಿಯಾತ ಸೂಟ್‌ಕೇಸ್ ಮತ್ತು ಹುರಿಗಡಲೆ ಪೊಟ್ಟಣಗಳನ್ನು ಒಂದು ಖಾಲಿಡಬ್ಬಿಯಲ್ಲಿ ಎತ್ತಿಟ್ಟು ನಾಲ್ಕಾಣೆ ಗಿಟ್ಟಿಸಿದ.

ತರುಣ ಗಾಡಿಯನ್ನು ಹೊಕ್ಕು ಸಾಮಾನನ್ನು ಸರಿಮಾಡಿಟ್ಟು ಮತ್ತೆ ಕೆಳಗಿಳಿದ.

ಹಾಗೇ ಕುಳಿತಿದ್ದ ತರುಣಿಯನ್ನು ಒಮ್ಮೆ ದಿಟ್ಟಿಸಿ ನೋಡಿದ. ಹೌದು, ತರುಣಿ ತನ್ನತ್ತವೇ ನೋಡುತ್ತಿದ್ದಾಳೆ.

ಗಾರ್ಡ್ ಸೀಟಿ ಊದಿ ವಿಧಿವತ್ತಾಗಿ ಹಸುರು ಬಾವುಟ ತೋರಿಸಿದ. ಗಾಡಿ ಮೆಲ್ಲಗೆ ಚಲಿಸಿತು. ಆದರೂ ತರುಣ ಗಾಡಿ ಹತ್ತಲಿಲ್ಲ.

ಗಾಡಿಯ ವೇಗ ಸಾಕಷ್ಟು ಹೆಚ್ಚಾದ ಮೇಲೆ ಅವನು ಕೊನೆಯ ಶೌರ್ಯ ಪ್ರದರ್ಶನ ಮಾಡುವ ಸಲುವಾಗಿ ಹುಡುಗಿಗೆ ನಗುಮುಖದಿಂದ ನಮಸ್ಕಾರ ಹೇಳಿ ಜಿಗಿದು ಓಡುವ ಗಾಡಿ ಹತ್ತಿದ. ಆದರೆ ಕಾಲು ಜಾರಿ ಒಮ್ಮೆಲೇ ಕೆಳಕ್ಕೆ—ಚಕ್ರದಡಿಗೆ ಬಿದ್ದ.

*



ಕೆಂಪು ಸೈನ್ಯ

ಮಾಂಟಿಗೋಮರಿಯವರು ಬ್ರಿಟನ್ನಿನ ಮುಖ್ಯ ಸೇನಾನಿಯಾಗಿದ್ದಾಗ ಸೇನೆಯ ಅಧಿಕಾರಿಗಳಿಗೆ ತೋರಿಸಲೆಂದು "ಕೆಂಪು ಸೈನ್ಯ" ಎಂಬ ಚಿತ್ರಪಟವನ್ನು ಆರಿಸಿ, ಮಾರನೆಯ ದಿನ ಅದರ ಪ್ರದರ್ಶನ ಏರ್ಪಡಿಸಿದರು.

ವೇಳೆಗೆ ಸರಿಯಾಗಿ ಎಲ್ಲಾ ಅಧಿಕಾರಿಗಳೂ ನೆರೆದರು. ಪ್ರದರ್ಶನವು ಆರಂಭವಾಗುವುದಕ್ಕೆ ಮುಂಚೆ ಮಾಂಟಿಗೋಮರಿಯವರು ಒಂದು ಪುಟ್ಟ ಭಾಷಣವನ್ನು ಮಾಡಿ ಅದರಲ್ಲಿ ರಷ್ಯದ ಕಮ್ಯುನಿಸ್ಟ್ ಸೇನೆಯ ಶಿಸ್ತು ಮತ್ತು ಪ್ರಾಮುಖ್ಯತೆಗಳನ್ನು ವರ್ಣಿಸಿದರು. ದೀಪಗಳು ಆರಿದುವು. ಪ್ರದರ್ಶನವು ಆರಂಭವಾಯಿತು. ಆಗ ತೆರೆಯ ಮೇಲೆ ಕಂಡದ್ದು:

" 'ಕೆಂಪು ಸೈನ್ಯ'
ಇರುವೆಗಳ ಜೀವನ ಚಿತ್ರ."

— ಎ. ಸಿ. ಶ್ರೀರಾಮ್

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧. ಅನನ್ವಿತ

(ಅ) ಹೇಳಲಾರದ (ಆ) ಅಸಂಬದ್ಧ (ಇ) ಅರ್ಥವತ್ತಾದ (ಈ) ಹೊರಲಾರದ

೨. ಪರಿಪಾಕ

(ಅ) ಮಾಗುವಿಕೆ (ಆ) ಒಂದು ಔಷಧ (ಇ) ದುರವಸ್ಥೆ (ಈ) ಕುಟುಂಬ

೩. ಔದ್ಧತ್ಯ

(ಅ) ಹಿರಿಮೆ (ಆ) ಕೊಲೆ (ಇ) ಸೊಕ್ಕು (ಈ) ಸರಿಯಾದದ್ದು

೪. ಮೇಲುದು

(ಅ) ಮುಗಿಬೀಳು (ಆ) ಮೆತ್ತಗೆ (ಇ) ಒಳ್ಳೇ ಜತೆ (ಈ) ಎದೆ ಮೇಲಿನ ಬಟ್ಟೆ

೫. ವ್ಯಸ್ತ

(ಅ) ಓರಣ (ಆ) ಉದಯ (ಇ) ದೋಣಿಗಾರ (ಈ) ಚೆಲ್ಲಾಪಿಲ್ಲಿ

೬. ಸಾಮಗ್ರಿ

(ಅ) ಸರಕು (ಆ) ಒಳ್ಳೇ ಮಾತು (ಇ) ವೇದ ಹೇಳುವನ (ಈ) ತುತ್ತತುದಿ

೭. ಆಹ್ಲಾದ

(ಅ) ಮುಳುಗಿ ಹೋಗುವುದು (ಆ) ದುಃಖ (ಇ) ಸಂತೋಷ (ಈ) ಊಟ

೮. ನೊಣೆ

(ಅ) ಜಾರು (ಆ) ಸೋಲು (ಇ) ಪೂಜಿಸು (ಈ) ನುಂಗು

೯. ಸಾಹಚರ್ಯ

(ಅ) ತಪಸ್ಸು (ಆ) ಒಟ್ಟಾಗಿರುವುದು (ಇ) ಸೈರಿಸಿಕೊಳ್ಳುವಿಕೆ (ಈ) ನುಂಗುವಿಕೆ

೧೦. ಒಟ್ಟಿಲು

(ಅ) ರಾಶಿ (ಆ) ಅಡಿಗೆಮನೆ (ಇ) ಅಂಗಳ (ಈ) ಹೊಟ್ಟೆ

೧೧. ದೋಲಾಯಮಾನ

(ಅ) ಭಾರಿ ಸದ್ದು (ಆ) ತೂಗಾಡುವ (ಇ) ಹೋಲಿಕೆಯುಳ್ಳ (ಈ) ಓಡುವ

೧೨. ದ್ರುತ

(ಅ) ಕೂಗು (ಆ) ಕೇಳುವಿಕೆ (ಇ) ವೇಗವುಳ್ಳ (ಈ) ಮೋಸಗಾರ



' ಶಬ್ದಭಾಂಡಾರ ' ದ ಸರಿಯಾದ ಅರ್ಥಗಳು

೧. **ಅನನ್ವಿತ** (ಆ) ಅಸಂಬದ್ಧ, ಅರ್ಥ ರಹಿತ; ಹೊಂದಿಕೆಯಿಲ್ಲದ; ಅವ್ಯವಸ್ಥಿತ, ಅಡ್ಡಾದಿಡ್ಡಿ, ಕಂಡಾಬಟ್ಟೆ. ಉದಾ— ಪೋಲೀಸರ ಅನನ್ವಿತ ಅತ್ಯಾಚಾರ ಎಂದರೆ ಸಿಕ್ಕಾಬಟ್ಟೆ ಅತ್ಯಾಚಾರ. [ಸಂ. ಅನ್ ಇಲ್ಲ, ಅನ್ವಿತ=ಹೊಂದಿಕೆಯುಳ್ಳದ್ದು]

೨. **ಪರಿಪಾಕ** (ಅ) ಸರಿಯಾಗಿ ಮಾಗುವುದು, ಪೂರ್ತಿ ಹಣ್ಣಾಗುವುದು; ಸರಿಯಾಗಿ ಬೇಯುವಿಕೆ; ಪರಿಪೂರ್ಣತೆ. ಉದಾ— ಅವನ ಹೃದಯ ಅನುಭವದಿಂದ ಪರಿಪಾಕಗೊಂಡಿದೆ. [ಸಂ. ಪರಿ = ಸುತ್ತಲೂ, ಪಚ್ = ಬೇಯು]

೩. **ಔದ್ಧತ್ಯ** (ಇ) ಸೊಕ್ಕು, ದುರಹಂಕಾರ, ದರ್ಪ, ಮಲೆತ. [ಸಂ ಉತ್ = ಮೇಲೆ, ಹತ = ಎತ್ತಿದ]

೪. **ಮೇಲುದು** (ಈ) ಎದೆಯ ಮೇಲಿನ ಸೆರಗು, ಉತ್ತರೀಯ, ಹೆಗಲ ಮೇಲೆ ಹೊದ್ದ ಬಟ್ಟೆ. [ಕನ್ನಡ]

೫. **ವ್ಯಸ್ತ** (ಈ) ಚೆಲ್ಲಾಪಿಲ್ಲಿಯಾದ, ಚೂರು ಚೂರಾದ, ಚೆದರಿದ; ಚಿಂತಿತ, ಗೊಂದಲದಲ್ಲಿ ಬಿದ್ದ; ಹಿಂದು ಮುಂದಾದ; ಯಾವುದಾದರೂ ಕೆಲಸದಲ್ಲಿ ತತ್ಪರ. [ಸಂ]

೬. **ಸಾಮಗ್ರಿ** (ಅ) ಸರಕು, ಕಲೆಹಾಕಿದ ಸಾಮಾನುಗಳು, ವಸ್ತು, ಸಾಹಿತ್ಯ. ಉದಾ— ಈ ಸಾಮಗ್ರಿಯಿಂದ ಆತ ಒಂದು ಕಥೆ ಕಟ್ಟಿದ. [ಸಂ. ಸಮಗ್ರ = ಇಡಿ ಎಂಬುದರಿಂದ]

೭. **ಆಹ್ಲಾದ** (ಇ) ಸಂತೋಷ, ಆನಂದ, ಹಿಗ್ಗು. [ಸಂ.]

೮. **ನೊಣೆ** (ಈ) ನುಂಗು, ಕಬಳಿಸು; ಹಲ್ಲಿನೆಡೆ ಸಿಕ್ಕಿದ ಪದಾರ್ಥಗಳನ್ನು ನಾಲಿಗೆಯಿಂದ ಸ್ವಚ್ಛಮಾಡು. [ಕನ್ನಡ]

೯. **ಸಾಹಚರ್ಯ** (ಆ) ಒಟ್ಟಾಗಿರುವುದು, ಯಾವಾಗಲೂ ಸಂಗಡ ತಿರುಗುವುದು, ಉದಾ—ಸಾಹಚರ್ಯವಿಲ್ಲದೆ ಮನುಷ್ಯನ ಗುಣ ತಿಳಿಯದು. [ಸಂ. ಸಹ = ಸಂಗಡ, ಚರ್ = ತಿರುಗು ಎಂಬುದರಿಂದ]

೧೦. **ಒಟ್ಟಿಲು** (ಅ) ರಾಶಿ, ಸಂಗ್ರಹ; ಸಮೃದ್ಧಿ. ಉದಾ— ನದಿಯು ಮಳಲೊಟ್ಟಿಲ ಮೇಲೆ ಕುಳಿತು. [ಕನ್ನಡ ಒಟ್ಟು ಎಂಬುದರಿಂದ]

೧೧. **ದೋಲಾಯಮಾನ** (ಆ) ತೂಗಾಡುವ, ಅತ್ತಿಂದಿತ್ತ ತೊನೆಯುವ; ಅನಿಶ್ಚಿತ, ಹೀಗೋ ಹಾಗೋ ಎಂದು ಸಂಶಯಪಡುವ. ಉದಾ— ದೋಲಾಯಮಾನ ಚಿತ್ತ ಎಂದರೆ ಅನಿರ್ಧಾರದ ಮನಸು. [ಸಂ.]

೧೨. **ದ್ರುತ** (ಇ) ವೇಗವುಳ್ಳ, ಜೋರಾಗಿ ಸಾಗುವ. ಉದಾ— ದ್ರುತಗತಿಯಿಂದ ಪ್ರಗತಿ ಹೊಂದಬೇಕು. [ಸಂ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ ,,	....	ಉತ್ತಮ
೧೧—೧೨ ,,	...	ಅತ್ಯುತ್ತಮ



ಲೈಫ್‌ಬಾಯ್ ಎಲ್ಲಿದೆಯೋ ಅಲ್ಲಿದೆ ಆರೋಗ್ಯ!

ಲೈಫ್‌ಬಾಯ್‌ಯಿಂದ ಮಹದಾನಂದ! ಲೈಫ್‌ಬಾಯ್‌ಯಿಂದ
ಮಾಡಿದ ಸ್ನಾನದಿಂದ ನಿಮ್ಮಲ್ಲಿ ಮೂಡುವುದು ಆರೋಗ್ಯದ ನವೋಲ್ಲಾಸ!
ಲೈಫ್‌ಬಾಯ್ ಕೊಳೆಯಲ್ಲಿರುವ ಕ್ರಿಮಿಗಳನ್ನು ತೊಳೆದು
ತೆಗೆಯುತ್ತದೆ—ಮನೆಯುವರೆಲ್ಲರನ್ನು ಆರೋಗ್ಯದಲ್ಲಿಡುತ್ತದೆ!

ಹಿಂದುಸ್ತಾನ್ ಲೀವರ್ ಅವರ ತಯಾರಿಕೆ



ಪ್ರಾಚೀನ ಯುದ್ಧನೃತ್ಯವನ್ನು ಪ್ರದರ್ಶಿಸುತ್ತಿರುವ ಫಿಜಿಯನ್ ಹುಡುಗ

ಅತಂತ್ರರಿದ್ದೂ ಭಾರತೀಯರು ಇಲ್ಲಿ ಮುನ್ನಡೆದಿದ್ದಾರೆ

ಫಿಜಿ ದ್ವೀಪದಲ್ಲಿ ಭಾರತೀಯರು

ಗಂಗಾಧರ

ವರ್ಷಗಟ್ಟಲೆ ನೆಲೆಸಿದರೂ ಭೂಮಿ ಕೊಳ್ಳುವ ಹಕ್ಕಿಲ್ಲ, ಹೆಚ್ಚಿನ ಶಿಕ್ಷಣ ಪಡೆಯಬೇಕೆಂದರೆ ಪರದೇಶಗಳಿಗೇ ಹೋಗಬೇಕು, ಪ್ರತಿವರ್ಷವೂ ರೆಸಿಡೆನ್ಸಿಯಲ್ (ವಾಸಿಸುವ ಸೌಲಭ್ಯಕ್ಕಾಗಿ) ತೆರಿಗೆ ಕೊಡಬೇಕು. ಹೀಗೆ ನಾನಾವಿಧವಾದ ತೊಂದರೆಗಳಿದ್ದರೂ ಪ್ರತಿಕೂಲ ಪರಿಸ್ಥಿತಿಯಿದ್ದರೂ ಭಾರತೀಯರು ತಮ್ಮ ಏಳ್ಗೆಯನ್ನು ಕೆಲ ಮಟ್ಟಿಗೆ ಸಾಧಿಸಿಕೊಂಡ ನಾಡೊಂದಿದೆ. ಅದೇ ಫ್ಯಾಸಿಫಿಕ್ ಮಹಾಸಾಗರದಲ್ಲಿ ಬ್ರಿಟಿಶರ ವಸಾಹತಾಗಿರುವ ಫಿಜಿದ್ವೀಪ ಸಮೂಹ. ಅಲ್ಲಿಗೆ ಮೊದಲು ಕೂಲಿಕಾರರಾಗಿ ಹೋದ ಭಾರತೀಯರು ಸ್ವಪ್ರಯತ್ನದಿಂದ ಮುಂದೆ ಬಂದರು.

೧೯೫೨ ರ ಜನಗಣತಿ ಪ್ರಕಾರ ಫಿಜಿ ದ್ವೀಪಗಳ ಜನಸಂಖ್ಯೆ ೩೧೨,೬೭೮. ಇವರಲ್ಲಿ ೧೩೫೮೭೭ ಫಿಜಿಯನ್ನರು (ಮೂಲ ನಿವಾಸಿಗಳು), ೧೪೮೮೦೨ ಭಾರತೀಯರು, ೭೯೮೦ ಯುರೋಪಿಯನ್ನರು, ೭೨೯೮ ಮಿಶ್ರಕುಲದವರು, ೩೭೧೯ ಚೀನಿಯರು. ಮತ್ತು ೯೦೦೦ ಇತರ ಫ್ಯಾಸಿಫಿಕ್ ಕುಲದವರು ಇದ್ದಾರೆ.

೧೮೭೪ ರಲ್ಲಿ ಫಿಜಿ ದ್ವೀಪಗಳು ಬ್ರಿಟಿಶರ ವಶಕ್ಕೆ ಬಂದವು. ಅಲ್ಲಿಯ ಮೂಲ ನಿವಾಸಿಗಳ ಸಂಖ್ಯೆ ರೋಗಾದಿಗಳ ಮೂಲಕ ದಿನೇ ದಿನೇ ಕಡಿಮೆಯಾಗುತ್ತ ನಡೆದುದರಿಂದ ಅಲ್ಲಿಯ ಹೊಲ, ತೋಟಾದಿಗಳಲ್ಲಿ ದುಡಿಯಲು ಹೊರಗಿನ ಕೆಲಸಗಾರರ ಅಗತ್ಯವುಂಟಾಯಿತು. ಆದ್ದರಿಂದ ಬ್ರಿಟಿಶರು ೧೮೭೯ ರಲ್ಲಿ ಭಾರತದಿಂದ ಅಲ್ಲಿಗೆ ಕೆಲಸಗಾರರನ್ನು ಒಯ್ಯಲಾರಂಭಿಸಿದರು. ಈ ಕೆಲಸಗಾರರು ನಿರ್ದಿಷ್ಟ ಅವಧಿಯ ವರೆಗೆ ಅಲ್ಲಿ ದುಡಿದ ನಂತರ ಅವರನ್ನು ಭಾರತಕ್ಕೆ ಮರಳಿ ಕಳಿಸುವ ಕರಾರಿದ್ದಿತಾದರೂ ಅಲ್ಲಿಗೆ

ಹೋದ ಭಾರತೀಯರಲ್ಲಿ ತಿರುಗಿ ಬಂದವರು ಕಡಿಮೆ. ಅಲ್ಲಿ ಶಾಶ್ವತವಾಗಿ ನೆಲೆಸಿದವರೇ ಹೆಚ್ಚು. ಮುಂದೆ ೧೯೧೯ ರಲ್ಲಿ ಈ ರೀತಿ ಕೆಲಸಗಾರರನ್ನು ಒಯ್ಯುವದರ ವಿರುದ್ಧ ಭಾರತದಲ್ಲಿ ಚಳವಳಿ ನಡೆದುದರಿಂದ ಕೆಲಸಗಾರರನ್ನು ಒಯ್ಯುವುದು ನಿಂತಿತಾದರೂ ೧೯೫೨ ರಲ್ಲಿ ಫಿಜಿ ದ್ವೀಪಗಳಲ್ಲಿ ಭಾರತೀಯರ ಸಂಖ್ಯೆ ೧೬೪೪೮೨ ಇದ್ದಿತು. ಫಿಜಿ ದ್ವೀಪಗಳಿಗೆ ಹೋದ ಭಾರತೀಯರು ಅಲ್ಲಿ ಸ್ವಪ್ರಯತ್ನದಿಂದ ತಮ್ಮ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಂಡರು.

ಫಿಜಿ ದ್ವೀಪ ಸಮೂಹದಲ್ಲಿ ಸುಮಾರು ೩೦೦ ಸಣ್ಣ ದೊಡ್ಡ ದ್ವೀಪಗಳಿವೆ. ಇವೆಲ್ಲವುಗಳ ಒಟ್ಟು ಕ್ಷೇತ್ರ ೭೦೩೬ ಚೌರಸ ಮೈಲುಗಳಷ್ಟಿದ್ದು ಇವುಗಳಲ್ಲಿ ಅತಿ ದೊಡ್ಡದಾದ ವೀತಲೇವು ದ್ವೀಪವೊಂದೇ ಇಡೀ ವಿಸ್ತಾರದಲ್ಲಿ ಅರ್ಧದಷ್ಟಿದೆ.

ಫ್ಯಾಸಿಫಿಕ್ ಮಹಾಸಾಗರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಫಿಜಿದ್ವೀಪ ಸಮೂಹವಿದೆ. ಇದರ ರಾಜಧಾನಿ ಸುವಾ. ಇದು ಮುಂಬಯಿಯಿಂದ ವಿಮಾನ ಮಾರ್ಗವಾಗಿ ೯೯೪೭ ಮೈಲು ದೂರದಲ್ಲಿದೆ. ಇಲ್ಲಿಯ ವೇಳೆ ಭಾರತದ ವೇಳೆಗಿಂತ ೬॥ ತಾಸು ಮುಂದಿರುತ್ತದೆ.

ಇಲ್ಲಿಯ ಹವೆ ಸಮಶೀತೋಷ್ಣವಾದದ್ದು. ಅತಿಶಯ ಶಕೆ, ಅಥವಾ ಚಳಿ ಇಲ್ಲ. ಬೇಸಿಗೆಯಲ್ಲಿಯೆ ಮಳೆ ಬರುತ್ತದೆ. ಎಪ್ರಿಲ್‌ದಿಂದ ನವಂಬರದ ವರೆಗೆ ಹೆಚ್ಚು ಚಳಿಯೆನಿಸಿದರೂ ಉಣ್ಣೆ ಬಟ್ಟೆಗಳ ಅವಶ್ಯಕತೆ ಅಷ್ಟೊಂದಾಗಿ ಅನಿಸುವುದಿಲ್ಲ. ಮಳೆ ಇಡೀ ವರ್ಷದಲ್ಲಿ ಯಾವಾಗ ಬೇಕಾದಾಗ ಬರುತ್ತದೆ. ನವೆಂಬರದಿಂದ ಮೇ ತಿಂಗಳ ವರೆಗೆ ಸೊಳ್ಳೆಗಳ ಕಾಟ ವಿಪರೀತವಾಗಿರುತ್ತದೆ ಡಿಸೆಂಬರದಿಂದ ಎಪ್ರಿಲ್ ವರೆಗೆ ಬಿರುಗಾಳಿಗಳು ಆಗಾಗ ಬೀಸುತ್ತಿರುತ್ತವೆ.

ಸುವಾ ಬಿಟ್ಟರೆ ಫಿಜಿಯಲ್ಲಿ ಇನ್ನೂ ಎರಡು ಮುಖ್ಯ ಪಟ್ಟಣಗಳಿವೆ— ಲಂಬಾಸ ಮತ್ತು ಲೇವೂಕಾ. ಇವು ಮೊದಲೊಮ್ಮೆ ಫಿಜಿಯ ರಾಜಧಾನಿ ನಗರಗಳಾಗಿದ್ದವು. ಫಿಜಿಯಲ್ಲಿ ರೇಲ್ವೆ ಸೌಕರ್ಯವಿಲ್ಲ. ಟ್ಯಾಕ್ಸಿಗಳು ಬೇಕಷ್ಟು ಸಿಗುತವಾದರೂ ಅವುಗಳಿಗೆ ತುಂಬಾ ಬಾಡಿಗೆ ತೆರಬೇಕಾಗುತ್ತದೆ.

ಫಿಜಿ ಬ್ರಿಟಿಶ್ ವಸಾಹತು. ಆಡಳಿತವನ್ನು ಗವರ್ನರನು ನಡೆಸುತ್ತಾನೆ. ಈತ ಬ್ರಿಟಿಶ್ ಸರಕಾರದ ವಸಾಹತು ಮಂತ್ರಿಶಾಖೆಗೆ ಹೊಣೆಗಾರನಾಗಿರುತ್ತಾನೆ. ಗವರ್ನರನ ಸಹಾಯಕ್ಕಾಗಿ ಒಂದು ಕಾರ್ಯ ಸಮಿತಿ ಹಾಗೂ ಆಡಳಿತ ಸಭೆಯಿರುವುದಾದರೂ ಕೇವಲ ಸಲಹೆ ಕೊಡುವ ಮಟ್ಟಿಗೆ ಇವುಗಳ ಅಧಿಕಾರ ಮರ್ಯಾದಿತವಾಗಿದೆ. ಗವರ್ನರನ ಅಧಿಕಾರ ವಿಸ್ತೃತವಾದದ್ದು. ಕಾರ್ಯ ಸಮಿತಿಯಲ್ಲಿ ಗವರ್ನರ್, ವಸಾಹತು ಸೆಕ್ರೆಟರಿ, ಅಟಾರ್ನಿ ಜನರಲ್, ಅರ್ಥಮಂತ್ರಿ, ಫಿಜಿಯನ್ ಶಾಖೆಯ ಮಂತ್ರಿ, ಮತ್ತು ಬ್ರಿಟಿಶ್ ರಾಜನ ಆದೇಶಾನುಸಾರವಾಗಿ ಗವರ್ನರನು ನಾಮಕರಣ ಮಾಡುವ ಐದು ಜನ ಸದಸ್ಯರಿರುತ್ತಾರೆ.

ಆಡಳಿತ ಸಭೆಯ ಅಧ್ಯಕ್ಷ ಗವರ್ನರನೇ ಆಗಿರುತ್ತಾನೆ. ಅದರಲ್ಲಿ ೧೬ ಸರಕಾರೀ ಮತ್ತು ೧೫ ಸರಕಾರೇತರ ಸದಸ್ಯರಿರುತ್ತಾರೆ. ಈ ೧೫ ಜನರಲ್ಲಿ ೫ ಜನ ಯುರೋಪಿಯನ್ನರು, ೫ ಜನ ಭಾರತೀಯರು, ೫ ಜನ ಫಿಜಿ ಮೂಲ ನಿವಾಸಿಗಳು ಇರುತ್ತಾರೆ. ಯುರೋಪಿಯನ್ ಮತ್ತು ಭಾರತೀಯರಲ್ಲಿ ಮೂವರು ಆಯ್ಕೆಯಾದವರು, ಇಬ್ಬರು ನಾಮಕರಣವಾದವರು ಇರುತ್ತಾರೆ. ಫಿಜಿ ಮೂಲ ನಿವಾಸಿಗಳ ಪ್ರತಿನಿಧಿಗಳಾಗಿರುವ ಐವರನ್ನೂ ಗವರ್ನರನೇ ನಾಮಕರಣ ಮಾಡಿರುತ್ತಾನೆ.

ಫಿಜಿಯ ಜನಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದರಿಂದ ಹೊರಗಿನಿಂದ ಬರುವವರ ಮೇಲೆ ಫಿಜಿ ಸರಕಾರ ಕೆಲವೊಂದು ನಿರ್ಬಂಧಗಳನ್ನು ಈಗ ಹೇರಿದೆ. ಫಿಜಿಯಲ್ಲಿ ನಾಲ್ಕು ವರ್ಷಗಳಿಗಿಂತ ಕಡಿಮೆ ಕಾಲ ವಾಸಿಸುವವರಿಗಾಗಿ ಸರಕಾರ ಪರಮಿಟ್ ಕೊಡುವುದು. ಕೆಲಸಗಾರರು,

ವಿದ್ಯಾರ್ಥಿಗಳು, ಚಿಕಿತ್ಸೆಗಾಗಿ ಬರುವ ರೋಗಿಗಳು ಮುಂತಾದವರಿಗೆ ಈ ಪರಮಿಟ್‌ಗಳು ಸಿಗುತ್ತವೆ. ಪ್ರವಾಸಿಕರು ಕೆಲವೊಂದು ಕರಾರುಗಳಿಗೊಳಪಟ್ಟು ಫಿಜಿಯಲ್ಲಿ ನಾಲ್ಕು ತಿಂಗಳ ಕಾಲ ಇರಬಲ್ಲರು.

ಫಿಜಿಯಲ್ಲಿರುವ ಭಾರತೀಯರು ಇನ್ನೊಂದು ಪ್ರಶ್ನೆಯನ್ನು ಎದುರಿಸಬೇಕಾಗಿದೆ. ಅವರು ರೆಸಿಡೆನ್ಸಿಯಲ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಈ ಕಾಯದೆಯ ಪ್ರಕಾರ ಪ್ರತಿಯೊಬ್ಬ ಭಾರತೀಯನೂ ಪ್ರತಿ ವರ್ಷ ರೂ. ೨೩·೬೨ ನಯೆಪೈಸೆಗಳಷ್ಟು ಕರ ತೆರಬೇಕಾಗುತ್ತದೆ. ಐದು ಅಥವಾ ಹೆಚ್ಚು ಮಕ್ಕಳಿರುವವರಿಗೆ ಸರಕಾರ ಈ ರಕಮನ್ನು ಸೂಟುಬಿಡುತ್ತದೆ. ಈ ಕರ ಫಿಜಿಯನ್ನರಿಂದ ವಸೂಲು ಮಾಡಲ್ಪಡುವುದಿಲ್ಲ. ಇನ್‌ಕಂ ಟ್ಯಾಕ್ಸಿನಲ್ಲಿಯೆ ಈ ಕರವನ್ನು ಸೇರಿಸುವದರಿಂದ ಯುರೋಪಿಯನ್ನರು ಕೂಡ ಪ್ರತ್ಯೇಕವಾಗಿ ಈ ಕರ ಕೊಡಬೇಕಾಗುವುದಿಲ್ಲ. ಕರಭಾರದಲ್ಲಿ ೧೦೦ ಕ್ಕೆ ೬೦ ರಷ್ಟು ಭಾರತೀಯರ ಮೇಲೆಯೆ ಬೀಳುತ್ತದೆ.

ಉಳಿದೆಲ್ಲವಕ್ಕಿಂತ ಭಾರತೀಯರು ಅಲ್ಲಿ ಜಮೀನಿನ ಶಾಶ್ವತ ಒಡೆತನ ಪಡೆಯಲಾರರು ಎಂಬುದೇ ಮುಖ್ಯ ಸಮಸ್ಯೆಯಾಗಿದೆ. ಅಲ್ಲಿರುವ ಭಾರತೀಯರಲ್ಲಿ ಹೆಚ್ಚಿನವರು ಒಕ್ಕಲತನ ಮಾಡುತ್ತಾರೆ. ಅವರಲ್ಲಿ ನೂರಕ್ಕೆ ೮೫ ರಷ್ಟು ಜನ ಫಿಜಿಯ ಶಾಶ್ವತ ಪ್ರಜೆಗಳಾಗಿದ್ದರೂ ನೂರಕ್ಕೆ ೮೦ ಕ್ಕಿಂತ ಹೆಚ್ಚು ಜಮೀನು ಫಿಜಿಯ ಮೂಲ ನಿವಾಸಿಗಳ ಒಡೆತನದಲ್ಲಿದೆ. ಜಮೀನಿನ ಮೇಲಿನ ಅಧಿಕಾರವೆಲ್ಲ ' ನೇಟಿವ್ಹ್ ಲ್ಯಾಂಡ್ ಟ್ರಸ್ಟ್ ಬೋರ್ಡ್ "ನ ಕೈಲಿದ್ದು ಅದು ಮೂಲ ನಿವಾಸಿಗಳ ಹಿತ ದೃಷ್ಟಿಯಿಂದಲೇ ಕೆಲಸ ಮಾಡುತ್ತದೆ. 'ನೇಟಿವ್ ರಿಝುರ್ವ್' (ಮೂಲ ನಿವಾಸಿಗಳಿಗಾಗಿ ಕಾದಿಟ್ಟದ್ದು) ನಲ್ಲಿ ಸೇರದ ಜಮೀನನ್ನು ಮಾತ್ರ ಫಿಜಿಯನ್ ಮೂಲನಿವಾಸಿಗಳಲ್ಲದವರಿಗೆ ಕೇವಲ ೩೧ ವರ್ಷಗಳ ವರೆಗೆ ಮಾತ್ರ ಮಾರಬಹುದಾಗಿದೆ.

ಫಿಜಿಯಲ್ಲಿ ಈಗಿರುವ ಭಾರತೀಯರ ಮೂಲ ಪುರುಷರು ಭಾರತದ ಪಂಜಾಬ, ಬಿಹಾರ, ಗುಜರಾತ ಮತ್ತು ಮದ್ರಾಸ ರಾಜ್ಯಗಳಿಂದ ಬಂದವರು. ಇವರೆಲ್ಲ ಅಲ್ಲಿ ರೂಢಿಸಿಕೊಂಡ ಭಾಷೆ ಹದಗೆಟ್ಟ ಹಿಂದೀ ಭಾಷೆಯೆನ್ನಬಹುದು. ಗುಜರಾತಿಗಳು ಗುಜರಾತಿಯನ್ನು ಮದ್ರಾಸಿಗಳು ತಮಿಳನ್ನು ಆಡುವರಾದರೂ ಭಾರತೀಯರ ಸರ್ವ ಸಾಮಾನ್ಯ ಭಾಷೆ ಹಿಂದಿಯೆ ಆಗಿದು ಈಗ ಅದರ ಸುಧಾರಣೆಯಾಗುತ್ತಲಿದೆ.

ಫಿಜಿ ಭಾರತೀಯರಲ್ಲಿ ಜಾತಿ-ಪಂಥ ಭೇದ ಭಾವಗಳ ಗೊಂದಲವಿಲ್ಲ. ಅವರು ಪರಸ್ಪರರಲ್ಲಿ ಬೆರೆತು ನಡೆಯುತ್ತಾರೆ. ಹಬ್ಬ ಹುಣ್ಣಿವೆಗಳಲ್ಲಿ, ಲಗ್ನ ಮುಂಜಿಗಳಲ್ಲಿ ಹಿಂದು, ಮುಸಲ್ಮಾನ, ಕ್ರಿಶ್ಚನ್ನರೆಲ್ಲ ಉತ್ಸಾಹದಿಂದ ಭಾಗವಹಿಸುತ್ತಾರೆ. ಫಿಜಿ ಭಾರತೀಯರಲ್ಲಿ ನೂರಕ್ಕೆ ೮೨·೭೩ ರಷ್ಟು ಹಿಂದುಗಳು, ಮುಸಲ್ಮಾನರು ೧೪·೦೬ ರಷ್ಟು, ಕ್ರಿಶ್ಚನ್ನರು ೧.೩೫ ರಷ್ಟು, ಶೀಖರು ೦·೮೨ ರಷ್ಟು, ಮತ್ತು ನೇಪಾಳಿ, ಭಲೂಚಿ ಇತ್ಯಾದಿ ೦·೦೫೪ ರಷ್ಟು ಇದ್ದಾರೆ.

ಪಟ್ಟಣಗಳಲ್ಲಿರುವ ಭಾರತೀಯರು ಯುರೋಪಿಯನ್ ಪದ್ಧತಿಯಲ್ಲಿ ಜೀವನ ನಡೆಸುತ್ತಾರೆ. ಅವರ ಮನೆಗಳ ಮುಂಭಾಗಗಳೇ ಅವರ ಅಂಗಡಿಗಳಾಗಿರುವದು ಹೆಚ್ಚು. ಮನೆಗಳಲ್ಲಿ ಆಧುನಿಕ ಫರ್ನಿಚರ್ ವಿಶೇಷವಾಗಿರುತ್ತವೆ. ಮನೆಗಳನ್ನು ಸುಧಾರಿಸಿದ ರೀತಿಯಲ್ಲಿ ಸಜ್ಜುಗೊಳಿಸಿರುತ್ತಾರೆ. ಭಾರತೀಯರಲ್ಲಿ ಹೆಚ್ಚಿನವರು ಮನೆಗಳಲ್ಲಿ ಭಾರತದ ಧುರೀಣರ ಫೋಟೊಗಳನ್ನು ತೂಗು ಹಾಕಿರುತ್ತಾರೆ. ಸಾಮಾನ್ಯವಾಗಿ ಎಲ್ಲರ ಜೀವನಮಟ್ಟ ಉಚ್ಚವಾಗಿದ್ದು ಪ್ರತಿಯೊಬ್ಬರೂ ಮೋಟಾರ್‌ಕಾರ್ ಇಟ್ಟಿರುತ್ತಾರೆನ್ನಬಹುದು. ಸ್ವಚ್ಛವಾದ ಆದರೆ ಸರಳ ರೀತಿಯಲ್ಲಿ ಪೋಷಾಕು ಧರಿಸುತ್ತಾರೆ. ಊಟೋಪಚಾರ ಶುದ್ಧ ಭಾರತೀಯ ಪದ್ಧತಿಯದು. ದಿನಕ್ಕೊಮ್ಮೆ ಅನ್ನ ಬೇಕೇಬೇಕು. ತತ್ತಿ, ಮಾಂಸ ಮುಂತಾದವುಗಳು ಬಹಳ ತುಟ್ಟಿಯಾಗಿರುವುದರಿಂದ ಆಸ್ಟ್ರೇ

ಲಿಯ, ನ್ಯೂಜಿಲಂಡ್ ಮತ್ತು ಅಮೇರಿಕಗಳಿಂದ ಡಬ್ಬಿಗಳಲ್ಲಿ ತುಂಬಿ ಬರುವ ತತ್ತಿ ಮಾಂಸಾದಿಗಳನ್ನೇ ಜನ ಹೆಚ್ಚಾಗಿ ಬಳಸುತ್ತಾರೆ. ತಾಜಾ ಕಾಯಿಪಲ್ಲೆ ಸಿಗುವದಾದರೂ ಅದು ಕೂಡ ಬಲು ತುಟ್ಟಿಯಾಗಿರುತ್ತದೆ. ಇಲ್ಲಿ ವಿಶೇಷವಾಗಿ ಲಭ್ಯವಿರುವ ಫಲಗಳೆಂದರೆ ಬಾಳೆಹಣ್ಣು ಮತ್ತು ಅನಾನಸ. ಡಬ್ಬಿಗಳಲ್ಲಿ ತುಂಬಿಬರುವ ಹಣ್ಣು ಮಾತ್ರ ಅಗ್ಗವಾಗಿರುತ್ತದೆ. ರೆಫ್ರಿಜೇಟರ್ ಪ್ರತಿಯೊಂದು ಮನೆಯಲ್ಲೂ ಇರುತ್ತದೆ. ಹಳ್ಳಿಗಳಲ್ಲಿರುವವರ ಜೀವನಮಟ್ಟ ಪಟ್ಟಣಗಳಲ್ಲಿರುವವರಷ್ಟು ಉಚ್ಚಮಟ್ಟದಲ್ಲಿರುವದಿಲ್ಲವಾದರೂ ಊಟ ಇತ್ಯಾದಿಗಳ ವಿಚಾರ ಉಭಯತರಲ್ಲೂ ಒಂದೇ ಬಗೆಯದಾಗಿದೆ.

ಫಿಜಿಯಲ್ಲಿರುವ ಭಾರತೀಯರು ಹಳೆಯ ಕಂದಾಚಾರಗಳನ್ನು ಬಿಟ್ಟಿದ್ದಾರೆನ್ನಬಹುದು. ಅವರ ಸ್ತ್ರೀಯರು ಘೋಷಾ ಆಚರಿಸುವುದಿಲ್ಲ. ಹುಡುಗಿಯರು ತಮಗಿಷ್ಟ ಬಂದವರನ್ನು ಲಗ್ನವಾಗಬಹುದು. ವರದಕ್ಷಿಣೆ. ಕನ್ಯಾಶುಲ್ಕ ಉಡುಗರೆ ಪದ್ಧತಿ ಇಲ್ಲವಾದ್ದರಿಂದಲೂ ಲಗ್ನದಲ್ಲಿ ಆಡಂಬರಕ್ಕೆ ಮಹತ್ವಕೊಡುವುದಿಲ್ಲವಾದ್ದರಿಂದಲೂ ಲಗ್ನದ ವೆಚ್ಚ ಯಾರಿಗೂ ತಲೆಭಾರವಾಗುವದಿಲ್ಲ. ಗುಜರಾತಿ ಜನರು ಮಾತ್ರ ಇನ್ನೂ ಭಾರತೀಯ ಪದ್ಧತಿಯಲ್ಲೆ ವಿವಾಹಗಳನ್ನು ನೆರವೇರಿಸುತಾರೆ. ಅಲ್ಲಿ ಯೋಗ್ಯ ವಧು-ವರಗಳ ಅಭಾವವಿರುವುದರಿಂದ ಗುಜರಾತಿಗಳು ತಮ್ಮವರ ವಿವಾಹಗಳನ್ನು ಭಾರತದಲ್ಲಿಯೆ ಜರುಗಿಸುವುದು ಹೆಚ್ಚು.

ಫಿಜಿಯಲ್ಲಿ ವರ್ಣಭೇದಕ್ಕೆ ಕಾಯದೆಯ ಬೆಂಬಲವಿಲ್ಲದಿದ್ದರೂ ಭಾರತೀಯರು ಯುರೋಪಿಯನ್ನರ ಹೊಟೆಲ್ಲುಗಳಲ್ಲಿ, ನಗರಸಭೆಯ ಸ್ನಾನಗೃಹಗಳಲ್ಲಿ ಪ್ರವೇಶಿಸಲಾರರು.

ಫಿಜಿ ಕೃಷಿಪ್ರಧಾನವಾದ ದೇಶ. ಕಬ್ಬು, ತೆಂಗಿನಕಾಯಿ ಮತ್ತು ಬಾಳೆಹಣ್ಣು ಮುಖ್ಯ ಬೆಳೆಗಳಾಗಿವೆ. ಕಬ್ಬಿನ ಬೆಳೆ ಭಾರತೀಯರ ಕೈಲಿದ್ದರೆ ಉಳಿದವೆರಡು ಫಿಜಿ ಮೂಲನಿವಾಸಿಗಳ ಕೈಲಿದೆ. ಫಿಜಿಯ ೩೮೨೦೦೦ ಎಕರೆ ಕೃಷಿಯೋಗ್ಯ ಭೂಮಿಯಲ್ಲಿ ಭಾರತೀಯರ ಒಡೆತನದಲ್ಲಿ ೨೦೦೦ ಎಕರೆಗಳಷ್ಟು ಮಾತ್ರ ಇದೆ. ಭಾರತೀಯರು ಕಬ್ಬಿನ ಜೊತೆ ಅಕ್ಕಿ ತೊಗರಿಬೇಳೆಗಳನ್ನು ಬೆಳೆಯುತ್ತಾರೆ.

ಕೃಷಿಯ ಜೊತೆ ಭಾರತೀಯರು ವ್ಯಾಪಾರವನ್ನೂ ನಡೆಸುತ್ತಾರೆ. ಫಿಜಿಯ ಠೋಕ ವ್ಯಾಪಾರದಲ್ಲಿ ಸುಮಾರು ಒಂದು ಮೂರಾಂಶ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಹೆಚ್ಚು ಕಡಿಮೆ ಎಲ್ಲವೂ ಭಾರತೀಯರ ಕೈಲಿದೆ. ಬಂಗಾರದ ಗಣಿ, ತೆಂಗಿನತೋಟ, ಮೀನುಗಾರಿಕೆ, ದೋಣಿ ತಯಾರಿಸುವುದು, ವಿದ್ಯುತ್ ಮುಂತಾದ ಕೆಲ ವ್ಯವಸಾಯಗಳನ್ನು ಬಿಟ್ಟರೆ ಉಳಿದೆಲ್ಲ ವ್ಯವಸಾಯಗಳಲ್ಲಿ ಭಾರತೀಯರ ಪಾಲು ಅರ್ಧಕ್ಕಿಂತಲೂ ಹೆಚ್ಚಾಗಿದೆ. ಸೋಡಾ ವಾಟರ್ ತಯಾರಿಕೆ, ಆಭರಣ ತಯಾರಿಕೆ, ಗಡಿಯಾರ ದುರಸ್ತಿ, ಬಟ್ಟೆ ಒಗೆಯುವುದು, ಹೊಲಿಯುವುದು, ಫೋಟೊಗ್ರಾಫಿ, ಹೆರಕಟಿಂಗ್ ಸಲೂನ್, ಬಸ್, ಟ್ಯಾಕ್ಸಿ ವ್ಯವಸಾಯವೆಲ್ಲ ಕೇವಲ ಭಾರತೀಯರದೇ ಆಗಿದೆ.

ಫಿಜಿಯಲ್ಲಿ ಕಾಲೇಜಾಗಲಿ, ವಿಶ್ವವಿದ್ಯಾಲಯವಾಗಲಿ ಇಲ್ಲ. ಉಚ್ಚ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಆಸ್ಟ್ರೇಲಿಯ, ನ್ಯೂಜಿಲಂಡ್, ಇಂಗ್ಲಂಡ್ ಅಥವಾ ಭಾರತಕ್ಕೆ ಹೋಗಬೇಕಾಗುವುದು. ಭಾರತೀಯ ಮಕ್ಕಳಿಗಾಗಿ ಒಂದು ಸರಕಾರೀ ಸೆಕಂಡರಿ ಶಾಲೆಯಿದ್ದು ಅಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಪರೀಕ್ಷೆಗಾಗಿ ತರಬೇತಿ ಸಿಗುತ್ತದೆ. ಲಾಟೋಕಾ ಎಂಬಲ್ಲಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ ಎಂಬ ಹೆಸರಿನಲ್ಲಿ ವ್ಯಾಪಾರಿ ಶಿಕ್ಷಣವೀಯುವ ಒಂದು ಶಾಲೆಯಿದೆ.

ಭಾರತೀಯ ಮಕ್ಕಳಿಗಾಗಿ ಇರುವ ಖಾಸಗಿ ಶಾಲೆಗಳಲ್ಲಿ ಹೆಚ್ಚಿನವು ಮೆಥಡಿಸ್ಟ್ ಮಿಶನ್, ಆರ್ಯಸಮಾಜ ಅಥವಾ ಸನಾತನ ಧರ್ಮ

ಸಭೆಗಳು ನಡೆಸುವ ಶಾಲೆಗಳಾಗಿವೆ. ಭಾರತೀಯ ಸನ್ಮಾರ್ಗ ಐಕ್ಯ ಸಂಘವು ದಕ್ಷಿಣ ಭಾರತೀಯರಿಗೆ ತಮಿಳು ಕಲಿಸಲು ಒಂದು ಶಾಲೆಯನ್ನು ತೆರೆದಿತ್ತು. ಮುಸಲ್ಮಾನರಿಗಾಗಿ ಉರ್ದು ಕಲಿಸುವ ಮೂರು ಶಾಲೆಗಳಿದ್ದು ಅವಕ್ಕೆ ಸರಕಾರದ ಸಹಾಯವಿದೆ. ಫಿಜಿ ಮೂಲನಿವಾಸಿಗಳ ಪ್ರತಿ ಮಗುವಿಗೂ ಶಿಕ್ಷಣ ಸೌಕರ್ಯವಿದ್ದರೆ ಭಾರತೀಯ ಹುಡುಗರಲ್ಲಿ ನೂರಕ್ಕೆ ೬೬.೩ ಮತ್ತು ಹುಡುಗಿಯರಲ್ಲಿ ನೂರಕ್ಕೆ ೪೩.೪ ರಷ್ಟು ಮಕ್ಕಳಿಗೆ ಮಾತ್ರ ಪ್ರಾಥಮಿಕ ಶಿಕ್ಷಣ ಸೌಕರ್ಯವಿದೆ. ಫಿಜಿ ಸರಕಾರ ಭಾರತೀಯ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ವ್ಯವಸ್ಥೆಯನ್ನೇನೂ ಮಾಡಿಲ್ಲ. ಇರುವ ಶಾಲೆಗಳಲ್ಲಿ ಹೆಚ್ಚಿನವು ಭಾರತೀಯರೇ ಸ್ಥಾಪಿಸಿಕೊಂಡವಾಗಿವೆ ಭಾರತದ ಪಂಡಿತ ಗೋಪೇಂದ್ರ ನಾರಾಯಣ ಪಥಿಕರು ಫಿಜಿಯಲ್ಲಿ ಭಾರತೀಯರಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ತುಂಬ ದುಡಿಯುತ್ತಲಿದ್ದಾರೆ.

ಫಿಜಿ ಭಾರತೀಯರಲ್ಲಿ ಎರಡು ರಾಜಕೀಯ ಪಕ್ಷಗಳಿದ್ದರೂ ಅವರ ಧ್ಯೇಯ ಉದ್ದೇಶಗಳಲ್ಲಿ ವಿಶೇಷ ಅಂತರವಿಲ್ಲ ಆಡಳಿತ ಸಭೆಯ ಚುನಾವಣೆ ಮತ್ತು ಇತರ ಕಾರ್ಯಕ್ಷೇತ್ರಗಳಲ್ಲಿ ಇವು ಪರಸ್ಪರ ವಿರೋಧಿಯಾಗಿವೆ.

ಫಿಜಿ ಭಾರತೀಯರು ಕೆಲವು ವಾರಪತ್ರಿಕೆಗಳನ್ನು ಹೊರಡಿಸುತ್ತಿದ್ದಾರೆ. "ಜಾಗೃತಿ" ಮತ್ತು "ಶಾಂತಿದೂತ" ಎಂಬೆರಡು ಪತ್ರಿಕೆಗಳು ಕೇವಲ ಹಿಂದಿಯಲ್ಲಿ ಹೊರಡುತ್ತವೆ. "ಫ್ಯಾಸಿಫಿಕ್ ರಿವ್ಯೂ" ಇಂಗ್ಲಿಷ್ ಮತ್ತು ಫಿಜಿಯನ್ ಭಾಷೆಗಳಲ್ಲಿ ಮತ್ತು ಭಾರತೀಯರು ಮೊಟ್ಟ ಮೊದಲಿಗೆ ಹೊರಡಿಸಿದ್ದ "ಫಿಜಿ ಸಮಾಚಾರ" ಪತ್ರಿಕೆ ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರಡುತ್ತದೆ. "ಶಾಂತಿದೂತ" ವನ್ನು ಯುರೋಪಿಯನ್ನರು ಹೊರಡಿಸುವರಾದರೂ ಅದರ ಸಂಪಾದಕರೂ ಭಾರತೀಯರೇ ಆಗಿದ್ದಾರೆ.

ಫಿಜಿಯಲ್ಲಿ ಎರಡು ಕೋಣೆಗಳ ಮನೆಗೆ ತಿಂಗಳ ೧೦ ಪೌಂಡು ಭಾಡಿಗೆ ಕೊಡಬೇಕಾಗುವುದು. ಮನೆಯಾಳುಗಳ ಸಂಬಳ ವಿಪರೀತವಾಗಿರುವುದರಿಂದ ಮನೆಯಾಳುಗಳನ್ನು ಸಹಸಾಯಾರೂ ಇಟ್ಟುಕೊಂಡಿರುವದಿಲ್ಲ.

ಸಕ್ಕರೆ ಮತ್ತು ಹಾಲು ಅಗ್ಗವಾಗಿದ್ದರೂ ಫಿಜಿಯಲ್ಲಿ ಜೀವನ ವೆಚ್ಚ ಭಾರತ, ನ್ಯೂಜಿಲಂಡ್ ಮತ್ತು ಆಸ್ಟ್ರೇಲಿಯಗಳಿಗಿಂತ ಹೆಚ್ಚಾಗಿದೆ. ಒಂದಿಷ್ಟು ಕಾಯಿಪಲ್ಲೆ, ಹಣ್ಣುಹಂಪಲ ಬಿಟ್ಟರೆ ಉಳಿದೆಲ್ಲ ವಸ್ತುಗಳು ಹೊರಗಿನಿಂದ ಬರುವುದೇ ಇದಕ್ಕೆ ಕಾರಣವಾಗಿದೆ.

ಫಿಜಿಯಲ್ಲಿ ಅನೇಕ ಸಿನೇಮಾ ಥೇಟರುಗಳಿದ್ದು ಭಾರತೀಯ ಚಲಚ್ಚಿತ್ರಗಳು ಅಧಿಕ ಸಂಖ್ಯೆಯಲ್ಲಿ ಪ್ರದರ್ಶಿಸಲ್ಪಡುತ್ತವೆ.

ಔಷಧೋಪಚಾರದ ವ್ಯವಸ್ಥೆ ಅಷ್ಟಕ್ಕಷ್ಟೆ. ಒಳ್ಳೆಯ ಚಿಕಿತ್ಸೆ ಪಡೆಯಬೇಕಾಗಿದ್ದಲ್ಲಿ, ಆಪರೇಶನ್ ಪ್ರಸಂಗವಿದ್ದಲ್ಲಿ ಆಸ್ಟ್ರೇಲಿಯ ಅಥವಾ ನ್ಯೂಜಿಲಂಡಗಳಿಗೆ ಹೋಗಬೇಕಾಗುವುದು. ಪೇಟೆಂಟ್ ಔಷಧಿಗಳನ್ನು ಬಿಟ್ಟರೆ ಮತ್ತಾವ ಔಷಧಿಯನ್ನೂ ಡಾಕ್ಟರರ ಚೀಟಿಯಿಲ್ಲದೆ ಕೊಳ್ಳುವುದು ಸಾಧ್ಯವಿಲ್ಲ. ದಮ್ಮು, ಬಹುಮೂತ್ರಗಳ ಹಾವಳಿ ಇಲ್ಲಿ ಹೆಚ್ಚಿಗಿದೆ.

ಫಿಜಿಯಲ್ಲಿ ಭಾರತೀಯರ ಬ್ಯಾಂಕ್ ಇಲ್ಲ. ಯಾವ ಭಾರತೀಯ ಬ್ಯಾಂಕಿನ ಶಾಖೆಯೂ ಅಲ್ಲಿಲ್ಲ.

ಭಾರತೀಯ ಧುರೀಣರು ಆಗಾಗ ಫಿಜಿಗೆ ಹೋಗಿ ಅಲ್ಲಿಯ ಭಾರತೀಯರ ಸುಖದುಃಖಗಳ ವಿಚಾರವನ್ನರಿತುಕೊಂಡಿದ್ದಾರೆ. ದಿ. ಸಿ. ಎಫ್. ಅಂಡ್ರೂಜರು ಮೂರುಸಲ ಫಿಜಿಗೆ ಹೋಗಿದ್ದರು. ಶ್ರೀ ಶ್ರೀನಿವಾಸ ಶಾಸ್ತ್ರಿ, ಶ್ರೀ ಜಿ. ಎಸ್. ವಾಜಪೇಯಿ, ಪಂಡಿತ ಹೃದಯನಾಥ ಕುಂಜರು, ಆಸ್ಟ್ರೇಲಿಯದಲ್ಲಿ ಭಾರತದ ಹೈಕಮೀಶನರರಾಗಿದ್ದ ಶ್ರೀ ಆರ್. ಪಿ. ಪರಾಂಜಪೆಯವರೂ ಅಲ್ಲಿಗೆ ಹೋಗಿಬಂದು ಭಾರತ ಸರಕಾರಕ್ಕೆ ವರದಿ ಒಪ್ಪಿಸಿದ್ದಾರೆ.

ಸುಮಾರು ನೂರು ವರ್ಷಗಳ ಹಿಂದೆ ಸಾ-


ಮಾನ್ಯ ಕೆಲಸಗಾರರಾಗಿ ಹೋದ ಭಾರತೀಯರು ಅಲ್ಲಿಯ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಿಯೂ ತಕ್ಕಮಟ್ಟಿಗೆ ತಮ್ಮ ಏಳ್ಗೆಯನ್ನು ಸಾಧಿಸಿಕೊಂಡಿದ್ದಾರೆಂದೇ ಹೇಳಬಹುದು.

ಇನ್ನು ಫಿಜಿಯ ಮೂಲ ನಿವಾಸಿಗಳ ಜೀವನ ರೀತಿ ಹೇಗಿದೆ ನೋಡೋಣ. ಇವರೇನೊ ಇಂದು ಹಿಂದುಳಿದವರಾಗಿದ್ದರೂ ದಡ್ಡರೇನಲ್ಲ. ಫಿಜಿಯನ್ನರು, ಧೃಡಕಾಯರು, ಸುಂದರರು. ತಮ್ಮ ಕುಟುಂಬಕ್ಕೆ, ಇಷ್ಟಮಿತ್ರರಿಗೆ ಬಲು ನಿಷ್ಠರಾಗಿ ನಡೆದುಕೊಳ್ಳುವವರು. ಆದರೆ ಇವರ ಹಲವಾರು ಸಾಮಾಜಿಕ ಕಟ್ಟಳೆಗಳು ಬಲು ವಿಪರೀತವಾಗಿದ್ದು ಅದರಿಂದ ಅವರ ಪ್ರಗತಿಗೆ ತುಂಬ ಆತಂಕಗಳಾಗುತ್ತಿವೆಯೆನ್ನಬಹುದು. ನೆರೆಮನೆಯ ಒಬ್ಬಾತನಲ್ಲಿಗೆ ಹೋಗಿ ನೀವು ಒಂದು ತುಣುಕು ರೊಟ್ಟಿಯನ್ನು ಕೊಟ್ಟರೂ ಸಾಕು, ಆತನ ಮನೆಯಲ್ಲಿ ನಿಮ್ಮ ಮನಬಂದಷ್ಟು ದಿನ ಇರುವ ಹಕ್ಕು ದೊರೆಯುತ್ತದೆ. ಒಬ್ಬಾತ, ಆತ ಪರಿಚಿತನೇ ಇರಲಿ ಅಥವಾ ಅಪರಿಚಿತನೇ ಇರಲಿ, ಮೈಮೇಲಿನ ಅಂಗಿ, ಕೈಗೆ ಕಟ್ಟಿಕೊಂಡ ಗಡಿಯಾರ, ಅಥವಾ ಕಿಸೆಯಲ್ಲಿನ ಹಣ ಕೇಳಿದರೆ ನಗು ನಗುತ್ತಲೇ ಕೊಡುವದು ಫಿಜಿಯನ್ನರ ಒಂದು ಸಂಪ್ರದಾಯ. ಈ ಬಗೆಯ ವಿಪರೀತ ಸಾಮಾಜಿಕ ರೂಢಿಗಳಿಂದಾಗಿ ಫಿಜಿಯನ್ನರಲ್ಲಿ ಜೀವನಕ್ಕೆ ಒಂದು ದೊಡ್ಡ ಗುದ್ದು ಕಟ್ಟಿದಂತಾಗಿದೆ. ಹಬ್ಬ ಹುಣ್ಣಿಮೆಗಳಲ್ಲಿ, ಮದುವೆ ಮುಂತಾದ ಸಮಾರಂಭಗಳಲ್ಲಿ ದುಂದು ವೆಚ್ಚಮಾಡುವ ಪ್ರವೃತ್ತಿ ಫಿಜಿಯನ್ನರಲ್ಲಿದೆ. ಸಮಯದ ಬೆಲೆಯನ್ನು ಇವರು ಅರಿಯರು. ಅತಿಥಿ ಸತ್ಕಾರಕ್ಕಾಗಿ ಇದ್ದದ್ದನ್ನೆಲ್ಲ ವ್ಯಯಿಸಿ ಬಳಿಕ ತಿಂಗಳುಗಟ್ಟಲೆ ಉಪವಾಸವಿದ್ದಾರೆಯೆ ಹೊರತು ಈ ಜನ ಬಾಗಿಲಿಗೆ ಬಂದವರಿಗೆ ಇಲ್ಲವೆನ್ನುವುದಿಲ್ಲ. *

(೨೬ ನೇ ಪುಟದ ಸಮಸ್ಯೆಗಳ ಉತ್ತರ)

ಉತ್ತರ ೧

ರಾಮಾನುಜಂ ಹೀಗೆ ತರ್ಕ ಮಾಡಿದ: "ನಾವು ಮೂವರೂ ಒಬ್ಬರೊಬ್ಬರ ಬೆನ್ನು ನೋಡಿದ್ದೇವೆ. ಒಂದು ವೇಳೆ ನನ್ನ ಬೆನ್ನು ಸ್ವಚ್ಛವಾಗಿದ್ದರೆ ಮಧು ಕೃಷ್ಣನ ಬೆನ್ನು ನೋಡಿಯೇ ನಗುತ್ತಿರಬೇಕಾಯಿತು. ಆಗ ಕೃಷ್ಣನು ಮಧುವಿನ ನಗುವಿಗೆ ತನ್ನ ಬೆನ್ನಿನ ಲಿಪಿಯೇ ಕಾರಣವೆಂದು ತರ್ಕಿಸಿಕೊಳ್ಳುತ್ತಿದ್ದ. ಆದರೆ ಕೃಷ್ಣ ಹಾಗೆ ತಿಳಿದುಕೊಂಡಿರಲಿಲ್ಲವೆಂಬುದು ಸ್ಪಷ್ಟವೇ ಇದೆ. ಅಂದ ಮೇಲೆ ನನ್ನ ಬೆನ್ನಿಗೂ ಚೀಟಿ ಅಂಟಿಸುವುದನ್ನು ನೋಡಿದ್ದರಿಂದಲೇ ಕೃಷ್ಣ ನಗುತ್ತಿದ್ದಾನೆ."



ಉತ್ತರ ೨

೧ ನೇ ದೇವಸ್ಥಾನಕ್ಕೆ ಆಗಲೆ ಹೋಗಿದ್ದ ಅರಸನಿಗೆ ರಾಮಾನುಜಂ ಅಲ್ಲಿಂದ ನೇರವಾಗಿ ಮುಂದೆ "ಅ" ಎಂಬಲ್ಲಿ ವರೆಗೆ ಸಾಗಲು ಹೇಳಿದ. (ನಕ್ಷೆ ನೋಡಿರಿ) ಅಲ್ಲಿಂದ ನೇರವಾಗಿ ಎರಡನೇ ದೇವಾಲಯದ ಮೂಲಕ "ಬ" ಎಂಬಲ್ಲಿ ವರೆಗೆ ಮುಂದೆ ಹೋಗಿ ದಿಕ್ಕು ಬದಲಿಸಿ ೩ ನೇ ದೇವಾಲಯದ ಮೂಲಕ ಅರಮನೆಗೆ ಮರಳಬೇಕು.


ನೋಬೆಲ್ ಪಾರಿತೋಷಕ ಪಡೆದ

ಜರ್ಮನ್ ಕಾದಂಬರಿ

ಕಪ್ಪು ಹಂಸ

ಥಾಮಸ್ ಮಾನ್

'ಸಾರಿಕಾ' ದಿಂದ



ಈ ಕಥೆ ಇಪ್ಪತ್ತನೆಯ ಶತಮಾನದ ಎರಡನೇ ದಶಕದಲ್ಲಿ ನಡೆದುದು.

ಆ ಸಮಯದಲ್ಲಿ ಶ್ರೀಮತಿ ರೊಜೆಲಿ ವಾನ್ ಟಮ್ಲರ್ ಎಂಬ ಮಹಿಳೆ ತನ್ನ ಪುತ್ರಿ ಎನಾ ಹಾಗೂ ಪುತ್ರ ಎಡ್‌ವರ್ಡ್‌ರೊಂದಿಗೆ ರ್‍ಯಾನ್‌ನದಿ ದಂಡೆಯ ಮೇಲಿನ ಡಜೆಲ್‌ಡಾರ್ಫ್ ನಗರದಲ್ಲಿ ಇರುತ್ತಿದ್ದಳು. ಈಕೆ ವಿಧವೆ ಹತ್ತು ವರ್ಷಗಳ ಹಿಂದೆಯೇ ಅವಳ ಗಂಡ ಲೆಫ್ಟಿನಂಟ್ ವಾನ್ ಟಮ್ಲರ್ ಮೋಟಾರ ಅಪಘಾತಕ್ಕೆ ಸಿಕ್ಕು ಮರಣ ಹೊಂದಿದ್ದರು. ವಾನ್ ಟಮ್ಲರ್ ಸುಖಲೋಲುಪ ವ್ಯಕ್ತಿ. ಪತ್ನಿಯಲ್ಲಲ್ಲದೆ ಇತರ ಸುಂದರ ಸ್ತ್ರೀಯರಲ್ಲೂ ಅವರಿಗೆ ಆಸಕ್ತಿ. ಆದರೆ ಅದು ಅವರ ಯೌವನದ ಮದ ಮತ್ತು ಸದೃಢ ಶರೀರದ ಆಟವೆಂದು ತಿಳಿದು ಪತಿಪರಾಯಣೆಯಾದ ರೊಜೆಲಿ ಪತಿಯನ್ನು ಕ್ಷಮಾದೃಷ್ಟಿಯಿಂದಲೆ ನೋಡುತ್ತಿದ್ದಳು.

ವೈವಾಹಿಕ ಜೀವನದ ೨೦ ವರ್ಷಗಳನ್ನು ರೊಜೆಲಿ ಡ್ಯೂಯಿಸ್‌ಬರ್ಗ್ ಎಂಬ ಔದ್ಯೋಗಿಕ ನಗರದಲ್ಲಿಯೆ ಕಳೆದಿದ್ದಳು. ವಿಧವೆಯಾದ ಮೇಲೆ ತನ್ನ ೧೮ ವರ್ಷದ ಕನ್ಯೆ ಎನಾ ಮತ್ತು ಆರು ವರ್ಷದ ಮಗ ಎಡ್ವರ್ಡ್‌ರೊಂದಿಗೆ ಡಜೆಲ್‌ಡಾರ್ಫ್ ಪಟ್ಟಣದಲ್ಲಿ ವಾಸಿಸಲಿಕ್ಕೆ ಬಂದಿದ್ದಳು. ಇಲ್ಲಿ ಬರಲು ಕಾರಣವೆಂದರೆ- ಮೊದಲನೆಯದಾಗಿ ಎನಾ ಚಿತ್ರಕಲಾಭ್ಯಾಸಿಯಾಗಿದ್ದಳು. ಡಜೆಲ್‌ಡಾರ್ಫ್‌ನ ಆರ್ಟ್ಸ ಅಕಾದಮಿಯಿಂದ ತನ್ನ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಬಯಸುತ್ತಿದ್ದಳು. ಮತ್ತು ಎರಡನೆಯದಾಗಿ ನಾಲ್ವತ್ತು ವರ್ಷ ಪ್ರಾಯದ ರೊಜೆಲಿಗೂ ಸೃಷ್ಟಿಸೌಂದರ್ಯಯುತ ಸ್ಥಳಗಳಲ್ಲಿ ಪ್ರೀತಿ ಇತ್ತಾದ್ದರಿಂದ ಆ ತರಹದ ಸುಂದರ ಉದ್ಯಾನಗಳಿಂದ ತುಂಬಿದ ಡಜೆಲ್‌ಡಾರ್ಫ್‌ನಲ್ಲಿ ಈ ಚಿಕ್ಕ ಪರಿವಾರ ಒಂದು ಒಳ್ಳೇ ಮನೆಯನ್ನು ಬಾಡಿಗೆಗೆ ಹಿಡಿದು ನಿಂತಿತು. ರೊಜೆಲಿಯು ಮನಸ್ಸನ್ನಾಕರ್ಷಿಲು ಮನೆಯ ಸುತ್ತ ಅಂದವಾದ ಒಂದು ಕೈದೋಟವಿತ್ತು. ಸುತ್ತೆಲ್ಲ ಸಾಲಾಗಿ ಲಿಂಡೆನ್ ಮರಗಳು ಶೋಭಿಸುತ್ತಿದ್ದವು. ಈ ಪರಿವಾರದ ಜೀವನ ದೊಡ್ಡಸ್ತಿಕೆಯದಲ್ಲದಿದ್ದರೂ ಸುರುಚಿಪೂರ್ಣವಾಗಿತ್ತು.

ಹೀಗೆ ಹತ್ತು ವರ್ಷ ಕಳೆದವು. ರೊಜೆಲಿಯ ಸ್ವಭಾವ ಮಧುರವೂ ಇನ್ನೊಬ್ಬರೊಂದಿಗೆ ಹೊಂದಿಕೊಳ್ಳುವಂತಹದೂ ಇತ್ತು. ನೆರೆಹೊರೆಯವರಲ್ಲಿ ಹೋಗಿಬರುವುದು, ಪಾರ್ಟಿ—ಸಮಾರಂಭಗಳಲ್ಲಿ ಭಾಗವಹಿಸುವುದು ಎಂದರೆ ಅವಳಿಗೆ ಹಿಗ್ಗು. ಅದರಂತೆ ತನ್ನ ಮಿತ್ರರನ್ನು, ಪರಿಚಿತರನ್ನು ತನ್ನಲ್ಲಿಗೆ ಆಕೆ ಕರೆಯುತ್ತಿದ್ದಳು ಸ್ವಭಾವದ ಸಹಜತೆ ಮತ್ತು ಮಾಧುರ್ಯ ಇವುಗಳ ಅಭಿವ್ಯಕ್ತಿ ಅವಳ ಪ್ರಕೃತಿ ಪ್ರೇಮದಲ್ಲೇ ಪೂರ್ಣವಾಗಿ ಆಗುತ್ತಿತ್ತು. ಇದರಿಂದ ಅವಳು ಎಲ್ಲರಿಗೂ ಬೇಕಾಗಿದ್ದಳು.

ಈಗ ಶ್ರೀಮತಿ ರೊಜೆಲಿಯ ವಯಸ್ಸು ಸುಮಾರು ಐವತ್ತಿರಬಹುದು. ಆದರೂ ಅವಳ ಮೈಕಟ್ಟಿನಲ್ಲಿ ಇನ್ನೂ ಯೌವನದ ಕಳೆ ತುಂಬಿದಂತಿತು. ನಿಲುವಿಕೆ ಗಿಡ್ಡ. ಮೈ ಕೈ ತುಂಬಿದ್ದವು. ತಲೆಗೂದಲು ಬೆಳ್ಳಗಾಗಿದ್ದವು. ಆದರೂ ಅವು ಬೆಣ್ಣೆಯಂತೆ ಮಿದುವಾಗಿಯೂ ಪ್ರವಾಹದಂತೆ ಉದ್ದವಾಗಿಯೂ ಇದ್ದವು. ಕಂದು ಬಣ್ಣದ ಕಣ್ಣುಗಳಲ್ಲಿ ಸಜೀವತೆ ಮತ್ತು ಹೊಳಪು ತುಂಬಿತ್ತು. ಸಾಮಾನ್ಯವಾಗಿ ಈ ವಯಸ್ಸಿಗೆ ಯಾವ ಸ್ತ್ರೀಯ ಮೈಮುಖದಲ್ಲಾದರೂ ನಾರೀಸುಲಭ ಕೋಮಲತೆ ಅಳಿದುಹೋಗಿರುತ್ತದೆ. ಆದರೆ ಇವಳಿಗೆ ಚಿರ ತಾರುಣ್ಯದ ವರದಾನವೆ ಇತ್ತೇನೊ ಎನ್ನುವಂತಿತ್ತು. ನಾಲ್ಕು ಜನರ ನಡುವೆ ಇದ್ದಾಗ ಇಲ್ಲವೆ ಹೆದರಿಕೊಂಡಾಗ ಇವಳ ಮೂಗು ಕೆಂಪಾಗುತ್ತಿತ್ತು. ಈ ರೀತಿ ತನ್ನ ಭಾವನೆಯ ಪರಿಳಿತ ವ್ಯಕ್ತವಾಗುವುದರಿಂದ ಅವಳೂ ಅಸ್ವಸ್ಥಳಾಗಿರುತ್ತಿದ್ದಳು. ಮಂದಿ ಏನೆಂದು ತಿಳಿದಾರೆಂದು ಚಿಂತಿಸುತ್ತಿದ್ದಳು. ಇವಳು ಹುಟ್ಟಿದ್ದು ವಸಂತಋತುವಿನಲ್ಲಿ; ಮೇ ತಿಂಗಳಲ್ಲಿ. ಅಂತೆಯೆ ಇರಬೇಕು ಅವಳಲ್ಲಿ ವಾರ್ಧಕ್ಯಕ್ಕೆ ಬಾಗದ ದೃಢ ಯುವಾವಸ್ಥೆ ಇತ್ತು.

ರೊಜೆಲಿ ತನ್ನ ೫೦ ನೇ ವರ್ಧಂತಿಯನ್ನು ತನ್ನ ಮಕ್ಕಳು ಮತ್ತು ಹತ್ತು ಹನ್ನೆರಡು ನಿಕಟತಮ ಮಿತ್ರರೊಂದಿಗೆ ಒಂದು ಉದ್ಯಾನದಲ್ಲಿ ನೆರವೇರಿಸಿದಳು. ರೊಜೆಲಿಯ ಪ್ರಿಯ ಪುಷ್ಪಗಳು ಟೇಬಲ್ಲಿನ ಮೇಲೆ ರಾಶಿಯಾಗಿದ್ದವು. ಬಣ್ಣಬಣ್ಣದ ದೀಪಗಳು ಬೆಳಗುತ್ತಿದ್ದವು. ಉತ್ಸವದ ಉನ್ಮಾದದಲ್ಲಿ ಮದಿರೆಯ ಪಾತ್ರೆಗಳು ಬರಿದಾಗುತ್ತಿದ್ದವು. ಎಲ್ಲ ಮಿತ್ರ ಪರಿವಾರ ಆನಂದ

ತುಂದಿಲವಾಗಿತ್ತು. ಆದರೆ ಸಂಜೆಯಿಂದಲೇ ರೊಜೆಲಿ ಮಾತ್ರ ಖಿನ್ನಳಾಗಿದ್ದಳು. ಈಗ ಅವಳು ರಜಸ್ವಲೆಯಾಗುವುದು ನಿಂತುಹೋಗಿತ್ತು. ಇದು ವಯಸ್ಸಾದ ಸೂಚನೆ. ಮನಸ್ಸಿಲ್ಲದ ಮನಸ್ಸಿನಿಂದ ಈ ಸೂಚನೆಯನ್ನು ಅವಳು ಸ್ವೀಕರಿಸಬೇಕಾಗಿತ್ತು. ಮನಸ್ಸಿನ ಕೈಯಲ್ಲಿ ಶರೀರ ಉಳಿದಿರಲಿಲ್ಲ. ತಾನಿನ್ನು ಯುವತಿಯಂತಿರಲಾರೆನೆಂಬ ಚಿಂತೆ, ವೇದನೆ ಅವಳನ್ನು ಪೀಡಿಸುತ್ತಿತ್ತು. ಅಂತೆಯೆ ಅಂದು ಅತಿಥಿಗಳ ಆನಂದವು ಅವಳಿಗೆ ವ್ಯರ್ಥವೆನಿಸುತ್ತಿತ್ತು. ಈ ನಡುವೆ ಅವಳು ತನ್ನ ಮಗಳ ಕಡೆಗೆ ದೃಷ್ಟಿ ಹಾಯಿಸಿದಳು. ಅವಳಾದರೂ ತನ್ನ ಈ ಹೊಸ ಕುಂದನ್ನು ತನ್ನಂತೇ ಕಾಣುವಳೆಂದು ಇವಳಿಗನಿಸಿತ್ತು. ಯಾಕೆಂದರೆ ಮಗಳು ಚಿಕ್ಕವಳಾದರೂ ಬೌದ್ಧಿಕವಾಗಿ ಬಹಳ ಬೇಗ ಪರಿಪಕ್ವಳಾಗಿದ್ದಳು.

ತಾಯಿ ಮಗಳು ಪರಸ್ಪರರನ್ನು ಮಿತ್ರರಂತೆ ನೋಡಿಕೊಳ್ಳುವಷ್ಟು ಸ್ನೇಹಮಯ ಸಂಬಂಧವುಳ್ಳವರಾಗಿದ್ದರು. . . . ಅವರು ಒಬ್ಬರೊಬ್ಬರಿಂದ ಏನನ್ನೂ ಮುಚ್ಚಿ ಇಡುತ್ತಿದ್ದಿಲ್ಲ. ರೊಜೆಲಿಯ ಶಾರೀರಿಕ ಪರಿವರ್ತನೆ ಎನಾಗೆ ಗೊತ್ತಿತ್ತು.

ಎನಾಳ ವಯಸ್ಸು ಈಗ ೨೯. ಇನ್ನೂ ಅವಿವಾಹಿತೆಯಾಗಿರುವುದು ಎನಾಗೆ ಹೇಗೇ ಅನ್ನಿಸಿರಲಿ, ರೊಜೆಲಿಗೆ ಮಾತ್ರ ಅದರಿಂದ ದುಃಖವೇನೂ ಇರಲಿಲ್ಲ. ರೊಜೆಲಿಗೆ ತನಗೆ ಆಸರೆಯಾಗಬಲ್ಲ ಒಬ್ಬ ವ್ಯಕ್ತಿ ಬೇಕಾಗಿತ್ತು. ಎನಾ ತಾಯಿಗಿಂತ ಎತ್ತರವಾಗಿದ್ದಳು. ಕಣ್ಣು ತಾಯಿಯಂತೆ ತಿಳಿ ಕಂದು ಬಣ್ಣದವಾಗಿದ್ದವು. ಆದರೆ ತಾಯಿಯ ಕಣ್ಣಿನಲ್ಲಿದ್ದ ಸಹಜ ಸಜೀವತೆಯ ಬದಲು ಮಗಳ ಕಣ್ಣಲ್ಲಿ ಸ್ಥಿರತೆ ಹಾಗೂ ಗಾಂಭೀರ್ಯಗಳಿದ್ದವು. ಎನಾಳ ಒಂದು ಕಾಲು ನೆಟ್ಟಗಿದ್ದಿಲ್ಲವಾದ್ದರಿಂದ ಯುವಾವಸ್ಥೆಯಲ್ಲಿ ಪ್ರಿಯವಾಗಿರುವ ನೃತ್ಯಾದಿ ಕಾರ್ಯಕ್ರಮಗಳಲ್ಲಿ ಆಕೆ ಭಾಗ ವಹಿಸುತ್ತಿದ್ದಿಲ್ಲ. ಆದರೆ ಈ ಕೊರತೆಯನ್ನು ಮರೆಮಾಚಲು ಅವಳಲ್ಲಿ ತೀವ್ರ ಬುದ್ಧಿ ಮತ್ತು ಪ್ರಖರ ಪ್ರತಿಭೆ ಇದ್ದುವು. ಮನೆಯಲ್ಲೇ ಅಲ್ಪ ಸ್ವಲ್ಪ ಅಭ್ಯಾಸ ಮಾಡಿ ಎಲ್ಲ ಪರೀಕ್ಷೆಗಳನ್ನು ಆಕೆ ಪಾಸಾಗಿದ್ದಳು. ಆ ಮೇಲೆ ತನ್ನ ಅಭಿರುಚಿಯಂತೆ ಆಕೆ ಚಿತ್ರಕಲೆಯ ಅಭ್ಯಾಸದಲ್ಲಿ ತೊಡಗಿದ್ದಳು. ಅವಳ ಚಿತ್ರಗಳಲ್ಲಿ ಸಹಜ ಭಾವನಾತ್ಮಕ ಉದ್ಗಾರದ ಬದಲು ತೀವ್ರಬೌದ್ಧಿಕತೆಯೆ ತೋರ್ಪಡುತ್ತಿತ್ತು. ಪ್ರಕೃತಿಯ ಬರಿಯ ವಾಸ್ತವ ಚಿತ್ರಣವನ್ನು ಆಕೆ ಕಲೆ ಎಂದು ತಿಳಿಯುತ್ತಿದ್ದಿಲ್ಲ. ಅವಳ ಅನುಭೂತಿಗಳು ಭಾವನಾತ್ಮಕವಾಗಿರದೆ ಬೌದ್ಧಿಕ ಪ್ರತಿಮೆಗಳಾಗಿ ಮಾರ್ಪಡುತ್ತಿದ್ದವು. ಈ ಕುರಿತು ತಾಯಿಮಗಳ ನಡುವೆ ಆಗಾಗ ವಾದ ವಿವಾದ ನಡೆಯುತ್ತಿತ್ತು. ಮಗಳ ಪ್ರತಿಭೆಯನ್ನು ಸ್ವೀಕರಿಸಿಯೂ ತಾಯಿ ಪ್ರಕೃತಿಯ ಸನಾತನ ಸೌಂದರ್ಯದಲ್ಲಿ ನಂಬಿಕೆಯುಳ್ಳವಳಾಗಿದ್ದಳು.

ಎನಾಳ ತೀವ್ರ ಬೌದ್ಧಿಕತೆ ಅವಳಿಗೊಂದು ಕವಚವಿದ್ದಂತಿತ್ತು. ಆ ಕವಚದ ಹಿಂದೆ ಆಕೆ ತನ್ನ ಆಹತ ಭಾವನೆಯನ್ನು ದಬ್ಬಿ ಬಿಟ್ಟಿದ್ದಳು. ಕಾಲು ನೆಟ್ಟಗಿಲ್ಲದ್ದರಿಂದ ಉಂಟಾದ ವೇದನೆಯ ಪ್ರತಿಕ್ರಿಯೆ ಎಂಬಂತೆ ಆಕೆ ಕೆಲ ವರ್ಷಗಳ ಹಿಂದೆಯೆ ಅಭಿಮಾನಬಲದಿಂದ ತನ್ನ ಪ್ರಸ್ಫುಟಿತವಾಗುತ್ತಿದ್ದ ಭಾವಬೀಜವನ್ನು ತಾನೇ ಕಿತ್ತೊಗೆದು ತನ್ನ ಸುತ್ತ ಉಕ್ಕಿನ ತೆರೆಯೊಂದನ್ನು ನಿರ್ಮಿಸಿಕೊಂಡಿದ್ದಳು.

ಆ ಘಟನೆ ಕೆಲ ವರ್ಷಗಳ ಹಿಂದೆ ನಡೆದದ್ದು. ಆಗ ಇವರು ಈ ಮನೆಗೆ ಹೊಸತಾಗಿ ಬಂದಿದ್ದರು. ಇದೇ ನಗರದಲ್ಲಿ ವಿಜ್ಞಾನ ವಿಷಯದಲ್ಲಿ ಡಾಕ್ಟರೆಟ್ ಪದವಿ ಸಂಪಾದಿಸಿ ಒಂದು ದೊಡ್ಡ ರಾಸಾಯನಿಕ ಫ್ಯಾಕ್ಟರಿಯಲ್ಲಿ ಬಹು ದೊಡ್ಡ ಹುದ್ದೆಯಲ್ಲಿ ನೇಮಕಗೊಂಡ ಯುವಕನೊಬ್ಬನಿದ್ದ. ಯುವಕನ ಹೆಸರು ಡಾಕ್ಟರ್ ಬ್ರೂನರ್.

ಸುತ್ತಮುತ್ತಲಿನ ಬಹುತರ ಎಲ್ಲ ಯುವತಿಯರು ಡಾ. ಬ್ರೂನರನನ್ನು ಪ್ರೀತಿಸುತ್ತಿದ್ದರು. ಅದಕ್ಕೆ ಕಾರಣ ಅವನ ಸುಸ್ಥಿತಿ. ಎನಾಗೆ ತಾನಾಗಿ ಬ್ರೂನರನಿಗೆ ಒಲಿಯುವುದು ಅಭಿಮಾನಕ್ಕೆ ಕುಂದೆನಿಸುತ್ತಿತ್ತು. ಉಳಿದ ತರುಣಿಯರಂತೆ ತಾನೂ ಈ ತರುಣನಿಗಾಗಿ ಚಡಪಡಿಸುವುದು ಯೋಗ್ಯವಲ್ಲೆಂದು ಆಕೆ ಬಗೆದಿದ್ದಳು. ಬ್ರೂನರ್ ತಾನಾಗಿ ಒಲಿದು ಬಂದರೂ ಎನಾ ಅವನಿಂದ ದೂರವಿರತೊಡಗಿದಳು. ಈ ಬಗೆ ಮುಂದುವರಿದಿದ್ದರೆ ಏನು ಪರಿಣಾಮವಾಗುತ್ತಿತ್ತೋ. ಆದರೆ ಬ್ರೂನರ್ ಒಬ್ಬ ಕೋಟ್ಯ

ಧೀಶನ ಮಗಳನ್ನು ಲಗ್ನವಾಗಿ ಮಾವನ ವ್ಯಾಪಾರದಲ್ಲಿ ಪಾಲುಗಾರನಾಗಿ ಹೋಗಿಬಿಟ್ಟ. ಅವನು ಹೋದದ್ದರಿಂದ ಇವಳ ಎದೆ ಒಡೆಯದಿದ್ದರೂ ಕಲ್ಲಾಗಿ ಪರಿಣಮಿಸಿತು.

ಇನ್ನು ರೋಜೆಲಿಯ ಹೃದಯವೋ! ಅವಳ ಪೂರ್ಣ ವ್ಯಕ್ತಿತ್ವವೇ ಈ ಭಾವನೆಯ ಹೊಡೆತಗಳನ್ನು ತಾಳಲು ಜನ್ಮಿಸಿದಂತಿತ್ತು. ಅವಳ ಮನಸ್ಸು ಎಷ್ಟು ಸೂಕ್ಷ್ಮವಿತ್ತೆಂದರೆ ಭಾವನೆಯ ಸಣ್ಣ ಅಲೆಗಳಿಂದಲೂ ಅದು ನಡುಗುತ್ತಿತ್ತು.

ಒಂದು ಸಂಜೆ ರೋಜೆಲಿ ಮತ್ತು ಎನಾ ತಿರುಗಾಡಲು ಹೊರಟಿದ್ದರು. ವಾತಾವರಣದಲ್ಲಿ ಒಂದು ಬಗೆಯ ಮಂದ, ಸೌರಭಮಯ ಉಚ್ಛ್ವಾಸವಿತ್ತು. ಹವೆಯಲ್ಲಿ ತರುಣ ಪುಷ್ಪಗಳ ಮಾದಕ ಗಂಧವಿತ್ತು. ಪ್ರಕೃತಿಯ ಸೆರಗು ವಿವಿಧ ಬಣ್ಣಗಳಿಂದ ಮೆರೆಯುತ್ತಿತ್ತು. ಯಾವುದೊ ತಾತ್ವಿಕ ಮಹಾ ಅಭಿಸಾರದ ಸಿದ್ಧತೆಯಂತಿತ್ತು ದೃಶ್ಯ. ಎನಾ ರೋಜೆಲಿಗಾಗಿಯೆ ತಿರುಗಾಡಲು ಬಂದಿದ್ದಳು. ಕಾಲು ನೆಟಗಿದ್ದಿಲ್ಲವಾದ್ದರಿಂದ ನಡೆಯುವುದು ಎನಾಗೆ ಕಷ್ಟವಾಗುತ್ತಿತ್ತು. ಆದರೆ ರೋಜೆಲಿ ಆನಂದದ ಸಾಗರದಲ್ಲಿ ಮನಸೋಕ್ತ ಈಸುವಂತಿದ್ದಳು. ಆನಂದ ಅತಿಯಾಗಿ ರೋಜೆಲಿ ನವಯೌವನೆಯಂತೆ ತನ್ನಷ್ಟಕ್ಕೆ ತಾನೆ ಸಹಜವಾಗಿ ನಕ್ಕಳು. ತನಗೆ ವಯಸ್ಸಾಗಿದ್ದರೂ ರೋಜೆಲಿ ನಗುತ್ತಾ ಆವೇಶದಿಂದ ಎನಾಳ ಕೈ ತಟ್ಟಿ ಒಂದು ಹಳೆ ಓಕ್ ಮರವನ್ನು ತೋರಿಸಿಳು. ಮರ ಬಹಳ ಹಳೆಯದು. ಟೊಂಗೆಗಳು ಎಲೆಗಳು ಒಣಗಿಗಿಡವು ಹರಹರಕಾಗಿ ನಿಂತಿತ್ತು.

"ಸೋಡು ಎನಾ, ಈ ವೃಕ್ಷವನ್ನು ನೋಡು. ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಂತು ಸಮಯ ಮತ್ತು ಮೃತ್ಯುಗಳೊಂದಿಗೆ ಕಾದುತ್ತಿದೆ. ಬೇರುಗಳು ಗಂಟುಗಂಟಾಗಿವೆ. ಆದರೂ ಅನ್ನಪೂರ್ಣಾ ಭೂಮಿಯಲ್ಲಿ ಗಟ್ಟಿಯಾಗಿ ನಿಂತಿವೆ. ಬೊಡ್ಡೆಯಲ್ಲಿ ಹೊದರಾಗಿದೆ. ಅದರಲ್ಲಿ ಜನರು ಸಿಮೆಂಟ್ ತುಂಬಿದ್ದಾರೆ. ಟೊಂಗೆಗಳು ನಗ್ನವಾಗಿವೆ. ಒಂದೂ ಎಲೆ ಇಲ್ಲ. ಆದರೆ ಚಿಗುರೊಡೆಯುವ ಹೊತ್ತು ಬಂದಾಗ ಈ ಒಣಗಿದ ಟೊಂಗೆಗಳ ಮೇಲೂ ಚಿಗುರೆಲೆಗಳು ಒಡೆಯುತ್ತವೆ. ಇದು ಏನನ್ನು ಸೂಚಿಸುತ್ತದೆ? ಜೀವನ ಮೃತ್ಯುವಿನ ಪ್ರಶ್ನೆಯೆ ಅಲ್ಲವೆ! ವಯಸ್ಸು ಯೌವನವನ್ನು ಪರಾಜಿತಗೊಳಿಸಲಾರದು. ನೋಡು, ಅದರ ತುದಿಯಲ್ಲಿ ಈಗಲೂ ಹಲವು ಹಸಿರು ಎಲೆಗಳು ಇವೆ....."

"ಅವ್ವಾ, ಅದು ನಿಜ. ಓಕದ ವೃದ್ಧ ಮರ ಮತ್ತು ಅದರ ಚಿರಂಜೀವಿ ಹಾಗೂ ಚಿರತರುಣವಾಗಿರುವ ಇಚ್ಛೆ ಶ್ರದ್ಧೇಯವೇ. ಆದರೆ ಈಗ ಮನೆಗೆ ಹೋಗೋಣವಲ್ಲ. ನನಗೆ ಬಹಳ ನೋವಾಗುತ್ತಿದೆ." ಎನಾ ನುಡಿದಳು.

"ನೋವು? ಹೌದು ಇತ್ತೀಚೆಗೆ ಇವೇ ನಿನ್ನ ಮುಟ್ಟಿನ ದಿನಗಳಾಗುತ್ತಿವೆ. ನಾನೆಂಥ ಹುಚ್ಚಿ? ಈ ಸ್ಥಿತಿಯಲ್ಲಿ ನಿನ್ನನ್ನು ಹೊರಗೆ ಕರೆತಂದೆ. ನಡೆ ಮರಳಿಹೋಗೋಣ."

ಹೋಗುತ್ತಾ ರೋಜೆಲಿ ಮಾತಾಡುತ್ತಲೆ ಇದ್ದಳು: "ಹೀಗೆ ನಿನಗೆ ಮೊದಲಬಾರಿ ಆದದ್ದು ನೆನಪಿದೆಯೆ? ಆಗ ನೀನಿನ್ನೂ ಚಿಕ್ಕವಳಿದ್ದೆ. ರಕ್ತದ ಸ್ರಾವದಿಂದ ಹೆದರಿದ್ದೆ. ಆಗ ನಾನು ನಿನಗೆ ಹೇಳಿದ್ದೆ, ಅದು ಸ್ವಾಭಾವಿಕ ಎಂದು; ಇದಕ್ಕಾಗಿ ನಿನಗೆ ಸಂತೋಷವೆನ್ನಿಸಬೇಕೆಂದು. ಇದು ನೀನು ಪೂರ್ಣ ಸ್ತ್ರೀಯಾದದ್ದಕ್ಕೆ ಸಾಕ್ಷಿ. ಈಗ ನೀನು ಸ್ತ್ರೀಧರ್ಮಕ್ಕೆ ಯೋಗ್ಯಳಾಗಿರುವಿ. ಇನ್ನೇನು ಹೀಗಾಗುವ ಮುಂಚೆ ನಿನಗೆ ಸ್ವಲ್ಪ ತ್ರಾಸವಾಗುವುದೇನೋ ನಿಜ ನಿನ್ನಂತೆ ಆಗುವ ಎಷ್ಟೋ ತರುಣಿಯರು ನನಗೆ ಗೊತ್ತು. ಈ ಪೀಡೆ ಸ್ತ್ರೀಯರಿಗೊಂದು ಬೇರೆಯೆ ಆದ ಅನುಭವವೆಂದು ನಾನು ತಿಳಿಯುತ್ತೇನೆ. ಈ ತೊಂದರೆ ಪುರುಷರಿಗಿರುವುದಿಲ್ಲ. ಹಾಗೆ ಪ್ರಕೃತಿಯ ಇನ್ನಾವ ವಸ್ತುವಿಗೂ ಇರುವುದಿಲ್ಲ. ಉಳಿದ ವಸ್ತುಗಳಿಗೆ ಪೀಡೆಯಾದದ್ದೇ ಆದರೆ ಅದು ಅವು ಬೇನೆಯಿಂದ ಬಳಲಿದಾಗಷ್ಟೇ. ಪೀಡೆ ಸ್ತ್ರೀಯರ ವ್ಯಕ್ತಿತ್ವದ ಒಂದು ಸ್ವಾಭಾವಿಕ ಅಂಗ. ಅದನ್ನು ಸಹಿಸುವ ತ್ರಾಣ ನಮ್ಮಲ್ಲಿದೆ. ಅಥವಾ ತಾಳಲಿಕ್ಕೇ ನಮ್ಮ ಬಾಳು ಎಂದೂ ಹೇಳಬಹುದು. ಪೀಡೆ ಸ್ತ್ರೀಯರ ಮರ್ಯಾದೆ. ಪ್ರಸವ ಪೀಡೆಯಂತೂ ನಮಗಿರುವ ವರದಾನ. ಇದು ಸ್ತ್ರೀಯರಿಗೆ ಮಾತ್ರ ಮೀಸಲು. ಇದಕ್ಕೆ ನೀನು ಹೆದರಬೇಕಾಗಿಲ್ಲ." ಸ್ವಲ್ಪ ತಡೆದು ರೋಜೆಲಿ ಮತ್ತೆ ನುಡಿದಳು. "ನಿನ್ನಂತೆ ನನಗೂ ಈ ಪೀಡೆ ಆಗುತ್ತಿದ್ದರೆ ನಾನು ಸಂತುಷ್ಟಳಾಗ

ತ್ತಿದ್ದೆ. ಅದಕ್ಕಾಗಿ ಅಭಿಮಾನ ತಾಳುತ್ತಿದ್ದೆ. ನಾನಿನ್ನೂ ತರುಣಿಯೆಂದು ಹೆಮ್ಮೆಪಡುತ್ತಿದ್ದೆ. ಈಗ ನಾನು ಪೂರ್ಣ ನಾರಿಯಲ್ಲ. ದುರ್ದೈವದಿಂದ ನನ್ನೊಳಗಿನ ಆ ಸ್ರೋತ ಈಗ ಬತ್ತಿಹೋಗಿದೆ. ಈಗ ನಾನು ನಾರಿಯ ಕೇವಲ ಪ್ರೇತ ಮಾತ್ರ. ಪ್ರಕೃತಿ ನನ್ನಿಂದ ನಾರೀತ್ವದ ಎಲ್ಲ ವರದಾನಗಳನ್ನು ಕಸಿದುಕೊಂಡು ನನ್ನ ನಾನೇ ಹೇಸುವಂತೆ ಮಾಡಿದೆ. ನಿಜವಾದ ಪೀಡೆಯೆಂದರೆ ಜೀವಿಸಿದ್ದೂ ಪರಿತ್ಯಕ್ತಳಾಗಿ ತಿರಸ್ಕೃತಳಾಗಿರುವುದು."

ತಾಯಿಯ ಈ ಕಟುತೆ ನೋಡಿ ಎನಾ ಬೆರಗಾಗಿ ಹೀಗೆಂದಳು: "ಎಂಥಾ ಮಾತಿದು? ಅವ್ವಾ, ನೀನಂತೂ ಪ್ರಕೃತಿಯಲ್ಲಿ ಅಚಲ ವಿಶ್ವಾಸ ಹಾಗೂ ಪ್ರೀತಿಯನ್ನಿಟ್ಟವಳು. ನಾರಿಯ ಯಾವ ಅವಸ್ಥೆಯನ್ನು ನೀನು ಇಷ್ಟು ಕಟುವಾಗಿ ಟೀಕಿಸುತ್ತಿರುವೆಯೋ ಅದು ಪ್ರಕೃತಿಯ ವರದಾನವಾಗದೆ? ಶಾರೀರಿಕ ಬಾಧೆಗಳಿಂದ ಮುಕ್ತಳಾಗಿ ಸೌಮ್ಯ ಸಂತುಲಿತ ವ್ಯಕ್ತಿತ್ವ ಧರಿಸಿ ಕೇವಲ ಪುರುಷರ ವಾಸನೆಯನ್ನು ಶಾಂತ ಮಾಡುವ ಸಾಧನವಾಗುಳಿಯದೆ ಪರಮ ಮಮತಾಮಯಿ ಮಾತೆಯ ಸ್ಥಾನಕ್ಕೇರುವುದು ವಂದ್ಯವಲ್ಲವೆ? ಈಗ ನೀನು ಸ್ನೇಹ ಮತ್ತು ಬೆಳಕಿನ ಜ್ಯೋತಿ. ಈ ನಿನ್ನ ಅವಸ್ಥೆಯನ್ನು ನಾವು ಗೌರವಿಸುತ್ತೇವೆ"

ಮಗಳ ಮಾತಿನಿಂದ ತಾಯಿಯ ಔದಾಸೀನ್ಯವೇನೂ ಅಳಿಯಲಿಲ್ಲ. ಆಕೆ ಅಂದಳು, "ನೀನು ಬಹು ಬುದ್ಧಿಪೂರ್ಣವಾದ ಮಾತನ್ನಾಡುವಿ ಎನಾ. ಆದರೆ ಮನಸ್ಸು ಮತ್ತು ಶರೀರ ಮೊದಲು ಯಾವ ಆನಂದಮಯ ಸ್ಥಿತಿಯಲ್ಲಿರುತ್ತವೆಯೊ ಮತ್ತು ತಮ್ಮ ಯಾವ ಶಕ್ತಿಯ ಮೇಲೆ ಅವಕ್ಕೆ ವಿಶ್ವಾಸವಿರುತ್ತದೆಯೊ ಆ ಸ್ಥಿತಿ ಮತ್ತು ಶಕ್ತಿ ಹೋಗಿಬಿಟ್ಟರೆ ಆದರ ಮತ್ತು ವ್ಯಕ್ತಿಯ ಸೌಮ್ಯತೆ ಅರ್ಥಹೀನವೆನಿಸುತ್ತವೆ. ಮನಸ್ಸು ಮತ್ತು ಶರೀರ ಈ ಹೊಸ ಪರಿವರ್ತನೆಯನ್ನು ಸುಲಭವಾಗಿ ಸ್ವೀಕರಿಸುವುದಿಲ್ಲ. ಶರೀರ ಬರಡಾಗುವುದರಿಂದ ಮನಸ್ಸು ತಾಪಗೊಳ್ಳುತ್ತದೆ. ಆಗ ಸುತ್ತೆಲ್ಲ ಅಂಧಕಾರ ವ್ಯಾಪಿಸಿದಂತಿರುತ್ತದೆ."

ರೊಜೆಲಿಯ ಈ ಉದ್ಗಾರ ಇಳಿಮುಖವಾಗುವ ನಾರೀತ್ವದ ಪಶ್ಚಾತ್ತಾಪ ಮಾತ್ರವಾಗಿರದೆ ಇದರ ಹಿಂದೆ ಇನ್ನೊಂದು ಮಹತ್ವದ ಮಾತಿತ್ತು. ಅದೆಂದರೆ ವಾನ್ ಟಮ್ಲರ್ ಕುಟುಂಬದಲ್ಲಿ ಇತ್ತೀಚೆಗೆ ಆಗಾಗ ತೋರುತ್ತಿದ್ದ ಇನ್ನೊಂದು ಹೊಸ ಮುಖ. ಈ ಮುಖ ರೊಜೆಲಿಯ ಆರಿದ ನಾರೀ-ತ್ವದ ಬೂದಿಯಲ್ಲಿ ಹೊಸ ಕೆಂಡಗಳನ್ನು ಹುಟ್ಟಿಸಿತ್ತು. ಈ ಮುಖ ಕೇನ್ ಕೀಟನ್‌ನದು.

ಕೇನ್ ಕೀಟನ್ ೨೪ ವರ್ಷದ ಅಮೇರಿಕನ್ ತರುಣ. ಮಹಾಯುದ್ಧದ ತೊಂದರೆಯಿಂದ ಈತ ಜರ್ಮನಿಗೆ ಬಂದಿದ್ದ. ಯುದ್ಧ ಮುಗಿದ ಮೇಲೆ ಈಗ ಈ ನಗರದಲ್ಲಿ ಇರುತ್ತಿದ್ದ. ಕೇನ್ ಕೀಟನ್ ಒಬ್ಬ ಸಾಮಾನ್ಯ ನಿರೋಗಿ ತರುಣ. ಅವನ ಮುಖದಲ್ಲಿ ಪ್ರಖರ ಬುದ್ಧಿಮತ್ತೆಯ ಯಾವ ಲಕ್ಷಣಗಳೂ ಎನಾಗೆ ಕಾಣಿಸಿರಲಿಲ್ಲ. ಈ ಮಾತು ಕೇವಲ ಎನಾಳ ವಿಷಯದಲ್ಲಿ ಮಾತ್ರ ಹೀಗಿತ್ತು. ಆದರೆ ಡಜೆಲ್‌ಡಾರ್ಫ್‌ದ ಶ್ರೀಮಂತ ವರ್ಗದ ಮಹಿಳೆಯರಲ್ಲಿ ಕೇನ್‌ನ ಪ್ರಭಾವ ಚೆನ್ನಾಗಿ ಬಿದ್ದಿತ್ತು. ಉಪಜೀವಿಕೆಗೋಸ್ಕರ ಆತ ಈ ಜನರಿಗೆ ಇಂಗ್ರೇಜಿಯನ್ನು ಕಲಿಸುತ್ತಿದ್ದ. ಶ್ರೀಮಂತ ಉದ್ಯೋಗಪತಿಗಳ ಮಹಿಳೆಯರು ಫೀ ಕೊಟ್ಟು ಇಂಗ್ರೇಜಿ ಮಾತಾಡಲು ಕಲಿಸಲೆಂದು ಇವನನ್ನು ಕರೆಸುತ್ತಿದ್ದರು. ಇವನ ಯಶಸ್ಸಿಗೆ ಎರಡು ಕಾರಣಗಳು. ಒಂದು ಜರ್ಮನ್ನರಿಗೆ ಈಗ ಇಂಗ್ರೇಜಿ ಕಲಿಯುವುದು ಅಗತ್ಯದ್ದಾಗಿತ್ತು. ಎರಡನೆಯದೆಂದರೆ ಇವನ ಪೂರ್ಣ ಯೌವನ ಅವರಿಗೊಂದು ಆಕರ್ಷಣೆಯ ವಿಷಯವಾಗಿತ್ತು.

ವಾನ್ ಟಮ್ಲರ್ ಕುಟುಂಬದಲ್ಲೂ ಕೇನ್ ಬರುತ್ತಿದ್ದ. ಎಡ್ವರ್ಡ್ ತಾಯಿ ರೊಜೆಲಿಗೆ ತಾನು ಕೇನ್‌ನ ಹತ್ತಿರ ಇಂಗ್ರೇಜಿ ಕಲಿಯಬೇಕೆಂದು ಹೇಳಿದ. ಶಾಲೆಯಲ್ಲಿ ಉಳಿದೆಲ್ಲ ವಿಷಯಗಳನ್ನು ಅವನಿಗೆ ಕಲಿಸುತ್ತಿದ್ದರಾದರೂ ಇಂಗ್ರೇಜಿ ಕಲಿಸುವ ವ್ಯವಸ್ಥೆಯಿರಲಿಲ್ಲ. ಎಡ್ವರ್ಡ್ ಇಂಜನಿಯರನಾಗಬಯಸಿದ್ದರಿಂದ ಮತ್ತು ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋಗಬಯಸಿದ್ದರಿಂದ ಇಂಗ್ರೇಜಿ ಕಲಿಯುವುದು ಅವನಿಗೆ ಅತ್ಯವಶ್ಯವಾಗಿತ್ತು. ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದ ರೊಜೆಲಿ ಕೇನ್‌ಕೀಟನ್ ವಾರದಲ್ಲಿ ಮೂರು ದಿನ– ಸೋಮ, ಬುಧ ಮತ್ತು ಶನಿವಾರ— ಮನೆಗೆ ಬಂದು ಎಡ್ವರ್ಡನಿಗೆ ಇಂಗ್ರೇಜಿ ಕಲಿಸುವ ಏರ್ಪಾಡು ಮಾಡಿದಳು.

ಕೇನ್ ಸ್ವಭಾವತಃ ನಗುಮುಖದವನಿದ್ದು ದರಿಂದ ಈ ಮೂರು ದಿನಗಳಲ್ಲಿ ಎಡ್ವರ್ಡ್‌ನ ಕೋಣೆಯಲ್ಲಿ ಆನಂದವು ತುಂಬಿ ಹರಿಯುತ್ತಿತ್ತು. ಹೊಸದೊಂದು ಗಾಳಿ ಆಗ ವಾತಾವರಣದಲ್ಲಿರುತ್ತಿತ್ತು. ರೋಜೆಲಿ ಆಗಾಗ ಮಗನ ಕೋಣೆಯಲ್ಲಿ ಹೋಗಿ ತಾನೂ ಈ ಸುಖದ ಸಾಗರದಲ್ಲಿ ತೇಲಾಡುತ್ತಿದ್ದಳು. ಇಂಥ ಮಾತುಗಳು ಹಲವು ಸಾರೆ ಮನರಂಜನೆಯೆಂದು ನಡೆದರೆ ಕೂಡಲೆ ಚಟವಾಗಿ ಪರಿಣಮಿಸುತ್ತವೆ. ಅದರಂತೆ ಕೇನ್ ಮನೆಗೆ ಬಂದೊಡನೆಯೆ ಮಗನ ಕೋಣೆಗೆ ಹೋಗುವುದು ರೋಜೆಲಿಯ ಚಟವಾಗಿ ಬಿಟ್ಟಿತು. ಈಗ ಕೇನ್‌ನ ದೇಹಯಷ್ಟಿಯನ್ನು ನೋಡುತ್ತ ನಿಲ್ಲುವ ಅವಕಾಶವೂ ರೋಜೆಲಿಗೆ ದೊರೆತಂತಾಯಿತು. ನೋಡಿನೋಡಿದಂತೆ ಅವನ ಬಗ್ಗೆ ಅವಳಲ್ಲಿ ಹೆಚ್ಚೆಚ್ಚು ಆಕರ್ಷಣೆ ಬೆಳೆಯಿತು. ಹೃಷ್ಟ-ಪುಷ್ಟ ದೇಹ, ಅಗಲವಾದ ಭುಜಗಳು, ದಟ್ಟ ಕೂದಲು ಮೋಹಕ ಮುದ್ದುಮುಖ, —ಅವನನ್ನು ನೋಡಿದರೆ ಸಾಕು ಯೌವನದ ಆಭಾಸವಾಗುತ್ತಿತ್ತವಳಿಗೆ. ಪ್ರಕೃತಿ ಪ್ರೇಮಿಯೂ ವಸಂತ ಋತುವಿನ ಬರವಿನಿಂದ ಪುಲಕಗೊಳ್ಳುವವಳೂ ಆದ ರೋಜೆಲಿ ಈ ಆಭಾಸದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಮುಂದೆ ಮುಂದೆ ಪಾಠ ಹೇಳಿಯಾದ ಮೇಲೆ ಸಂಜೆ ಊಟಕ್ಕೂ ಕೇನ್ ಉಳಿಯತೊಡಗಿದ.

ಸ್ನೇಹ ಹೆಚ್ಚಿತು. ಕೇನ್‌ನ ಜೀವನದ ಬಗ್ಗೆ ಇನ್ನೂ ಹೆಚ್ಚಿನ ಸಂಗತಿಗಳು ರೋಜೆಲಿಗ ತಿಳಿದವು. ಅವನ ಹುಟ್ಟು, ಪರಿವಾರ, ಅವನು ಶಿಕ್ಷಣ ಪಡೆದ ಶಾಲೆ ಎಲ್ಲ ವಿಷಯ ತಿಳಿದವು. ಇವೆಲ್ಲ ತೀರಸಾಮಾನ್ಯವಾದವುಗಳೇ. ಯಾರ ಜೀವನದಲ್ಲಿ ಬೇಕಾದರೂ ಆಗಬಹುದು. ಆದರೆ ರೋಜೆಲಿಗೆ ಕೇನ್‌ನ ಬಗ್ಗೆ ಅನಿಸುತ್ತಿದ್ದ ಆಕರ್ಷಣೆಯಿಂದ ಈ ಸಾಧಾರಣ ಸಂಗತಿಗಳೂ ಅಸಾಧಾರಣವಾಗಿ ತೋರಿದವು. ಅವಳ ದೃಷ್ಟಿಯಲ್ಲಿ ಕೇನ್ ಸರ್ವಶ್ರೇಷ್ಠ ಪುರುಷನೆನಿಸಿದ್ದ.

ಕೇನ್ ಇತಿಹಾಸ ಮತ್ತು ಸಂಸ್ಕೃತಿಯ ಗಹನ ವಿದ್ಯಾರ್ಥಿಯಾಗಿದ್ದ. ಯುರೋಪಿನ ಪ್ರಾಚೀನ ಸಂಸ್ಕೃತಿಯ ಮುಂದೆ ಅಮೇರಿಕದ ಸಂಸ್ಕೃತಿ ಹೇಯವೆನಿಸುತ್ತಿತ್ತು ಅವನಿಗೆ. ಪ್ರಾಚೀನ ಸಂಸ್ಕೃತಿಯೆ ಅರ್ಥಪೂರ್ಣ ಹಾಗೂ ಸುಂದರ ಪರಂಪರೆಗಳನ್ನು ಹುಟ್ಟಿಸಬಲ್ಲದು ಎಂದು ಕೇನ್ ಹೇಳುತ್ತಿದ್ದ. ಜಗತ್ತಿನ ಇತಿಹಾಸ ಮತ್ತು ಸಂಸ್ಕೃತಿಯ ವಿಷಯದಲ್ಲಿ ಕೇನ್‌ನಿಗೆ ಬಹುತರ ಜರ್ಮನ್ನರಿಗಿಂತ ಹೆಚ್ಚಿನ ಜ್ಞಾನವಿತ್ತು. ಆತ ಒಂದು ಪರಂಪರಾಗತ ಸಮಾರಂಭದ ಬಗ್ಗೆ ಹೇಳಿದ. 'ಸ್ಮ್ಯಾಕ್ ಈಸ್ಟರ್' ಎಂಬ ಒಂದು ಜರ್ಮನ್ ಸಮಾರಂಭದ ಬಗ್ಗೆ ಆತ ಸ್ವತಃ ರೋಜೆಲಿಗೂ ಗೊತ್ತಿಲ್ಲದ ಹಲವು ಸಂಗತಿಗಳನ್ನು ವಿವರಿಸಿದ. ಈ ಸಮಾರಂಭದಲ್ಲಿ ಊರೊಳಗಿನ, ಓಣಿಯೊಳಗಿನ ತರುಣರು ಬೆತ್ತದಿಂದ ಅಥವಾ ಬೇರೆ ಇನ್ನಾವುದಾದರೂ ಗಿಡದ ರೆಂಬೆಯಿಂದ ತರುಣಿಯರನ್ನು, ದನಗಳನ್ನು ಅಥವಾ ಮರಗಳನ್ನು ಹೊಡೆಯುತ್ತಿದ್ದರು. ಹೊಡೆಯುವ ಕೋಲಿಗೆ 'ಜೀವನ-ದಂಡ'ವೆನ್ನುತ್ತಿದ್ದರು. ಮತ್ತು ಹೊಡೆಸಿಕೊಂಡ ವ್ಯಕ್ತಿಯಲ್ಲಿ ಹೊಸ ಜೀವನವನ್ನು ಚೇತನಗೊಳಿಸುವುದು ಹೊಡೆಯುವುದರ ಸಂಕೇತವಾಗಿರುತ್ತಿತ್ತು.

ಕೇನ್‌ನ ಬಾಯಿಯಿಂದ ಈ ಸಂಕೇತಾರ್ಥವನ್ನು ಅರಿತು ರೋಜೆಲಿ ಬಹಳ ಉತ್ತೇಜಿತಳಾದಳು. ತರುಣನಿಂದ ಹೊಡೆಸಿಕೊಂಡು ಹೊಸ ಜೀವನ ಪಡೆಯುವ ವಿಚಾರದಿಂದ ವೃದ್ಧೆಯಾದರೂ ಪ್ರಕೃತಿ ಪ್ರೇಮಿಯಾದ ರೋಜೆಲಿಯಲ್ಲಿ ಉತ್ಸಾಹದ ಹೊಸ ತರಂಗಗಳೆದ್ದವು. ಯಾವಾಗ ನಾರೀ ಜೀವನದಲ್ಲಿ ವಸಂತಮಾಸ ಮುಗಿಯುವುದೋ, ಯಾವಾಗ ಭೂಮಿಯಲ್ಲಿ ಹೊಸ ಅಂಕುರಗಳನ್ನೆಬ್ಬಿಸುವ ಶಕ್ತಿ ಕುಂದುತ್ತದೆಯೊ, ಯಾವಾಗ ಒಣ ಹವೆ ತರಗೆಲೆಗಳನ್ನು ತೆಕ್ಕೆಗೆತ್ತಿಕೊಂಡು ಒಯ್ಯುವುದೊ ಮತ್ತು ನಗ್ನ ಟೊಂಗೆಗಳು ಹೊಸಚಿಗುರುಗಳನ್ನು ಹುಟ್ಟಿಸಲಾರದಷ್ಟು ದುರ್ಬಲವಾಗಿರುತ್ತವೆಯೊ ಆಗ ವಸ್ತುಸ್ಥಿತಿಯ ಬರಡುತನವನ್ನು ಗೆದ್ದು ನಿಲ್ಲುವ ಸ್ವಪ್ನ ತೀವ್ರತೆಯಿಂದ ಮೂಡುತ್ತದೆ. ಆಗ ಹೊಸ ಜೀವನ ಸಂಪಾದಿಸಲು, ಪ್ರಸವಕ್ಷಮತೆ ಮರಳಿ ಗಳಿಸಲು ಉಪಾಯ ದೊರೆತರೆ ಸ್ತ್ರೀ ಓಡಿಹೋಗಿ ಅದನ್ನು ತನ್ನ ಜೀವನಾಧಾರವಾಗಿ ಮಾಡಿಕೊಳ್ಳ ಬಯಸುತ್ತಾಳೆ.

ರೊಜೆಲಿಯಲ್ಲಿ ನಡೆದ ಪರಿವರ್ತನೆಯ ಅರಿವು ಎನಾಗೆ ಪೂರ್ಣವಾಗಿ ಆಗಿತು. ಬೇರೆ ಸ್ತ್ರೀಯರ ಮನೋವ್ಯಾಪಾರವನ್ನು ತಿಳಿಯುವುದರಲ್ಲಿ ನಿಪುಣಳಾಗಿದ್ದರೂ ರೊಜೆಲಿ ತನ್ನ ಗುಟ್ಟು ಮಾತ್ರ ಬೇರೆ ಯಾರಿಗೂ ತಿಳಿಯದೆಂದು ಎಣಿಸಿ ತನ್ನ ಗುಟ್ಟನ್ನು ಬಚ್ಚಿಟ್ಟುಕೊಂಡಿದ್ದಳು. ಆದರೆ ತಾಯಿಯ ವೇದನೆ ಮಗಳಿಗೆ ತಿಳಿಯದಿರಲಿಲ್ಲ. ಎಡ್ವರ್ಡ್‌ನ ಇಂಗ್ರೇಜಿ ಶಿಕ್ಷಕ ಕೇನ್‌ಕೀಟನ್‌ನಿಗೆ ತಾಯಿ ತನ್ನ ಅಂತರಂಗವನ್ನರ್ಪಿಸಿದ್ದಾಳೆಂದು ಆಕೆಗೆ ಗೊತ್ತಾಗಿತ್ತು. ಆದರೆ ಎನಾಗೆ ಆಶ್ಚರ್ಯವೆನಿಸಿದ್ದೆಂದರೆ, ಕೆಡುಕೆನಿಸಿದ್ದೆಂದರೆ, ರೊಜೆಲಿಯ ವ್ಯಕ್ತಿತ್ವ ಈ ಅಸಾಮಯಿಕ ಮತ್ತು ಅಸ್ವಾಭಾವಿಕ ಆಕರ್ಷಣವನ್ನು ಬದಿಗೊತ್ತಲು ಯಾವ ಯತ್ನವನ್ನೂ ಮಾಡಲಿಲ್ಲವಲ್ಲ ಎಂಬ ಮಾತು; ಸ್ತ್ರೀಯೋಚಿತ ಮಾನ-ಮರ್ಯಾದೆಯನ್ನು ಲೆಕ್ಕಿಸದೆ ಈ ತೊರೆಗೆ ಬಿದ್ದು ಬಿಟ್ಟಿರುವಳಲ್ಲ ಎಂಬುದು.

ಎನಾಗೆ ಏನೊ ಇನ್ನೂ ಸ್ವಲ್ಪ ಸಂಶಯವಿದ್ದರೆ ಅದೂ ಒಂದು ಸಂಜೆ ಅಳಿಯಿತು. ಸಪ್ಟೆಂಬರ ತಿಂಗಳದು. ಸಂಜೆಯಾಗಿದ್ದರೂ ಸಾಕಷ್ಟು ಶೆಕೆ ಇತ್ತು. ರೊಜೆಲಿ, ಎನಾ, ಎಡ್ವರ್ಡ್ ಮತ್ತು ಕೇನ್ ಊಟಕ್ಕೆ ಕುಳಿತಿದ್ದರು. ಎಡ್ವರ್ಡ್‌ನಿಗೆ ಶೆಕೆಯಾಗುತ್ತಿತ್ತಾದ್ದರಿಂದ ಕೋಟು ತೆಗೆಯಲು ಆತ ತಾಯಿಯ ಅಪ್ಪಣೆ ಕೇಳಿದ. ಅಪ್ಪಣೆ ಕೊಡುತ್ತಾ ತಾಯಿ, 'ಇಂಥ ಮಾತಿನಲ್ಲಿ ಯುವಕರು ಹಿಂಜರಿಯಬಾರದು.' ಎಂದಳು. ಇದರಿಂದ ಎಡ್ವರ್ಡ್‌ನೊಬ್ಬನೇ ಅಲ್ಲ, ಕೇನ್ ಕೀಟನ್‌ನೂ ತನ್ನ ಕೋಟನ್ನಿಳಿಸಿದ. ಎಡ್ವರ್ಡ್‌ನ ಮೈಯಲ್ಲಿ ಶರ್ಟು ಇತ್ತು. ಕೇನ್‌ನ ಮೈಯಲ್ಲಿ ಮಾತ್ರ ಬರೆ ಬನಿಯನ್ ಇತ್ತು. ಅದರಿಂದ ಆತನ ಬಾಹುಗಳು ಪೂರ್ಣ ಕಾಣುವಂತಾದವು. ಗೌರವರ್ಣದ ಶಕ್ತಿಯುತ ಬಾಹುಗಳು! ಈ ಬಾಹುಗಳು ಯಾವ ರೀತಿ ಅಲ್ಲಿದ್ದ ಸ್ತ್ರೀಯರನ್ನು ಪ್ರಚೋದಿಸಿದುವೆಂಬುದು ಕೇನ್‌ಗಾಗಲಿ, ಎಡ್ವರ್ಡ್‌ನಿಗಾಗಲಿ ತಿಳಿಯಲಿಲ್ಲ. ಆದರೆ ಈ ಬಾಹುಗಳನ್ನು ಕಂಡು ತನ್ನ ತಾಯಿಗಾದ ಪರಿಣಾಮದಿಂದ ಮಾತ್ರ ಎನಾ ಮರುಗಿದಳು. ರೊಜೆಲಿಯ ಸ್ವರ ತೀವ್ರ ಮತ್ತು ಉತ್ತೇಜಿತವಾಯಿತು. ಅವಳ ಮುಖ ಒಮ್ಮೆ ಕೆಂಪು ಒಮ್ಮೆ ಹಳದಿ ಒಮ್ಮೆ ರಕ್ತಹೀನವಾಗತೊಡಗಿತು. ಒಂದು ವಿಶಿಷ್ಟ ಆಕರ್ಷಣೆಯಿಂದ ರೊಜೆಲಿ ಬಾಹುಗಳನ್ನು ಮರಮರಳಿ ನೋಡತೊಡಗಿದಳು. ಅವಳ ಕಣ್ಣಲ್ಲಿ ವಾಸನೆಯ ಆಳವಾ ಭಾವನೆ ಎದ್ದು ಕಾಣತೊಡಗಿತು.

ರೊಜೆಲಿಗೆ ಈ ವೇದನೆ ಸಹಿಸಲಾರದಾದಾ ಆಕೆ ತಲೆನೋವಿನ ನೆವ ಮಾಡಿ ಎದ್ದು ತನ್ನ ಕೋಣೆಗೆ ಹೋಗಿ ತನ್ನ ಉತ್ತಪ್ತ ಮುಖವನ್ನು ತಲೆದಿಂಬಿನಲ್ಲಿ ಮುಚ್ಚಿಕೊಂಡಳು. ಅವಳ ರೋಮರೋಮದಲ್ಲಿ ಲಜ್ಜೆ ಭಯ, ನಿಷಿದ್ಧ ಆನಂದದ ಚೀತ್ಕಾರ ಮೂಡಿತು. "ದೇವರೆ, ನಾನು ಹಿಂದೆಂದೂ ಯಾರನ್ನು ಪ್ರೀಸಿರದಷ್ಟು ಇವನನ್ನು ಪ್ರೀತಿಸುವೆ. ಆದರಿದು ಸಾಧ್ಯವೆ? ಯೋಗ್ಯವೆ? ಪ್ರಕೃತಿಯು ಯೌನದ ಉನ್ಮಾದವನ್ನು ನನ್ನಿಂದ ಕಸಿದುಕೊಂಡಿದ ಋತುಸ್ರಾವದ ಶಕ್ತಿಯೂ ನನ್ನಲ್ಲಿ ಉಳಿದಿಲ್ಲ ಇಂಥ ನನ್ನ ತಣ್ಣಗಾದ ದೇಹದಲ್ಲಿ ವಾಸನೆಯ ಜ್ವಾಲಾಮುಖಿ ಸಿಡಿದೆದ್ದಿದೆ. ಆ ತರುಣ ಬಾಹುಗಳ ಆಲಿಂಗನ ನನಗೆ ಬೇಕೆನಿಸುತ್ತಿದೆ. ಎ ಉದುರುವ ಈ ಶಿಶಿರದಲ್ಲಿ ವಸಂತ ಋತುವಿ ಸ್ವಪ್ನ ಉಚಿತವೇ? ಇದು ಪ್ರಕೃತಿಯ ಉಪಹಾಸವೆ ಅಥವಾ ಈ ಬೇಗೆಯಲ್ಲೂ ಮತ್ತೊಮ್ಮೆ ಸುಗಂಧಮಯ ಹೂ ಅರಳಬಹುದೊ? ಅಥವಾ ನಾನು ನಿರ್ಲಜ್ಜಳೆ? ಆದರೆ ನಾನಂತೂ ನಿರ್ಲಜ್ಜಳಿಲ್ಲ. ಯಾಕೆಂದರೆ ಅವನ ಮೈಕಟ್ಟು ನೋಡಿದ ನನ್ನಲ್ಲಿ ಲಜ್ಜೆಯ ವಿದ್ಯುತ್ ಸಂಚಾರವಾಗುತ್ತ ಅವನು ತನಗೇ ತಿಳಿಯದಂತೆ ಜೀವನದಂ ದಿಂದ ನನ್ನನ್ನು ಹೊಡೆದು ನನ್ನಲ್ಲಿ ಹೊ ಜೀವನ ಹೊಸ ಕಾಮನೆಯನ್ನು ಸ್ಫುರಿಸಿದ್ದಾನೆ"

ಈ ದ್ವಂದ್ವ ರೊಜೆಲಿಯ ಅಂತರಂಗದ ರಾತ್ರಿ ಇಡೀ ನಡೆಯಿತು. ನಿದ್ದೆ ಹತ್ತಲೇ ಇಲ್ಲ ಬೆಳಿಗ್ಗೆ ಎದ್ದಾಗ ಅದೇ ಭಾವನೆ ಇನ್ನಿಷ್ಟು ಬ ಗೊಂಡಿತ್ತು. ದ್ವಂದ್ವ ಮುಗಿದಿತ್ತು. ಆಯುಷ್ಯ ಸಂಧ್ಯಾಕಾಲದಲ್ಲೂ ಯೌವನದ ಸೂರ್ಯನನ್ನು ಬೆಳಗಿಸುವ ಪ್ರೇರಣೆ ಹಾಗೂ ಶಕ್ತಿಯನ್ನು ಪ್ರಕೃತಿ ತನಗೆ ದಯಪಾಲಿಸಿದ್ದಾಳೆಂದು ಆ ತೀರ್ಮಾನಿಸಿಕೊಂಡಿದ್ದಳು. ಈ ವರದಾನವನ್ನು ಅವಳೇಕೆ ತಿರಸ್ಕರಿಸಬೇಕು? ಆದರೆ ಈ ಸಂಗ

ಯಾರಿಗೂ ಈಗಲೇ ತಿಳಿಯಬಾರದು. ವಿಶೇಷತಃ ಕೇನ್‌ಗೆ!

ಆಮೇಲೆ ಕೇನ್‌ನೊಂದಿಗೆ ರೋಜೆಲಿಯ ವ್ಯವಹಾರ ಹೆಚ್ಚು ನಮ್ರವಾಗಿಯೂ ಹೆಚ್ಚು ಸಮರ್ಪಣ ಶೀಲವಾಗಿಯೂ ಆಗಿತ್ತು. ತನ್ನ ತಾಯಿ ಹಾಗೂ ತನ್ನ ಶಿಕ್ಷಕರ ನಡುವೆ ತನಗೆ ತಿಳಿಯಲಾರದ ಯಾವದೊ ಅಸ್ವಾಭಾವಿಕ ಬಗೆಯ ಸಂಬಂಧವಿದೆ ಎಂದು ಎಡ್ವರ್ಡ್‌ನಿಗೂ ಸಂದೇಹ ಬರತೊಡಗಿತು. ಒಂದು ದಿನ ಸಮಯ ಸಿಕ್ಕಾಗ ಆತ ತನ್ನ ಅಕ್ಕನಿಗೆ ಕೇಳಿದ, "ಅಕ್ಕಾ, ಅವ್ವನಿಗೆ ಏನಾಗಿದೆ? ಕೀಟನ್‌ನನ್ನು ಕಂಡರೆ ಅವಳು ಖಿನ್ನಳಾಗುವಳೇಕೆ? ಈಗ ಆತ ಬೇಡವೆನಿಸುತ್ತಿರುವನೆ?" ಎನಾ ಏನೂ ಉತ್ತರಿಸಲಿಲ್ಲ. ಆಗ ಎಡ್ವರ್ಡ್ ತುಸು ತಡೆದು ಪುನಃ ಕೇಳಿದ. "ಅಥವಾ ಈಗ ಆಕೆ ಅವನನ್ನು ಮೊದಲಿನಕಿಂತ ಹೆಚ್ಚು ಪ್ರೀತಿಯಿಂದ ಕಾಣುವಳೆ?"

ಎಡ್ವರ್ಡ್‌ನ ಬುದ್ಧಿ ಅಪಾಯದ ದಾರಿ ಹಿಡಿದಿದೆ ಎಂದು ಎನಾ ಕಂಡುಕೊಂಡಳು. ಆಗ ಆಕೆಗೆ ತಡೆಯಲಿಕ್ಕಾಗಲಿಲ್ಲ. ತಮ್ಮನನ್ನು ಬೆದರಿಸಿ, "ನೀನು ಇಂಥಾ ವಿಷಯಗಳಲ್ಲಿ ತಲೆ ಹಾಕಬಾರದು. ನೀನಿನ್ನೂ ಚಿಕ್ಕವನು. ಇವೆಲ್ಲ ನಿನಗೀಗಲೇ ತಿಳಿಯಲಾರವು' ಎಂದು ಹೇಳಿದಳು.

ಆಗೇನೊ ಎಡ್ವರ್ಡ್ ಸುಮ್ಮನುಳಿದ. ಆದರೆ ಯಾವದನ್ನು ಆತ ಹೆದರುತ್ತ ಕೇಳಿದ್ದನೊ ಕೇಳಿದಾಗ ಯಾವದಕ್ಕೆ ಅಕ್ಕ ಬೆದರಿಸಿ ಉತ್ತರಿಸಿದ್ದಳೊ ಆ ವಿಚಾರ ಅವನಲ್ಲಿ ಮುಳ್ಳಿನಂತೆ ಉಳಿದುಕೊಂಡಿತು. ಹಲವು ದಿನ ಕಳೆದ ಮೇಲೆ ಎಡ್ವರ್ಡ್ ಅದೇ ಮಾತನ್ನು ತುಸು ಬೇರೆ ರೂಪದಲ್ಲಿ ಪುನಃ ಪ್ರಸ್ತಾಪಿಸಿದ. 'ಅಕ್ಕಾ ಇನ್ನು ಕೇನ್‌ಕೀಟನ್‌ನ ಶಿಕ್ಷಣದ ಅಗತ್ಯವಿಲ್ಲ. ನಾನಿನ್ನು ಅವನಿಗೆ ಸಾಕೆಂದು ಹೇಳಲು ಅವ್ವನ ಹತ್ತಿರ ಕೇಳಿಕೊಳ್ಳಲಿ?' ಎಂದು ಎಡ್ವರ್ಡ್ ಕೇಳಿದ. ಇದರಿಂದ ತಾಯಿಗೆ ಶಾಂತಿ ದೊರೆತೀತೇನೊ ಎಂದು ಆತನ ತರ್ಕ. ತಮ್ಮನ ವಿಚಾರದಿಂದ ಎನಾಗೂ ಸಂತೋಷವೆನಿಸಿತು. ಅವಳೂ 'ಹಾಗೇ ಮಾಡೆ'ಂದು ಹೇಳಿದಳು.

ಎಡ್ವರ್ಡ್ ಒಂದು ದಿನ ತಾಯಿಯ ಹತ್ತಿರ ಬಂದು, 'ಇನ್ನು ಹೆಚ್ಚಿನ ಇಂಗ್ರೇಜಿ ಕೀಟನ್‌ನಿಂದ ಕಲಿಯಬೇಕಾಗಿಲ್ಲ ಎಂದು ನನಗನಿಸುತ್ತದೆ. ನನ್ನ ಅಭಿರುಚಿಗಾಗಿ ಈಗಾಗಲೇ ತುಂಬ ಖರ್ಚು ಆಗಿದೆ. ಇನ್ನೂ ಹೆಚ್ಚು ಖರ್ಚಾಗುವುದು ಬೇಡ. ನೀನು ಉದಾರಳಾಗಿ ನನ್ನ ಇಚ್ಛೆ ಈಡೇರಿಸಿ ಕೊಟ್ಟೆ. ಇನ್ನು ಮುಂದಿನ ಶಿಕ್ಷಣ ನಾನು ಇಂಗ್ಲಂಡಿಗೆ ಹೋದ ಮೇಲೆ ಪೂರ್ಣ ಮಾಡುವೆ. ಆದ್ದರಿಂದ ಇನ್ನು ಕೀಟನ್‌ಗೆ ಕಲಿಸುವುದು ಸಾಕೆಂದು ಹೇಳುವುದು ಒಳಿತೆಂದು ನನಗೆ ಅನಿಸುತ್ತದೆ."

ಮಗನ ಮಾತನ್ನು ಕೇಳಿ ರೋಜೆಲಿ ಗಾಬರಿಯಾದಳು. ಅವನ ಮಾತು ಮುಗಿಯುತ್ತಲೆ ಒಮ್ಮೆಲೇ ಹೀಗೆಂದಳು: "ಆದರೆ ಅದು ಸಾಧ್ಯವಿಲ್ಲ. ನೀನು ಈ ರೀತಿ ಹೇಳುವುದನ್ನು ಕೇಳಿ ನನಗೆ ಆಶ್ಚರ್ಯವೆನಿಸುತ್ತಿದೆ. ಮನೆಯ ದುಡ್ಡು ಹೆಚ್ಚು ವ್ಯಯವಾಗಬಾರದೆಂಬ ವಿಚಾರ ಚೆನ್ನಾಗಿದೆ. ಆದರೆ ನಿನ್ನ ಇಂಗ್ರೇಜಿ ಶಿಕ್ಷಣ ಕೇವಲ ನಿನ್ನ ರುಚಿಯಷ್ಟೇ ಆಗಿರದೆ ನಿನ್ನ ಭವಿಷ್ಯತ್ತೂ ಅದನ್ನವಲಂಬಿಸಿದೆ. ನಿನ್ನ ಜ್ಞಾನ ಪೂರ್ಣವಾಗಲಿಕ್ಕೆಬೇಕು. ದೇವರ ದಯದಿಂದ ಉತ್ತಮ ಶಿಕ್ಷಣ ಕೊಡಲು ಸಾಧ್ಯವಾಗುವಷ್ಟು ಸಂಪತ್ತೂ ನಮ್ಮಲ್ಲಿದೆ. ಮತ್ತು ಕೀಟನ್‌ರೊಂದಿಗಿರುವ ನಮ್ಮ ಸಂಬಂಧ ಯಾರೊ ತ್ರಯಸ್ಥನಿಗೆ ಕೆಲಸ ಮುಗಿದೊಡನೆ ಹೋಗಿರೆಂದು ಹೇಳಿ ಕಳಿಸಿಕೊಡುವಷ್ಟು ಪರಕೀಯವಿಲ್ಲ. ಅವರು ಹೊರಟು ಹೋದರೆ ನಮಗೆಲ್ಲರಿಗೂ ವಿಶೇಷತಃ ಎನಾಗೆ ಅದು ತಾಪದಾಯಕವೆನಿಸಬಹುದು. ಆದ್ದರಿಂದ ಅವರನ್ನು ಕಳಿಸುವುದು ಒಳಿತಲ್ಲವೆಂದು ನನಗನಿಸುತ್ತದೆ. ನೀನು ಅರ್ಧಕ್ಕೆ ಶಿಕ್ಷಣ ನಿಲ್ಲಿಸಬೇಡ."

ತಾಯಿಯ ಮಾತನ್ನು ಕೇಳಿ ಎಡ್ವರ್ಡ್ ಹೊರಟುಹೋದ. ಎನಾಳ ಮುಂದೆ ನಡೆದ ಸಂವಾದವನ್ನು ಆತ ವಿವರಿಸಿದಾಗ ಎನಾ ಅಂದಳು, "ಹೀಗೇ ಆಗುವುದೆಂದು ನಾನೂ ತಿಳಿದಿದ್ದೆ. ನಮ್ಮ ಬಗ್ಗೆ ತುಂಬಾ ಯೋಚಿಸುವ ಅವ್ವ ಎಂದೂ ಈ ಮಾತನ್ನು ದುಡ್ಡು ಖರ್ಚಾಗುವುದೆಂಬ ಕಾರಣಕ್ಕಾಗಿ ಒಪ್ಪಲಾರಳೆಂದು ಮೊದಲೇ ನನಗನಿಸಿತ್ತು. ಮೇಲಾಗಿ ಕೀಟನ್ ಒಳ್ಳೇ ಮನುಷ್ಯರು. ಅವರನ್ನು ಕಳಿಸುವುದು ನಮಗೆ ದುಃಖದಾಯಕವೇ!"

ಅಕ್ಕನ ಮನೋಗತವರಿಯಲು ಯತ್ನಿಸಿದರೂ ಎಡ್ವರ್ಡ್‌ನಿಗೆ ಏನೂ ತಿಳಿಯಲಿಲ್ಲ. ಹೆಂಗಸರ ರಹಸ್ಯಮಯತೆ ತನಗೆ ತಿಳಿಯಲಾರದಷ್ಟು ಗೂಢವೆಂದು ನಂಬಿ ಆತ ಅಲ್ಲಿಂದ ಹೋದ

ಕೇನ್‌ಕೀಟನ್‌ನ ಸ್ಥಾನ ಮತ್ತೆ ಮೊದಲಿನಂತೆ ದೃಢವಾಯಿತು. ಮೊದಲಿನಂತೆ ವಾರದಲ್ಲಿ ಮೂರು ಸಾರೆ ಕಲಿಸಲಿಕ್ಕೆ ಬರುತ್ತಿದ್ದ. ಸಂಜೆ ಊಟಕ್ಕೆ ಇವರಲ್ಲೇ ಉಳಿಯುತ್ತಿದ್ದ. ರೊಜೆಲಿಯ ವಾಸನೆಯು ಭರತ ಇಳಿತಗಳು ನಡೆದೇ ಇದ್ದವು. ಭಯ ಲಜ್ಜೆಗಳ ಅತಿರೇಕವಾದಾಗ ಊಟವಾದ ಮೇಲೆ ಆಕೆ ಮದ್ಯವನ್ನು ಹೆಚ್ಚಾಗಿ ಕುಡಿಯತೊಡಗಿದಳು. ಅದರಿಂದ ಅಮಲೇರಿದಂತಾಗಿ ತಾನು ತನ್ನ ಪ್ರಿಯತಮನನ್ನು ನಿಟ್ಟಿಸಿ ನೋಡುವುದು ಅಮಲಿನಲ್ಲೆಂದು ತೋರಲಿ ಎಂದವಳ ಎಣಿಕೆ. ಆದರೆ ಮದಿರೆಯಿಂದ ಅವಳು ಮತ್ತಿಷ್ಟು ದಣಿದು ವ್ಯಥಿತಳಾಗುತ್ತಿದ್ದಳು.

ಕಾಲ ಕಳೆಯುತ್ತಿತ್ತು. ದ್ವಂದ್ವ ನಡೆದೇ ಇತ್ತು ರೊಜೆಲಿಯ ಚಿತ್ತದಲ್ಲಿ. ಆದರೆ ಭಾವನೆಗಳ ಈ ದ್ವಂದ್ವದಲ್ಲೂ ಅವಳ ಮುಖದಲ್ಲಿ ಒಂದು ಬಗೆಯ ಮೆರಗು ಬಂದಿತ್ತು. ಒಣಗಿದ ಗಿಡದಲ್ಲಿ ಒಂದೊಂದೇ ಹೂ ಅರಳುತ್ತಿರುವಂತೆನ್ನಿಸುತ್ತಿತ್ತು. ಚರ್ಮ ಹೊಸ ಕಳೆಯಿಂದ ಮಿನುಗುತ್ತಿತ್ತು. ರೊಜೆಲಿಯ ಪುನರ್ಯೌವನವನ್ನು ಕಂಡು ಜನ ಆಶ್ಚರ್ಯಚಕಿತರಾದರು. ಐವತ್ತು ವರ್ಷ ಪ್ರಾಯವಾದರೂ ಇನ್ನೂ ನವ ಯೌವನೆಯಾಗಿ ಕಾಣುತ್ತಿರುವೆಯೆಂದು ಜನ ಆಕೆಗೆ ಹೇಳತೊಡಗಿದರು.

ಆದರೆ ರೊಜೆಲಿ ತನ್ನ ರಹಸ್ಯವನ್ನು ತನ್ನಷ್ಟಕ್ಕೇ ಇಟ್ಟುಕೊಳ್ಳುವುದು ಅಸಂಭವವಾಗುತ್ತ ನಡೆಯಿತು. ಬಹಳ ಹೊತ್ತು ಯೋಚಿಸಿ ಎಲ್ಲ ವಿಷಯವನ್ನು ಎನಾಳ ಎದುರು ಹೇಳಿ ಬಿಡಬೇಕೆಂದು ಮಾಡಿದಳು. ಅದಕ್ಕೆರಡು ಕಾರಣ. ತಿಳಿವಳಿಕೆಯುಳ್ಳವಳಾದ್ದರಿಂದ ಆಕೆ ತನ್ನನ್ನು ಸಹಾನುಭೂತಿಯಿಂದ ಕಾಣಬಹುದೆಂಬುದು ಒಂದು ಮತ್ತು ಇನ್ನೊಂದು ತನಗೆ ಪ್ರಕೃತಿ ಮರಳಿ ಯೌವನವಿತ್ತದ್ದನ್ನು ಬೇರೆ ಯಾರಾದರೂ ತಿಳಕೊಳ್ಳಲಿ ಎಂಬುದು.

ಒಂದು ರಾತ್ರಿ ರೊಜೆಲಿ ಮತ್ತು ಎನಾ ಬಹಳ ಹೊತ್ತಿನ ಮೇಲೆ ಯಾವದೋ ಸಮಾರಂಭದಿಂದ ಮರಳಿ ಬಂದ ಮೇಲೆ ರೊಜೆಲಿ ಹೇಳಿದಳು, "ಎಂಥ ಚಳಿ! ಹೊರಗೆ ಹಿಮ ಉದುರುತ್ತಿದೆ. ನಾನಂತೂ ನಡುಗುತ್ತಿದ್ದೇನೆ. ನಡೆ, ನಿನ್ನ ಕೋಣೆಯಲ್ಲೆ ತುಸು ಹೊತ್ತು ಕೂಡ್ರುವೆ. ನೀನು ಬಿಸಿ ಬಿಸಿ ಚಹಾ ಮಾಡಿದರೆ ಎಷ್ಟು ಉತ್ತಮ! ಕೆಲವೊಂದು ಮಾತುಗಳನ್ನು ಹೇಳಲಿಕ್ಕೆ ವಿಶಿಷ್ಟ ವಾತಾವರಣ, ಸಮಯ ಬೇಕಾಗುತ್ತವೆ."

ಚಹಾ ಮಾಡುತ್ತ ಎನಾ ಕೇಳಿದಳು, "ಯಾವ ಮಾತು?"

"ಮನಸ್ಸಿನ ಮಾತುಗಳು. ನಿಸರ್ಗದ ವಿಚಿತ್ರ ಸಂಗತಿಗಳ ಮಾತುಗಳು. ನಿಸರ್ಗ ಸರ್ವಶಕ್ತಿ ಮಾನವಾದುದು. ನಮ್ಮ ಜೀವನದಲ್ಲಿ ಎಂಥೆಂಥ ರಹಸ್ಯಮಯ ಘಟನೆಗಳನ್ನು ಉಂಟುಮಾಡುತ್ತದೆ!" ಸ್ವಲ್ಪ ತಡೆದು ಪುನಃ ಅಂದಳು: "ಈಗ ಇಲ್ಲೇ ನೋಡು, ನಿನ್ನ ತಾಯಿ ವೃದ್ಧೆ. ಆದರೂ ಕೇವಲ ತರುಣಿಯರಲ್ಲಿ ಮಾತ್ರ ಉದ್ಭವಿಸುವ ಭಾವನೆ ಉದ್ಭವಿಸಿದರೆ ಅದಕ್ಕೆ ನೀನೇನೆನ್ನುವೆ?"

"ನಿನ್ನ ಮಾತು ಅರ್ಥವಾಗಲಿಲ್ಲ. ನಿಸರ್ಗವಿತ್ತಿರುವ ವರದಾನವೂ ನನಗೆ ಗೊತ್ತು. ಅದರ ಕಾರಣವೂ ನನಗೆ ಗೊತ್ತು. ಅದು ನೀನು ಪ್ರೀತಿಸುತ್ತಿ ಎಂಬುದು. ಆದರೆ ಯಾರನ್ನು? ಯಾರನ್ನು ನೀನು ಪ್ರೀತಿಸುವುದು?" ಮಗಳು ಕೇಳಿದಳು.

"ಕೇಳಿ ನೀನು ಆಶ್ಚರ್ಯಗೊಳ್ಳಬಹುದು. ಆತ ನಮ್ಮ ಪರಿವಾರದ ಒಬ ಯುವಕ ಮಿತ್ರ. ನಿನ್ನ ತಮ್ಮನ ಶಿಕ್ಷಕ."

"ಕೇನ್ ಕೀಟನ್"

"ಹೂಂ"

"ನೀನು ನಿಶ್ಚಿಂತಳಾಗಿರು. ನಾನು ಇದು ಅನುಚಿತವೆಂದು ಹೇಳಲಾರೆ. ಒಂದು ಅನುಭವವನ್ನು ಹೊರುವ ತ್ರಾಣವಿಲ್ಲವಾಗ ಆ ಅನುಭವವನ್ನು ತಪ್ಪು ಅಥವಾ ಸರಿ ಎಂದು ಹೇಳುವ ಅಧಿಕಾರವಿರುವುದಿಲ್ಲ. ನಿನ್ನ ಭಾವನೆಗೆ ಪೆಟ್ಟು ಬೀಳಬಾರದೆಂಬ ಉದ್ದೇಶವಿದ್ದೂ ನಾನೊಂದು ಪ್ರಶ್ನೆ ಕೇಳಲೆ? ಈ ವಯಸ್ಸಿನಲ್ಲಿ ಪ್ರೀತಿಸಲು ನೀನು ಯೋಗ್ಯಳಲ್ಲ ಎಂದಂತೂ ನೀನೇ ಹೇಳಿದೆ. ಆದರೆ ನಿನ್ನ ಪ್ರೀತಿಗೆ ಆ ಯುವಕನು ಪಾತ್ರನೊ ಎಂಬ ಬಗ್ಗೆ ಏನಾದರೂ ವಿಚಾರ ಮಾಡಿರುವೆಯಾ?"

"ಆತ ಪಾತ್ರನಿರದೆ ಏನು ? ನೀನೇನು ಹೇಳು-ವೆ ಎನಾ ? ನಾನು ಇದುವರೆಗೆ ಪ್ರೀತಿಸಿದ ಎಲ್ಲರಲ್ಲೂ ಈತ ಶ್ರೇಷ್ಠನು."

"ಅಥವಾ ಹೀಗೂ ಇರಲಾರದೆ? ನೀನು ಅವನನ್ನು ಪ್ರೀತಿಸುವುದರಿಂದ ನಿನಗೆ ಅವನಲ್ಲಿ ಎಲ್ಲವೂ ಗುಣಗಳೆಂದೆ ತೋರುತ್ತಿವೆ. ಆದರೆ ವಾಸ್ತವದಲ್ಲಿ ಅವಾವವೂ ಇರಲಿಕ್ಕಿಲ್ಲ ಕೂಡ. ಪ್ರೇಮದ ದೃಷ್ಟಿಯಿಂದೇಕೆ ನೋಡುವೆ? ಅವನನ್ನು ಅವನ ವಾಸ್ತವ ರೂಪದಲ್ಲೇ ನೋಡು. ಯಾವ ಬಗೆಯಲ್ಲಿ ಆತ ಅಸಾಮಾನ್ಯನಿದ್ದಾನೆ?"

ಪ್ರೀತಿಯ ತೀವ್ರ ಪ್ರೇರಣೆಯಿಂದಾಗಿ ತಾಯಿ ತನ್ನ ಎಲ್ಲ ವಿರೋಧಗಳನ್ನು ತಳ್ಳಿಹಾಕಿದಾಗ ಇನ್ನು ಯಾವ ಯುಕ್ತಿಯಿಂದಲೂ ಇವಳನ್ನು ಈ ವಿಚಿತ್ರ ಆಕರ್ಷಣೆಯಿಂದ ತಡೆಯುವುದು ಅಸಾಧ್ಯವೆಂದು ಎನಾ ಬಗೆದಳು. ಅಂದು ರಾತ್ರಿ ಉದಾಸರಾಗಿಯೇ ಅವರಿಬ್ಬರೂ ಮಲಗಿಕೊಂಡರು.

ಮುಂದೆ ಒಂದು ವಾರದಲ್ಲೇ ಇನ್ನೊಂದು ವಿಚಿತ್ರ ಘಟನೆ ಘಟಿಸಿ ಎನಾಗೆ ಆಶ್ಚರ್ಯವೆನಿಸಿತು. ತನ್ನ ತಾಯಿಗಾಗಿ ತಾನು ಸುಖಿಯಾಗುವದರೊಂದಿಗೇ ಇದು ಒಳಿತೊ ಕೆಡಕೊ ನಿರ್ಧರಿಸಲಿಕ್ಕೆ ಬರದಂತಾಯಿತು ಎನಾಗೆ.

ಅಂದು ಬೆಳಿಗ್ಗೆ ಹೆಣ್ಣಾಳು ರೊಜೆಲಿ ಎನಾಳನ್ನು ತನ್ನ ಕೋಣೆಯಲ್ಲೇ ಕಾಣಬಯಸುತ್ತಾಳೆಂದು ಹೇಳಿದಳು. ದಿನಾಲೂ ಮುಂಜಾನೆ ಕುಟುಂಬದ ಮೂವರೂ ಉಪಹಾರವನ್ನು ಪ್ರತ್ಯೇಕವಾಗಿಯೆ ಮಾಡುತ್ತಿದ್ದರೂ ಏನೋ ವಿಶೇಷವಿರಬೇಕೆಂದೇ ಕರೆಸಿದ್ದಾಳೆಂದು ತಿಳಿದು ಎನಾ ತಾಯಿಯ ಕಡೆಗೆ ಹೋದಳು. ರೊಜೆಲಿ ತಿಳುವಾದ ಒಂದು ಶಾಲನ್ನು ಹೊದ್ದುಕೊಂಡು ಮಂಚದ ಮೇಲೆ ಮಲಗಿದ್ದಳು. ಮುಖಬಾಡಿತ್ತು, ಆದರೆ ಮೂಗು ಕೆಂಪೇರಿತ್ತು ನಾಚಿಕೊಂಡಾಗ ಆಗುವಂತೆ! ಕ್ಷೀಣವಾದ ನಗೆ ಬೀರುತ್ತಾ ರೊಜೆಲಿ ಮಗಳನ್ನು ಸ್ವಾಗತಿಸಿದಳು. ಆದರೆ ಏನೂ ಮಾತಾಡಲಿಲ್ಲ. ಆದ್ದರಿಂದ ಮೊದಲ ಪ್ರಶ್ನೆ ಎನಾಳೇ ಕೇಳಬೇಕಾಯಿತು.

"ಏನಾಗಿದೆ ಅಮ್ಮಾ ? ಮೈಯಲ್ಲಿ ನೆಟ್ಟಗಿಲ್ಲವೆ?"

"ಮೈಯಲ್ಲಿ ನೆಟ್ಟಗಿದೆ. ಏನು ಹೇಳಬೇಕಿತ್ತೊ ಅದನ್ನು ಹೇಳಲು ನಿನ್ನ ಹತ್ತಿರ ನಾನು ಬರುವ ಬದಲು ನಿನ್ನನ್ನೇ ಕರೆಸಿದೆ ಅಷ್ಟೇ . . . . ಹೌದು ನಾನು ವಿಶ್ರಾಂತಿ ಹೊಂದಲೇಬೇಕು. ಈ ಸ್ಥಿತಿಯಲ್ಲಿ ಸ್ತ್ರೀಯರು ಅತ್ತಿತ್ತ ಹೆಚ್ಚು ಅಡ್ಡಾಡಬಾರದು."

"ಆಗಿರುವುದಾದರೂ ಏನು ?"

ಉತ್ತರಿಸುವ ಬದಲು ರೊಜೆಲಿ ಹಾಸಿಗೆಯ ಮೇಲೆ ಎದ್ದು ಕೂತಳು. ಎನಾಳನ್ನು ಹತ್ತಿರ ಎಳಕೊಂಡು ತನ್ನ ಹತ್ತರ ಕೂಡ್ರಿಸಿಕೊಂಡು ಕೊರಳ ಸುತ್ತ ಕೈಹಾಕಿ ಕೆನ್ನೆಗೆ ಕೆನ್ನೆ ಒತ್ತಿ ಅವಳ ಕಿವಿಯಲ್ಲಿ ಹರ್ಷ ಅತಿಯಾಗಿ ಉಸಿರು ಗಟ್ಟಿ ಒಂದೇ ಉಸಿರಿನಲ್ಲಿ ಪಿಸಿಪಿಸಿ ನುಡಿದಳು: "ಎನಾ, ನಾನು ಗೆದ್ದೆ. ನಾನು ಗೆದ್ದೆ. ಸ್ತ್ರೀಯ ಯಾವ ಗುಣಧರ್ಮಕ್ಕೆ ನಾನು ಎರವಾಗಿದ್ದೆನೊ ಅದು ಈಗ ಮತ್ತೆ ಆಯಿತು. ಅದೇ ವೇಗದಿಂದ, ಅದೇ ರೀತಿಯಲ್ಲಿ! ತರುಣ ಸ್ತ್ರೀಯರಿಗಾಗುವಂತೆಯೇ ! ನಿಸರ್ಗದ ಶಕ್ತಿಯಲ್ಲಿ ನನಗೆ ಆಸ್ಥೆಯಿತ್ತು. ಮತ್ತು ಈ ಆಸ್ಥೆ ಹಾಗೂ ಶ್ರದ್ಧೆಯ ಫಲ ನನಗೆ ಸಿಕ್ಕಿತು. ವಯಸ್ಸಾಯಿತೆಂದು ಯಾವ ಸ್ತ್ರೀ ಗುಣಧರ್ಮ ನನ್ನಿಂದ ಹೋಗಿತ್ತೋ ಅದನ್ನೀಗ ನಿಸರ್ಗ ನನಗೆ ಪುನಃ ದಯಪಾಲಿಸಿದೆ. ನನ್ನನ್ನು ಹರಸು ಎನಾ, ನಾನು ಪುನಃ 'ಸ್ತ್ರೀ' ಯಾದೆ! ನನ್ನ ಶಿಥಿಲವಾಗುತ್ತಿರುವ ಶರೀರದಲ್ಲಿ ಯೌವನದ ರಸ ಪುನಶ್ಚ ಪ್ರವಹಿಸತೊಡಗಿದೆ. ಸ್ತ್ರೀಯೋಚಿತ ಶಕ್ತಿಯ ಸ್ರೋತ ಪುನಃ ಹರಿಯಲಾರಂಭಿಸಿದೆ. ಈಗ ನನ್ನ ಪ್ರೇಮಿಯ ಸಶಕ್ತ ತಾರುಣ್ಯದ ಮುಂದೆ ನಾಚಿಕೊಳ್ಳಬೇಕಾದ ಅಗತ್ಯವಿಲ್ಲ. ಯಾವದೇ ತರುಣಿಯಲ್ಲಿರಬೇಕಾದ ಎಲ್ಲ ಗುಣಧರ್ಮಗಳು ಈಗ ನನ್ನಲ್ಲಿವೆ. ಕೇನ್‌ನು ಜೀವನ ದಂಡದಿಂದ ನನ್ನನ್ನು ಹೊಡೆದೆಬ್ಬಿಸಿದ. ಅದರಿಂದ ನನ್ನ ಆತ್ಮವಷ್ಟೇ ಅಲ್ಲ, ಶರೀರವೂ ಎಚ್ಚತ್ತಿತು. ಹೊಸ ವಸಂತದ ಆಗಮನದಿಂದ ಮತ್ತೆ ನನ್ನ ದೇಹ ಹೂಬಿಟ್ಟಿತು."

ತಾಯಿಯ ಈ ಅಸ್ವಾಭಾವಿಕ ಉತ್ಸಾಹದಿಂದ ಎನಾ ಒಳಗೊಳಗೇ ತ್ರಸ್ತಳಾದಳು. ಆದರೂ ತಾಯಿಯನ್ನು ಸಂತೋಷಪಡಿಸಲು, "ಇದಂತೂ ವಸ್ತುತಃ ಆಶ್ಚರ್ಯಮಯ ಹಾಗೂ ಸುಖಪ್ರದ ಸಂಗತಿ. ಇದರಿಂದ ನಿನ್ನೊಳಗಿನ

ಅಜರ ಯೌವನವು ಆಯುಷ್ಯದ ಶಕ್ತಿಯನ್ನು ಕುಗ್ಗಿಸುವ ಪ್ರಕೃತಿ ಗುಣವನ್ನು ಸೋಲಿಸಿದೆ ಎಂದು ಸಿದ್ಧವಾಗುತ್ತದೆ. ಈ ರೀತಿ ಶಕ್ತಿ ದೊರಕುವುದು ಸಾಮಾನ್ಯವಲ್ಲ. ಹೀಗಿದ್ದರೂ ನಿನ್ನ ಮತ್ತು ಕೀಟನ್‌ನ ನಡುವೆ ತಾಯಿ ಮಗನಕಿಂತ ಬೇರೆ ಯಾವ ಸಂಬಂಧ ಉಂಟಾದೀತು ?"

"ನಮ್ಮಿಬ್ಬರ ಬಗ್ಗೆ ಹೇಳುವಿಯಾ? ನಮ್ಮಿಬ್ಬರ ನಡುವೆ ತಾಯಿ ಮಗನಕಿಂತ ಬೇರೆ ಯಾವ ಪ್ರೇಮವಿರಲಾರದೆಂದು ನಿನಗನಿಸುತ್ತದೆಯೆ.?"

"ಹಾಗೇ ಎಂದು ನಾನೇನೂ ಹೇಳಲಾರೆ!"

"ಹ್ಯಾಗೆ ಹೇಳಬಲ್ಲಿ? ಜೀವನದಲ್ಲಿ ದುರ್ದೈವದಿಂದ— ನೀನು ಒಮ್ಮೆ ಮಾತ್ರ ಪ್ರೀತಿಸಿದೆ. ಮತ್ತು ಅದನ್ನೂ ನಡುವೆಯೆ ಬಿಟ್ಟುಬಿಟ್ಟೆ. ನೀನು ಭಾವನೆಗಳಿಗೆ ಹೆದರಿ ಬುದ್ಧಿಯನ್ನು ಮೊರೆ ಹೋದೆ. ಆದ್ದರಿಂದ ಭಾವನೆಯ ಬಗ್ಗೆ ನಿನ್ನ ನಿರ್ಣಯ ಸರಿಯಾಗಲಾರದು. ಕೇನ್‌ನೂ ನನ್ನನ್ನು ಪ್ರೀತಿಸುತ್ತಾನೆಂಬ ಬಗ್ಗೆ ಹಲವು ಸಂಕೇತಗಳ ಆಧಾರ ನನಗೆ ದೊರೆತಿದೆ. ಅದು ನಿನಗೆ ಗೊತ್ತಿಲ್ಲ. ಮತ್ತು ಕೇನ್‌ನಂಥ ಯುವಕರು ನಿನ್ನಂಥಾ ಅರಿಯದ ಹುಡಿಗೆಯರಿಗಿಂತ ನನ್ನಂಥಾ ಅನುಭವಿ ಸ್ತ್ರೀಯರನ್ನೇ ಹೆಚ್ಚಾಗಿ ಅಪೇಕ್ಷಿಸುತ್ತಾರೆಂಬುದು ನಿನಗೆ ಗೊತ್ತಿಲ್ಲ. ಬಹುಶಃ ನಮ್ಮ ಪ್ರೇಮದಲ್ಲಿ ತಾಯಿಯ ವಾತ್ಸಲ್ಯವೂ ಸಿಗುತ್ತದೆಂಬ ಕಾರಣವೂ ಅದಕ್ಕಿರಬಹುದು."

"ನಿನ್ನ ಮಾತು ನಿಜವಿದೆ."

"ಹಾಗಾದರೆ ನನಗೆ ಪ್ರೇಮ ಮಾಡುವ ಅಧಿಕಾರವಿಲ್ಲೆಂದು ನೀನೇಕೆ ಹೇಳುವೆ? ನನ್ನನ್ನು ಯಾರಾದರೂ ಪ್ರೀತಿಸಲಿ ಎಂದು ನಾನು ಆಶಿಸುವುದೂ ಇಲ್ಲ."

"ಅವ್ವಾ, ನಿನ್ನ ಅಧಿಕಾರ ಆಸೆಗಳಲ್ಲಿ ಸಂಶಯವಿಡುವುದನ್ನು ನಾನು ಕನಸು ಮನಸ್ಸಿನಲ್ಲಿಯೂ ಎಣಿಸಿಲ್ಲ. ನೀನು ಸುಖವಾಗಿದ್ದರೆ ಅದು ನನಗೂ ಸುಖವನ್ನೇ ಕೊಡುವುದಲ್ಲವೆ? ಆದರೆ ನೀನು ನಿನ್ನ ಅಧಿಕಾರದ ಬಗ್ಗೆ ನಿನ್ನ ಸಂಬಂಧಗಳ ಬಗ್ಗೆ ಇನ್ನೂ ಪೂರ್ಣ ವಿವರಣೆಯನ್ನು ಮಾಡಲಿಲ್ಲ. ನೀನು ಕೀಟನ್‌ನನ್ನು ಲಗ್ನವಾಗಬಯಸುವಿಯಾ? ಹಾಗಿದ್ದರೆ ಕ್ಷಮಿಸು. ನಿಮ್ಮಿಬ್ಬರ ನಡುವಿನ ವಯಸ್ಸಿನ ಅಂತರಕ್ಕಾಗಿ ಜನ ಏನೇನೋ ಆಡಬಹುದು."

"ಇದರ ವಿಚಾರವನ್ನು ನಾನು ಮಾಡಿಯೂ ಇಲ್ಲ. ನಿನಗೆ ಹಾಗು ಎಡ್ವರ್ಡ್‌ನಿಗೆ ೨೪ ವರ್ಷದ ಒಬ್ಬ ಯುವಕನನ್ನು ತಂದೆಯೆಂದು ಕೊಡುವ ವಿಚಾರ ನನಗಿಲ್ಲ." ತುಸು ತಡೆದು ಎನಾ ಏನೂ ಮಾತಾಡದ್ದನ್ನು ಕಂಡು ಪುನಃ ರೊಜೆಲಿ ತಾನೇ ಪ್ರಾರಂಭಿಸಿದಳು: "ಆಸೆ ಎಂಬುದು ಎಷ್ಟು ಸುಂದರವಾಗಿದೆ ಎಂದರೆ ಅದರ ವ್ಯಾಖ್ಯೆಮಾಡುವುದು ಸಾಧ್ಯವಿಲ್ಲ. ಅದರ ವೈಶಿಷ್ಟ್ಯ ಹಾಗೂ ಸೌಂದರ್ಯ ಅದು ಆಶೆಯಾಗಿ ಉಳಿಯುವುದರಲ್ಲಿಯೇ ಇದೆ. ಅದನ್ನು ಪ್ರಪಂಚದ ವಾಸ್ತವದ ಮಟ್ಟಕ್ಕೆ ಕೆಳಗೆಳೆಯಬಾರದು. ಆದ್ದರಿಂದ ನನ್ನ ಆಶೆ ಯಾವ ರೂಪ ಧರಿಸೀತೊ ನಾನು ನಿನಗೆ ಹೇಳಲಾರೆ. ಆದರೂ ನಾನು ಕೇನ್‌ನನ್ನು ಪತಿಯಾಗಿ ಸ್ವೀಕರಿಸಲಾರೆನೆಂಬುದು ಖಂಡಿತ"

ತಾಯಿಯ ಈ ಉತ್ಸಾಹಿತ ಸ್ಥಿತಿಯಲ್ಲಿ ತಾನು ವಾದಿಸುವುದು ಸಾಧ್ಯವಿಲ್ಲೆನಿಸಿತು ಎನಾಗೆ. ಕೀಟನ್ ಮತ್ತು ತಾಯಿಯ ನಡುವಿನ ಯಾವ ಸಂಬಂಧವನ್ನು ತಾಯಿ ಸೂಚಿಸಿದ್ದಳೊ ಆ ಬಗ್ಗೆ ಎನಾಳ ಮತ ಬೇರೆಯಾಗಿದ್ದರೂ ಎನಾ ಕೇವಲ ಇಷ್ಟೇ ನುಡಿದಳು: "ಅವ್ವಾ, ನೀನು ಏನು ಮಾಡುತ್ತಿರುವೆಯೊ ಅದೇ ಒಳಿತಾಗಿದೆ."

ಎನಾಳ ಮುದುಡಿದ ತುಟಿ, ಹಾಗೂ ಮುಖಭಾವದಿಂದ ಮಗಳ ಮನಸ್ಸಿನಲ್ಲಿ ಏನು ನಡೆದಿದೆ ಎಂಬುದನ್ನು ರೊಜೆಲಿ ಎಣಿಕೆ ಹಾಕಿದಳು. ಮತ್ತು ಹೀಗೆಂದಳು, "ಎನಾ, ನಿನ್ನ ಮಾತಿನ ಅರ್ಥ ನನಗಾಗಲಿಲ್ಲ. ನೀನು ಕಲಾವಿದೆ. ವಯಸ್ಸಿನಲ್ಲಿ ನನಗಿಂತ ಚಿಕ್ಕವಳು. ಮತ್ತು ಹೊಸ ಯುಗದ ಯುವತಿ. ಇಷ್ಟೆಲ್ಲ ಇದ್ದರೂ ನಿನ್ನ ವಿಚಾರದಲ್ಲಿ ಸಂಕೀರ್ಣತೆ ಇದೆ. ಈಗಂತೂ ಚಿಕ್ಕಪುಟ್ಟ ವ್ಯವಹಾರಗಳಲ್ಲೂ ವ್ಯಕ್ತಿಸ್ವಾತಂತ್ರ್ಯವಿದೆ. ದಯವಿಟ್ಟು ನೀನು ಈ ರೀತಿ ಯೋಚಿಸಬೇಡ. ಎನಾ, ನಿನ್ನ ಈ ರೀತಿ ನೋಡಿದರೆ ನನ್ನ ಮಕ್ಕಳೂ ನನ್ನನ್ನು ಕಂಡು ಹೇಸುವರೇ ಎನಿಸುತ್ತದೆ."

ರೊಜೆಲಿಯ ವೇದನೆ ಕಂಡು ಎನಾ ಒಮ್ಮೆಲೆ ಮೃದುವಾಗಿ ನುಡಿದಳು: "ನನ್ನ ಮಾತಿನ

ಉದ್ದೇಶ ನಿನ್ನನ್ನು ಪೀಡಿಸಬೇಕೆಂದಿಲ್ಲ. ಈ ಸಂಬಂಧದ ಅನೈತಿಕತೆಯ ಬಗ್ಗೆ ನಿನ್ನ ಆತ್ಮವೇ ಪುರಸ್ಕಾರವೀಯಲಾರದು ಎಂದಿಷ್ಟೆ ನಾನು ಅಂದದ್ದು. ಆದರೆ ಪೂರ್ವ ವಿಚಾರ ಮಾಡಿಯೆ ನೀನು ಈ ನಿರ್ಣಯಕ್ಕೆ ಬಂದಿರುವಿ ಎಂದಮೇಲೆ ನಿನ್ನ ವಿಚಾರಕ್ಕೆ ನಾನು ಒಪ್ಪುವೆ. ಈ ಬಗ್ಗೆ ನಾನು ನಿನ್ನನ್ನು ಮತ್ತೇನೂ ಕೇಳಬಯಸುವುದಿಲ್ಲ."

"ಆಗಲಿ ಎನಾ. ಇನ್ನು ನೀನು ಹೋಗು. ನನಗೂ ವಿಶ್ರಾಂತಿ ಬೇಕು. ಈ ಸ್ಥಿತಿಯಲ್ಲಿ ಸ್ತ್ರೀಯರಿಗೆ ವಿಶ್ರಾಂತಿ ಬೇಕೇಬೇಕು."

ತಾಯ ಮುಖವನ್ನು ಚುಂಬಿಸಿ ಎನಾ ಕುಂಟುತ್ತ ಕೋಣೆಯಿಂದ ಹೊರಬಿದ್ದಳು.

ಪರಸ್ಪರರಲ್ಲಿ ನಡೆದ ಮಾತುಗಳ ಬಗ್ಗೆ ತಾಯಿ-ಮಗಳು ಇಬ್ಬರೂ ಏಕಾಂತದಲ್ಲಿ ವಿಚಾರಮಾಡಿದರು ಎನಾ ಹೇಳಬೇಕೆಂದಿದ್ದ ಎಲ್ಲವನ್ನೂ ತಾಯಿಗೆ ಹೇಳಿರಲಿಲ್ಲ. ತನ್ನ ಸ್ಪಷ್ಟ ಮಾತುಗಳಿಂದ ತಾಯಿಯ ಮನಸ್ಸಿಗೆ ಕೆಡಕೆನಿಸೀತಲ್ಲ ಎಂದು ಎನಾ ಯೋಚಿಸಿದ್ದಳು. ಆದರೆ ಪುನಃ ಪುನಃ ಆಕೆ ತಾಯಿಯ ಈ ಪುನಯೌರ್ವನ ಎಷ್ಟು ಕಾಲ ಉಳಿದೀತು ಎಂದೇ ಯೋಚಿಸುತ್ತಿದ್ದಳು. ತಾಯಿಯ ಬಗೆಗಿರುವ ಕೀಟನ್‌ನ ಆಕರ್ಷಣೆಯಾದರೂ ಎಷ್ಟು ದಿನ ಉಳಿದೀತು? ರೊಜೆಲಿ ತನ್ನ ವಾರ್ಧಕ್ಯದಲ್ಲಿ ಕಟ್ಟುತ್ತಿರುವ ಸ್ವಪ್ನ ಅವಳಿಗೆ ಸುಖದ ಬದಲು ದುಃಖ ಕಷ್ಟಗಳನ್ನೇ ಕೊಡಬಹುದೇನೊ ಎಂದೇ ಎನಾಳಿಗೆ ಭಯವೆನಿಸಿತ್ತು.

ಇತ್ತ ರೊಜೆಲಿ ಎನಾಳ ಮುಂದೆ ತನ್ನ ನಿರ್ಧಾರವನ್ನು ದೃಢವಾಗಿ ಮಾತಾಡಿದರೂ ಕೇನ್ ಮತ್ತು ತನ್ನ ನಡುವಿನ ಸಂಬಂಧದ ಅನೈತಿಕತೆಯ ವಿಚಾರ ಈಗ ರೊಜೆಲಿಗೆ ತ್ರಾಸದಾಯಕವೆನಿಸತೊಡಗಿತು. ಎನಾ ಹೇಳಿದ್ದು ನಿಜವಿತ್ತು. ರೊಜೆಲಿಯ ಮೂಲ ವ್ಯಕ್ತಿತ್ವ ವಾಸನಾತ್ಮಕವಾಗಲಿ ಅನೈತಿಕವಾಗಲಿ ಇರಲಿಲ್ಲ. ಮತ್ತು ಇನ್ನು ಮುಂದೆ ರೊಜೆಲಿ ಈ ತರಹದ ಯಾವದೆ ಸಂಬಂಧ ಕೇನ್‌ನೊಂದಿಗೆ ಇಟ್ಟುಕೊಂಡರೆ ಅದು ಅವಳು ತನ್ನ ಸ್ವಭಾವವನ್ನೇ ತಾನು ವಿರೋಧಿಸಿದಂತೆ. ತನ್ನ ಸ್ವಭಾವವನ್ನು ತಾನೇ ವಿರೋಧಿಸಿ ಯಾರೂ ತನ್ನ ಒಳಿತು ಮಾಡಿಕೊಳ್ಳರು. ಈ ವಿಚಾರದಿಂದ ಮತ್ತೆ ಅವಳ ಅಂತಃಕರಣದಲ್ಲಿ ತುಮುಲ ಯುದ್ಧ ನಡೆಯಿತು.

ರೊಜೆಲಿಯ ಆಶ್ಚರ್ಯಕಾರಕ ಪುನರ್ಯೌವನದ ಘಟನೆಯಾದ ಮೇಲೆ ಮೂರು ದಿನಗಳ ತರುವಾಯ ಕೇನ್ ವಾನ್ ಟಪ್ಲರನ ಮನೆಗೆ ಬಂದ. ಎಂದಿನಂತೆ ಎಡ್ವರ್ಡ್‌ನಿಗೆ ಪಾಠ ಹೇಳಿದ. ಆ ಮೇಲೆ ನಿಂತ. ರೊಜೆಲಿಯ ಮನಸ್ಸಿನಲ್ಲಿ ಏನೇ ದ್ವಂದ್ವ ನಡೆದಿರಲಿ, ಆದರೆ ಕೇನ್‌ನ ಪುಷ್ಟದೇಹ ನೋಡಿದೊಡನೆಯೆ ಭಾವನೆಯ ಬಲ ಹೆಚ್ಚಿತು. ಕೇನ್ ಹಸ್ತಾಂದೋಲನೆಗೆಂದು ತನ್ನ ಕೈ ಮುಂದೊಡ್ಡಿದಾಗ ರೊಜೆಲಿ ತನ್ನ ಕೈನೀಡಿ ಅವನನ್ನು ತನ್ನತ್ತ ಎಳೆದುಕೊಂಡಳು. ಇಬ್ಬರ ದೇಹಗಳು ಹತ್ತಿರ ಹತ್ತಿರ ಬಂದವು. ರೊಜೆಲಿಯ ಮಿಂಚುವ ಕಣ್ಣುಗಳು ಕೇನ್‌ನ ಕಣ್ಣುಗಳಲ್ಲಿ ಒಂದು ವಿಶೇಷ ಅಭಿಪ್ರಾಯವನ್ನು ಕಂಡವು. ಇದಕ್ಕೂ ಹೆಚ್ಚಿನದೆಂದರೆ ರೊಜೆಲಿ ಒಂದು ಬೇರೆ ಬಗೆಯಲ್ಲಿ ಸನ್ನೆ ಮಾಡಿದಳು.

ತಾನು ಈ ಪ್ರೌಢೆಯ ಮನಸ್ಸನ್ನು ಗೆದ್ದಿರುವೆನೆಂದು ಕೇನ್ ಆಗಲೆ ತಿಳಕೊಂಡಿದ್ದ. ಇದರಿಂದ ರೊಜೆಲಿಯ ಬಗೆಗೆ ಅವನಲ್ಲಿ ಆದರ ಭಾವವು ತುಸು ಕಡಿಮೆಯೂ ಆಗಿತ್ತು. ಆದರೂ ರೊಜೆಲಿಯಲ್ಲಿದ್ದ ಯಾವುದೊ ಆಕರ್ಷಣೆ ಕೇನ್‌ನ ತಾರುಣ್ಯವನ್ನು ಆಹ್ವಾನಿಸಿತ್ತು.

ಆ ವರ್ಷ ಡಜೆಲ್‌ಡಾರ್ಫ್‌ನಲ್ಲಿ ಚಳಿಗಾಲ ಸ್ವಲ್ಪ ಕಡಿಮೆ ಇತ್ತು. ಫೆಬ್ರುವರಿಯಲ್ಲೇ ವಸಂತ ಋತುವಿನ ಸೂಚನೆ ಎನ್ನುವಂತೆ ಬೇಸಗೆ ಪ್ರಾರಂಭವಾಗಿತ್ತು. ನಿಸರ್ಗ ಆವೇಗದಿಂದ ಬೇಗಬೇಗ ಶಿಶಿರ ಮುಗಿಸಿಕೊಂಡು ವಸಂತದ ಸ್ವಾಗತಕ್ಕೆ ಮೊದಲೇ ಸಿದ್ಧತೆಮಾಡಿಕೊಂಡಂತಿತ್ತು. ವಸಂತ ಋತುವಿನಲ್ಲಿಯೆ ಹುಟ್ಟಿದ್ದರಿಂದ ವಸಂತಾಗಮನ ಬಂದೊಡನೆಯೆ ರೊಜೆಲಿಯಲ್ಲಿ ಹೊಸ ಕಳೆ ತುಂಬುತ್ತಿತ್ತು. ಆದರೆ ಆ ಬಗೆಯ ನವಚೇತನ ರೊಜೆಲಿಯಲ್ಲಿ ಈ ಬಾರಿ ಕಂಡುಬರಲಿಲ್ಲ. ರೊಜೆಲಿ ನಕ್ಕರೂ ಅವಳ ನಗೆಯಲ್ಲಿ ಸ್ವಾಭಾವಿಕ ಆನಂದ ಇದ್ದಿಲ್ಲ. ಅದರ ಹಿಂದೆ ವೇದನೆ ಅಡಗಿತ್ತು. ಎನಾ ರೊಜೆ-

ಲಿಗೆ ನೈತಿಕ ಜಾಗ್ರತೆಯ ಬಗ್ಗೆ ಹೇಳಿದ್ದಾಗ ರೋಜೆಲಿ ಅದನ್ನು ನಿರ್ಭೀತಿಯಿಂದ ತೊಡೆದು ಹಾಕಿದ್ದಳು. ಆದರೆ ಎನಾಳು ಕೊಟ್ಟ ಎಚ್ಚರಿಕೆಯು ರೋಜೆಲಿಯ ಚಿತ್ತದಲ್ಲಿ ಮನೆ ಮಾಡಿ ಹುಟ್ಟಿದ್ದ ದ್ವಂದ್ವದಿಂದಾಗಿ ಈಗ ಆಕೆ ತಾನೇ ತನ್ನ ಸ್ವಭಾವಕ್ಕೆ ಎದುರು ವಾದಿಸುತ್ತಿದ್ದಳು.

ತಾಯಿಯ ಮನಸ್ಸನ್ನು ತಿಳಿದುಕೊಂಡಿದ್ದ ಎನಾ ಅದಕ್ಕೆ ತಾನೇ ಕಾರಣಳೆಂದು ಬಗೆದಿದ್ದಳು. ತನಗೆ ಸಿಗದಿದ್ದ ಶಾರೀರಿಕ ಸುಖ ತಾಯಿಗೆ ಸಿಗುವುದೆಂದು ತಾನು ಈರ್ಷೆ ಮಾಡಿದೆನಲ್ಲ; ಮೇಲೆ ನೈತಿಕತೆಯ ಎಚ್ಚರಿಕೆ ಕೊಟ್ಟೆನಲ್ಲ ಎಂದು ಒಳಗೊಳಗೆ ತನ್ನನ್ನು ತಾನೇ ಧಿಕ್ಕರಿಸಿಕೊಳ್ಳುತ್ತಿದ್ದಳು.

ಪುನರ್ಯೌವನದ ಪ್ರಾದುರ್ಭಾವದಿಂದ ಶಕ್ತಿ ಹೆಚ್ಚುವ ಬದಲು ರೋಜೆಲಿಯ ಸ್ವಾಸ್ಥ್ಯ ಕೆಡುತ್ತ ನಡೆದಿತ್ತು. ಪ್ರತಿವರ್ಷ ವಸಂತ ಕಾಲದಲ್ಲಿ ದೂರ ಅಡ್ಡಾಡಬಯಸುವವಳು ಈ ವರ್ಷ ಸ್ವಲ್ಪ ದೂರ ಹೋಗುವುದರಲ್ಲೇ ದಣಿಯುತ್ತಿದ್ದಳು.

ಆದ್ದರಿಂದ ಕೇನ್‌ಕೀಟನ್ ಮತ್ತು ತನ್ನ ಮಕ್ಕಳೊಂದಿಗೆ ದೂರ ತಿರುಗಾಡಲಿಕ್ಕೆ ಹೋಗಬೇಕೆಂದು ತನ್ನ ಬಯಕೆಯನ್ನು ರೋಜೆಲಿ ವ್ಯಕ್ತಪಡಿಸಿದೊಡನೆಯೆ ಎನಾಗೆ ಬಹಳ ಸಂತೋಷವಾಯಿತು. ಪುನರ್ಯೌವನದ ಚಮತ್ಕಾರವಾಗಿ ಒಂದು ತಿಂಗಳು ಕಳೆದ ಮೇಲೆ ಒಂದು ಸಂಜೆ ರೋಜೆಲಿ, ಎನಾ, ಎಡ್ವರ್ಡ್ ಮತ್ತು ಕೇನ್ ಊಟವಾದ ಮೇಲೆ ಮಾತಾಡುತ್ತ ಕೂತಿದ್ದರು. ಕೇನ್ ಇತಿಹಾಸದಲ್ಲಿ ಆಳವಾಗಿ ತಿಳಿದುಕೊಂಡವನೇ ಇದ್ದ. ಆತ ಆ ಪ್ರದೇಶದೊಳಗಿನ ಹಳೇ ಕೋಟೆ ಹಾಗೂ ಅರಮನೆಗಳ ಬಗ್ಗೆ ಮಾತಾಡುತ್ತಿದ್ದ. ಮಾತು ಹಾಲ್ಬರ್‌ಹಾಫ್ ಕೋಟೆಯ ಬಗ್ಗೆ ನಡೆದಿತ್ತು. ಈ ಸ್ಥಳ ಸೌಂದರ್ಯ ಮತ್ತು ಶಿಲ್ಪಕ್ಕಾಗಿ ಖ್ಯಾತವಾಗಿತ್ತು. ಡಜೆಲ್‌ಡಾರ್ಫ್‌ಕ್ಕೆ ಬರುವ ಪ್ರವಾಸಿಗರೆಲ್ಲ ಇದನ್ನು ನೋಡದೇ ಇರುತ್ತಿರಲಿಲ್ಲ. ರೋಜೆಲಿ ಮತ್ತು ಎನಾ ಒಮ್ಮೆ ಅಲ್ಲಿ ಹೋಗಿಯೂ ಬಂದಿದ್ದರು. ಆದರೂ ಒಳಹೊಕ್ಕು ಅದನ್ನು ಅವರು ನೋಡಿರಲಿಲ್ಲ. ಮತ್ತು ಕೇನ್ ಹಾಗೂ ಎಡ್ವರ್ಡ್‌ರಂತೂ ಇನ್ನೂ ಆ ಸ್ಥಳಕ್ಕೆ ಹೋದವರೇ ಅಲ್ಲ.

"ಇಲ್ಲೇ ಇದ್ದು ಇಷ್ಟು ಸಮೀಪದಲ್ಲಿರುವ ಸುಂದರ ಕೋಟೆಯನ್ನು ನೀವು ನೋಡಿಲ್ಲ ಎಂದರೆ ಇದೊಂದು ಆಶ್ಚರ್ಯ." ಎಂದಳು ರೋಜೆಲಿ. ಕೊನೆಗೆ ಬರುವ ಆದಿತ್ಯವಾರ ಎಲ್ಲರೂ ಅಲ್ಲಿ ಹೋಗುವುದೆಂದು ನಿರ್ಣಯವಾಯಿತು. ಗಾಡಿಯಿಂದೂ ಹೋಗಬಹುದಿತ್ತು ಆದರೆ ಗಾಡಿಯ ಪ್ರಯಾಣಕ್ಕಿಂತ ನಾವೆಯ ಪ್ರಯಾಣವೇ ಹೆಚ್ಚು ಸರಸವಾಗುವುದೆಂದು ಹಾಗೆಯೆ ಮಾಡಬೇಕೆಂದು ನಿರ್ಣಯವಾಯಿತು.

ರವಿವಾರ ರಜಾ ದಿನ. ಬಹಳ ಜನರು ನೆರೆದಿದ್ದರು. ಕೇನ್‌ಕೀಟನ್‌ನೊಂದಿಗೆ ವಾನ್‌ಟಮ್ಲರ ಕುಟುಂಬದವರು ತಮಗಾಗಿ ಒಂದು ಸ್ವತಂತ್ರ ಡೋಣಿಯನ್ನು ಬಾಡಿಗೆಗೆ ಗೊತ್ತು ಮಾಡಿದರು. ಡೋಣಿ ಮುಂದೆ ಸಾಗಿತು. ಊರ ದೃಶ್ಯ ಮಸಕಾಯಿತು. ದಂಡೆಯ ಮೇಲೆ ಬೆಳೆದ ಹೊಲಗಳು ಕಾಣತೊಡಗಿದವು. ಅಲ್ಲಲ್ಲಿ ಕೆರೆಗಳು. ಒಂದು ಚಿತ್ರಪಟದಂತೆ ನಿಸರ್ಗದ ರಮ್ಯ ದೃಶ್ಯಾವಳಿ ಕಣ್ಮುಂದಿಂದ ಸಾಗಿತ್ತು. ರೋಜೆಲಿ ಸಂತೋಷ ತುಂದಿಲಳಾದಳು. ಸಾವಕಾಶವಾಗಿ ರೋಜೆಲಿ ಕಣ್ಮೊರೆಸಿಕೊಂಡಳು. ಆಗ ತನ್ನಿಂದ ತಾನೇ ಅವಳ ಕಂಠದಿಂದ ಸಂಗೀತ ಹೊರಬಿತ್ತು. ಕೇನ್ ಕೇಳಿದ, "ಯಾವ ಹಾಡನ್ನು ಹಾಡುತ್ತಿದ್ದೀರಿ?"

ಯಾವದೊ ಮಧುರ ಸ್ವಪ್ನದಿಂದ ಎಚ್ಚತ್ತಂತೆ ರೋಜೆಲಿ ಅಂದಳು, "ಹಾಡು? ಹಾಡಲ್ಲ; ಹಾಗೇ ಏನೊ ಗುಣುಗುಣಿಸಿದೆ." ಮತ್ತೆ ಸ್ವಪ್ನದಲ್ಲಿ ವಿಹರಿಸತೊಡಗಿದಳು. ಪುನಃ ಆ ಗೀತ ಅವಳ ತುಟಿಬಿಟ್ಟು ಹೊರಬಿತ್ತು.


ಕೆಲ ಹೊತ್ತಿನ ಮೇಲೆ ಕೋಟೆ ಬಂತು. ಎಲ್ಲರೂ ನಾವೆಯಿಂದ ಇಳಿದರು. ದುರ್ಗದ ತೋಟ ತೀರದಿಂದ ತುಸು ದೂರದಲ್ಲಿತ್ತು. ಇವರು ಕಾಲು ದಾರಿಯಿಂದ ನಡೆದರು. ಸ್ವಲ್ಪ ನಡೆಯುವುದರಲ್ಲಿ ತೋಟ ಬಂತು. ಮರಗಳ ನಡುವೆ ಅಮೃತ ಶಿಲೆಯ ಬೆಂಚುಗಳು. ಒಂದೇ ಅಳತೆಯಿಂದ ಕತ್ತರಿಸಿದ ಹುಲ್ಲು ಹಾಸಿಗೆ. ಅದರ ಮೇಲೆ ಬಣ್ಣಬಣ್ಣದ ಹೂಗಳು. ಗಾಳಿಯಲ್ಲಿ ಅಲುಗಾಡುವ ಗಿಡಗಳು. ಎಲ್ಲವೂ ಅಂದವಾಗಿತ್ತು.



'ಅವರನ್ನು ಮೆಚ್ಚಿಸುವುದು ಸುಲಭವೆಂದು ನೀವು ತಿಳಿದಿದ್ದರೆ ಅದು ತಪ್ಪು ಗ್ರಹಿಕೆ' ಎಂದು ಶ್ರೀಮತಿ ಆರ್. ಆರ್. ಪ್ರಭು, ಹೇಳುತ್ತಾರೆ. 'ಬಟ್ಟೆಗಳ ವಿಷಯ ಹೇಳುವುದಾದರೆ... ಈಗ ನಾನು ಅವರ ಎಲ್ಲಾ ಬಟ್ಟೆಗಳನ್ನು ಸನ್‌ಲೈಟ್‌ನಿಂದಲೇ ಒಗೆಯುತ್ತೇನೆ—ಅದರಿಂದ ಅವರಿಗೆ ತೃಪ್ತಿಯಾಗುತ್ತದೆ. ನನಗೂ ತೃಪ್ತಿಯೆ. ಸನ್‌ಲೈಟ್‌ನಿಂದ ಹೇರಳ ನೊರೆಯಾಗುತ್ತದೆ, ನನ್ನ ಕೆಲಸವೂ ಬಹಳ ಸುಲಭವಾಗುತ್ತದೆ! ಬಟ್ಟೆಗಳೆಲ್ಲ ಅತ್ಯಂತ ಬೆಳ್ಳಗೆ ಮತ್ತು ಪ್ರಕಾಶಮಾನವಾಗುತ್ತವೆ. ನನಗೆ ಯಾವಾಗಲೂ ಸನ್‌ಲೈಟೇ ಬೇಕು!'

ಬಟ್ಟೆಗಳ ಒಗೆತಕ್ಕೆ ಶುದ್ಧ ಹಾಗೂ ಸೌಮ್ಯವಾದ ಸನ್‌ಲೈಟ್ ಸೋಪು ಅತ್ಯುತ್ತಮವಾಗಿದೆಯೆಂದೂ, ಅದರಂಥಾದ್ದು ಬೇರೆ ಇಲ್ಲವೆಂದೂ ಗೃಹಿಣಿಯರಿಗೆ ತಿಳಿದಿದೆ. ನಿಮಗೂ ಗೊತ್ತಾಗುವುದು

ಸನ್‌ಲೈಟ್



ನಿಮ್ಮ ಬಟ್ಟೆಗಳಿಗೆ ಅತ್ಯಂತ ಹಿತಕರ!

B.30-X29 KN

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

ಆದರೆ ರೋಜೆಲಿಗೆ ಇದಾವುದರಿಂದೂ ಆನಂದವೆನಿಸುತ್ತಿದ್ದಿಲ್ಲ. ಎಲ್ಲರೊಟ್ಟಿಗೆ ಏನೂ ಮಾತಾಡದೆ ಹಾಗೇ ನಡೆದಿದ್ದಳು. ಅವಳೊಂದಿಗೆ ಎಡ್ವರ್ಡ್‌ನಿದ್ದ. ಅವರ ಹಿಂದೆ ಎನಾ ಮತ್ತು ಕೇನ್ ಇದ್ದರು. ರೋಜೆಲಿ ಮತ್ತು ಕೇನ್ ಮುಂದೆ ಹೋದರೆ ಅವರಿಬ್ಬರಿಗೂ ಒಬ್ಬರೊಬ್ಬರ ಸಾಮಿಪ್ಯ ಸುಖ ಸಿಗುವುದೆಂದು ಯೋಚಿಸಿ ಎನಾ ಎಡ್ವರ್ಡ್‌ನನ್ನು ಹಾದಿಗಳ ಹೆಸರು ಹೇಳುವ ನೆವ ಮಾಡಿ ತನ್ನೊಂದಿಗೆ ಕರೆದುಕೊಂಡಳು. ಹೀಗಾಗಿ ರೋಜೆಲಿ ಕೇನ್ ಒಟ್ಟಿಗಾದರು. ಮತ್ತು ಎನಾ ಎಡ್ವರ್ಡ್ ಹಿಂದೆ ಉಳಿದರು.

ವಸಂತ ಮಾಸದ ಪ್ರಾತಃಕಾಲದ ಸೂರ್ಯ ತುಸು ಹೆಚ್ಚೇ ಪ್ರಖರನಾಗಿದ್ದರಿಂದ ರೋಜೆಲಿಗೆ ತನ್ನ ಕೋಟನ್ನು ತೆಗೆಯಬೇಕಾಯಿತು. ಕೇನ್ ಅದನ್ನು ತನ್ನ ಕೈಮೇಲೆ ಹೊತ್ತು ನಡೆದ. ಕೇನ್‌ನ ಕೈಮೇಲೆ ತನ್ನ ಕೋಟು ಕಂಡು ರೋಜೆಲಿಗೆ ಒಂದು ಬಗೆಯ ವಿಶೇಷ ಆನಂದವಾಯಿತು. ಅವಳು ಕಿರುನಕ್ಕಳು. ಸ್ವಲ್ಪ ಹೊತ್ತಿನಲ್ಲೇ ಕಪ್ಪು ಹಂಸಗಳು ಈಸುತ್ತಿದ್ದ ಕೆರೆ ಬಂದಿತು. ಅವನ್ನು ಕಂಡು ಇವಳಿಗೆ ಆನಂದವಾಯಿತು.

"ನೋಡು, ಎಷ್ಟು ಸುಂದರವಾಗಿವೆ. ಇವಕ್ಕೆ ತಿನ್ನಿಸಲೆಂದು ನಾವು ತಂದಿದ್ದ ಬ್ರೆಡ್ ಎಲ್ಲಿ ಇದೆ–ಕೇನ್ ?"

ಕಾಗದದಲ್ಲಿ ಕಟ್ಟಿದ ಬ್ರೆಡ್ ಕೇನ್‌ನ ಜೇಬಿನಲ್ಲಿತ್ತು. ಅದನ್ನಾತ ತೆಗೆದು ರೋಜೆಲಿಯ ಕೈಗಿತ್ತ. ಬ್ರೆಡ್ಡಿನಲ್ಲಿ ತರುಣ ಕೇನ್‌ನ ಮೈಯ ಕಾವು ಇನ್ನೂ ಇತ್ತು. ಆ ಬಿಸಿ ಕೈ ಮುಟ್ಟಿತು. ರೋಜೆಲಿ ಒಂದು ತುಂಡನ್ನು ತನ್ನ ಬಾಯಲ್ಲಿ ಹಾಕಿಕೊಂಡಳು.

ಆಗ ಕೇನ್, "ಇದು ತಂಗಳಾಗಿದೆ" ಎಂದು ಅಪ್ತಿ ಮಾಡಿದ.

"ನನ್ನ ಹಲ್ಲು ಸಾಕಷ್ಟು ಗಟ್ಟಿಯಾಗಿವೆ" ಎಂದಳು ರೋಜೆಲಿ ಬ್ರೆಡ್ಡಿನ ರುಚಿ ನೋಡುತ್ತ.

ಅಷ್ಟರಲ್ಲಿ ಬ್ರೆಡ್ಡಿನ ಆಶೆಯಿಂದ ಒಂದು ಕರಿಹಂಸ ಅವರ ಬಳಿ ಬಂದಿತು. ಬ್ರೆಡ್ಡನ್ನು ರೋಜೆಲಿ ತಿನ್ನುವುದನ್ನು ಕಂಡು ಅದಕ್ಕೆ ಸಿಟ್ಟು ಬಂತೇನೊ. ಅದು ರೆಕ್ಕೆ ಬಡಿಯಲಾರಂಭಿಸಿತು. ಹಕ್ಕಿಯ ಈರ್ಷಾಭಾವ ಕಂಡು ಕೇನ್, ರೋಜೆಲಿ ನಕ್ಕರು. ರೋಜೆಲಿ ಹಂಸಗಳಿಗೆ ಬ್ರೆಡ್ ತಿನ್ನಿಸತೊಡಗಿದಳು.

ಬ್ರೆಡ್ ತಿನ್ನಿಸಿ ಅವರು ಮುಂದೆ ಹೊರಟಾಗ ಎನಾ ಹಿಂದಿನಿಂದ ಅಂದಳು, "ಅದರ ಪಾಲಿನ ಬ್ರೆಡ್ ನೀನು ತಿಂದದ್ದನ್ನು ಅದು ಬೇಗ ಮರೆಯಲಾರದೆಂದು ನನಗನಿಸುತ್ತದೆ–"

ಹೀಗೆ ಮಾತಾಡುತ್ತಾ ಅವರು ಕೋಟೆಯ ಮುಖ್ಯ ಬಾಗಿಲ ಹತ್ತಿರ ಬಂದರು. ಅಲ್ಲಿ ಇನ್ನೂ ಎಷ್ಟೋ ಪ್ರವಾಸಿಗಳು ಬಂದಿದ್ದರು. ಈಗ ಕೋಟೆಯನ್ನು ತೋರಿಸುವ ಕೆಲಸ ಮಾಡುತ್ತಿದ್ದ ನಿವೃತ್ತ ಸೈನ್ಯಾಧಿಕಾರಿಯೊಬ್ಬ ಹನ್ನೊಂದು ಗಂಟೆಗೆ ಕೋಟೆಯ ಭದ್ರವಾದ ದ್ವಾರವನ್ನು ತೆರೆದ. ಎಲ್ಲರೂ ಒಳಗೆ ನಡೆದರು.

ಮೊದಲನೆಯ ಕೋಣೆಯಲ್ಲಿ ಹೋಗುತ್ತಲೇ ಉಸಿರುಕಟ್ಟುವಂಥ ಕೊಳೆಯ ಕೆಟ್ಟ ವಾಸನೆ ಬಂದಿತು. ಆದರೆ ಪುರಾತನ ವೈಭವ ನೋಡುವ ಹುರುಪಿನಲ್ಲಿ ಅತ್ತ ಯಾರೂ ಗಮನವೀಯಲಿಲ್ಲ. ಚೌಕೀದಾರನು ಪ್ರಯಾಣಿಕರನ್ನು ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಕರೆದುಕೊಂಡು ಹೋಗುತ್ತ ಅಲ್ಲಲ್ಲಿಯ ಬಹುಮೌಲ್ಯ ಐತಿಹಾಸಿಕ ವಸ್ತುಗಳ ಪರಿಚಯ ಮಾಡಿಕೊಡತೊಡಗಿದ.

ಉಳಿದವರಂತೆ ಕೇನ್ ರೋಜೆಲಿಯರೂ ಪುರಾತನ ಅವಶೇಷಗಳನ್ನು ನೋಡುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಎಲ್ಲರೂ ಒಂದು ಕೋಣೆಯಲ್ಲಿ ಬಂದರು. ಅಲ್ಲಿ ಚೌಕೀದಾರ ಒಂದು ಪರದೆಯ ಮುಂದೆ ನಿಂತು ಏನೋ ಗೂಢ ವಿಚಾರ ಹೇಳುವಂತೆ ನುಡಿದ: "ಹಿಂದಿನ ಕಾಲದ ಅರಸರಿಗೆ ಗುಪ್ತಮಾರ್ಗಗಳನ್ನು ನಿರ್ಮಿಸುವುದರಲ್ಲಿ ಬಲು ಪ್ರೀತಿ." ಇಷ್ಟು ಹೇಳಿ ಆತ ಪರದೆಯ ಹಿಂದಿನ ಒಂದು ಬಟನ್ ಒತ್ತಿದ. ಗೋಡೆಯ ಒಂದು ಭಾಗ ಒತ್ತಟ್ಟಿಗೆ ಸರಿದು ಒಳಗೊಂದು ಪಾವಟಿಗೆಗಳ ದಾರಿ ಇದ್ದುದು ಕಾಣಿಸಿತು. ಒಳಗೆ ಯಾರೂ ಹೋಗಲಿಲ್ಲ. ಎಲ್ಲರೂ ಹೊರಗಿನಿಂದೇ 'ವಾಹವಾ' ಎಂದರು. ಕಳ್ಳದಾರಿಯನ್ನು ಪುನಃ ಬಂದು ಮಾಡಲಾಯಿತು.

ಎಲ್ಲರೂ ಹೊರಟು ಹೋಗಿ ರೋಜೆಲಿ ಕೇನ್ ಇಬ್ಬರೇ ಉಳಿದರು. ರೋಜೆಲಿ ಕಳ್ಳದಾರಿಯನ

ತೆರೆಯುವ ಬಟನ್ ಒತ್ತಲೆಂದು ತೆರೆಯತ್ತ ಕೈ ನೀಡಿದಳು.

"ನಿಮಗದು ಸಿಗಲಿಕ್ಕಿಲ್ಲ," ಎಂದ ಕೇನ್. "ತಡೆಯಿರಿ. ನಾನೇ ತೆರೆಯುವೆ." ಕೇನ್‌ನಿಗೆ ಆ ಬಟನ್ ಸಿಕ್ಕಿತು. ಬಾಗಿಲ ತೆರೆದ. ಇಬ್ಬರೂ ಕೆಲ ಹೆಜ್ಜೆ ಮುಂದೆ ಹೋದರು. ಸುತ್ತೆಲ್ಲ ಮೌನ ಆವರಿಸಿತ್ತು.

ಸುಪ್ತ ಆಸೆ ಉತ್ತೇಜಿತಗೊಂಡು ತಡೆಯಲಾರದೆ ರೊಜೆಲಿ ಕೇನ್‌ನ ಕೊರಳಸುತ್ತ ತನ್ನ ಕೈ ಚೆಲ್ಲಿದಳು. ಆನಂದದಿಂದ ಕೇನ್ ಅವಳ ಮೈಯನ್ನು ತನ್ನತ್ತ ಎಳೆದು ತಾಗಿಸಿಕೊಂಡ.

ನಡುಗುವ ಧ್ವನಿಯಲ್ಲಿ ಶಬ್ದ ಹೊರಬಿದ್ದವು. ರೊಜೆಲಿ ನುಡಿದಳು : "ಕೇನ್, ನಾನು ನಿನ್ನನ್ನು ಪ್ರೀತಿಸುವೆ. ನಿನಗಿದು ತಿಳಿಯಬಾರದೆಂದು ಎಷ್ಟು ಯತ್ನಿಸಿದರೂ ವ್ಯರ್ಥವಾಯಿತು . . . . ನೀನೂ. . . . .ನೀನೂ. . . .ನನ್ನನ್ನು... ಸ್ವಲ್ಪಾದರೂ ಪ್ರೀತಿಸುವಿಯಾ ?... ಹೇಳು. ಹೌದೆಂದು ಹೇಳು...." ಅವಳ ಎರಡೂ ತುಟಿಗಳು ಪ್ರಗಾಢ ಚುಂಬನದಲ್ಲಿ ಮುಳುಗಿದವು. ಅದೇ ಕೇನ್‌ನ ಉತ್ತರವಾಗಿತ್ತು. ರೊಜೆಲಿ ಅಂದಳು, " ನಾನು ಹುಚ್ಚಿ. ಇದು ವರೆಗೆ ನೀತಿ ಅನೀತಿ ಎನ್ನುತ್ತ ಈ ಮಾದಕ ಆನಂದದಿಂದ ದೂರ ಉಳಿದೆ. ಆದರೆ ನನ್ನಲ್ಲಿ ಯಾವ ಕೊರತೆಯೂ ಇಲ್ಲ. ಕೇನ್. ನಾನು ಪೂರ್ಣಸ್ತ್ರೀ. ನಿನ್ನ ಪ್ರೇಮಕ್ಕೆ ಯೋಗ್ಯಳು–ಮತ್ತೊಮ್ಮೆ ನನ್ನನ್ನು ಚುಂಬಿಸು. ನೋಡು, ನಿನ್ನ ಮೈ ಬಿಸಿಯ ಸ್ಪರ್ಶನಕ್ಕಾಗಿ ತಂಗಳ ರೊಟ್ಟಿಯನ್ನು ನಾನು ತಿಂದೆ. ಆ ಕರೇ ಹಂಸ ನನ್ನ ಮೇಲೆ ಸಿಟ್ಟಾಯಿತು."

ಹುಚ್ಚಿಯಂತೆ ಆಕೆ ಮಾತಾಡುತ್ತಲೇ ಇದ್ದಳು. ಈ ಅಸಹನೀಯ ಆನಂದದಿಂದ ಅವಳ ರೋಮ ರೋಮವೂ ನಡುಗುತ್ತಿತ್ತು.

ತೆಕ್ಕೆಯಲ್ಲಿ ಹಿಡಿದುಕೊಂಡೇ ಕೇನ್ ಅವಳನ್ನು ಪಾವಟಿಗೆಗಳ ಕೆಳಗಿನ ಒಂದು ಕೋಣೆಯಲ್ಲಿ ಕರೆದೊಯ್ದು. ಅಲ್ಲಿ ಇನ್ನೂ ಹೆಚ್ಚು ಕತ್ತಲೆ. ಉಸಿರುಗಟ್ಟಿಸುವ ಹವೆ. ಇಬ್ಬರೂ ಕಲ್ಲ ಮೇಲೆ ಕೂತರು.

" ಇದಂತೂ ಸಾವಿನ ವಾಸನೆ " ಯಾವದೋ ಅಜ್ಞಾತ ಭೀತಿಯಿಂದ ರೊಜೆಲಿ ಕೇನ್‌ನ ಭುಜದ ಮೇಲೆ ಒರಗಿದಳು. "ನಾವು ಮೊದಲಬಾರಿ ಹಾಳು ಸ್ಥಳದಲ್ಲಿ ಕೂಡಿದ್ದು ಎಷ್ಟು ಉದಾಸ ಸಂಗತಿ. ನಮ್ಮ ಪ್ರೀತಿ ತಾಯಿ ಪ್ರಕೃತಿಯ ಮಡಲಲ್ಲಿ ಅರಳುವುದೆಂದು ನಾನು ಯಾವಾಗಲೂ ಕನಸ ಕಂಡಿದ್ದೆ. ಅಲ್ಲಿ ಉತ್ತೇಜಕ ಗಾಳಿ ಇರುವದು. ವಾತಾವರಣದಲ್ಲಿ ಹೊಸ ಹೂಗಳ ಸುಗಂಧ ಸೂಸುವದು. . . . ಅರೇ, ಏನು ಮಾಡುವೆ? ತಡೆ. ಈಗಲೇ ಬೇಡ. ಇಲ್ಲಿ ಬೇಡ ನಾನು ವಚನ ಕೊಡುವೆ. ನಾನು ಪೂರ್ಣವಾಗಿ ನಿನ್ನವಳಾಗುವೆ. ಆದರೆ ಇಲ್ಲಿ ಈ ಸ್ಮಶಾನದಲ್ಲಿ ಬೇಡ. ನಾಳೆ ನಾನು ನಿನ್ನ ಬಳಿ ನಿನ್ನ ಕೋಣೆಯಲ್ಲಿಯೆ ಬರುವೆ. ನಾಳೆ ಬೆಳಿಗ್ಗೆ ಅಥವಾ ಇಂದು ರಾತ್ರಿಯೇ! ಸ್ವಲ್ಪ ತಾಳು."

ಕೇನ್ ರೊಜೆಲಿಯಿಂದ ವಚನ ಪಡೆದ. ಅದೇ ದಾರಿಯಿಂದ ಕೋಟೆಯ ಹಿಂದುಗಡೆ ಬಂದರು. ಅಲ್ಲಿ ಆಗಲೇ ಚೌಕೀದಾರನೊಂದಿಗೆ ಉಳಿದ

ಯಾತ್ರಿಕರು ಬಂದಿದ್ದರು. ಕೇನ್ ತನ್ನ ಮನೆಗೆ ಹೋದ. ಇತ್ತ ವಾನ್‌ಟಿಮ್ಲರ್ ಕುಟುಂಬೀಯರೂ ತಮ್ಮ ಮನೆಗೆ ಬಂದರು.

ಆದರೆ ಕೊಟ್ಟ ಮಾತಿನಂತೆ ರೊಜೆಲಿ ಆ ದಿನ ರಾತ್ರಿಯಾಗಲಿ ಮರುದಿನ ಬೆಳಿಗ್ಗೆಯಾಗಲಿ, ಕೇನ್‌ನಲ್ಲಿ ಹೋಗಲಿಲ್ಲ. ಅದೇ ದಿನ ರೋಜೆಲಿಯ ಸ್ವಾಸ್ಥ್ಯ ಕೆಟ್ಟು ಮನೆಯವರೆಲ್ಲರೂ ಹೆದರಿಬಿಟ್ಟರು. ರೊಜೆಲಿ ಅರಿವುಗೆಟ್ಟಿದ್ದಳು. ಯಾವ ಸ್ರೋತವನ್ನು ಸ್ತ್ರೀಯೋಚಿತ ಧರ್ಮವೆಂದು ಬಗೆದು ಪುನಯೌವ್ವನ ಬಂತೆಂದು ಆಕೆ ತಿಳಿದುಕೊಂಡಿದ್ದಳೊ ಅದು ಈಗ ತಡೆ ಇಲ್ಲದಂತೆ ವೇಗವಾಗಿ ಒಂದೇಸವನೆ ಹರಿಯಲಾರಂಭಿಸಿತ್ತು. ಎನಾ ಕೂಡಲೆ ಡಾಕ್ಟರ ಓಬರ್ ಲಾಸ್ಕ್ಯಾಂಪರನ್ನು ಕರೆಸಿದಳು.

ರೋಗಿಯ ಸ್ಥಿತಿ ನೋಡಿ ಡಾಕ್ಟರರು ಚಿಂತೆಗೊಳಗಾದರು. ಕೂಡಲೆ ದವಾಖಾನೆಗೆ ಕಳಿಸಬೇಕೆಂದು ಹೇಳಿದರು. ಕ್ಷಣಕಾಲ ರೊಜೆಲಿಯ ಕಣ್ಣು ತೆರೆದವು. ಡಾಕ್ಟರರನ್ನು ಕಂಡು ಮಂದ ಸ್ವರದಲ್ಲಿ ಆಕೆ ಅಂದಳು, "ಇದಂತೂ ಸ್ತ್ರೀಯರಿಗೆ ಸಾಮಾನ್ಯವಾದ ಘಟನೆ. ಇದಕ್ಕಾಗಿ ನೀವಿಷು ಗಾಬರಿಯಾಗಬೇಕೇ?"

ಡಾಕ್ಟರರು ನಮ್ರಭಾವದಿಂದ ಹೇಳಿದರು. "ಕೆಲವೊಮ್ಮೆ ಸಾಧಾರಣ ಸಂಗತಿಗಳೂ ಅಸಾಧಾರಣ ರೂಪ ಧರಿಸುತ್ತವೆ. ಆಗ ನಮ್ಮಂಥ ಡಾಕ್ಟರರ ಸಲಹೆ ಹೊಂದುವುದು ಅತ್ಯಗತ್ಯವಿರುತ್ತದೆ." ರೊಜೆಲಿ ಮತ್ತೆ ಅರಿವುಗೆಟ್ಟಳು.

ಆಸ್ಪತ್ರೆಗೆ ಒಯ್ದ ಮೇಲೆ ಆಪರೇಷನ್ ಆಗಬೇಕೆಂದು ತೀರ್ಮಾನವಾಯಿತು. ಆಪರೇಷನ್ ಮಾಡಿದ ಮೇಲೆ ಅಂಡಕೋಶದಲ್ಲಿ ಒಂದು ದೊಡ್ಡ ಹುಣ್ಣಾಗಿತ್ತು ಎಂದು ಗೊತ್ತಾಯಿತು. ಅದು ಒಡೆದು ಅದರ ಸುತ್ತಮುತ್ತಿನ ಭಾಗ ಕೊಳೆತಿತ್ತು. ರೋಗಿ ಉಳಿಯುವ ಆಸೆ ಇರಲಿಲ್ಲ.

ಆಪರೇಷನ್ ಆದ ಮೇಲೆ ರೊಜೆಲಿಯನ್ನು ಸ್ಟ್ರೆಚರ್ ಮೇಲೆ ಹಾಕಿಕೊಂಡು ಅವಳ ಕೋಣೆಗೆ ಒಯ್ಯುವಾಗ ಒಮ್ಮೆ ಕಣ್ಣು ತೆರೆದು ತನ ಹತ್ತಿರ ಎನಾ ಇರುವುದನ್ನು ಕಂಡು, "ಆತ ನನ್ನತ್ತ ಸಿಟ್ಟಿನಿಂದ ನೋಡಿದ್ದ." ಎಂದು ಹೇಳಿದಳು.


"ಯಾರು?"

"ಅದೇ ಕರಿ ಹಂಸ."

ರೊಜೆಲಿ ಮತ್ತೆ ಸ್ಮೃತಿ ತಪ್ಪಿದಳು.

ಸಾಯುವ ಮುಂಚೆ ಕೆಲಹೊತ್ತು ರೊಜೆಲಿಗೆ ಮತ್ತೆ ಪ್ರಜ್ಞೆ ಬಂತು. ಆಗ ಆಕೆ ಎನಾಗೆ ಹೇಳಿದಳು, "ಪ್ರಕೃತಿ ನನ್ನನ್ನು ಮೋಸಮಾಡಿತೆಂದು ಎಂದೂ ಹೇಳಬೇಡ ಮಗೂ. ನನ್ನ ಉದಾಹರಣೆ ಎತ್ತಿಕೊಂಡು ಪ್ರಕೃತಿಯ ತಮಾಷೆಯನ್ನು ಎಂದೂ ಮಾಡಬೇಡ. ನಿಮ್ಮನ್ನು ಬಿಟ್ಟುಹೋಗುವ ಇಚ್ಛೆ ನನಗಿಲ್ಲ. ಏಕೆಂದರೆ ಈಗ ವಸಂತ ಮಾಸ... ಆದರೆ... ಮೃತ್ಯುವಿಲ್ಲದೆ ವಸಂತ ಪೂರ್ಣವಾಗುವ ಬಗೆ ಹೇಗೆ? ಹಾಗೆ ನೋಡಿದರೆ ಮೃತ್ಯು ಜೀವನದ ಬಲವಾದ ಅಸ್ತ್ರ. ನಾನು ಹುಚ್ಚಿಯಂತೆ ಸಂಕೇತದ ಅರ್ಥ ತಪ್ಪಾಗಿ ಹಚ್ಚಿದ್ದೆ. ತಪ್ಪು ನನ್ನದೇ!... ಪ್ರಕೃತಿ ಸಾವಿನ ತರುವಾಯ ನನಗೆ ಹೊಸ ಜೀವನ ಹೊಸ ವಸಂತ ನೀಡುವಳು. ಇದರಲ್ಲಿ ಏನೂ ಸುಳ್ಳಿಲ್ಲ, ಭ್ರಮೆಯಿಲ್ಲ."

ರೊಜೆಲಿ ಶಾಂತಿಯಿಂದ ಪ್ರಾಣ ಬಿಟ್ಟಳು. ಕೊನೆಯಲ್ಲಿ ಅವಳ ಉಸಿರುಗಟ್ಟುವ ಅಂತರ್‌ದ್ವಂದ್ವ ಶಾಂತವಾಗಿತ್ತು. ★



ಆಧುನಿಕ ಪ್ರಬಲ 'ಬಾಂಬರ್'ಗೆ ಅಗತ್ಯವಿರುವ ಇಂಧನದಿಂದ ಒಂದು ಕಾರನ್ನು ಭೂಮಿಯ ಸುತ್ತ ಹದಿನಾರು ಬಾರಿ ಓಡಿಸಬಹುದು.

— ಎಂ. ಬಿ. ಆರ್. ಪ್ರಸಾದ್

ಭಾರತದ ಇತಿಹಾಸದಲ್ಲಿವರು ರಕ್ತರಂಜಿತ ಪುಟಗಳನ್ನು ಬರೆದಿದ್ದಾರೆ

ಭಯಪ್ರದರಾದ

ನಾಗಾ ಸಾಧುಗಳು



ಎಚ್. ಜಿ. ರಾವ್

ಕುಂಭ ಮೇಳದ ಒಂದು ಪ್ರೇಕ್ಷಣೀಯ, ಆದರೆ ಭಯೋತ್ಪಾದಕ ದೃಶ್ಯವೆಂದರೆ ನಾಗಾ ಸಾಧುಗಳ ಮೆರವಣಿಗೆ. ಜಡೆಗಟ್ಟಿದ ಕೂದಲಿನ, ಉಗ್ರನೇತ್ರಗಳ, ಬಡಿದುಕೊಂಡ ಬೂದಿಯ ಹೊರತು ಮೈಯನ್ನು ಮುಚ್ಚಲು ಮತ್ತಾವ ಆವರಣವೂ ಇಲ್ಲದ ಈ ಸಾಧುಗಳು ನೂರುಗಟ್ಟಳೆಯಲ್ಲಿ ಸಂಗಮದಲ್ಲಿ ಸ್ನಾನಕ್ಕಾಗಿ ಭೂಮಿ ನಡುಗುವಂತೆ ಹೆಜ್ಜೆಯಿಡುತ್ತ ಮುಪ್ಪುರಿ ಸಾಲಾಗಿ ಮುನ್ನಡೆಯುವುದನ್ನು ನೋಡಲು ಸಾವಿರಗಟ್ಟಳೆ ಜನ ಮಕ್ಕಳೂ ಹೆಂಗಸರೂ ಗಂಡಸರೂ ಅವರ ಮಾರ್ಗದಲ್ಲಿ ನೆರೆದಿರುತ್ತಾರೆ. ಒಮ್ಮೊಮ್ಮೆ ಈ ಮೆರವಣಿಗೆಯ ಕಾಲಕ್ಕೆ ಘೋರ ಅನಾಹುತಗಳಾಗುತ್ತವೆ. ೧೯೫೪ ರ ಕುಂಭಮೇಳದಲ್ಲಿ ಇರುವೆಗಳಂತೆ ಕಿಕ್ಕಿರಿದ ಯಾತ್ರಿಕರ ಮಧ್ಯದಲ್ಲಿ ಭೀಷಣ ರೂಪದ ನಾಗಾ ಸಾಧುಗಳು ನುಗ್ಗಿ ನಡೆದಾಗ ಜನಜಂಗುಳಿಯಲ್ಲಿ ಕೆಲವರು ಆಯ ತಪ್ಪಿ ಕೆಳಗೆ ಉರುಳಿದರು. ಸಾಧುಗಳು ಅವರನ್ನು ಮೆಟ್ಟಿ ಮುಂದೆ ಸಾಗಿದರು. ಪರಿಣಮಿಸಿದ ಕೋಲಾಹಲದಲ್ಲಿ ಹೆಚ್ಚು ಜನರು ಬಿದ್ದರು. ಮತ್ತು ಹೆಂಗಸರು ಮಕ್ಕಳಾದಿಯಾಗಿ ನೂರಾರು ಜನ ತುಳಿಯಲ್ಪಟ್ಟು ಪ್ರಾಣ ನೀಗಿದರು.

ಅಘೋರಿ ಸಾಧುಗಳನ್ನು ಬಿಟ್ಟರೆ ಭಾರತದ ಸಾಧುಗಳಲ್ಲೆಲ್ಲ ನಾಗಾ ಸಾಧುಗಳು ಭಯಪ್ರದರಾಗಿದ್ದಾರೆ, ಮತ್ತು ಅವರ ಹಿನ್ನೆಲೆಯಲ್ಲಿ ಒಂದು ಅನುಪಮ ಪ್ರತಾಪಶಾಲಿ ಇತಿಹಾಸವೂ ಇದೆ. ಈ ರಹಸ್ಯಮಯ ಸಾಧುಗಳು ಸರ್ವಸಂಗ ಪರಿತ್ಯಾಗಿಗಳು. ಅವರು ಲೌಕಿಕ ವ್ಯವಹಾರದಲ್ಲಿ ಎಂದೂ ಕೈಹಾಕುವುದಿಲ್ಲ. ಶಿಷ್ಯರನ್ನೂ ಭಕ್ತರನ್ನೂ ಬಯಸುವುದಿಲ್ಲ. ತಮ್ಮ ಪಾದ ಮುಟ್ಟಲು ಯಾರಿಗೂ ಬಿಡುವುದಿಲ್ಲ. ಕುಂಭಮೇಳ ಕಾಲದಲ್ಲಿ ಮಾತ್ರವೇ ಈ ಸಾಧುಗಳ ಸಾಮೂಹಿಕ ದರ್ಶನ ಜನರಿಗಾಗುವುದು. ಆಗಲೂ ಅವರು ಕೇವಲ ಶತಮಾನಗಳ ಸಂಪ್ರದಾಯದ ಪಾಲನೆಗಾಗಿ ಮಾತ್ರವೇ ಜನಸಮ್ಮರ್ದದ ಮಧ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ. ಅಲ್ಲಿಯೂ ಅವರು ದೂರದಲ್ಲಿ, ಜನರ ಗಮನಾಗಮನವಿಲ್ಲದ ಏಕಾಂತದಲ್ಲಿ ತಮ್ಮ ಶಿಬಿರವನ್ನು ಏರ್ಪಡಿಸುತ್ತಾರೆ. ಅಲ್ಲಿಯೂ ನೆರೆದ ಸಾಧುಗಳ ಮೈಗಳು ಹಿಡಿಸುವಷ್ಟೇ ಸ್ಥಳವಿರುತ್ತದೆ. ಕುತೂಹಲಿಗಳಾಗಲಿ ಸಂದರ್ಶಕರಾಗಲಿ ತಮ್ಮನ್ನು ಕಾಣಲು ಬರುವರೆಂದು ಸುಳಿವು ಹತ್ತಿದರೆ ಅವರು ಅಡವಿ ಹೊಕ್ಕು ಕಣ್ಮರೆಯಾಗಿ ಹೋಗುತ್ತಾರೆ.

ನಾಗಾ ಸಾಧುಗಳ ಬತ್ತಲೆತನ ಅವರ ಪರಿಪೂರ್ಣ ವಿರಕ್ತಿಯ ಮತ್ತು ಇಂದ್ರಿಯ ನಿಗ್ರಹದ

ಸೂಚಕವಾಗಿದೆ. ಕೌಪೀನವು ಕೂಡ ಒಂದು ಸೊತ್ತಾಗಿರುವುದರಿಂದ ಅದು ಅವರಿಗೆ ವರ್ಜ್ಯವಾಗಿದೆಯಷ್ಟೇ. ಆದರೂ ಎಲ್ಲ ನಾಗಾ ಸಾಧುಗಳು ಯಾವಾಗಲೂ ನಗ್ನರಾಗಿರುವರೆಂದಲ್ಲ. ಅವರಲ್ಲಿ ಹೆಚ್ಚಿನವರು ಮಹತ್ವದ ಸಮಾರಂಭಗಳಲ್ಲಷ್ಟೇ ನಗ್ನರಾಗಿರುತ್ತಾರೆ. ಕೆಲವರು ಮಾತ್ರ ತಮ್ಮ ಅಪರಿಗ್ರಹವ್ರತದ ಪರಮಾವಧಿಯನ್ನು ಸದಾಕಾಲವೂ ಆಚರಿಸುತ್ತಾರೆ.

ನಾಗಾ ಸಾಧು ಪಂಗಡದ ಮೂಲವು ಆರ್ಯರಿಗಿಂತಲೂ ಪೂರ್ವದಲ್ಲಿ ಭಾರತದ ಆದಿಮ ಶೈವ ಪಂಥದಲ್ಲಿರಬಹುದಾದರೂ ಇಂದು ಅಧಿಕಾಂಶ ನಾಗಾ ಸಾಧುಗಳು ಶಂಕರಾಚಾರ್ಯರಿಂದ ಪುನರ್ಘಟಿಸಲ್ಪಟ್ಟ ಪ್ರಬಲವಾದ "ದಶನಾಮಿ ಸಂಪ್ರದಾಯ"ದ ಅನುಯಾಯಿಗಳಾಗಿದ್ದಾರೆ. ದೀಕ್ಷೆ ಪಡೆದೊಡನೆ ಇವರಿಗೆ ಗಿರಿ, ಪುರಿ, ಭಾರತಿ, ವನ, ಅರಣ್ಯ, ಪರ್ವತ, ಸಾಗರ, ತೀರ್ಥ, ಆಶ್ರಮ ಮತ್ತು ಸರಸ್ವತಿ ಈ ಹತ್ತು ಹೆಸರುಗಳಲ್ಲಿ ಒಂದನ್ನು ಉಪಾಧಿಯಾಗಿ ಕೊಡುವುದರಿಂದ "ದಶನಾಮಿ" ಎಂಬ ಹೆಸರು ಬಂದಿದೆ. ದೀಕ್ಷಾ ಸ್ವೀಕಾರ ಕಾಲದಲ್ಲಿ ಅವರು ದಿನಕ್ಕೊಂದೇ ಊಟ, ಜನರ ಮಧ್ಯದಲ್ಲಿ ವಾಸಿಸದಿರುವುದು, ಒಂದು ದಿನದಲ್ಲಿ ಏಳಕ್ಕಿಂತ ಹೆಚ್ಚು ಮನೆಗಳಲ್ಲಿ ಭಿಕ್ಷೆಯೆತ್ತದಿರುವುದು, ಬರಿ ನೆಲದ ಮೇಲೆ ಮಲಗುವುದು, ಗುರುಗಳಿಗಲ್ಲದೆ ಅನ್ಯರಿಗೆ ನಮಸ್ಕರಿಸದಿರುವುದು, ಯಾರ ನಿಂದೆ ಸ್ತುತಿಗಳನ್ನೂ ಮಾಡದಿರುವುದು—ಈ ನಿಯಮಗಳನ್ನು ಪಾಲಿಸುವ ಶಪಥ ಮಾಡಬೇಕಾಗುವುದು.

ದಶನಾಮಿ ಸಂಪ್ರದಾಯದ ಸಾಧುಗಳು ಎರಡು ಪಂಗಡಗಳಾಗಿ ವಿಂಗಡಿಸಲ್ಪಟಿದ್ದಾರೆ. ವಿದ್ವಾಂಸರಾದ ಸಂನ್ಯಾಸಿಗಳು, ಯೋಗಿಗಳು, ಮಠಮಾನ್ಯಗಳನ್ನು ನಡೆಸಿಕೊಂಡು ಹೋಗುವ ಮಹಾಂತರು ಇವರನ್ನು "ಶಾಸ್ತ್ರಧಾರಿ"ಗಳು ಎಂದು ಕರೆಯುತ್ತಾರೆ. ಅವರು ಸಮಾಜದ ಧಾರ್ಮಿಕ ನಾಯಕತ್ವ ವಹಿಸುವರು. ಅವರಲ್ಲಿ ಬೇರಾವ ಪಂಥದ ಸಂನ್ಯಾಸಿಗಳಿಗಿಂತ ಭಿನ್ನವಾದುದೇನೂ ಇಲ್ಲವೆನ್ನಬಹುದು.

ಎರಡನೇ ಪಂಗಡವಾದ "ಅಸ್ತ್ರಧಾರಿ" ಸಾಧುಗಳೀಗ ನಾಗಾ ಸಾಧಗಳು ಎಂಬ ಹೆಸರಿನಿಂದ ಜನಸಾಮಾನ್ಯರಿಗೆ ಪರಿಚಿತರಾಗಿರುವ ಎದೆಯನ್ನು ತಲ್ಲಣಗೊಳಿಸುವ ಸಾಧುಗಳು. ಅವರು ಧರ್ಮರಕ್ಷಣೆಗಾಗಿ "ಅಖಾಡಾ"ಗಳಾಗಿ ಸಂಘಟಿತರಾದ ಹಿಂದೂ ಧರ್ಮದ ಧರ್ಮಯೋಧರು. ಅವರು ಯುದ್ಧ ಮಾಡಬಲ್ಲ ಕ್ಷಾತ್ರ ಚರಿತ್ರದ ನಿರ್ಭಯ ಬೈರಾಗಿಗಳು.

ಸಂನ್ಯಾಸಿಗಳಲ್ಲಿ ಯೋಧರು ಹೇಗೆ ಉಂಟಾದರೆಂಬುದು ಸರಿಯಾಗಿ ಯಾರಿಗೂ ಗೊತ್ತಿಲ್ಲ. ಪ್ರಾಚೀನ ಕಾಲದಲ್ಲಿ ಸಂನ್ಯಾಸಿಗಳು ಆತ್ಮರಕ್ಷಣೆಗಾಗಿ ಮತ್ತು ತಪೋಬಾಧಾನಿವಾರಣೆಗಾಗಿ ದಂಡ ಮತ್ತು ಖಡ್ಗವನ್ನು ಇಟ್ಟುಕೊಳ್ಳುವ ಪದ್ಧತಿ ಬೆಳೆದು ಬಂತೆಂದು ತೋರುತ್ತದೆ. ಈ "ದಂಡಿನ್"ಗಳು ದೇಶದಲ್ಲಿ ಅರಾಜಕತೆ ಹೆಚ್ಚಿದಾಗ ಆತ್ಮ ಮತ್ತು ಧರ್ಮ ರಕ್ಷಣೆಗಾಗಿ ಯುದ್ಧ ಕಲೆಯನ್ನು ಕಲಿತಂತೆ ಕಾಣುತ್ತದೆ. ಭಾರತದ ಇತಿಹಾಸದಲ್ಲಿ ಈ ಅಸ್ತ್ರಧಾರಿ ನಾಗರು ರಕ್ತರಂಜಿತ ಪುಟಗಳನ್ನು ನಿರ್ಮಿಸಿದಾರೆ.

ಹದಿಮೂರನೇ ಶತಮಾನದಲ್ಲಿ ಹಿಂದೂ ಧರ್ಮ ಸಂಸ್ಕೃತಿಗಳ ಮೇಲೆ ಮುಸ್ಲಿಂ ಆಕ್ರಮಣ ಹೆಚ್ಚಿದಾಗ ಈ ಅಸ್ತ್ರಧಾರಿಗಳ ಸಂಘಟನೆ ಬಲಗೊಂಡಂತೆ ಕಾಣುತ್ತದೆ. ಮುಸಲ್ಮಾನ ಫಕೀರರು ಹಿಂದೂ ಬೈರಾಗಿಗಳನ್ನು ಕಡಿದು ಹಾಕುವುದನ್ನು ಕಂಡು ಖತಿಗೊಂಡು ವಾರಣಾಸಿಯ ಮಧುಸೂದನ ಸರಸ್ವತಿ ಎಂಬ ವೇದಾಂತಿ ಸಾಧು ಹಿಂದೂ ಸಾಧುಗಳ ಸೈನ್ಯ ಸಂಘಟನೆಗೆ ಬೀರಬಲ್ಲನ ಮೂಲಕ ಅಕಬರನ ಅನುಮತಿಯನ್ನು ದೊರಕಿಸಿದನಂತೆ.

ಇಂದಿಗೂ ದಶನಾಮಿ ಮತ್ತು ಇನ್ನೊಂದು ಸಾಧುಪಂಥವಾದ ಚತುಃಸಂಪ್ರದಾಯಿಗಳ 'ಅಖಾಡಾ'ಗಳಿಗೆ ಸೇರಿದ ಸಾಧುಗಳಲ್ಲಿ ತೋಪುಗಳನ್ನು ನಡೆಸಬಲ್ಲ ಸೈನಿಕ ಸಾಮರ್ಥ್ಯವಿದೆಯೆಂದು ಹೇಳುತ್ತಾರೆ. ಹಿಂದೂ ಧರ್ಮಕ್ಕೆ

ವಿಪತ್ತು ಬಂತೆನಿಸಿದಾಗ ಅವರು ಸಶಸ್ತ್ರರಾಗಿ ದೇವಾಲಯಗಳನ್ನೂ ಹಿಂದೂ ಮಹಿಳೆಯರನ್ನೂ ಗೋಬ್ರಾಹ್ಮಣರನ್ನೂ ಕಾಪಾಡಲು ಶೌರ್ಯದಿಂದ ಹೋರಾಡಿದರು. ಈ ಬತ್ತಲೆ ಸಾಧುಗಳ ಪ್ರತಾಪವನ್ನು ನೋಡಿಯೆ "ನಂಗೇ ಕೋ ಖುದಾ ಡರತಾ ಹೈ" – ನಗ್ನನಿಗೆ ದೇವರೂ ಹೆದರುತ್ತಾನೆ ಎಂಬ ಮಾತು ಬಳಕೆಗೆ ಬಂದಿರಬೇಕು.

ಈ ನಗ್ನ ಸಾಧುಗಳ ಸಾಹಸದ ಕಥೆಗಳು ಅನೇಕವಾಗಿವೆ. ೧೬೬೪ ರಲ್ಲಿ ದಶನಾಮಿಗಳು ಕಾಶಿ ವಿಶ್ವನಾಥ ದೇವಾಲಯದ ರಕ್ಷಣೆಗಾಗಿ ಔರಂಗಜೇಬನ ಪಡೆಗಳೊಡನೆ ನಡೆಸಿದ ಹೋರಾಟ ಚರಿತ್ರಾರ್ಹವಾಗಿದೆ. ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ಇವರು ಜೀವದ ಹಂಗುದೊರೆದು ಹೋರಾಡಿದರು. "ಮಿರ್ಜಾ ಅಲಿ ಮತ್ತು ತುರಣ ಖಾನನನ್ನು ಸೋಲಿಸಿ ಸಾಧುಗಳು ವಿಶ್ವನಾಥನ ಪೀಠದ ಗೌರವವನ್ನು ಕಾಪಾಡಿದರು."

ಒಂದು ಶತಮಾನದ ನಂತರ ದಶನಾಮಿ ನಾಗರು ಸವಾರವೊಂದರಲ್ಲಿ ಒಬ್ಬ ಮುಸ್ಲಿಂ ರಾಜನ ವಿರುದ್ಧ ಇನ್ನೊಬ್ಬ ಮುಸ್ಲಿಂ ರಾಜನಿಗೆ ನೆರವಾಗಿ ರಕ್ತದ ಕಡಲಲ್ಲಿ ಅವನಿಗೆ ವಿಜಯ ದೊರಕಿಸಿಕೊಡುವುದನ್ನು ಕಾಣುತ್ತೇವೆ. ಮೊಗಲ ಸಾಮ್ರಾಜ್ಯ ಅವನತಿಯಲ್ಲಿದ್ದಾಗ, ೧೭೫೧ ರಲ್ಲಿ ಬಂಗಾಶ್ ಅಫಗಾನರು ಅವಧದ ಮೇಲೆ ದಾಳಿಮಾಡಿದರು. ನವಾಬ ವಜೀರನ ಮಂತ್ರಿ ನವಲರಾಯನನ್ನು ಕೊಂದು ಲಖನೋವನ್ನು ಹಿಡಿದುಕೊಂಡು, ಅಲಹಾಬಾದನ್ನು ಸುಟ್ಟು ೪೦೦೦ ಕುಲೀನ ಮಹಿಳೆಯರನ್ನು ಸೆರೆಹಿಡಿದ ಅಫಗಾನರ ಆಟೋಪವನ್ನೆದುರಿಸಲು ದಿಲ್ಲಿಯಿಂದಲೂ ಸಹಾಯ ದೊರಕದೆ ನವಾಬನು ತತ್ತರಿಸುತ್ತಿದ್ದಾಗ ರಾಜೇಂದ್ರಗಿರಿಯೆಂಬ ದಶನಾಮಿ ಸಾಧು ತನ್ನ ೫೦,೦೦೦ ನಾಗಾ ಸಾಧುಗಳೊಡನೆ ದೈವೀ ಪ್ರಕೋಪದಂತೆ ಅಫಗಾನರ ಮೇಲೆ ಬಂದೆರಗಿದನು. ಅಶ್ವಾರೂಢರಾದ ನಾಗಾಸಾಧುಗಳು ತೋಪುಗಳ ಅಗ್ನಿವರ್ಷಣವನ್ನು ಲೆಕ್ಕಿಸದೆ ದಿನನಿತ್ಯ ಬೆಳಿಗ್ಗೆ ಅಫಗಾನರ ಶಿಬಿರಗಳಿಗೆ ನುಗ್ಗಿ ಸಿಕ್ಕಸಿಕ್ಕವರನ್ನು ಕಗ್ಗಲೆಗಡಿದು ಅವರ ಶಸ್ತ್ರಾಸ್ತ್ರಗಳನ್ನೂ ಕುದುರೆಗಳನ್ನೂ ಕಸಿದುಕೊಂಡು ಬಂದರು. ಕೊನೆಗೆ ಅಫಗಾನರು ಅಲ್ಲಿಂದ ತಳಕಿತ್ತು ಹೊರಟು ಹೋಗಬೇಕಾಯಿತೆಂದು ಗುಲಾಮ ಹಸನ್ ಬರೆದಿಟ್ಟಿದ್ದಾನೆ.

ಅಂದಿನಿಂದ ರಾಜೇಂದ್ರಗಿರಿ ಮತ್ತು ಅವನ ನಾಗಾ ಸಾಧು ಯೋಧರು ನವಾಬ ವಜೀರನ ರಕ್ಷಕರಾದರು. ೧೭೫೬ ರಲ್ಲಿ ಮಹಮ್ಮದಶಾ ಅಬದಾಲಿ ಕೊಲೆ ಸುಲಿಗೆ ಕೊಳ್ಳಿಗಳ ಸತ್ರವನ್ನು ಪ್ರಾರಂಭಿಸಿ ಆಗ್ರಾದಿಂದ ಅಕಬರಾಬಾದ ವರೆಗೆ ಹಿಂದುಗಳ ಯಾವ ಮನೆ ಮಠ ದೇವಾಲಯಗಳೂ ಉಳಿಯಕೂಡದೆಂದು ತನ್ನ ಸೈನಿಕರಿಗೆ ಆಜ್ಞೆಯಿತ್ತಾಗ ಮಥುರೆಯಲ್ಲಿ ನಾಗಾಸಾಧುಗಳು ಅವರನ್ನೆದುರಿಸಿ ನಿಂತರು. ಸೆರೆಹಿಡಿದ ಸಾಧುಗಳನ್ನು ನಿರ್ದಯವಾಗಿ ಶಿರಶ್ಛೇದಮಾಡಲಾಯಿತು. ಗೋಕುಲದ ದೇವಾಲಯವನ್ನು ರಕ್ಷಿಸಲು ನಿಂತ ನಾಲ್ಕು ಸಾವಿರ ನಾಗಾ ಸಾಧುಗಳಲ್ಲಿ ಎರಡು ಸಾವಿರ ಜನರು ಮಡಿದರು. ಆದರೆ ದೇವಾಲಯ ಉಳಿಯಿತು.

ನಾಗಾಸಾಧುಗಳ ಸಂಘಟನೆಗಳಿಗೆ "ಅಖಾಡಾ" (ಕಣ) ಗಳೆಂದು ಹೆಸರು. ದಶನಾಮಿಗಳ ಆರು ಅಖಾಡಾಗಳಿವೆ. ಅವುಗಳಲ್ಲಿ ಭೈರವ ಅಖಾಡಾ ಅತಿ ಹಳೆಯದು. ಭೈರವ ಅಥವಾ ದತ್ತಾತ್ರೇಯನನ್ನು ಆರಾಧಿಸುವ ಈ ಅಖಾಡಾದಲ್ಲಿ ನಗ್ನ ಸ್ತ್ರೀಯರ ತಂಡಗಳೂ ಇದ್ದು ಅವರನ್ನು ಅವಧೂತಿನಿಯರೆಂದು ಕರೆಯುತ್ತಾರಾಗಿ ಡಾ. ಧುರ್ಯೆ ಹೇಳುತ್ತಾರೆ.

ನಿರಂಜನಿ ಅಖಾಡಾ ಎಂಬ ಕಾರ್ತಿಕೇಯ ಭಕ್ತಪಂಥದ ಕೇಂದ್ರ ಪ್ರಯಾಗ. ತ್ರ್ಯಂಬಕ, ಓಂಕಾರ ಮಾಂಧಾತಾ, ಉಜ್ಜಯಿನಿ, ಕಾಶಿ, ಹರಿದ್ವಾರ, ಉದಯಪುರ ಮೊದಲಾದೆಡೆಗಳಲ್ಲಿ ಅದರ ಶಾಖೆಗಳಿವೆ. ಕಾಶಿಯಲ್ಲೇ ಆನಂದವೆಂಬ ಅಗ್ನಿಪೂಜಕ ಅಖಾಡಾ ಇದೆ. ಛೋಟಾ ನಾಗಪುರದ ಬಳಿ ಕುಂದಗಣ ಎಂಬಲ್ಲಿರುವ

ಮಹಾನಿರ್ವಾಣಿ ಅಖಾಡಾದ ಸದಸ್ಯರು ಔರಂಗಜೇಬನ ಸೈನ್ಯದ ವಿರುದ್ಧ ಹೋರಾಡಿ ಕಾಶಿಯನ್ನು ರಕ್ಷಿಸಿದರೆಂದು ಪ್ರತೀತಿಯಿದೆ.

ದಶನಾಮಿಗಳು ಶೈವರಾದರೆ ಚತುಃಸಂಪ್ರದಾಯಿಗಳು ವೈಷ್ಣವರು. ಇವರಲ್ಲಿ ದಿಗಂಬರ, ನಿರ್ವಾಣಿ, ನಿರ್ಮೋಹಿ, ಖಾಕಿ, ನಿರಾಲಂಬಿ, ಸಂತೋಷಿ, ಮಹಾನಿರ್ವಾಣಿ ಎಂಬ ಎಂಟು ಪ್ರಮುಖ ಮತ್ತು ಇತರ ಕೆಲ ಚಿಲ್ಲರೆ ಪ್ರಭೇದಗಳಿವೆ. ನಿಬಾರ್ಕಿ ಮತ್ತು ರಾಮಾನಂದಿ ಎಂಬುದಾಗಿ ಇವರು ವಿಂಗಡಿಸಲ್ಪಟ್ಟಿದ್ದಾರೆ.

ದುರ್ದೈವದಿಂದ ನಾಗಾ ಸಾಧುಗಳ ಇತಿಹಾಸದಲ್ಲಿ ಎಲ್ಲವೂ ಒಳ್ಳೆಯ ಘಟನೆಗಳೇ ತುಂಬಿಲ್ಲ. ಸಾಧುಗಳ ತಂಡಗಳೊಳಗೆ ಪರಸ್ಪರ ರಕ್ತರಂಜಿತ ಹೋರಾಟಗಳಾದದ್ದುಂಟು. ಅಕಬರನ ಕಾಲದಲ್ಲೇ ಗಿರಿ ಮತ್ತು ಪುರಿ ಸಾಧುಗಳೊಳಗೆ ಮನಸ್ತಾಪವಾಗಿ ನ್ಯಾಯ ನಿರ್ಣಯಕ್ಕಾಗಿ ಅವನ ಸಮ್ಮುಖದಲ್ಲೇ ಎರಡೂ ಪಂಥಗಳ ಪ್ರಮುಖರು ದ್ವಂದ್ವಯುದ್ಧ ಮಾಡಿದರಂತೆ.

ಶೈವ ವೈಷ್ಣವ ಕಲಹವೂ ರಕ್ತಪಾತಕ್ಕೆ ಕಾರಣವಾದುದುಂಟು. ದಿನಕ್ಕೊಬ್ಬ ವೈಷ್ಣವ ಬೈರಾಗಿಯನ್ನು ಕೊಲ್ಲದೆ ಅನ್ನ ಸೇವಿಸುವುದಿಲ್ಲೆಂದು ಪಣತೊಟ್ಟಿದ್ದ ಶೈವ ಸಾಧುವೊಬ್ಬನನ್ನೆದುರಿಸಲು ರಾಮದಾಸನೆಂಬ ಸಾಧು ಬಲಾನಂದನೆಂಬ ಸಾಧುವನ್ನು ಪ್ರಮುಖನಾಗಿ ಮಾಡಿಕೊಂಡು ಸೈನಿಕ ತರಹದ ಸಂಘಟನೆ ಮಾಡಿದನೆಂದು ಹೇಳಲಾಗುತ್ತದೆ. ೧೭೯೬ ರಲ್ಲಿ ಕುಂಭಮೇಳಾ ಪರ್ವ ಸ್ನಾನಕ್ಕಾಗಿ ಯಾರು ಮೊದಲು ನದಿಯಲ್ಲಿ ಇಳಿಯಬೇಕೆಂದು ಜಗಳವೆದ್ದು ಶೈವ ವೈಷ್ಣವ ಸಾಧುಗಳಲ್ಲಿ ಯುದ್ಧವೇ ಆಯಿತು. ೫,೦೦೦ ಶೈವ ಸಾಧುಗಳು ಅದರಲ್ಲಿ ಸತ್ತರು.

ನಾಗಾ ಸಾಧುಗಳು ಯಾವಾಗಲೂ ಹಿಂದುಗಳ ಪರವಾಗಿಯೆ ಹೋರಾಡಿದರೆನ್ನಲುಬಾರದು. ೧೭೬೧ ರಲ್ಲಿ ಎರಡನೇ ಬಾರಿ ಅಹಮದಶಾ ಅಬದಾಲಿ ಭಾರತದ ಮೇಲೇರಿ ಬಂದು ಮರಾಠರನ್ನು ನಿರ್ನಾಮ ಮಾಡಲೆಳಸಿದಾಗ ಅವನ ಸಹಾಯಕ್ಕೆ ಹೋದ ಅವಧ ನವಾಬನ ಸಂಗಡ ನಾಗಾ ಸಾಧು ಸೈನ್ಯವೂ ರಣಾಂಗಣಕ್ಕಿಳಿದು ಪಾಣಿಪತ್ ಕಾಳಗದಲ್ಲಿ ಮರಾಠರ ಅವಸಾನಕ್ಕೆ ತನ್ನ ಪಾಲಿನ ಪತ್ರಪುಷ್ಪವನ್ನರ್ಪಿಸಿತು. ಆ ಯುದ್ಧದಲ್ಲಿ ಮಡಿದ ಸದಾಶಿವರಾವ್, ವಿಶ್ವಾಸರಾವ್, ಸಂತೋಜಿ ವಾಘ ಮೊದಲಾದವರ ದಹನಕ್ರಿಯೆ ವಿಧಿವತ್ತಾಗಿ ಸಾಗುತ್ತಿದ್ದಾಗ ಮಾತ್ರ ನಾಗಾ ಸಾಧುಗಳು ರಕ್ಷಕರಾಗಿ ನಿಂತಿದ್ದರಂತೆ—ಈ ಪವಿತ್ರ ಕರ್ಮದಲ್ಲಿ ಅಫಗಾನರು ಆತಂಕ ಮಾಡಿಯಾರೆಂದು!

ರಾಜೇಂದ್ರಗಿರಿ ಮತ್ತು ಅವನ ಶಿಷ್ಯರಾದ ಅನೂಪಗಿರಿ ಮತ್ತು ಉಮರಾವ ಗಿರಿಗಳು ಮುಸ್ಲಿಂ ಸಾಮ್ರಾಜ್ಯ ನಾಮಶೇಷವಾದಮೇಲೆ ಶುದ್ಧ ಸಂಧಿ ಸಾಧಕರಾದರು. ಅವರು ಒಮ್ಮೆ ದಿಲ್ಲಿಯ ನಾಮಮಾತ್ರ ಸಮ್ರಾಟನ ಪರವಾಗಿ, ಒಮ್ಮೆ ನವಾಬನ ಪರವಾಗಿ, ಒಮ್ಮೆ ಅಫಗಾನರ ಪರವಾಗಿ, ಒಮ್ಮೆ ಮರಾಠರ, ಜಾಡರ, ಬ್ರಿಟಿಶರ ಪರವಾಗಿ ಮತ್ತು ಇನ್ನೊಮ್ಮೆ ವಿರುದ್ಧವಾಗಿ ಹೋರಾಡಿದರು. ಬ್ರಿಟಿಶರ ಉಚ್ಚ್ರಾಯ ಸಿದ್ಧವಾದಮೇಲೆ ಅನೂಪಗಿರಿ ಅವರ ಪಕ್ಷ ವಹಿಸಿದನು. ೧೮೦೪ ರಲ್ಲಿ ಕಾಲ್ಪಿಯ ಯುದ್ಧದ ನಂತರ ಅನೂಪಗಿರಿ ಇಡಿ ಬುಂದೇಲಖಂಡದ ಒಡೆಯನೇ ಆದ!

ನಾಗಾ ಸಾಧುಗಳ ಕಥೆ ಇದು. ಅವರಲ್ಲಿ ಕೆಲ ಪಂಗಡಗಳು ಮದ್ಯಮಾಂಸಗಳನ್ನೂ ನಿಷಿದ್ಧವೆಂದು ಬಗೆಯುವುದಿಲ್ಲ. ಭೈರವ ಅಖಾಡಾ, ನಿರಂಜನಿ ಮತ್ತು ಮಹಾ ನಿರ್ವಾಣಿ ಪಂಥದವರು ಮಾತ್ರ ಶುದ್ಧ ಶಾಕಾಹಾರಿಗಳು.

ನಾಗಾ ಸಾಧುಗಳಲ್ಲಿ ಅನೇಕ ತಾಮಸ ಗುಣಗಳು ಈಗ ಸೇರಿಕೊಂಡಿದ್ದರೂ ಕೆಲವರಾದರೂ ಕಠೋರ ತಪೋನಿಷ್ಠರಿದ್ದಾರೆ. ಪಂಚಾಗ್ನಿ ಸಾಧನೆಯನ್ನು ಮಾಡುವ ಸಾಧುಗಳು ಸಹನ ಶಕ್ತಿಯ ಚರಮಾವಸ್ಥೆಯನ್ನು ಪ್ರದರ್ಶಿಸುತ್ತಾರೆ. ನಾಲ್ಕು ಕುಂಡಗಳಲ್ಲಿ ಹೋಮಾಗ್ನಿಯನ್ನುರಿಸಿ ಅವುಗಳ ನಡುವೆ ಕುಳಿತು ಐದನೇ ಅಗ್ನಿಯಾದ ಸೂರ್ಯನನ್ನು ದಿಟ್ಟಿಸುತ್ತ ಕುಳಿತಿರುತ್ತಾರೆ ಅವರು.

ಬ್ರಿಟಿಶರ ಕಾಲದಲ್ಲಿ ಸಾವಕಾಶವಾಗಿ ನಾಗಾ ಸಾಧುಗಳ ಪ್ರತಾಪ ಮತ್ತು ಪ್ರಚುರತೆ ಇಳಿದು ಹೋಯಿತು. ಒಬ್ಬನೇ ಮುಂದಾಳು ೫೦,೦೦೦ ನಗ್ನಸಾಧುಗಳನ್ನು ಕಲೆಹಾಕಿ ಯುದ್ಧ ಶಾಂತಿಗಳ ಪ್ರವಾಹದ ದಿಕ್ಕುಗಳನ್ನು ಅಸ್ತವ್ಯಸ್ತಗೊಳಿ


ಟಾಟಾರವರ
ಓ ಡಿ
ಕೊಲೋನ್
ಸಾಬೂನು
Tata's
EAU DE
COLOGNE
Toilet Soap
ಓ ದಿ ಕೊಲೋನ್ ನಿಂದ ಕೂಡಿದ್ದು, ಬಂಗಾರ ಬಣ್ಣದ ಕಾಗದದಿಂದ (ಫೊಯಿಲ್) ಪ್ಯಾಕ್ ಮಾಡಲ್ಪಟ್ಟಿರುತ್ತದೆ.
TESY:19

ಸುತ್ತಿದ್ದ ದಿನಗಳು ಹೋಗಿಬಿಟ್ಟಿವೆ. ಂಭ ಮೇಳದಲ್ಲಿ ಇನ್ನೂ ನಾಗಾ ಸಾಧು ಳಿಗೆ ಪ್ರಾಧಾನ್ಯವಿರುವುದು ನಿಜ. ಆದರೆ ಅವ ಸಂಖ್ಯೆ ಇಳಿದು ಹೋಗಿದೆ. ೧೯೫೦ ರ ಸುಮಾರಿಗೆ ಭೈರವ ಅಖಾಡಾದಲ್ಲಿ ಕೇವಲ ೩೦೦ ಸಾಧುಗಳಿದ್ದಾರೆಂದು ಅಂದಾಜು ಮಾಡಲಾಗಿತ್ತು. ನಿರಂಜನಿ ಅಖಾಡಾದಲ್ಲಿ ೫೦೦, ಮಹಾನಿರ್ವಾಣಿ ಪಂಥದಲ್ಲಿ ೫೦೦ ಸದಸ್ಯರಿದ್ದಿರಬಹುದು.

ನಾಗಾ ಸಾಧುವಾಗುವುದು ಸುಲಭವೇನೂ ಅಲ್ಲ. ದೀಕ್ಷೆ ಹೊಂದಿದ ಮೇಲೆ ಹನ್ನೆರಡು ವರ್ಷ ಆತ ಸವಸ್ತ್ರ ಬೈರಾಗಿಯಾಗಿಯೆ ಇರುತ್ತಾನೆ. ಈ ಅವಧಿಯಲ್ಲಿ ಸೇವೆ, ಪೂಜೆಗೆ ಸಹಾಯ, ಅಡಿಗೆ–ಬಡಿಸುವಿಕೆ, ಆರಾಧನೆ ಇವುಗಳಲ್ಲಿ ನಾಲ್ನಾಲ್ಕು ವರ್ಷ ಕಳೆಯಬೇಕು. ಯಾತ್ರಿ, ಬಂಗೀದಾರ, ಹುಡಡಂಗಾ ಮತ್ತು ಮೂರ್ಧಿಯಾ ಎಂಬ ಈ ನಾಲ್ಕು ಅಂತಸ್ತುಗಳನ್ನು ದಾಟಿದ ಮೇಲೆಯೆ ಅವನು ನಗ್ನ ಸಾಧುವಾಗಲರ್ಹತೆ ಪಡೆಯುತ್ತಾನೆ. ಆ ಮೇಲೆ ಹನ್ನೆರಡು ವರ್ಷ ಕಳೆದು "ಅತೀತ" ಮತ್ತು ಮತ್ತೆ ಹನ್ನೆರಡು ವರ್ಷಗಳ ನಂತರ "ಮಹಾತೀತ" ಎಂಬ ಮಟ್ಟಗಳನ್ನು ಆತ ಮುಟ್ಟುತ್ತಾನೆ.

ಅಖಾಡಾಗಳಿಗೆ ಆಸ್ತಿಗಳಿವೆ. ಅವುಗಳ ಆಡಳಿತೆಯನ್ನು ಇವರ ಮಹಾಂತರು ಲೌಕಿಕರಷ್ಟೇ ದಕ್ಷತೆಯಿಂದ ನೋಡಿಕೊಳ್ಳುತ್ತಾರೆ. ಆದರೆ ನಾಗಾ ಸಾಧುಗಳಾಗಬಯಸುವವರೂ ಈಗ ಕಡಿಮೆ. ಸಾಧು ಸಂಘಗಳ ಹಳೆಯ ಪ್ರಮುಖರು ಹೊಸ ಪೀಳಿಗೆಯಲ್ಲಿ ನಗ್ನ ಸಾಧುಗಳಾಗುವ ಚೈತನ್ಯ, ನಿಗ್ರಹಗಳು ಕಡಿಮೆಯಾಗಿವೆಯೆಂದು ಹೇಳುತ್ತಾರೆ! *

'ಕಲ್ಯಾಣರಾಜ್ಯ'ದ ಕಲ್ಪನೆ

ಎ. ಡಿ. ಗೋರವಾಲಾ

ಅನೇಕ ಶತಮಾನಗಳ ಹಿಂದೆ ಥಾಮಸ್ ರೇನ್ಸ್‌ಬರೊ ಹೇಳಿದ "ತೀರ ಬಡವನಿಗೂ ತೀರ ದೊಡ್ಡವನಷ್ಟೇ ಬದುಕುವ ಅಧಿಕಾರವಿದೆ" ಎಂಬ ಮಾತೇ 'ಕಲ್ಯಾಣರಾಜ್ಯ'ದ ಬಗ್ಗೆ ನಾನು ಮಾಡಿಕೊಂಡಿರುವ ಕಲ್ಪನೆಯಲ್ಲಿ ಮುಖ್ಯ ಅಂಶವಾಗಿದೆ. ಕಲ್ಯಾಣರಾಜ್ಯ ಕಲ್ಪನೆಯ ಉಗಮ ಇತ್ತೀಚಿನವಾದರೂ ಕ್ವೀನ್ ಎಲಿಝಾಬೆಥಳ ಪ್ರಾರ್ಥನಾ ಪುಸ್ತಕದಲ್ಲಿ ನಾವದರ ಉಲ್ಲೇಖವನ್ನು ಕಾಣಬಹುದು. "ತಮ್ಮ ದೇಹಕ್ಕೆ ಅತ್ಯಗತ್ಯವಾದ ವಸ್ತುಗಳ ಅಭಾವದಲ್ಲಿ ಮುಳುಗಿದವರು ನಿನ್ನ ಚಿಂತನೆಯನ್ನು ಮಾಡಲಾರರು. ಅವರು ಅತಿಯಾಗಿ ಬಯಸುವ ವಸ್ತುಗಳು ಅವರಿಗೆ ದೊರಕದಂತಾದಾಗ ಅವರ ಹೃದಯ ದುಃಖದಿಂದ ತುಂಬಿಹೋಗುವದು' ಎಂದು ಅವಳು ಬರೆದಿದ್ದಾಳೆ.

ಅಂದರೆ ಧರ್ಮ ಮತ್ತು ನ್ಯಾಯ ಎರಡರ ದೃಷ್ಟಿಯಲ್ಲೂ ದೇಹಕ್ಕೆ ಅಗತ್ಯವಾದ ವಸ್ತುಗಳ ಅಭಾವವು ಅನಿಷ್ಟವಾದುದು ಎಂದಾಯಿತು. ನಮ್ಮ ದೇಶದ ಪರಿಸ್ಥಿತಿ ಏನು? ನಮ್ಮಲ್ಲಿ ಕಾಲು ಭಾಗದಷ್ಟು ಜನರು ಪ್ರತಿನಿತ್ಯ ದೇಹ ಪೋಷಣೆಗೆ ಅಗತ್ಯವಿರುವ ಕನಿಷ್ಠ ಪ್ರಮಾಣವಾದ ೧೪ ಔಂಸು ಧಾನ್ಯ ಮತ್ತು ೩ ಔಂಸು ಬೇಳೆ ಕೂಡ ಕೊಂಡುಕೊಳ್ಳಲಾರದಷ್ಟು ಬಡವರಾಗಿದ್ದಾರೆ. ಉಳಿದ ಮುಕ್ಕಾಲು ಭಾಗದ ಜನರಲ್ಲಿ ಹೆಚ್ಚಿನವರು ಈ ಕನಿಷ್ಠ ಮಿತಿಯಷ್ಟು ಅಥವಾ ಅದಕ್ಕೂ ತುಸು ಹೆಚ್ಚಿಗೆ ಸಂಪಾದಿಸ ಬಲ್ಲವರು. ನೂರಕ್ಕೆ ೧೦-೧೫ ರಷ್ಟು ಜನ ಈ ಮಿತಿಯ ಗಡಿಯನ್ನು ದಾಟಿ ಸುಸ್ಥಿತಿಯಲ್ಲಿರುತ್ತಾರೆ; ೨-೩ ರಷ್ಟು ಜನ ಮಾತ್ರ ಜೀವನದಲ್ಲಿ ಜಗತ್ತು ನೀಡಬಹುದಾದ ಸುಖ–ಸೌಕರ್ಯಗಳನ್ನು ಭೋಗಿಸಬಲ್ಲವರಾಗಿದ್ದಾರೆ.

ದೇಶದ ಸ್ಥಿತಿ ಹೀಗಿರುವಾಗ ನಾವು ಎಷ್ಟೇ ನಾಗಾಲೋಟದಿಂದ ಓಡಿದರೂ ಮುಂದುವರಿದ ದೇಶಗಳೊಂದಿಗೆ ಹೋಲಿಸಿಕೊಂಡಾಗ ನಾವಿನ್ನೂ ಹಿಂದೇ ಉಳಿಯುತ್ತೇವೆ. ಇದರಲ್ಲಿ ಆಶ್ಚರ್ಯಪಡತಕ್ಕದ್ದೇನೂ ಇಲ್ಲ. ೨೦೦ ವರ್ಷಗಳಿಂದ ಆರ್ಥಿಕ ಅಭಿವೃದ್ಧಿಯ ಮಾರ್ಗದಲ್ಲಿ ಕ್ರಮಿಸಿರುವ, ವಿಜ್ಞಾನ ಶಾಸ್ತ್ರದಲ್ಲಿ ಮುಂದುವರಿದಿರುವ ರಾಷ್ಟ್ರಗಳು ನಮಗಿಂತ ಮುಂದಿರುವದು ಸಹಜವೂ ಖಂಡಿತವೂ ಹೌದು. ನಾವು ಈ ಸತ್ಯವನ್ನು ಗುರುತಿಸಬೇಕು.

ನಾವು ಜನಸಾಮಾನ್ಯರ ಬಗ್ಗಾಗಿ ಒಂದು ನಿರ್ದಿಷ್ಟ ಜೀವನ ಮಟ್ಟವನ್ನು ಮಾತ್ರ ಸಾಧಿಸಿದರೆ ಅದಕ್ಕಿಂತಲೂ ಹೆಚ್ಚಿಗೆ ಪಡೆದಿರುವವರ ವಿಷಯದಲ್ಲಿ ಅಸೂಯೆ ಹುಟ್ಟುವದು ಅನಿವಾರ್ಯ. ಹಿಂದುಳಿದ ದೇಶವೊಂದು ಪ್ರಗತಿಹೊಂದಲು ಯತ್ನಿಸುತ್ತಿರುವಾಗ ವಿಶೇಷತಃ ಪ್ರಜಾಪ್ರಭುತ್ವ ಮಾರ್ಗದಿಂದ ಸುಸಂಗತಿಯೇ ಮೊದಲನೆಯ ಅಗ-

ತ್ಯವಾಗಿರುತ್ತದೆ. ಅಸೂಯೆ ಸುಸಂಗತಿಯನ್ನು ಹದಗೆಡಿಸುತ್ತದೆ. ಆದ್ದರಿಂದ ಮೊದಲು ನಾವು ಅಸೂಯೆಯನ್ನು ನಿರ್ನಾಮ ಮಾಡಬೇಕು.

ಅಸೂಯೆ ಹುಟ್ಟದಂತೆ ಮಾಡುವದು ಹೇಗೆ? ನನ್ನ ಕಲ್ಪನೆಯ ಕಲ್ಯಾಣರಾಜ್ಯದಲ್ಲಿ ಏನೇನು ಬೇಡ ಎನ್ನುವದನ್ನು ಹೇಳುತ್ತೇನೆ. ಅಲ್ಲಿ ಕರ ತಪ್ಪಿಸುವವರನ್ನೆಲ್ಲ ಕಠೋರ– ಅತಿ ಕಠೋರ ರೀತಿಯಲ್ಲಿ ದಂಡಿಸಲಾಗುವದು. ನ್ಯಾಯವಾದ ವಿಚಾರಣೆ ನಡೆಸಿದ ನಂತರ ಅವರು ಸೆರೆಮನೆಗೆ ಕಳಿಸಲ್ಪಡುವರು. ಆದರೆ ಆ ವಿಚಾರಣೆ ಮೂರು ಮೂರೂವರೆ ವರ್ಷಗಳ ನಡೆಯುವಂಥದಲ್ಲ. ಆರೋಪಿಗಳು ಶ್ರೀಮಂತರಿರುವದರಿಂದ ಅನೇಕಾನೇಕ ಪ್ರಸಿದ್ಧ ವಕೀಲರನ್ನು ನೇಮಿಸಿಕೊಂಡು ಈ ರೀತಿ ಖಟ್ಲೆಯ ವಿಚಾರಣೆಯ ಅವಧಿ ಹನುಮಂತನ ಬಾಲದಂತೆ ಮಾಡಲು ಈಗಿರುವ ಅವಕಾಶ ಕಲ್ಯಾಣ ರಾಜ್ಯದಲ್ಲಿ ಇರದು.

ದೊಡ್ಡ ಉದ್ದಿಮೆಗಳು ಮತ್ತು ಬಂಡವಳ ಖಾಸಗಿ ಸೊತ್ತಾಗಲು ಅವಕಾಶವಿರದು. ಇವೆರಡರಿಂದ ಬರುವ ಲಾಭ ರಾಜ್ಯದ ಬೊಕ್ಕಸಕ್ಕೇ ಬರಬೇಕು. ಕಲ್ಯಾಣರಾಜ್ಯಕ್ಕೆ ಬೇಕಾಗುವ ಬಂಡವಳಕ್ಕೆ ಇವೇ ಮುಖ್ಯ ಸಾಧನಗಳು. ಮತ್ತೆ ಈ ಬಂಡವಳಶಾಹಿಯ ಈ ಆಯಕಟ್ಟಿನ ಅಂಶಗಳು ಕೆಲವೇ ಜನರ ಕೈಯಲ್ಲಿರುವ ವರೆಗೆ ಸಂವಿಧಾನದ ತತ್ತ್ವಗಳು ಅಪೇಕ್ಷಿಸುವ ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ಪ್ರತಿಬಂಧಿಸುವದು ಕಷ್ಟಸಾಧ್ಯವಾಗುವದು.

ನಮ್ಮ ಕಲ್ಯಾಣ ರಾಜ್ಯದ ಇನ್ನೊಂದು ಮಹತ್ವದ ಅಂಶವೆಂದರೆ ಜನಸಂಖ್ಯೆಯನ್ನು ಹಿಡಿತದಲ್ಲಿಟ್ಟುಕೊಳ್ಳುವದು. ನನ್ನ ಕಲ್ಪನೆಯ ಕಲ್ಯಾಣ ರಾಜ್ಯದಲ್ಲಿ ಮೂರಕ್ಕಿಂತ ಹೆಚ್ಚು ಮಕ್ಕಳುಳ್ಳ ಕುಟುಂಬವೇ ಇರದು. ಇದನ್ನು ಕಾಯದೆಯಿಂದೇನೂ ಸಾಧಿಸಲು ಬಾರದು. ಪ್ರಜಾಪ್ರಭುತ್ವದಲ್ಲಿ ಸರಕಾರ ಮುನ್ನಡೆಸುತ್ತದೆ, ಜನ ಸಹಕರಿಸುತ್ತಾರೆ ಎಂದು ಹೇಳಲಾಗುತ್ತದೆ. ಸಂತತಿ ನಿಯಂತ್ರಣವನ್ನು ದೇಶಾದ್ಯಂತ ಪ್ರಚಾರ ಮಾಡಿ ಸಂಘಟಿಸಿದರೆ, ಅದಕ್ಕಾಗಿ ಪ್ರತಿ ವರ್ಷ ೨೦-೩೦ ಕೋಟಿ ರೂಪಾಯಿಗಳಂತೆ ೫ ರಿಂದ ೭ ವರ್ಷಗಳ ವರೆಗೆ ವೆಚ್ಚ ಮಾಡಿದರೆ ನಮ್ಮ ದೇಶದ ಜನಸಂಖ್ಯೆಯನ್ನು ೪೫ ಅಥವಾ ೫೦ ಕೋಟಿಗಳಿಗೆ ಪರಿಮಿತಗೊಳಿಸಿಕೊಳ್ಳಬಹುದು.

ಕಲ್ಯಾಣರಾಜ್ಯದಲ್ಲಿ ಪಶುಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳಬೇಕಾಗುವದು. ಜಗತ್ತಿನಲ್ಲಿಯೆ ನಮ್ಮ ದೇಶದ ಪಶುಸಂಪತ್ತು ಸಂಖ್ಯೆಯಲ್ಲಿ ಮಿಗಿಲಾದದ್ದು. ಆದರೆ ಹೈನದ ದೃಷ್ಟಿಯಿಂದ ತೀರ ಕೆಳಗಿನ ನಂಬರು ನಮ್ಮದು. ನಮ್ಮ ಪಶುಗಳಲ್ಲಿ ನೂರಕ್ಕೆ ೬೦ ರಷ್ಟು ಕೇವಲ ನಿಷ್ಪ್ರಯೋಜಕವಾದವ್ಗಾಗಿದೆ. ಇನ್ನೊಂದು ೧೦ ರಷ್ಟು ಪ್ರಯೋಜಕ ಎಂದರೆ ಪ್ರಯೋಜಕ, ಅಪ್ರಯೋಜಕ ಎಂದರೆ ಅಪ್ರಯೋಜಕ ಎನ್ನುವ ಸ್ಥಿತಿಯಲ್ಲಿದೆ. ಪೂರ್ಣ ನಿರುಪಯುಕ್ತವಾದ ಈ ೭೦ ರಷ್ಟನ್ನು ಕಡಿಮೆಮಾಡಿಕೊಂಡರೆ ಅವುಗಳಿಗಾಗಿ ವ್ಯಯವಾಗುವ ಆಹಾರಾದಿಗಳನ್ನು ಉಳಿದವಕ್ಕೆ ಕೊಟ್ಟು ಅವನ್ನೂ ಅವುಗಳ ತಳಿಯನ್ನೂ ಸುಧಾರಿಸಿಕೊಳ್ಳಬಹುದು.

ಈ ಕಲ್ಯಾಣರಾಜ್ಯದ ಆಡಳಿತವು ಚಿಕ್ಕ ಹಿಡುವಳಿ ವ್ಯವಸಾಯಕ್ಕೆ ಪರಮಾವಧಿ ಲಕ್ಷ್ಯ ಪೂರೈಸುವದು. ಚಿಕ್ಕ ಹಿಡುವಳಿ ಎಂಬ ಮಾತಿಗೆ ಮಹತ್ವವಿದೆ. ಏಕೆಂದರೆ ಇತ್ತೀಚೆಗೆ ಕಡ್ಡಾಯವಾಗಿ ಸಹಕಾರೀ ಬೇಸಾಯ ಮಾಡುವ ವಿಚಾರ ಕೇಳಿಸುತ್ತಿದೆ. ಅದನ್ನು ಸ್ವಪ್ರೇರಣೆಯ ಕಾರ್ಯ ಎಂದು ಕರೆದರೂ ಅದು ಕಡ್ಡಾಯದ ಸ್ವಪ್ರೇರಣೆಯೇ ಆಗುವದು. ಅದು ನಮ್ಮ ದೇಶದ ರೈತರಿಗೆ ಆಕರ್ಷಕವಾಗದು. ಸಹಕಾರೀ ವ್ಯವಸಾಯ ತಕ್ಕಮಟ್ಟಿಗಾದರೂ ಯಶಸ್ವಿಯಾಗಲು ಬೇಕಾಗುವ ಕಠೋರ ಶಿಸ್ತು ಅವರಿಗೆ ಮತ್ತು ಜನರಿಗೆ ಒಗ್ಗಲಿಕ್ಕಿಲ್ಲ. ಅದರ ಬದಲು ಯೋಗ್ಯ ಪ್ರೋತ್ಸಾಹ ಮತ್ತು ಅನುಕೂಲತೆಗಳು ಒದಗಿದಲ್ಲಿ ಚಿಕ್ಕ ಹಿಡುವಳಿದಾರನು ಉತ್ಪಾದನೆಯ ಪ್ರಮಾಣವನ್ನು ಬಹಳ ಮಟ್ಟಿಗೆ ಹೆಚ್ಚಿಸಬಲ್ಲನು.

ಧನಬಲವು ಅನಾಹುತವನ್ನು ಮಾಡಬಲ್ಲ

ಇನ್ನೊಂದು ರಂಗವಿದೆ. ಅದು ಆಹಾರ ಧಾನ್ಯ ವನ್ನುಕೊಂಡು ಸಂಗ್ರಹಿಸಿ ಬೆಲೆ ಏರುವವರಿಗೆ ಕಾಯ್ದು ಆ ಬಳಿಕ ಅದನ್ನು ಮಾರಬಲ್ಲದು. ಇಂಥ ಸಂಗ್ರಹಕಾರರನ್ನು ದೂಷಿಸಿ ಪ್ರಯೋಜನವಿಲ್ಲ. ಕಾಯಿದೆ ಅವರಿಗೆ ಅದಕ್ಕೆ ಅಪ್ಪಣೆ ಯೀಯುತ್ತದೆ. ನನ್ನ ಕಲ್ಪನೆಯ ಕಲ್ಯಾಣ ರಾಜ್ಯದಲ್ಲಿ ಧಾನ್ಯಗಳ ಮುಕ್ತಪೇಟೆ ಇರುವದಿಲ್ಲ. ನಿಯಂತ್ರಣ ಪೂರೈಕೆಗಳ ಮೂಲಕ ಸರಕಾರವು ಯೋಗ್ಯ ಬೆಲೆಗೆ ಎಲ್ಲರಿಗೂ ಆಹಾರ ಧಾನ್ಯ ಸಿಗುವಂತೆ ನೋಡಿಕೊಳ್ಳುವದು.

ಇನ್ನು ಸರಕಾರದ ಕಾರ್ಯದ ವಿಚಾರವಾಗಿ ಹೇಳುವದಾದರೆ ಇಂದು ಕಂಡುಬರುವ ಕೃತಕ ಮುಖವಾಡ ಮತ್ತು ವೈಭವ ಪ್ರದರ್ಶನಗಳು ಇರಲಾರವು. ಕಾರ್ಯಪೂರ್ತಿಯಾಗದಿದ್ದರೂ ಪೂರ್ತಿಯಾಗಿದೆಂದು ಪ್ರಚಾರ ಮಾಡುವದೇ ಕೃತಕ ಮುಖವಾಡ. ಕೆಲಸ ಎರಡು ತಾಸಿನಲ್ಲಿ ಮುಗಿದಿದ್ದರೂ ಆರು ಗಂಟೆಗಳ ಕಾಲ ಆಫೀಸಿನಲ್ಲಿ ಕುಳಿತು ಮೈಮುರಿ ದುಡಿದ ನಟನೆ ಮಾಡುವ ಹಾಗೆ ಈ ಬಗೆಯ ಪ್ರಚಾರವಿರುತ್ತದೆ.



ಮೇಲಿನವ- (ಕೆಳಗಿನವನಿಗೆ) ರ್ರೀ.... ಸ್ವಲ್ಪ ಏಳ್ರಿ. ನಾ ಮೊದ್ಲು ಹಾರಿ ಸತ್ತುಬಿಡ್ತೀನಿ.

— ಕೆ. ರಾಮುಸ್ವಾಮಿ

ಇಂದು ದೇಶಾದ್ಯಂತ ಭವ್ಯ ಕಟ್ಟಡಗಳು ತಲೆಯೆತ್ತುತ್ತಿವೆ. ಇವು ಅಗತ್ಯವೆ? ಅಪಾರ ಹಣವನ್ನು ಅವುಗಳಲ್ಲಿ ತೊಡಗಿಸುವುದು ಅಷ್ಟೊಂದು ಅನಿವಾರ್ಯವೇ? ಇದಕ್ಕೆ ಕಾರಣವಿಷ್ಟೆ. ದೇಶದ ಬಹುಭಾಗ ಜನತೆ ಹಳ್ಳಿಗಳಲ್ಲಿರುತ್ತಿದ್ದರೂ ಅಧಿಕಾರದಲ್ಲಿರುವ ಜನರೆಲ್ಲ ಪಟ್ಟಣದ ನಾಗರಿಕತೆಯಲ್ಲೇ ಬೆಳೆದವರಾಗಿದ್ದಾರೆ. ಅವರ ವಿಚಾರ ಯೋಜನೆಗಳೆಲ್ಲವೂ ಪಟ್ಟಣದ ಮಾನದಲ್ಲೇ ಬರುವವು. ಆದುದರಿಂದ ವೈಭವ ಪ್ರದರ್ಶನದ ಮೋಹಕ್ಕೆ ಬಲಿಬಿದ್ದು ಅವರು ಮೂಲ ವಿಷಯವನ್ನೇ ಮರೆಯುತ್ತಾರೆ. ಅವರು ಪರದೇಶದವರ ಮೇಲೆ ಎಷ್ಟೇ ಪ್ರಭಾವ ಬೀರಿದರೂ ಭಾರತೀಯ ಕಲ್ಯಾಣರಾಜ್ಯವನ್ನು ಸಾಧಿಸುವದಿಲ್ಲ.

ನನ್ನ ಕಲ್ಪನೆಯ ಕಲ್ಯಾಣರಾಜ್ಯದಲ್ಲಿ ಗ್ರಾಮಾಂತರ ಅಭ್ಯುದಯಕ್ಕಾಗಿಯೆ ರಾಷ್ಟ್ರದ ಸಾಧನ ಸಂಪತ್ತೆಲ್ಲ ವಿನಿಯೋಗಿಸಲ್ಪಡುವದು. ಬಹಳ ಹೊಗಳಿಕೊಳ್ಳಲ್ಪಡುತ್ತಿರುವ ಸಮಾಜ ವಿಕಾಸಯೋಜನೆಗಳು ಆರ್ಥಿಕ ಸ್ಥಿತಿಯನ್ನು ಕೆಲಮಟ್ಟಿಗೆ ಸುಧಾರಿಸಬಹುದಾದರೂ ಅವು ಮನುಷ್ಯನ ಪುನರುತ್ಥಾನಕ್ಕೆ ಸಹಾಯಕವಾಗಲಾರವು. ನಾವಾದರೋ ಹಳ್ಳಿಗರಿಗೆ ಶುದ್ಧ ನೀರನ್ನು ಒದಗಿಸುವೆವು. ಆರೋಗ್ಯವಿಚಾರವನ್ನು ಹೇಳಿಕೊಡುವೆವು, ಅವರಿಗೆ ಒಕ್ಕಲತನದಲ್ಲಿ ಸುಧಾರಣೆ ಮಾಡಲು ಕಲಿಸಿಕೊಡುವೆವು. ಗೃಹಕೈಗಾರಿಕೆಗಳಿಂದ ಪ್ರಾಪ್ತಿ ಪಡೆಯಲು ಕಲಿಸುವೆವು.

ನನ್ನ ಕಲ್ಪನೆಯ ಕಲ್ಯಾಣರಾಜ್ಯವು ಮನುಷ್ಯರನ್ನೂ ವಸ್ತುಗಳನ್ನೂ ಯೋಗ್ಯತಾನುಸಾರ ಗಣಿಸುವುದು. ಅಸಮಾನತೆಯನ್ನು ಹೋಗಲಾಡಿಸಿ ಆರ್ಥಿಕ ಮತ್ತು ರಾಜಕೀಯ ನ್ಯಾಯಗಳನ್ನೊದಗಿಸಿ ಯೋಗ್ಯ ಕರಭಾರವನ್ನು ಹೇರುವದು.

ಜನರಿಗೆ ಆಹಾರ, ಬಟ್ಟೆ, ಶಿಕ್ಷಣ, ವಸತಿ ಮುಂತಾದವುಗಳ ಒಂದು ಸಾಮಾನ್ಯವಾದ ಒಳ್ಳೆಯ ಜೀವನಮಟ್ಟ ಲಭಿಸಿದಾಗ, ಯಾರಿಗೂ ತಿಂಗಳಿಗೆ ಸುಮಾರು ೨೦೦೦ ಕ್ಕಿಂತ ಹೆಚ್ಚು ಉತ್ಪನ್ನವೂ ೧೦೦ ಕ್ಕಿಂತ ಕಡಿಮೆ ಉತ್ಪನ್ನವೂ ಇರದು ಎಂದಾದಾಗ ಇದೆಲ್ಲದರ ಉದ್ದೇಶವೇನು ಎಂಬ ಪ್ರಶ್ನೆ ಬರಬಹುದು. ಅದಕ್ಕೆ ನನ್ನ ಉತ್ತರ "ಮನುಷ್ಯ ಜೀವನಕ್ಕೆ ಒಂದು ಮರ್ಯಾದೆಯ ಸ್ಥಾನ ಕೊಡುವುದು" ಅಂದರೆ ಪ್ರತಿಯೊಬ್ಬನನ್ನೂ ಆತ್ಮ ಗೌರವವಿರುವ ಸದ್ಗೃಹಸ್ಥನನ್ನಾಗಿ ಮಾಡುವದು ಎಂದು. ನಮ್ಮ ಜನರ ಪರಿಚಯವಿರುವವರಿಗೆ, ಅವರ ಜೀವನಾವಶ್ಯಕ ವಸ್ತುಗಳು ದೊರೆಯುವಂತೆ ಮಾಡಿದರೆ ಈ ಬಗೆಯ ಕಲ್ಯಾಣರಾಜ್ಯ ಸಾಧನೆಯೇನೂ ಕಷ್ಟದ್ದಲ್ಲ ಎಂದು ಸಹಜವಾಗಿ ಕಾಣಬರುವಂತಿದೆ. ✶

ಮೂಸೆಯ ತಲ್ಲೀನತೆ

ಸುಪ್ರಸಿದ್ಧ ನಟ ರೇಮಂಡ್‌ಮೂಸೆ, ಬ್ರಾಡ್‌ವೇಯಲ್ಲಿ ಕೆಲವು ವರ್ಷಗಳ ಹಿಂದೆ ಲಿಂಕನ್ನನ ಪಾತ್ರವಹಿಸುತ್ತಿದ್ದಾಗ ತನ್ನನ್ನೇ ಲಿಂಕನ್ ಎಂದು ಭಾವಿಸಿ ಕೊಳ್ಳುವಷ್ಟು ಆ ಪಾತ್ರದಲ್ಲಿ ಲೀನನಾಗಿ ಬಿಡುತ್ತಿದ್ದ. ಒಮ್ಮೆ ಆತ ರಂಗಮಂದಿರ ದಿಂದ ನಿರ್ಗಮಿಸುತ್ತಿದ್ದಾಗ ಆತನ ಸಹಿಗಾಗಿ ಕಾಯುತ್ತಿದ್ದವರ ಸಮೂಹದಲ್ಲಿ ಸಿಕ್ಕಿ ಬಿದ್ದ. ಸಮೂಹದಲ್ಲಿದ್ದವನೊಬ್ಬ ಆತನನ್ನು ಮೋಸಗೊಳಿಸುವ ಸಲುವಾಗಿ ಖಾಲಿ ಚೆಕ್ಕೊಂದನ್ನು ಆತನ ಹಸ್ತದಲ್ಲಿಟ್ಟ. ಮೂಸೆಯು ಅದರತ್ತ ಗಮನ ವೀಯದೇ ಸಹಿ ಹಾಕಿದ. ನಟನ ಮಿತ್ರನೊಬ್ಬ ಈ ಘಟನೆಯನ್ನು ನೋಡುತ್ತಿದ್ದ. ತಕ್ಷಣ ಆತ ಜನ ಸಮೂಹದಲ್ಲಿ ನುಗ್ಗಿ ಆ ಮೋಸಗಾರನನ್ನು ಹಿಡಿದು ಚೆಕ್ಕನ್ನು ಕಸಿದುಕೊಂಡ. ಅದನ್ನು ಹರಿದುಹಾಕುವುದರಲ್ಲಿದ್ದ ಆತ. ಅಕಸ್ಮಾತ್ ಸಹಿಯತ್ತ ನೋಡಿ ಆಶ್ಚರ್ಯಚಕಿತನಾದ.

ಅಲ್ಲಿ 'ಅಬ್ರಹಾಂ ಲಿಂಕನ್' ಎಂದು ಸಹಿಮಾಡಲ್ಪಟ್ಟಿದ್ದಿತು !

—ಎಂ. ಬಿ. ಆರ್. ಪ್ರಸಾದ

ಈ ರೋಗ ವಾಸಿಯಾದ ಮೇಲೂ ಕಾಳಜಿ ತಪ್ಪುವುದಿಲ್ಲ.

ವಿಷಮಜ್ವರ - ಒಂದು ಕಠಿಣ ಬೇನೆ

ಮನುಷ್ಯನಾಗಿ ಹುಟ್ಟಿಬಂದ ಮೇಲೆ ರೋಗಾದಿಗಳಾಗುವುದು ತಪ್ಪಿದ್ದಲ್ಲ. ಆರೋಗ್ಯ ವಿಚಾರದಲ್ಲಿ ಹೆಚ್ಚು ದಕ್ಷತೆಯಿಂದ ಇರುವವರಿಗೆ ಈ ಭಯ-ಉಪದ್ರವ ಕಡಿಮೆ ಇದ್ದರೂ ಅಂಥವರು ಕೂಡ ಸಾಂಕ್ರಾಮಿಕ ರೋಗಗಳ ಪಿಡುಗು ಹಬ್ಬಿದಾಗ ಅದಕ್ಕೆ ಬಲಿಯಾಗುತ್ತಾರೆ. ಸಾಂಕ್ರಾಮಿಕ ರೋಗಗಳು ಅಚಾನಕವಾಗಿ ತ್ವರಿತಗತಿಯಿಂದ ಆಕ್ರಮಿಸುವಂತೆ ಅವುಗಳತೀವ್ರತೆಯೂ ಪೆಟ್ಟೂ ಬಲವಾಗಿರುತ್ತದೆ.

ಅನೇಕ ಸಾಂಕ್ರಾಮಿಕ ರೋಗಗಳಲ್ಲಿ ವಿಷಮಜ್ವರವೂ ಒಂದು. ಮನೆಯಲ್ಲಿ ಯಾರಿಗಾದರೂ ಜ್ವರಬಂದು ೨–೩ ದಿನಗಳ ವರೆಗೂ ಇಳಿಯದೆ ಹೋಯಿತಾದರೆ ಇದು "ವಿಷಮಜ್ವರ" ವೇನೊ ಎಂಬ ಸಂಶಯ ಬಂದು ಮನಸ್ಸು ಗಾಬರಿಗೊಳ್ಳುತ್ತದೆ. ವಿಷಮ ಜ್ವರ ಬಂತೆಂದರೆ ಸಾಮಾನ್ಯವಾಗಿ ಮೂರು ವಾರ, ಅದೂ ಮಿಕ್ಕಿದರೆ ಆರು ವಾರಗಳ ನಂತರವೇ ಇಳಿಯುತ್ತದೆ. ಒಂದು ನಿರ್ದಿಷ್ಟ ಅವಧಿಯ ನಂತರ ಜ್ವರ ಬಿಡುವುದರಿಂದ ಇದಕ್ಕೆ ಮುದ್ದತ್ತಿನ ಜ್ವರ ಎಂದು ಹೆಸರು ಬಿದ್ದಿದೆ. ಜ್ವರವಿರುವಷ್ಟು ಕಾಲವೂ ರೋಗಿಯ ಉಪಚಾರವನ್ನು ಎಷ್ಟು ದಕ್ಷತೆಯಿಂದ ಮಾಡಿದರೂ ಕಡಿಮೆಯೆನಿಸುತ್ತದೆ. ಅದಂತೂ ಸರಿ. ಅದಕ್ಕಿಂತಲೂ ಮಹತ್ವದ ಮಾತೆಂದರೆ ವಿಷಮಜ್ವರ ಬಿಟ್ಟ ನಂತರವೂ ತಿಂಗಳೆರಡು ತಿಂಗಳವರೆಗೆ ರೋಗಿಯ ಬಗ್ಗೆ ತುಂಬ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈ ಅವಧಿಯಲ್ಲಿ ಒಂದು ಸಾಸಿವೆ ಕಾಳಿನಷ್ಟು ಅಪಥ್ಯವಾದರೂ ಸಾಕು, ಜ್ವರ ಮರುಕಳಿಸುತ್ತದೆ. ಮತ್ತು ಈ ಮರುಕಳಿಸಿದ ಬೇನೆ ಮೊದಲಿನಿಗಿಂತಲೂ ಹೆಚ್ಚು ಗಂಡಾಂತರಕಾರಿಯೆನಿಸುತ್ತದೆ.

ವಿಷಮಜ್ವರ ಸಾಂಕ್ರಾಮಿಕವಾಗಿರುವುದರಿಂದ ಅದು ಹೆಚ್ಚು ಭೀಕರವೆನಿಸಿದೆ. "ಬ್ಯಾಕ್ಟೇರಿಯಂ ಟಾಯಫೋಜಂ" ಎಂಬ ಜಂತುವಿನಿಂದ ವಿಷಮಜ್ವರ ಬರುತ್ತದೆ. ಈ ಜಂತುಗಳು ಕುಡಿಯುವ ನೀರು, ಹಾಲು, ಮೊಸರು, ಬೆಣ್ಣೆ, ಐಸ್‌ಕ್ರೀಂ, ಮೀನು ಮುಂತಾದ ಪದಾರ್ಥಗಳ ಮೂಲಕ ನಿರೋಗಿಯಾಗಿರುವವರ ಹೊಟ್ಟೆಯನ್ನು ಪ್ರವೇಶಿಸುತ್ತವೆ. ಹೊಲಸಾಗಿರುವ ಕಾಯಿಪಲ್ಲೆ, ಏನೂ ಮುಚ್ಚದೆ ಇಟ್ಟಿರುವ ಮಿಠಾಯಿ, ಹಣ್ಣು ಹಂಪಲಗಳ ಮೇಲೆ ಹಾರಾಡುವ ಅಸಂಖ್ಯ ನೊಣಗಳ ಕಾಲುಗಳಿಗೆ ಈ ಜಂತುಗಳು ಅಂಟಿಕೊಂಡಿರುವದರಿಂದ ಸಹಜವಾಗಿ ಆ ನೊಣಗಳು ವಿಷಮಜ್ವರ ಹಬ್ಬಿಸಲು ಕಾರಣವಾಗುವವು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಳೆಗಾಲದಲ್ಲಿ ವಿಷಮಜರ್ವದ ಪಿಡುಗು ಇದ್ದೇ ಇರುತ್ತದೆ. ಆಗ ನೊಣಗಳ ಉತ್ಪತ್ತಿ ಹೆಚ್ಚಾಗುವುದೇ ಅದಕ್ಕೆ ಕಾರಣ. ಗಲೀಜಾಗಿರುವ ಫಲಹಾರ ಮಂದಿರದಲ್ಲಿ ತಿಂಡಿ ತಯಾರಿಸುವವರು ವಿಷಮಜ್ವರದಿಂದ ಅದೇ ಗುಣಹೊಂದಿ ಕೆಲಸ ಮಾಡುತ್ತಿದ್ದರೆ ಅಂಥವರ ಮೂಲಕವೂ ಈ ರೋಗ ಹಬ್ಬುವುದು. ಮನುಷ್ಯರು ಕೂಡ ವಿಷಮಜ್ವರ ವಾಹಕರಾಗಿರುತ್ತಾರೆ ಎಂಬ ಮಾತು ಟೈಫಾಯಿಡ್ ಮೇರಿ

ಎಂದು ಹೆಸರಾದ ಒಬ್ಬಳ ಮೂಲಕ ನೂರಕ್ಕೆ ನೂರು ಅಂಶ ಸಿದ್ಧವಾಗಿದೆ. (೧೯೫೮ ಮೇ ತಿಂಗಳ 'ಕಸ್ತೂರಿ' ನೋಡಿರಿ.)

ತೀರ ಇತ್ತೀಚಿನ ವರೆಗೆ ವಿಷಮಜ್ವರ ಮನೆಯಲ್ಲಿ ಕಾಲಿಟ್ಟಿತೆಂದರೆ ಯಮನ ದೂತ ಕಾಲಿಟ್ಟಂತೆಯೆ ಎಂದು ಜನ ಕಂಗಾಲಾಗುತ್ತಿದ್ದರು. ಆದರೆ ಈಗ ಹಾಗಿಲ್ಲ. ವಿಷಮಜ್ವರದ ಮೇಲೆ ಅತ್ಯಂತ ಪ್ರಭಾವಿಯಾದ ಕ್ಲೋರೋಮೈಸಿಟಿನ್‌ನಂಥ ಔಷಧಿಗಳು ಶೋಧವಾಗಿದ್ದು ಅವುಗಳ ಸಹಾಯದಿಂದ ವಿಷಮಜರ್‍ವವನ್ನು ಶೀಘ್ರದಲ್ಲಿ ಅಂಕೆಗೆ ತಂದುಕೊಳ್ಳಬಹುದಾಗಿದೆ.

ವಿಷಮಜ್ವರದ ಜಂತು ಹೊಟ್ಟೆಯನ್ನು ಪ್ರವೇಶಿಸಿದ ಮೇಲೆ ಅದರ ಪರಿಣಾಮ ತಿಳಿದುಬರಲು ಎರಡು ಮೂರು ವಾರಗಳು ಬೇಕಾಗುತ್ತವೆ. ಕರುಳಿನ ಒಳಗಿರುವ ಗುಂಡು ಸೂಜಿಯ ತಲೆಯ ಆಕಾರದ ಸಣ್ಣ ಸಣ್ಣ ಉಬ್ಬು (Lymphoid Tissue) ಗಳಲ್ಲಿ ಈ ಜಂತುಗಳು ಠಾಣ್ಯ ಹೂಡುತ್ತವೆ. ಅಲ್ಲಿ ಅವು ಬೆಳೆದು ಕರುಳನ್ನು ಕೊರೆಯ ತೊಡಗುವವು. ಬೇಗನೆ ಅವು ಕರುಳಿನ ಹೊರಗಿನ ಥರದವರೆಗೆ ಬಂದು ತಲುಪುವವು. ಕರುಳಿನಲ್ಲಿ ಅನೇಕ ಕಡೆ ಏಕಕಾಲಕ್ಕೆ ಈ ಕ್ರಿಯೆ ನಡೆವಿರುವದರಿಂದ ಕರುಳು ಒಂದು ಝರಡಿಯಂತಾಗಿ ಬಿಡುತ್ತದೆ.

ಕರುಳಿನ ತೀರ ಹೊರಗಿನ ಥರವನ್ನು ಈ ಜಂತುಗಳು ಕೊರೆದರೆ ಕರುಳಿಗೆ ತೂತು ಬಿದ್ದು ಜಂತುಗಳು ಮತ್ತು ಕರುಳಿನೊಳಗಿರುವ ಹೊಲಸು ಸುತ್ತಲೆಲ್ಲ ಹಬ್ಬಿ ರೋಗ "ಪೆರಿಟೋನೈಟಿಸ್" ಎಂಬ ಗಂಭೀರ ಸ್ವರೂಪ ತಾಳಿ ರೋಗಿಯ ಪ್ರಾಣ ಗಂಡಾಂತರಕ್ಕೆ ಸಿಲುಕುತ್ತದೆ. ಈ ಅವಸ್ಥೆ ಸಾಮಾನ್ಯವಾಗಿ ಜ್ವರ ಬಂದು ಮೂರನೆಯ ವಾರದಲ್ಲಿ ಕಂಡು ಬರುವದರಿಂದ ಆ ಕಾಲವು ಪ್ರತ್ಯಕ್ಷ ಮೃತ್ಯುವಿನಕಾಲವೆಂದೇ ಭಾಸವಾಗುತ್ತದೆ.

ವಿಷಮಜ್ವರದ ಆರಂಭ ಕಲ್ಪನೆಗೇ ಬರುವುದಿಲ್ಲ. ಮೊದಮೊದಲು ಒಂದಿಷ್ಟು ಆಲಸ್ಯವೆನಿಸಿದಂತಾಗುತ್ತದೆ. ಉತ್ಸಾಹವಿರುವುದಿಲ್ಲ ತಲೆ ನೋಯಿಸುತ್ತದೆ. ಹಸಿವೆಯಾಗುವದಿಲ್ಲ. ಮಲವಿಸರ್ಜನೆ ಸರಿಯಾಗುವುದಿಲ್ಲ ಆ ಮೇಲೆ ತುಸು ತುಸುವಾಗಿ ಜ್ವರಬರತೊಡಗುತ್ತದೆ ವಿಷಮಜ್ವರ ಬಂದಾಗ ವಿಪರೀತ ತಲೆ ನೋವಿರುವುದು ಒಂದು ಮುಖ್ಯ ಲಕ್ಷಣ. ಇನ್‌ಫ್ಲುಯೆಂಝಾದಂಥ ಇತರ ಜ್ವರಗಳಲ್ಲೂ ತಲೆನೋವು ಇರುವುದಾದರೂ ಅದು ೨-೩ ದಿನಗಳಲ್ಲಿ ಕಡಿಮೆಯಾಗುವುದು. ವಿಷಮಜ್ವರದಲ್ಲಿ ಹಾಗಿಲ್ಲ. ಜ್ವರವೂ ಜೊತೆಗೆ ತಲೆನೋವೂ ಮುಂದುವರಿಯುವುದು.

ಜ್ವರದ ಮೊದಲನೆಯ ವಾರದಲ್ಲಿ ಮುಖ ಒಂದಿಷ್ಟು ಕೆಂಪಾಗಿ ಕಾಣಿಸುತ್ತದೆ. ನಾಲಿಗೆಯ ಮಧ್ಯಭಾಗ ಬೆಳ್ಳಗಾಗಿಯೂ ಅಂಚು ಕೆಂಪಾಗಿಯೂ ಇರುತ್ತದೆ. ಹೊಟ್ಟೆಯಲ್ಲಿ ತುಸು ನೋವೆನಿಸುತ್ತದೆ. ಜ್ವರ ಹೆಜ್ಜೆಹೆಜ್ಜೆಯಾಗಿ ಏರುತ್ತ ಹೋಗುತ್ತದೆ. ಸಂಜೆ ಹೊತ್ತಿನಲ್ಲಿ ಜ್ವರ ಅತ್ಯಧಿಕವಾಗಿರುತ್ತದೆ. ದಿನದ ಇಪ್ಪತ್ತು ನಾಲ್ಕು ತಾಸುಗಳಲ್ಲಿ ಅರ್ಧ ಅಥವಾ ಒಂದು ಡಿಗ್ರಿಗಿಂತ ಹೆಚ್ಚು ಇಳಿಯುವದೇ ಇಲ್ಲ. ಮೊದಲನೆಯ ವಾರದ ಕೊನೆಗೆ ಜ್ವರ ೧೦೩° ಗಳವರೆಗೂ ಹೋಗುತ್ತದೆ. ಇದೇ ಸಮಯದಲ್ಲಿ ಹೊಟ್ಟೆಯ ಮೇಲೆ ಕೆಂಪು ಕಲೆಗಳು ಕಾಣಿಸುತ್ತವೆ. ಅನಿಯಮಿತವಾಗಿ ತೆಳ್ಳಗೆ ಭೇದಿಯಾಗುತ್ತದೆ.

ಎರಡನೆಯ ವಾರದಲ್ಲಿ ರೋಗಿ ಬಲು ಅಶಕ್ತನಾಗುತ್ತಾನೆ. ನಾಲಿಗೆಯ ತುದಿ ಸ್ವಚ್ಛವಾಗಿದ್ದು ಅಂಚು ಕೆಂಪಾಗಿಯೂ ಮಧ್ಯಭಾಗ ಬಿಳಿವಾಗಿಯೂ ಇರುತ್ತದೆ. ನಾಲಿಗೆಯ ಈ ರೂಪ ವಿಷಮಜ್ವರದ ಖಂಡಿತ ಲಕ್ಷಣವಾಗಿದೆ. ರೋಗಿಗೆ ನಿದ್ರೆ ಬರುವುದಿಲ್ಲ. ಆತನ ಮಾತುಗಳು ಅಸಂಬದ್ಧವಾಗುತ್ತದೆ. ವಿಚಿತ್ರ ಸದ್ದು ಕೇಳಿದಂತೆ, ಕಣ್ಮರೆಯಲ್ಲಿರುವವರನ್ನು ಕಂಡಂತೆ ಭಾಸವಾಗುವದು. ಈ ಅವಸ್ಥೆಗೆ ಉನ್ಮಾದ (Delirium ಅಥವಾ Typhoid State) ಎನ್ನುತ್ತಾರೆ. ಜ್ವರ ಯಾವಾಗಲೂ ೧೦೩-೧೦೪° ಗಳಷ್ಟಿದ್ದು ಬೆಳಗಿನ ಹೊತ್ತಿನಲ್ಲಿ ಮಾತ್ರ ಒಂದು

ಒಂದೂವರೆ, ಡಿಗ್ರಿಗಳಷ್ಟು ಇಳಿದಿರುತ್ತದೆ.

ಮೂರನೆಯ ವಾರದಲ್ಲಿ ರೋಗಿ ತೀರ ಅಶಕ್ತನಾಗುತ್ತಾನೆ. ಸದಾ ಗ್ಲಾನಿಯಿರುತ್ತದೆ. ಜ್ವರ ೧೦೪° ಗಳಿಗಿಂತಲೂ ಮೇಲೇರುತ್ತದೆ. ರೋಗಿಗೆ ಪ್ರಜ್ಞೆಯೆ ಇರುವುದಿಲ್ಲವೆನ್ನಬಹುದು ಜುಲಾಬು ಆಗತೊಡಗುತ್ತದೆ. ಕರುಳಿನ ಗಾಯದಿಂದ ಬಂದ ರಕ್ತ ಮತ್ತು ಸಣ್ಣ ಚೂರುಗಳು ಮಲದಲ್ಲಿ ಬೀಳುತ್ತದೆ. ಕರುಳನ್ನು ವಿಷಮಜ್ವರದ ಜಂತುಗಳು ಕೊರೆಯುವುದರಿಂದ ರಕ್ತಸ್ರಾವವಾಗ ತೊಡಗಿ ಅದು ಮಲದ ಜೊತೆ ಹೊರಗೆ ಬರುವುದು. ಮಲದ ಜೊತೆ ಹೊರಬೀಳುವ ರಕ್ತಕೆಂಪಾಗಿಯೂ ಕೆಲವು ಸಲ ಕಪ್ಪಾಗಿಯೂ ಇರುವುದು. ವಿಷಮಜ್ವರದಲ್ಲಿ ಇದು ಭಯಾನಕ ಲಕ್ಷಣವಾಗಿರುವುದರಿಂದ ಮಲದಲ್ಲಿ ರಕ್ತ ಕಾಣಿಸಿದ ತಕ್ಷಣ ಡಾಕ್ಟರರಿಗೆ ಆ ಮಾತನ್ನು ತಿಳಿಸುವುದು ಅತ್ಯಂತ ಅವಶ್ಯವಾಗಿದೆ.

ದೇಹದ ಪ್ರತೀಕಾರ ಶಕ್ತಿ ವಿಜಯಿಯಾಯಿತೆಂದರೆ ನಾಲ್ಕನೆಯ ವಾರ ಉದಯಿಸುತ್ತವೆ. ಆಗ ತಕ್ಕಡಿ ಬದಲಾಗುತ್ತದೆ. ಜಂತುಗಳು ಹಿಮ್ಮೆಟ್ಟತೊಡಗಿ ಶರೀರ ಮೊದಲಿನ ಸ್ಥಿತಿಗೆ ಬರತೊಡುತ್ತದೆ. ಜ್ವರ ಹೆಜ್ಜೆಹೆಜ್ಜೆಯಾಗಿ ಇಳಿದು ರೋಗಿ ಶುದ್ಧಿಯ ಮೇಲೆ ಬರುತ್ತಾನೆ. ಚೇತರಿಸಿಕೊಳ್ಳುತ್ತಾನೆ.


ಆದರೆ ರೋಗಿ ಗುಣಮುಖವಾಗುತ್ತಿರುವ ಈ ಕಾಲ ಬಲು ಗಂಡಾಂತರದ್ದು. ಬಲು ಮೋಸದ್ದು. ಅಸಾವಧರಾಗಿರುವ ವಿಜಯೀ ಸೈನಿಕರ ಮೇಲೆ ಸೋತವರು ಅಕಸ್ಮಾತ್ತಾಗಿ ದಾಳಿ ಮಾಡಿ ಅವರನ್ನು ನಿರ್ಮೂಲ ಮಾಡುವಂತೆ ಕಿಂಚಿತ್ತಾದರೂ ಅಪಥ್ಯವಾದಲ್ಲಿ ರೋಗ ಜಂತುಗಳು ಮತ್ತೆ ಆಕ್ರಮಣ ಮಾಡುವವು. ಮತ್ತೆ ಜ್ವರ ಬರತೊಡಗುವುದು. ಮೊದಲೇ ಸೋತು ಸುಣ್ಣವಾಗಿರುವ ದೇಹದಲ್ಲಿ ಪ್ರತೀಕಾರ ಶಕ್ತಿ ಶೂನ್ಯ ಮಟ್ಟದಲ್ಲಿರುವುದರಿಂದ ಈ ಎರಡನೆಯ ಆಕ್ರಮಣವನ್ನು ಅದು ತಡೆದುಕೊಳ್ಳುವುದು ಬಲುಕಠಿಣವೇ ಆಗುವುದು. ಆದ್ದರಿಂದ ವಿಷಮಜ್ವರ ಬಿಟ್ಟ ಮೇಲೆ ಒಂದೆರಡು ತಿಂಗಳ ವರೆಗೆ ರೋಗಿಯ ಬಗ್ಗೆ ತುಂಬ ಕಾಳಜಿ ವಹಿಸಬೇಕಾಗುವುದು.

ವಿಷಮಜ್ವರವಿರುವಾಗಲೇ ಎಷ್ಟೋ ಸಲ ನ್ಯುಮೋನಿಯ, ಮೆನಿಂಜಾಯಿಟಿಸ್, ಕಿವಿ ಸೋರುವುದು, ನೆಫ್ರಾಯಟಿಸ್, ಮಿದುಳಿನ ರಕ್ತವಾಹಿನಿಗಳಲ್ಲಿ ರಕ್ತ ಹೆಪ್ಪುಗಟ್ಟುವುದೇ ಮುಂತಾದ ವಿಕಾರಗಳು ಉಂಟಾಗಿ ರೋಗಿಗೆ ಇನ್ನಿಷ್ಟು ಅಪಾಯವುಂಟಾಗುವ ಸಂಭವವಿರುವುದರಿಂದ ರೋಗಿಯ ಬಗ್ಗೆ ಎಷ್ಟು ಕಾಳಜಿ ವಹಿಸಿದರೂ ಸಾಲದು ಎನಿಸುತ್ತದೆ.

ವಿಷಮಜ್ವರಕ್ಕೆ ಪ್ರತಿಬಂಧಕೋಪಾಯಗಳು ಇವೆ. ಜಂತುಗಳ ಮೂಲಕ ಈ ರೋಗ ಹಬ್ಬುವದರಿಂದ ಪೇಟೆಯ ಮಿಠಾಯಿ ತಿನ್ನದಿರುವುದು, ನೊಣಗಳು ಆಹಾರ ಪದಾರ್ಥಗಳ ಮೇಲೆ ಕೂಡ್ರದಂತೆ ನೋಡಿಕೊಳ್ಳುವದು, ಹಾಲು ನೀರುಗಳನ್ನು ಕುದಿಸಿ ಕುಡಿಯುವುದು ಇವೆಲ್ಲ ಮುಂಜಾಗ್ರತೆ ವಹಿಸಿದರೆ ವಿಷಮಜ್ವರದ ಗಂಡಾಂತರ ಅರ್ಧದಷ್ಟು ಕಡಿಮೆಯಾದಂತಾಗುವದು. ಇಲ್ಲಿ ಒಂದು ಅತ್ಯಂತ ಮಹತ್ವದ ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಐಸ್ ಮತ್ತು ಐಸ್‌ಕ್ರೀಂನಿಂದಲೂ ಈ ಜಂತುಗಳು ಮನುಷ್ಯ ದೇಹದಲ್ಲಿ ಪ್ರವೇಶಿಸುತ್ತವೆ ಎಂದು ಹಿಂದೆಯೆ ಹೇಳಿದೆ. ಉಳಿದ ರೋಗಾಣುಗಳಲ್ಲಿ ಇರದ ಒಂದು ಪ್ರಬಲ ಶಕ್ತಿ ವಿಷಮಜಂತುಗಳಲ್ಲಿರುತ್ತದೆ. ಉಳಿದ ಎಷ್ಟೋ ರೋಗಾಣುಗಳು ಐಸ್‌ನಲ್ಲಿ (ಬರ್ಫದಲ್ಲಿ) ಸತ್ತುಹೋಗುವವಾದರೆ ವಿಷಮಜ್ವರದ ಜಂತು ಅದರಲ್ಲಿಯೂ ಬದುಕುಳಿಯುತ್ತದೆ. ಆದ್ದರಿಂದ ವಿಷಮಜ್ವರದ ಹಿಡುಗಿನ ಕಾಲದಲ್ಲಿ ಐಸ್‌ಕ್ರೀಂ ಮುಂತಾದವನ್ನು ವಿಶೇಷತಃ ಬೀದಿಯಲ್ಲಿ ಮಾರಾಟ ಮಾಡುವ ಐಸ್‌ಕ್ರೀಂ ಕಡ್ಡಿಗಳನ್ನು ಸರ್ವಥಾ ತಿನ್ನಲಾಗದು.


ಮತ್ತು ವಿಷಮಜ್ವರದ ಪ್ರತಿಬಂಧಕ ಮದ್ದನ್ನು ಚುಚ್ಚಿಸಿಕೊಳ್ಳುವುದು ಎರಡನೆಯ ಮತ್ತು ಹೆಚ್ಚು ನಂಬಿಗೆಯ ಉಪಾಯ. ಈ






ನೊಡೆಲ್ ೧೩೭೪: ೬ವಾಲ್ವ, ಅಲ್ ವೇವ್ವ ೪ ಬ್ಯಾಂಡ ಪಿಯಾನೋ ಕೀ ಸ್ವಿಚ್ ಏಸಿ ಅಥವಾ ಎಸಿ/ಡಿಸಿ (ಎರಡು ಮಾಡಲ್)

ನೀವು ಯಾರೇ ಇದ್ದರೂ....




ನೀವು ಮರ್ಫಿ ರೇಡಿಯೋದಿಂದ



ಮಾಡೆಲ್ ೧೩೨೨: ೩ ವಾಲ್ ಅಲ್ ವೇವ್ ೩ ಬ್ಯಾಂಡ ಏಸಿ ಇಲ್ಲವೆ ಏಸಿ/ಡಿಸಿ (೨ ಮಾಡಲ್)

ಉಲ್ಲಸಿತರಾಗುವಿರಿ


ಮೊಡೆಲ್ ೨೬೬
೭ ವಾಲ್ವ, ಆಲ್ ವೇವ, ೫ ಬ್ಯಾಂಡ
ಪಿಯಾನೋ ಕೀಸ್ವಿಚ್ ಏಸಿ.
ಮೊಡಲ್ ೦೭೨೪
೬ ವಾಲ್ವ
ಆಲ್ ವೇವ್
೮ ಬ್ಯಾಂಡ, ಪೂರ್ಣ
ಬ್ಯಾಂಡ ಸ್ಪ್ರೆಡ್
ಏಸಿ ಇಲ್ಲವೆ ಎಸಿ
ಡಿಸಿ (ಮಾಡಲ್
ಮಾಡೆಲ್ ೦೭೩೭
(ಡ್ರಾಯ ಬ್ಯಾಟರಿ)
೭ ವಾಲ್ವ್
ಮೊಡೆಲ್ ೦೩೫೨ :
೫ ವಾಲ್ವ ಆಲ್ ವೇವ ೩ ಬ್ಯಾಂಡ
ಇಲ್ಲವೆ ಏಸಿ/ಡಿಸಿ (ಎರಡು ಮಾಡಲ್)
ಮೊಡೆಲ್ ೦೭೨೬
೭ ವಾಲ್ವ್, ಆಲ
ವೇವ ೮ ಬ್ಯಾಂಡ
ಪೂರ್ಣ ಬ್ಯಾಂಡ
ಸ್ಪ್ರೆಡ್ ಎಸಿ ಇಲ್ಲವೆ
ಏಸಿ ಡಿಸಿ (ಎರಡು
ಮೊಡೆಲ್ಲು)
ಮೊಡೆಲ್ ೦೪೯೮
ವಾಲ್ವ, ಆಲ್ ವೇವ ೩ ಬ್ಯಾಂಡ
ಏಸಿ/ಡಿಸಿ ಹಾಗೂ ಮೊಡೆಲ್ ೦೪೯೯
(ಡ್ರಾಯ ಬ್ಯಾಟರಿ) ೪ ವಾಲ್ವ
ಮೊಡೆಲ್ ೧೭೫-
೫ ವಾಲ್ವ, ಆಲ
ವೇವ ೩ ಬ್ಯಾಂಡ
ಎಸಿ ಇಲ್ಲವೆ
ಎಸಿ/ಡಿಸಿ
(ಎರಡು ಮಾಡಲ್)
ಹಾಗೂ
ಮೊಡೆಲ್ ೦೭೫೧
(ಡ್ರಾಯ ಭ್ಯಾಟರಿ)
ವಾಲ್ವ್
murphy radio
delights
the home!

ಮದ್ದು ಈಗ ಬೇಕಾದಲ್ಲಿ ಸಿಗುತ್ತದೆ. ಒಂದು ವಾರದ ಅಂತರದಲ್ಲಿ ಎರಡು ಇಂಜೆಕ್ಶನ್ ಮಾಡಿಸಿಕೊಂಡರೆ ವಿಷಮಜ್ವರದಲ್ಲಿ ಜಂತುಗಳನ್ನು ಪ್ರತಿಭಟಿಸುವ ಶಕ್ತಿ ದೇಹಕ್ಕೆ ನಿಶ್ಚಿತವಾಗಿ ಬರುತ್ತದೆ. ದ್ವಿತೀಯ ಮಹಾಯುದ್ಧ ಕಾಲದಲ್ಲಿ ಸೈನಿಕರ ಮೇಲೆ ಮಾಡಿದ ಪ್ರಯೋಗಗಳಿಂದ ಈ ಮಾತು ಖಚಿತವಾಗಿದೆ. ವಿಷಮಜ್ವರ ಬಂದಿರುವವನ ಪ್ರತ್ಯಕ್ಷ ಸಂಪರ್ಕವಾಗದಂತೆ ನೋಡಿಕೊಳ್ಳುವದು ಮತ್ತು ಅವನಿಗಾಗಿ ಉಪಯೋಗಿಸುವ ಪಾತ್ರೆ ಮುಂತಾದವುಗಳನ್ನು ಪ್ರತ್ಯೇಕವಾಗಿಡುವುದು ರೋಗಪ್ರತಿಬಂಧಕಕ್ಕೆ ಸಹಾಯಕವಾಗುತ್ತವೆ.

ಇಷ್ಟು ಮಾಡಿದರೂ ರೋಗಬರುವ ಸಂಭವವಿದ್ದೇ ಇರುವುದು. ವಿಷಮಜ್ವರ ಬಂತು ಎಂದರೆ ತಕ್ಷಣ ಡಾಕ್ಟರರಿಂದ ಉಪಚಾರ ಶುರುಮಾಡಿಸಬೇಕು. ಅವರು ಹೇಳಿದಂತೆ ರೋಗಿಯ ಶುಶ್ರೂಷೆ ನಡೆಸಬೇಕು. ಔಷಧಿಯನ್ನು ಸರಿಯಾಗಿ ಕೊಡುವುದಕ್ಕೆ ತುಂಬ ಮಹತ್ವವಿದೆ. ಕ್ಲೊರೊಮೈಸಿಟಿನ್ ಗುಳಿಗೆಯನ್ನು ಪ್ರತಿ ನಾಲ್ಕು ತಾಸಿಗೊಂದರಂತೆ ಅಥವಾ ಡಾಕ್ಟರರ ಸಲಹೆಯಂತೆ ನಿರ್ದಿಷ್ಟ ವೇಳೆಗಳಲ್ಲಿ ದಿನದ ೨೪ ತಾಸೂ ಕೊಡಬೇಕಾಗುತ್ತದೆ. ಕೊಡುವ ವೇಳೆ ತುಸು ಹೆಚ್ಚುಕಡಿಮೆಯಾದಲ್ಲಿ ಔಷಧದ ಪರಿಣಾಮ ಆಗಬೇಕಾದ ರೀತಿಯಲ್ಲಿ ಆಗುವುದಿಲ್ಲ.

ಔಷಧದಷ್ಟೇ ಆಹಾರದ ಮಾತೂ ಮುಖ್ಯವಾಗಿದೆ. ಇದು ಕರುಳಿನ ರೋಗವಾಗಿರುವದರಿಂದ ಪಚನಕ್ಕೆ ಜಡವಾದ ವಸ್ತುವನ್ನೆಂದೂ ಕೊಡಬಾರದು. ಪಚನಕ್ಕೆಸುಲಭವಾದ ಆದರೆ ದೇಹಕ್ಕೆ ಅಗತ್ಯವಾದ ಘಟಕಗಳನ್ನುಳ್ಳ : ಹಾಲು, ಬೆಣ್ಣೆ ತೆಗೆದ ತಾಜಾ ಮಜ್ಜಿಗೆ (ಮಜ್ಜಿಗೆ ಉಪಯೋಗಿಸುವಾಗ ಮನೆಯಲ್ಲಿ ಹೆಪ್ಪುಹಾಕಿದ ಮೊಸರನು ಕಡೆದು ತೆಗೆದ ಮಜ್ಜಿಗೆಯನ್ನು ಉಪಯೋಗಿಸಬೇಕು. ಪೇಟೆಯಲ್ಲಿ ಮಾರಲು ದೊರೆಯುವ ಮೊಸರು ಅಶುದ್ಧವಾಗಿರುವ ಸಂಭವವೇ ಹೆಚ್ಚು. ಮೊಸರನ್ನು ಅಥವಾ ಮಜ್ಜಿಗೆಯನ್ನು ಕುದಿಸಿ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಅದು ಶುದ್ಧವಾಗಿರುವಂತೆ ದಕ್ಷತೆ ವಹಿಸುವುದು ಮಹತ್ವದ ಅಂಶವಾಗಿದೆ.) ತೀರ ತೆಳ್ಳನ್ನ ಗಂಜಿ, ಗ್ಲುಕೋಜ್-ಡೆಕ್ಸ್ಟ್ರೋಜ್ ಮಿಶ್ರಿತ ನೀರು ಇವು ಒಳ್ಳೆಯ ಆಹಾರ. ಸಿಹಿ ಮೋಸಂಬಿಯ ರಸ, ಸಿಹಿದ್ರಾಕ್ಷೆ ಮತ್ತು ದಾಳಿಂಬವನ್ನು ಅವಶ್ಯ ಕೊಡಬೇಕು.

ಕ್ಲೊರೊಮೈಸಿಟಿನ್, ಕಾರಟಿಕೊಸ್ಟರಾಯಿಡಿಸ್ ಮೊದಲಾದ ದಿವ್ಯ ಔಷಧಿಗಳು ಲಭ್ಯವಿರುವ ಈ ಕಾಲದಲ್ಲಿ ವಿಷಮಜ್ವರಕ್ಕೆ ಮೊದಲಿನಂತೆ ಹೆದರಿ ಕಂಗಾಲಾಗಬೇಕಿಲ್ಲವಾದರೂ ಇದು ಒಂದು ಭೀಕರ ಜಡ್ಡು ಎಂಬುದನ್ನು ಮರೆಯಬಾರದು. ದುರ್ದೈವದಿಂದ ವಿಷಮಜ್ವರವಾದಲ್ಲಿ ಅತ್ಯಂತ ದಕ್ಷತೆಯಿಂದ ಔಷಧೋಪಚಾರ ನಡೆಸುವುದು ಅಗತ್ಯದ್ದಾಗಿದೆ. ಜ್ವರ ಬಂದು ೨-೩ ದಿನಗಳಾದರೂ ಇಳಿಯದಿದ್ದರೆ ತಕ್ಷಣ ಡಾಕ್ಟರರಿಗೆ ತೋರಿಸಬೇಕು. ದಿನಗಳೆದಷ್ಟೂ ವಿಷಮಜ್ವರ ಕೈಮೀರುವ ಸಂಭವವಿರುವುದರಿಂದ ಎಷ್ಟು ಬೇಗ ಚಿಕಿತ್ಸೆಗೆ ಆರಂಭಿಸುಸುವೆವೊ ಅಷ್ಟು ಒಳ್ಳೆಯದು. ★

ಸಾವಿತ್ರಿ— ಛೆ! ಛೆ! ಜನ ನಿನ್ನ ಗಂಡನ ಬಗ್ಗೆ ಎಂಥೆಂಥ ಮಾತುಗಳನ್ನಾಡುತ್ತಾರೆ, ಬಲ್ಲೆಯಾ?

ಸರಸ್ವತಿ— ಹೇಳು ಹೇಳು. ಏನನ್ನಾಡುತ್ತಾರೆ? ನನಗೆ ಒಂದು ಜರಿ ಸೀರೆ ಕೊಳ್ಳಬೇಕಾಗಿದೆ.

ಪುಸ್ತಕ ವಿಭಾಗ

ನೀಲಕಂಠ ವಿಜಯ

ಭಾರತೀಯ ಪರ್ವತಾರೋಹಿಗಳು
ಅಜೇಯ ಶಿಖರವೊಂದನ್ನು ಗೆದ್ದ
ರೋಮಾಂಚಕ ಆಖ್ಯಾಯಿಕೆ



ಕ್ಯಾಪ್ಟನ್ ಕೆ. ಕುಮಾರ

ನೀಲಕಂಠ ವಿಜಯ

"ಟೈಮ್ಸ್ ಆಫ್ ಇಂಡಿಯಾ" ದಿಂದ

ಬದರೀನಾಥದ ಪಶ್ಚಿಮಕ್ಕೆ ಐದು ಮೈಲು ದೂರದಲ್ಲಿ ಭಯಾವಹವಾದ ಆದರೆ ಅಷ್ಟೇ ಸುಂದರವಾದ ಬರ್ಫಾಚ್ಛಾದಿತ ನೀಲಕಂಠ ಶಿಖರ ಸರ್ರನೆ ಮೇಲಕ್ಕೆದ್ದು ನಿಂತಿದೆ. ಈ ಶಿಖರದ ಎತ್ತರ ೨೧,೬೪೦ ಅಡಿಗಳು. ಮಧ್ಯ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಇದು ಏರಲು ಅತ್ಯಂತ ದುಸ್ಸಾಧ್ಯವಾದುದೆಂದು ಹೇಳುತ್ತಾರೆ.

ನೀಲಕಂಠವನ್ನು "ಗಢವಾಲದ ರಾಣಿ" ಎಂದು ಸುಪ್ರಸಿದ್ಧ ಬ್ರಿಟಿಶ್ ಪರ್ವತಾರೋಹಿ ಫ್ರಾಂಕ್ ಸ್ಮಿತ್ ಕರೆದ್ದಾರೆ. ಏರಲು ಎಷ್ಟು ಕಷ್ಟಸಾಧ್ಯವೋ ಅಷ್ಟೇ ಅದು ಸುಂದರವೂ ಆಗಿದೆ ಎಂದು ಅವರು ಅದರ ವರ್ಣನೆ ಮಾಡಿದ್ದಾರೆ.

ಇಲ್ಲಿಯ ಸ್ಥಳಿಕರು ಈ ಹಿಮಶಿಖರಕ್ಕೂ ಒಂದು ಪೌರಾಣಿಕ ಕಥೆಗೂ ಸಂಬಂಧವನ್ನು ಹೇಳುತ್ತಾರೆ: ಸಮುದ್ರ ಮಂಥನದಿಂದ ಲಭ್ಯವಾದ ಹದಿನಾಲ್ಕು ರತ್ನಗಳಲ್ಲಿ ಅತಿ ಘಾತಕವಾದ ಹಾಲಾಹಲ ವಿಷವೂ ಒಂದಾಗಿತ್ತು. ರತ್ನಗಳನ್ನು ದೇವತೆಗಳು ಮತ್ತು ರಾಕ್ಷಸರಲ್ಲಿ ಹಂಚಬೇಕಾಗಿತ್ತು. ಆದರೆ ವಿಷವನ್ನು ಸ್ವೀಕರಿಸಲು ಒಬ್ಬರೂ ಒಪ್ಪದ್ದರಿಂದ ಈಶ್ವರನು ಅದನ್ನು ಕುಡಿದುಬಿಟ್ಟನು. ವಿಷ ಅವನ ಗಂಟಲಿಂದಿಳಿದು ಹೊಟ್ಟೆಗೆ ಹೋಗುವ ಮೊದಲೇ ವಿಷ್ಣು ಅದನ್ನು ತಡೆದದ್ದರಿಂದ ಶಿವನ ಕಂಠ ನೀಲಿಬಣ್ಣ ತಾಳಿತು. ಆದ್ದರಿಂದಲೇ ಶಿವನ ಪ್ರತೀಕವಾಗಿರುವ ಈ ಪರ್ವತಕ್ಕೆ 'ನೀಲಕಂಠ' ಎಂಬ ಹೆಸರು ಬಂತು.



ಕ್ಯಾಪ್ಟನ್ ಕುಮಾರ:
ತಂಡದ ಮುಂದಾಳು

ಇಪ್ಪತ್ತನೆಯ ಶತಮಾನದ ಆರಂಭದಿಂದಲೂ ಗಢವಾಲ ಹಿಮಾಲಯ ಶ್ರೇಣಿಯ ಸೌಂದರ್ಯ ಪರ್ವತಾರೋಹಿಗಳನ್ನು ಆಕರ್ಷಿಸಿದೆ. ಈ ಪ್ರದೇಶಕ್ಕೆ ೧೯೧೩ ರಲ್ಲಿ ಬಂದಿದ್ದ ಬ್ರಿಟಿಶ್ ಪರ್ವತಾರೋಹಿ ಮೀಡ್ ನೀಲಕಂಠವನ್ನೇರಲು ಪ್ರಯತ್ನಿಸಿದನೇ ಎಂಬ ಬಗ್ಗೆ ದಾಖಲೆಗಳಿಲ್ಲ. ೧೯೩೭ ರಲ್ಲಿ ದಕ್ಷಿಣ ಪರ್ವತ ಪಂಕ್ತಿಯ ಮಾರ್ಗವಾಗಿ ಮೊದಲು ಮತ್ತು ಆಮೇಲೆ ಪೂರ್ವ ಪರ್ವತ ಪಂಕ್ತಿಯ ಮಾರ್ಗವಾಗಿ ನೀಲಕಂ ಶಿಖರವನ್ನೇರಲು ಪ್ರಯತ್ನಿಸಿದ ಸ್ಮಿತ್‌ರವ ಬ್ರಿಟಿಶ್ ಪರ್ವತಾರೋಹಿ ತಂಡ ಅಯಶ ಯಾಯಿತು. ಹತ್ತು ವರ್ಷಗಳ ನಂತರ ಪಿ. ಜ ವಿಲಿಯವರ ನೇತೃತ್ವ ಲ್ಲಿ ಇನ್ನೊಂದು ಬ್ರಿಟಿಶ ಪರ್ವತಾರೋಹಿ ತಂ ವೂ ಪ್ರಯತ್ನಿಸಿ ಅಯಶ ಸ್ವಿಯಾಯಿತು. ನೀ ಕಂಠವನ್ನು ಪಶ್ಚಿ ಮತ್ತು ಆಗ್ನೇಯ ದಿಕ ಗಳಿಂದ ಏರಲು ಯ ಸಿದ ಈ ತಂಡ ೧೯,೦೦ ಅಡಿಗಳಿಗಿಂತ ಹೆ ಎತ್ತರಕ್ಕೆ ಹೋಗ ಅಸಮರ್ಥವಾಯಿತು.

ಅದೇ ವರ್ಷ ಅಂದ ೧೯೪೭ ರಲ್ಲಿ ಶರದ್

ವಿನಲ್ಲಿ ಸ್ವಿಸ್ ಅಲ್ಪಾಯಿನ್ ಕ್ಲಬ್ಬಿನವರು ಕಳಿಸಿದ ತಂಡ ವಿಫಲವಾಯಿತು. ೧೯೫೧ ರಲ್ಲಿ ಸರ್ ಎಡ್ಮಂಡ್ ಹಿಲೇರಿಯವರೂ ಇದ್ದ ನ್ಯೂಝೀಲಂಡ್ ತಂಡವೊಂದು ನೀಲಕಂಠ ಶಿಖರವನ್ನೇರಲು ಯತ್ನಿಸಿ ಪಶ್ಚಿಮ ದಿಕ್ಕಿನಲ್ಲಿ ೧೮,೦೦೦ ಅಡಿ ಎತ್ತರದ ವರೆಗೆ ಮಾತ್ರ ಏರಲು ಸಮರ್ಥವಾಯಿತು. ಈ ತಂಡ ಕೆಲ ಸಮಯದ ನಂತರ ಮತ್ತೊಮ್ಮೆ ಉತ್ತರ ದಿಕ್ಕಿನಿಂದ ಏರಲು ಯತ್ನಿಸಿದಾಗ ೧೭,೦೦೦ ಅಡಿ ಎತ್ತರದಿಂದಲೇ ಹಿಂತಿರುಗಬೇಕಾಯಿತು.


೧೯೫೨ ರಲ್ಲಿ ಇನ್ನೊಂದು ಬ್ರಿಟಿಶ್ ತಂಡ ಅಯಶಸ್ವಿಯಾದ ಬಳಿಕ ೧೯೫೯ ರಲ್ಲಿ ಭಾರತದ ವಾಯುಪಡೆಯ ತಂಡವೊಂದು ನೀಲಕಂಠ ಶಿಖರವನ್ನೇರಲು ಯತ್ನಿಸಿತು. ಅದರ ಧುರೀಣ ಏರ್ ವೈಸ್ ಮಾರ್ಶಲ್ ಗೋಯಲರು ಉತ್ತರ ದಿಕ್ಕಿನಿಂದ ಏರಲು ಪ್ರಯತ್ನಿಸಿದರು. ಅವರು ಆ ಶಿಖರದ ಬರ್ಫದ ಗೋಡೆಯ ಅಡಿಯನ್ನು ಮುಟ್ಟಿದರಾದರೂ ಏರುವುದು ಅವರಿಗೆ ಸಾಧ್ಯವಾಗಲಿಲ್ಲ.

ಇಂಡಿಯನ್ ಮೌಂಟನಿಯರಿಂಗ್ ಫೌಂಡೇಶನ್ನಿನ ಪ್ರವರ್ತಕ ಸಮಿತಿಗೆ ಭಾರತೀಯ ಪರ್ವತಾರೋಹಿಗಳು ನೀಲಕಂಠದ ಆಹ್ವಾನವನ್ನು ಸ್ವೀಕರಿಸಬೇಕು ಎಂಬ ಬಯಕೆ ಬಲವಾಗಿತ್ತು. ಒಂದು ತಂಡವನ್ನು ಒಯ್ಯುವಿರಾ ಎಂದು ಅವರು ನನ್ನನ್ನು ಕೇಳಿದಾಗ ನಾನು ಅತಿ ಸಂತೋಷದಿಂದ ಒಪ್ಪಿಕೊಂಡೆನಲ್ಲದೆ ಜೊತೆಗೆ ಇನ್ನೊಂದು ಶಿಖರವನ್ನೇರುವ ಪ್ರಯತ್ನವನ್ನೂ ಮಾಡಬೇಕೆಂದು ಸೂಚಿಸಿದೆ.

ಈ ಎರಡನೆಯ ಶಿಖರ ೨೩,೮೬೦ ಅಡಿ ಎತ್ತರದ ಮಾನಾ ಶಿಖರವಾಗಲಿ ಎಂದೆ ನಾನು. ೧೯೩೭ ರಲ್ಲಿ ಸ್ಮಿತ್ ಮಾತ್ರ ಇದನ್ನೇರಿದ್ದರು. ಆದರೆ ಇದುವರೆಗೆ ಒಂದೇ ಒಂದು ಭಾರತೀಯ ಪರ್ವತಾರೋಹಿ ತಂಡವೂ ಇದನ್ನೇರುವ ಪ್ರಯತ್ನ ಮಾಡಿರಲಿಲ್ಲ. ಪ್ರವರ್ತಕ ಸಮಿತಿ ಈ ಸೂಚನೆಯನ್ನು ಒಪ್ಪಿದರೂ ನಮ್ಮ ಪ್ರಯತ್ನ ಸರ್ವಸ್ವವೆಲ್ಲ ನೀಲಕಂಠ ಶಿಖರವನ್ನೇರುವುದರಲ್ಲೇ ಆಗಬೇಕು ಎಂದಿತು

ಇನ್ನು ನಾನು ಯೋಗ್ಯ ಜೊತೆಗಾರರನ್ನು ಆರಿಸಬೇಕಾಯಿತು. ಪರ್ವತಾರೋಹಣ ಸಮಯದಲ್ಲಿ ಸಂಘಟಿತ ಪ್ರಯತ್ನಕ್ಕೆ ಹೆಚ್ಚು ಮಹತ್ವವಿರುತ್ತದೆ. ಒಟ್ಟಾಗಿ ಕಾರ್ಯ ಮಾಡುವ ಸಾಧಾರಣ ಒಳ್ಳೆಯ ಪರ್ವತಾರೋಹಿಗಳ ತಂಡವು ಅಭಿಪ್ರಾಯಭೇದವುಳ್ಳ ಅತ್ಯಂತ ಶ್ರೇಷ್ಠ ಪರ್ವತಾರೋಹಿಗಳ ತಂಡಕ್ಕಿಂತಲೂ ಒಳ್ಳೆಯದು ಎಂದು ನನ್ನ ಅಭಿಪ್ರಾಯವಿದ್ದಿತು. ನನಗೆ ಬೇಕಾದಂಥ ಒಳ್ಳೆಯ ತಂಡವನ್ನು ಆರಿಸಿಕೊಳ್ಳುವಲ್ಲಿ ಸುದೈವದಿಂದ ನಾನು ಯಶಸ್ವಿಯಾದೆ.

ತಂಡ ಆರು ಜನರದಿತ್ತು. ೧೯೬೦ ರಲ್ಲಿ ಎವರೆಸ್ಟ್ ಶಿಖರವನ್ನೇರಲು ಯತ್ನಿಸಿದ ಭಾರತೀಯ ತಂಡದಲ್ಲಿದ್ದ ಫ್ಲೈಟ್ ಲೆಫ್ಟಿನಂಟ್ ಗ್ರೀವಾಲರು ನನ್ನ ತಂಡದ ಮೊದಲನೆಯ ಸದಸ್ಯರು. ತಮ್ಮ ಪ್ರಸಂಗಾವಧಾನಕ್ಕಾಗಿ ಇವರು ಪರ್ವತಾರೋಹಿಗಳ ವೃತ್ತದಲ್ಲಿ 'ಖಲೀಫಾ' ಎಂದು ಹೆಸರಾಗಿದ್ದಾರೆ. ಇವರೊಬ್ಬರೇ ನಮ್ಮ ತಂಡದಲ್ಲಿ ವಿವಾಹಿತರು.



ಓ. ಪಿ. ಶರ್ಮಾ : ಅವರು ನೀಲಕಂಠವನ್ನೇರಿದರು



ನಿಲಕಂಠಾರೋಹಣ ಮಾರ್ಗ: ಗುರುತಿಸಿದ ಮಾರ್ಗದಿಂದ ತಂಡವು ಶಿಖರಾರೋಹಣ ಮಾಡಿತು. ಅವಲಾಂಚ್‌ಗಳನ್ನು ಕ್ಷಣಕ್ಷಣಕ್ಕೆ ಮಳೆಗರೆಯುವ ೫೦ ಅಡಿ ಎತ್ತರದ ಬರ್ಫದ ಅತಿ ಅಪಾಯಕರವಾದ ಗೋಡೆ ದಾಟಿ "C" ಎಂದು ತೋರಿಸಿದಲ್ಲಿ "ಸಾವಿನ ಕೊರಕಲ"ನ್ನು ಹೊಕ್ಕು ಶಿಖರವನ್ನೇರಲಾಯಿತು. "X" ಎಂದು ತೋರಿಸಿದಲ್ಲಿ ಇನ್ನೊಂದು ಮಾರ್ಗವಿದೆ.

ಎರಡನೆಯವರು ಫ್ಲೈಟ್ ಲೆಫ್ಟಿನೆಂಟ್ ಚೌಧುರಿಯವರು. ಇವರೂ ೧೯೬೦ ರ ಎವರೆಸ್ಟ್ ತಂಡದಲ್ಲಿದ್ದರು. ೧೯೫೭ ರಲ್ಲಿ ನಂದಾದೇವಿಯನ್ನೇರಲು ಹೋಗಿದ್ದ ತಂಡದಲ್ಲೂ ಇವರಿದ್ದರು. ೧೯೫೮ ರಲ್ಲಿ ನೀಲಕಂಠವನ್ನೇರಲು ಹೋಗಿದ್ದ ಐ. ಏ. ಎಫ್. ತಂಡದಲ್ಲಿದ್ದ ಇವರು ನಿಜವಾಗಿಯೂ ನಮಗೊಂದು ಆಧಾರಸ್ತಂಭವೇ ಸೈ.

ಹಿಮಾಲಯನ್ ಮೌಂಟನಿಯರಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ತರಬೇತಿ ಹೊಂದಿದ ಓ. ಪಿ. ಶರ್ಮರು ಮೂರನೆಯವರು. ಎವರೆಸ್ಟ್‌ವೀರ ತೇನಸಿಂಗರು ಇವರೊಬ್ಬ ಒಳ್ಳೆಯ ಪರ್ವತಾರೋಹಿಗಳಾಗುವರು ಎಂದಿದ್ದಾರೆ. ನಮ್ಮ ತಂಡದಲ್ಲಿ ಇವರೇ ಕಿರಿಯರು. ಆ ಮೇಲೆ ನಂದಾದೇವಿ ತಂಡದಲ್ಲಿದ್ದ ಕ್ಯಾಪ್ಟನ್ ಮುಲ್ಕರಾಜರು, ನಮ್ಮ ತಂಡದ ಡಾಕ್ಟರರಾದ ಲೆಫ್ಟಿನೆಂಟ್ ಆರ್. ಸಿ. ರೇ ಮತ್ತು ನಾನು—ಹೀಗೆ ನಾವು ಆರು ಜನ ತಂಡದಲ್ಲಿದ್ದೆವು.

ನನ್ನ ಬಿನ್ನಹದಂತೆ ತೇನಸಿಂಗರು ನನಗೆ ಅತಿ ಸಮರ್ಥರಾದ ಐದು ಜನ ಶರ್ಪಾ ಜೊತೆಗಾರರನ್ನು ಒದಗಿಸಿದರು. ಈ ಐವರಲ್ಲಿ ಮೂವರು ೧೯೬೦ ರ ಎವ್ಹರೆಸ್ಟ್ ಆರೋಹಣದ ಕಾಲದಲ್ಲಿ ೨೬,೦೦೦ ಅಡಿಗಳ ವರೆಗೂ ಒಬ್ಬನು ೨೭,೦೦೦ ಅಡಿಗಳವರೆಗೂ ಸಾಮಾನು ಹೊತ್ತೊಯ್ದಿದ್ದರು.

ಎವರೆಸ್ಟ್ ಶಿಖರವನ್ನೇರಲು ಮಾಡಿದ ಸಿದ್ಧತೆಗಳ ನೆನಪಿನ್ನೂ ಹೊಸತಾಗಿಯೆ ಇದ್ದುದರಿಂದ ನಮಗೆ ಸಿದ್ಧತೆ ಮಾಡಿಕೊಳ್ಳುವ ಕಾರ್ಯ ಕಠಿನವಾಗಲಿಲ್ಲ. ಹಿಮಾಲಯನ್ ಮೌಂಟನಿಯರಿಂಗ್ ಇನ್‌ಸ್ಟಿಟ್ಯೂಟ್ ನಮಗೆ ಪರ್ವತಾರೋಹಣದ ಸಲಕರಣೆಗಳಲ್ಲಿ ಬಹಳಷ್ಟನ್ನು ಎರವಲಾಗಿ ಕೊಟ್ಟಿತು. ಉಳಿದವುಗಳಲ್ಲಿ ಕೆಲವನ್ನು ಶಸ್ತ್ರಾಸ್ತ್ರ ಕಾರಖಾನೆಗಳು ತಯಾರಿಸಿ ಕೊಟ್ಟರೆ ಕೆಲವನ್ನು ಐ. ಎ. ಎಫ್. ಟ್ರೇನಿಂಗ್ ಸೊಸಾಯಿಟಿ ಒದಗಿಸಿತು. ಪ್ರವರ್ತಕ ಸಮಿತಿ ಒದಗಿಸಿದ ಸಹಾಯ ವಿರದೆ ಹೋಗಿದ್ದರೆ ನಮಗೆ ಈ ಸಾಹಸದ ಕಾರ್ಯ

ಎಟಕುತ್ತಲೇ ಇರಲಿಲ್ಲವಾದ್ದರಿಂದ ನಾನದಕ್ಕೆ ತುಂಬ ಕೃತಜ್ಞನಾಗಿದ್ದೇನೆ.

ನಮ್ಮ ತಂಡದ ಗ್ರೀವಾಲರಿಗೆ ಆಹಾರದ ವಿಚಾರವನ್ನೂ ಕೂಲಿಯಾಳುಗಳ ವಿಚಾರವನ್ನು ಚೌಧುರಿಯವರಿಗೂ ದೇಣಿಗೆಯ ವಿಚಾರವನ್ನು ಶರ್ಮರಿಗೂ ಒಪ್ಪಿಸಿದೆ. ಸಾಧನ-ಸಲಕರಣೆಗಳ ಹೊಣೆಯನ್ನು ನಾನು ಹೊತ್ತೆ.

ಸೆಂಟ್ರಲ್ ವಿಸ್ಟಾ ಮೆಸ್‌ನಲ್ಲಿ ನಮ್ಮನ್ನು ಬೀಳ್ಕೊಡಲು ಬಂದ ಪ್ರವರ್ತಕ ಸಮಿತಿಯ ಅಧ್ಯಕ್ಷ ಶ್ರೀ ಎಸ್. ಎಸ್. ಖೇರಾರವರು ತಂಡದ ಸಕಲರನ್ನೂ ಸುರಕ್ಷಿತವಾಗಿ ಮರಳಿ ಕರತರಬೇಕೆಂದು ಆದೇಶವಿತ್ತರು. ಬದರಿಯಾತ್ರೆಯ ದಿನಗಳಾದ್ದರಿಂದ ಕೂಲಿಗಳು ಸಿಗುವುದು ಕಷ್ಟವಾದೀತೆಂದು ಚೌಧುರಿಯವರನ್ನು ಮೊದಲೇ (ಮೇ ೨೫ ಕ್ಕೆ) ಜೋಶಿಮಠಕ್ಕೆ ಕಳುಹಿದ್ದೆ.

ಋಷಿಕೇಶಕ್ಕೆ ಹೋಗುವಾಗ ಹಾದಿಯಲ್ಲಿ ರೂರಕಿಯಲ್ಲಿ ಜನರಲ್ ವಿಲಿಯಮ್ಸ್‌ರನ್ನು ಭೆಟ್ಟಿಯಾದೆವು. ಭಾರತೀಯ ಪರ್ವತಾರೋಹಣ ಪ್ರಯತ್ನಗಳಲ್ಲಿ ಮುಂದಾಳ್ತನ ವಹಿಸಿದವರಲ್ಲೊಬ್ಬರಾದ ಇವರು ನಮಗೆ ನೀಲಕಂಠದ ವಿಚಾರದಲ್ಲಿ ಅಮೂಲ್ಯ ಸಲಹೆಗಳನ್ನಿತ್ತರು. "ನಿಮ್ಮ ಜೊತೆ ಬರಲಾಗುತ್ತಿದ್ದರೆ ನನಗೆ ತುಂಬ ಆನಂದವಾಗುತ್ತಿತ್ತು. ಆದರೆ ನನ್ನ ಹೃದಯ ನನ್ನನ್ನು ಹಿಲ್‌ಸ್ಟೇಶನ್ನಿಗೆ ಹೋಗಲು ಕೂಡ ಬಿಡುವುದಿಲ್ಲ" ಎಂದು ಅವರೆಂದಾಗ ನಮಗೆ ಹೃದಯ ತುಂಬಿಬಂತು.

ಚೆನ್ನಾಗಿ ತಿಂದು ಸಾವಕಾಶವಾಗಿ ಏರಿ ಎಂದು ಅವರು ಹೇಳಿದರು. ನಮ್ಮನ್ನು ಬೀಳ್ಕೊಡಲೆಂದು ಗೇಟಿನ ಬಳಿ ಬಂದಾಗ ಅವರು "ತರುಣರೇ, ನೀಲಕಂಠವು ಬಹು ಗಂಡಾಂತರಕಾರಿಯೂ ಕಠಿನವೂ ಆದ ಪರ್ವತ ಶಿಖರ. ಜಾಗರೂಕರಾಗಿರಿ" ಎಂದರು.

೨೯ ರಂದು ಜೋಶಿಮಠವನ್ನು ತಲುಪಿದೆವು. ಮುಲ್ಕರಾಜರು ಹೇಸರಕತ್ತೆಗಳ ಏರ್ಪಾಟು ಮಾಡಿದ್ದರು. ಆದರೆ ಹಾದಿ ತೀರ ಕಠಿನವಾಗಿದ್ದರಿಂದ ನಿಚ್ಚಣಿಕೆಗಳನ್ನು ಅವುಗಳ ಮೇಲೆ ಹೇರಿಕೊಂಡು ಹೋಗುವುದು ಸಾಧ್ಯವಾಗಲಿಲ್ಲ. ೩೦ ರಂದು ಮುಂಜಾನೆ ನಮ್ಮನ್ನು ಸಂಭ್ರಮದಿಂದ ಜನ ಬೀಳ್ಕೊಟ್ಟರು. ಗ್ರೀವಾಲರು ತಮ್ಮ ಉದ್ದನ್ನ ಗಡ್ಡದ ಮೂಲಕ ಬಹು ಭಯಂಕರರಾಗಿ ಕಾಣಿಸುತಿರಬೇಕು. ಏಕೆಂದರೆ ಹೇಸರಕತ್ತೆಯೊಂದು ಅವರನ್ನು ಕಂಡೊಡನೆ ಅವರ ಮೇಲೇರಿ ಹೋಯಿತು.

೩೧ ರಂದು ಮುಂಜಾನೆ ಬದರೀನಾಥದಲ್ಲಿ ತಂಡದವರೆಲ್ಲ ಒಟ್ಟುಗೂಡಿದೆವು. ಬದರೀನಾಥನ ಪೂಜೆ ಮಾಡಿ ಮುಖ್ಯ ಪೂಜಾರಿ ರಾವಲರಿಂದ ಆಶೀರ್ವಾದ ಪಡೆದವು ಚೌಧುರಿಯವರು ಬಲು ಕಷ್ಟದಿಂದ ೩೦ ಕೂಲಿಗಳನ್ನು ದೊರಕಿಸಿದ್ದರು. ಆ ಕೂಲಿಗಳಾದರೂ ಕಡಿಮೆ ಕೆಲಸ, ಹೆಚ್ಚು ಸಂಬಳ ಎಂದರು. ಬೇರೆ ಉಪಾಯವಿರದ್ದರಿಂದ ಒಪ್ಪಿದೆವು.

ಜೂನ್ ಒಂದರಂದು ಮಾನಾದಿಂದ ಹೊರಟು ವಸುಧಾರಾ ಜಲಪಾತದ ಬಳಿ ಬಿಡಾರ ಹೂಡಿದೆವು. ಎರಡೂವರೆ ತಾಸಿನ ಈ ಹಾದಿ ಬಲು ಸುಲಭವೂ ಸರಳವೂ ಆಗಿತ್ತು. ಹಾಗಿದ್ದರೂ ಅಲ್ಲಿ ಬಿಡಾರ ಹೂಡಬೇಕೆಂದು ಕೂಲಿಗಳು ಒತ್ತಾಯ ಮಾಡಿದರು. ನಾನೆಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ.

ಆದರೆ ಚೌಧುರಿ ಮತ್ತು ಮುಲ್ಕರಾಜರು ಕೂಲಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಕಲೆಯಲ್ಲಿ ಪಾರಂಗತರು. ನಮ್ಮ ಕೂಲಿಗಳ ಸಮಸ್ಯೆಗಳನ್ನೆಲ್ಲ ಬಗೆಹರಿಸಿಕೊಂಡು ೩ ನೇ ತಾರೀಖಿನ ಮುಂಜಾನೆ ಮೂಲ ಶಿಬಿರ (Base Camp) ದ ಸ್ಥಳಕ್ಕೆ ಹೊರಟೆವು. ಹಿಮರಾಶಿಯಿಂದ ಕೂಡಿದ ಸತೋಪಂತ ಎಂಬ ಹಿಮಪ್ರಪಾತದ ಅಂಚಿನ ಮಾರ್ಗದಲ್ಲಿ ಹೋಗುವುದು ಬಲು ಕಷ್ಟದ್ದಾಗಿತ್ತು. ಅಲುಗುವ ಬಂಡೆಗಳ ಮೇಲೂ ಹಿಮದ ಮೇಲೂ ಕೊನೆಯ ೧,೦೦೦ ಅಡಿ ಏರಿ ಹೋಗುವುದು ಅತ್ಯಂತ ಪ್ರಯಾಸದ್ದಾಗಿತ್ತು.

ನಮ್ಮೆದುರು ನೀಲಕಂಠ ನಿಂತಿತ್ತು. ಉತ್ತರ ದಿಕ್ಕಿನ ದೃಶ್ಯ ಅತ್ಯಂತ ಭವ್ಯವಾಗಿತ್ತು. ಪೂರ್ವ ದಿಂದ ಪಶ್ಚಿಮಕ್ಕೆ ೧೦೦ ಅಡಿ ಎತ್ತರದ ಬರ್ಫದ ಲಂಬವಾದ ಗೋಡೆಯೊಂದು ಅದಕ್ಕೆ ಕಾವ ಲಾಗಿ ನಿಂತಿತ್ತು. ಈ ಗೋಡೆಯ ಹಿಂದೆ ಶಿಖ ರವು ಪುಂಖಾನುಪುಂಖವಾಗಿ ಏರಿದ ಕಡಿದಾದ ಬರ್ಫದ ಬಂಡೆಗಳಿಂದಲೂ ಅಗಾಧವಾದ ಇಳಿ ಜಾರುಗಳಿಂದಲೂ ಯುಕ್ತವಾಗಿ ಉತ್ತುಂಗ ವಾಗಿ ನಿಂತಿತ್ತು.

ಈ ಮೂಲ ಶಿಖರವನ್ನು ತಲುಪುವುದೇ ತಡ, ನಮಗೆ ಅಲ್ಲಿ ಅವೆಲಾಂಚ್ (ಪರ್ವತದ ಪಕ್ಕದಿಂದ ಕೆಳಗುರುಳುವ ಬರ್ಫ, ಹಿಮ ಕಲ್ಲು ಮಣ್ಣುಗಳ ಭಾರಿ ಸಮುದಾಯಗಳು) ವೃಷ್ಟಿಯ ಮುಮ್ಮಡಿ ಸಲಾಮು ದೊರಕಿತು. ಬಹುಶಃ ಇದು ನಮ್ಮ ಸ್ವಾಗತ ಸೂಚಕವಾಗಿದ್ದರೂ ಇರಬ- ಹುದು. ಆದರೆ ತಂಡದವರಿಗೆ ಮಾತ್ರ ಈ ಸ್ವಾಗತ ಎಳ್ಳಷ್ಟೂ ಸೇರಲಿಲ್ಲ.

ಪಶ್ಚಿಮದಲ್ಲಿ, ಆಗ್ನೇಯದಲ್ಲಿ ಮತ್ತು ಈಶಾನ್ಯ ದಲ್ಲಿ ಹೀಗೆ ನೀಲಕಂಠಕ್ಕೆ ಮೂರು ಸ್ಪಷ್ಟವಾದ ಪರ್ವತ ಪಂಕ್ತಿಗಳಿವೆ. ಬದರಿನಾಥದಿಂದ ನನಗೆ ಆಗ್ನೇಯ ದಿಕ್ಕಿನ ಪರ್ವತ ಪಂಕ್ತಿ ಮತ್ತು ಈಶಾನ್ಯ ದಿಕ್ಕಿನ ಪರ್ವತ ಪಂಕ್ತಿಯ ಕೆಲ ಭಾಗ ಕಾಣಿಸು ತ್ತಿತ್ತು.

ಮೊದಲನೆಯದರ ಮೂಲಕ ನೀಲಕಂಠವನ್ನೇ ರುವುದು ಅಸಾಧ್ಯವೆಂದೇ ಅನಿಸಿತು. ಅದು ಸುಮಾರು ೮,೦೦೦ ಅಡಿ ಮೇಲಕ್ಕೆದ್ದಿತ್ತಲ್ಲದೆ ಅವೆಲಾಂಚ್‌ಗಳಿಂದ ಕೂಡಿದ್ದಿತು. ಉಳಿದೆರಡ- ರಲ್ಲಿ ಪಶ್ಚಿಮ ಪರ್ವತ ಪಂಕ್ತಿಯೇ ಸುಲಭ ಮಾರ್ಗ ವೆನಿಸಿತು.

ನೀಲಕಂಠದ ಉತ್ತರ ಮುಖ ರುದ್ರಸೌಂದರ್ಯ ಪೂರ್ಣವಾಗಿತ್ತು. ನೀಲಕಂಠದ ಸುಂದರವಾದ ಬಿಳಿಯ ಶಿಖರವು ಬರ್ಫಾಚ್ಛಾದಿತವಾದ ಅತ್ಯಂತ ಕಡಿದಾದ ಬಂಡೆಗಳ ಮೇಲೆ ನಿಂತಿದ್ದು ಕೆಳಗಿರುವ ಗ್ರೆನ್ಯಾಟ್ ಕರಿ ಬಂಡೆಗಲ್ಲಿನಿಂದ ೧೫೦ ಅಡಿ ನೇರವಾದ ಉತ್ತರದ ಬರ್ಫದ ಗೋಡೆ ಯಿಂದ ಪ್ರತ್ಯೇಕಿಸಲ್ಪಟ್ಟಿದೆ. ಈ ಬರ್ಫದ ಗೋಡೆಯ ವರೆಗೆ ಹೋಗಲು ಅವೆಲಾಂಚ್ ವೃಷ್ಟಿಯ ಕಾಟವಿಲ್ಲದ ದಾರಿಯನ್ನು ಹುಡುಕು- ವುದೇ ಮೊಟ್ಟಮೊದಲ ಸಮಸ್ಯೆಯಾಗಿತ್ತು. ಆ ಮೇಲೆ ಆ ಬರ್ಫದ ಗೋಡೆಯನ್ನು ದಾಟಿ ಪಶ್ಚಿಮ ಪರ್ವತ ಪಂಕ್ತಿಯ ಮೇಲಿದ್ದ ಅಪಾಯ- ಕಾರಿಯಾದ ಬರ್ಫಾವೃತವಾದ ಬಂಡೆಯ ಚಾಚುಗಳ ಮೇಲಿಂದ ನಡೆದು ಕೊನೆಗೆ ಶಿಖರದ ಬೆನ್ನೇಣನ್ನು ಅರ್ಧ ಮೈಲು ಸುತ್ತುವರಿದು ಹೋಗಿ ಶಿಖರದ ತುದಿಯನ್ನು ತಲುಪಬೇಕಾಗಿತ್ತು. ಶಿಖ ರದ ಬೆನ್ನೇಣಿನ ವರೆಗೆ ಹೋದರೆ ಶಿಖರದ ತುದಿಯನ್ನೇರಿದಂತೆಯೆ. ಆದರೆ ಅಲ್ಲಿಯ ವರೆಗೆ ಹೋಗಲು ಮಳೆಗಾಲದ ಮೊದಲಷ್ಟೇ ಇರು ವಂಥ ಗಟ್ಟಿಯಾದ ಹಿಮದ ಅವಶ್ಯಕತೆ ಇದ್ದಿತು.

ಪಶ್ಚಿಮ ದಿಕ್ಕಿನಲ್ಲಿ ೧೮,೦೦೦ ಅಡಿಗಳೆತ್ತರಕ್ಕೆ ಹೋಗುವುದು ಸುಲಭವೇ ಆಗಿತ್ತು. ಜೂನ್ ೪ ರಂದು ನಾನು ಮತ್ತು ಚೌಧುರಿಯವರು ಆ ಬರ್ಫದ ಗೋಡೆಯ ಉತ್ತರ ಭಾಗದ ಪರಿಶೀ- ಲನೆ ಮಾಡಿಕೊಂಡು ಬಂದೆವು. ಅವೆಲಾಂಚ್‌ಗಳ ದಾಳಿಗೆ ಸಿಲುಕದೆ ಆ ಗೋಡೆಯನ್ನು ತಲು ಪುವುದು ಸಾಧ್ಯವೆಂದು ಅನಿಸಿತು. ಮರುದಿನ ಮೊದಲನೆಯ ಶಿಬಿರವನ್ನು ಸ್ಥಾಪಿಸಿ ಎರಡನೆಯ ಶಿಬಿರದ ಸ್ಥಳವನ್ನು ಹುಡುಕಲು ಕ್ಯಾಪ್ಟನ್ ಮುಲ್ಕರಾಜರನ್ನು ಕಳಿಸಿಕೊಟ್ಟೆವು. ಪಶ್ಚಿಮ ಪರ್ವತ ಪಂಕ್ತಿಗಳ ಮಾರ್ಗವಾಗಿ ಹೋಗಬೇಕೇ ಅಥವಾ ಉತ್ತರದ ಮಾರ್ಗದಲ್ಲಿ ನಡೆಯಬೇಕೇ ಎಂಬ ಮಹತ್ವದ ಪ್ರಶ್ನೆಯನ್ನು ನಿರ್ಧರಿಸಬೇಕಾ ದ್ದರಿಂದ ಜೂನ್ ೫ ರಂದು ನಾನು, ಗ್ರೀವಾಲ ಮತ್ತು ಇಬ್ಬರು ಶರ್ಪಾಗಳು, ಒಬ್ಬ ಕೂಲಿಯವ ನೊಂದಿಗೆ ಹೊರಟೆ.

ಪಶ್ಚಿಮ ದಿಕ್ಕಿನಲ್ಲಿ ೧೫,೦೦೦ ಆಡಿಗಳೆತ್ತರ ದಿಂದ ೧೮,೦೦೦ ಅಡಿಗಳೆತ್ತರದ ವರೆಗಿನ ಹಾದಿ ಬಲು ಕಠಿಣವಾಗಿತ್ತು. ಹೆಜ್ಜೆಹೆಜ್ಜೆಗೆ ಹಿಮ ಪ್ರಪಾತದ ದಾಳಿಯ ಭಯವಿತ್ತು. ಪಶ್ಚಿಮ ದಿಕ್ಕಿನಲ್ಲಿ ಮುಂದೆ ಸಾಗುವುದು ಅನುಕೂಲ



ನರೆತ ಕೂದಲಿಗೆ ಪ್ರಕೃತಿಯನ್ನು ದೂಶ ಬೇಡಿರಿ
"ನನ್ನ ಕೂದಲು ಸ್ವಾಭಾವಿಕವಾಗಿ ನರೆತಿದೆ, ಏನು ಮಾಡುವುದಕ್ಕಾಗುತ್ತದೆ?" ಇಂತಹ ಮಾತನ್ನು ಅನೇಕ ಜನರು ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. ತಮ್ಮ ಕೂದಲು ನರೆತು ಹೋಗುದಕ್ಕೆ ಪ್ರಕೃತಿಯನ್ನು ದೂರುವ ಮನುಷ್ಯರು ಕೂದಲು ನರೆಯಲು ಕಾರಣವೇನು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಕೂದಲಿಗೆ ಸರಿಯಾದ ಪೋಷಣೆ ಇಲ್ಲದಿರುವುದು, ಸುತ್ತಮುತ್ತ ಅನಾರೋಗ್ಯದ ಪರಿಸ್ಥಿತಿ ಇರುವುದು ಮತ್ತು ಸಾರಾಸಾರ ವಿವೇಚನೆಯಿಲ್ಲದೆ ಅಯೋಗ್ಯ ತೈಲಗಳನ್ನು ಉಪಯೋಗಿಸುವುದು—ಇವು ಅಕಾಲದಲ್ಲಿ ಕೂದಲು ನರೆಯುವುದಕ್ಕೆ ಮುಖ್ಯ ಕಾರಣಗಳು ಎಂದು ಪರಿಶೋಧನೆಯಿಂದ ತಿಳಿದು ಬಂದಿದೆ.
ಅಹಮದಾಬಾದಿನ ಒಂದು ಅತ್ಯಾಧುನಿಕವಾದ ಕಾರ್ಖಾನೆಯಲ್ಲಿ, ಶಾಸ್ತ್ರೀಯವಾಗಿ, ಮೇಲ್ತರಗತಿಯ ಯೋಗ್ಯತಾ ಮಟ್ಟಕ್ಕೆ ಸರಿಯಾಗುವಂತೆ ತಯಾರಿಸಲ್ಪಡುವ 'ಲೋಮಾ'ದಲ್ಲಿ ಕೂದಲು ನರೆಯುವುದನ್ನು ನಿಲ್ಲಿಸುವ ಎಲ್ಲಾ ಒಳ್ಳೆಯ ಘಟಕಗಳಿವೆ. ಇಂದೇ 'ಲೋಮಾ'ವನ್ನು ಉಪಯೋಗಿಸಲು ಪ್ರಾರಂಭಿಸಿರಿ. ಆಗ, ಭಾರತದಲ್ಲಿಯೂ ಪರದೇಶಗಳಲ್ಲಿಯೂ ಲಕ್ಷೋಪಲಕ್ಷ ಜನರು ಏಕೆ 'ಲೋಮಾ'ದಲ್ಲಿ ವಿಶ್ವಾಸವನ್ನಿಟ್ಟಿದ್ದಾರೆಂಬುದು ನಿಮಗೆ ಗೊತ್ತಾಗುವುದು. ನೆನಪಿಡಿರಿ,
'ಲೋಮಾ' ಎಂದರೆ ನೀವು ಬಯಸುವ ಉತ್ಕೃಷ್ಟತೆ!
ಲೋಮಾ
ಹಚ್ಚಿ ಕೂದಲು ಬಾಚಿದರೆ
ಉತ್ತಮ ಕಳೆ ಬರುವುದು!
Loma
ಸೋಲ್ ಏಜಂಟ್ಸ್ ಅಂಡ್ ಎಕ್ಸ್‌ಪೋರ್ಟರ್ಸ್: ಎನ್. ಎಮ್. ಖಂಬಾಟ್‌ವಾಲಾ,
ಅಹಮದಾಬಾದ್ 1 (ಭಾರತ)
ಏಜಂಟರು: ನರೋತಮ್ ಅಂಡ್ ಕಂಪೆನಿ, ಮುಂಬಯಿ 2

ವೆಂದೆನಿಸಿದ್ದರಿಂದ ಕೆಳಗಿದ್ದವರಿಗೆ ನಾವಿರುವತ್ತ ಬರಲು ಸಂದೇಶ ಕಳಿಸಿದೆ.

ಮಾರನೆಯ ದಿನ ನಸುಕಿನಲ್ಲಿ ನಮ್ಮ ಡೇರೆಯ ಮುಖದಲ್ಲೆ ನಿಂತಿದ್ದ ಎರಡು ಬಂಡೆಗಲ್ಲುಗಳ ಗೋಪುರವನ್ನೇರಿ ನೋಡಲೆಂದು ನಾನು ಮತ್ತು ಶರ್ಪಾ ಪುರಬಾ ಹೊರಟೆವು. ಬಂಡೆಗಲ್ಲನ್ನು ಬಲವಾಗಿ ಹಿಡಿಯಲು ಸಾಧ್ಯವಾಗದಷ್ಟು ಛಳಿಯಿತ್ತು. ಒಂಬತ್ತು ಗಂಟೆಯವರೆಗೂ ನಾನು ಮತ್ತೆ ನನ್ನ ಮಲಗುವ ಚೀಲದ ಆಶ್ರಯ ಪಡೆಯಬೇಕಾಯಿತು.

ಪರ್ವತ ಪಂಕ್ತಿಯ ನೆತ್ತಿಯ ಮೇಲಿದ್ದ ಈ ಕಣಿವೆಯಿಂದ ದಕ್ಷಿಣ ದಿಕ್ಕಿನಲ್ಲಿ ಕಾಣುತ್ತಿದ್ದ ಸೌಂದರ್ಯ ಅಪ್ರತಿಮವಾಗಿತ್ತು. ಹಿಮದ ಹಬ್ಬುಗೆಯ ನಡುವೆ ನೀಲ ಸರೋವರವೊಂದು ಕಂಗೊಳಿಸುತ್ತಿತ್ತು. ಇನ್ನೂ ಪಶ್ಚಿಮಕ್ಕೆ ಅವೆಲಾಂಚ್‌ಗಳ ಶಿಖರವಿತ್ತು. ಎಲ್ಲ ಸ್ತಬ್ಧ-ಶಾಂತವಾಗಿತ್ತು. ಈ ನಿಸರ್ಗ ಸೌಂದರ್ಯವನ್ನು ಹೆಚ್ಚಿಸಲು ಎರಡು ಕಪ್ಪು ಕಾಗೆಗಳು ಹಾರಾಡುತ್ತಿದ್ದವು. ಕಾಗೆಗಳು ಮನುಷ್ಯರ ಹಿಂದೆಯೇ ಬರುತ್ತವೆ. ಎವರೆಸ್ಟ್ ಏರುವ ಪ್ರಯತ್ನ ನಡೆಸಿದ್ದಾಗ ನಮ್ಮ ಐದನೆಯ ಕ್ಯಾಂಪಿನವರೆಗೂ ನಮ್ಮ ಹಿಂದೆಯೆ ಹಾರಿ ಬಂದಿದ್ದ ಕಾಗೆಯೊಂದರ ನೆನಪು ನನಗೆ ಮತ್ತು ಗ್ರೀವಾಲರಿಗೆ ಬಂತು.

ಆ ಬಂಡೆಗಲ್ಲುಗಳು ಭೂಮಿಯಲ್ಲಿ ಹುಗಿದು ನಿಂತಿರದೆ ಸಡಿಲಾಗಿದ್ದವು. ೨,೦೦೦ ಅಡಿ ನೇರ ಎತ್ತರದ ಗೋಡೆಯೆಂದರೆ ಎಂಥವರ ಎದೆಯಾದರೂ ನಡುಗೀತು. ನಾವು ಆ ಬಂಡೆಗಲ್ಲನ್ನೆರಲು ಯತ್ನಿಸುತ್ತಿದ್ದಾಗ ದೊಡ್ಡ ಕಲ್ಲೊಂದು ನನ್ನ ಮುಖದತ್ತ ಉರುಳಿ ಬಂತು. ಪೈಲವಾನನ ಸಹಜ ಬುದ್ಧಿಯಿಂದ ನಾನು ಬಲಗೈಯನ್ನು ಮುಖಕ್ಕೆ ಅಡ್ಡ ಹಿಡಿದೆ. ನನ್ನ ಕೈಗೆ ತುಸು ಪೆಟ್ಟಾದರೂ ನಾನು ಸುರಕ್ಷಿತನಾಗಿದ್ದೆ. ಪುರಬಾ ಮತ್ತು ನಾನು ಬೇಗ ಬೇಗನೆ ಈ ಅಪಳಿ ಬಂಡೆಗಳನ್ನು ದಾಟಿದೆವು. ಆಚೆಯಿದ್ದ ಮೂರು ಬಂಡೆಗಳನ್ನು ಬ್ರಿಟಿಶರು "ಕುರೂಪಿ ಅಕ್ಕ ತಂಗಿಯರು" ಎಂದು ಕರೆದಿದ್ದರು. ಇಷ್ಟು ಎತ್ತರದಲ್ಲಿ ಈ ನಿರ್ಜನ ತಾಣದಲ್ಲಿ ಸ್ತ್ರೀವಾಚಕವಾವುದೂ ಕುರೂಪಿಯೆನಿಸಲು ಸಾಧ್ಯವಿಲ್ಲ ಎಂದು ಎನಿಸಿ ನಾನು ಈ ಬಂಡೆಗಳಿಗೆ "ಮೂವರು ಭಗಿನಿಯರು" ಎಂದು ಪುನರ್ನಾಮಕರಣ ಮಾಡಿದೆ.

"ಮೂವರು ಭಗಿನಿಯರ" ಆಚೆ ಇದ್ದ ಕೆಲ ಚಿಕ್ಕ ಬಂಡೆಗಲ್ಲುಗಳನ್ನು ದಾಟಿ ಹೋದ ನಂತರ ನೇರಾಗಿ ನಿಂತ ೭೦೦ ಅಡಿ ಎತ್ತರದ ಬಂಡೆಗಲ್ಲೊಂದು ಸಿಕ್ಕಿತು. ಇದನ್ನು ನಾನು "ಶಿವಲಿಂಗ" ಎಂದು ಕರೆದೆ. ನಾವು ಬಂಡೆಗಲ್ಲುಗಳನ್ನೇರತೊಡಗಿ ಈಗಾಗಲೇ ಐದು ತಾಸುಗಳು ಕಳೆದಿದ್ದವು. ಮುಂದೆ ಹೋಗುವುದು ಅಸಾಧ್ಯವಾಗಿತ್ತು. ಶಿವಲಿಂಗವನ್ನೇರಿ ಹೋದೆವಾದರೆ ನೀಲಕಂಠ ಶಿಖರವನ್ನೇರಲು ದಾರಿಯೊಂದು ಸಿಗಬಹುದಿತ್ತೇನೋ. ಆದರೆ ನನಗೇಕೋ ಆಸೆಯುಳಿದಿರಲಿಲ್ಲ.

ಜೂನ್ ೭ ರಂದು ನಾವು ಶಿಬಿರವನ್ನು ಕಿತ್ತು ಕೆಳಗಿಳಿಯತೊಡಗಿದೆವು. ೧೦ ಗಂಟೆಗೆ ಎಲ್ಲರೂ ಹಿಮಪ್ರಪಾತದ ಬುಡದಲ್ಲಿ ಕಲೆತೆವು. ಉತ್ತರ ದಿಕ್ಕಿನ ಪರಿಶೀಲನೆ ಮಾಡಿದ್ದ ಮುಲ್ಕರಾಜರ ವರದಿಯನ್ನು ಕೇಳಿಕೊಂಡು ಕೊನೆಗೆ ಶಿಖರವನ್ನೇರಲು ಉತ್ತರ ಬದಿಯಿಂದಲೇ ಪ್ರಯತ್ನಿಸಬೇಕೆಂದು ನಿರ್ಧರಿಸಿದೆ. ಶರ್ಮರನ್ನು ಎರಡನೆಯ ಶಿಬಿರ ಸ್ಥಾಪಿಸಲು ಕಳಿಸಿ ಕೊಟ್ಟು ನಾವೆಲ್ಲ ಮೂಲ ಶಿಬಿರಕ್ಕೆ ಬಂದೆವು.

ತಾ. ೮ರ ಮುಂಜಾನೆ ಚೌಧರಿ ಮತ್ತು ಇಬ್ಬರು ಶರ್ಪಾರು ಎರಡನೇ ಶಿಬಿರಕ್ಕೆ ಹೊರಟು ಹೋದರು. ಅಂದು ಸಂಜೆ ಎರಡನೆಯ ಶಿಬಿರದ ಮೇಲ್ಗಡೆ ಇದ್ದ ಬರ್ಫದ ಗೋಡೆ ಕುಸಿದು ಭೀಕರ ಸಪ್ಪಳದೊಂದಿಗೆ ಕೆಳಗುರುಳಿತು ನಮ್ಮ ಎದೆ ನಡುಗಿತು. ಒಂದೇ ಒಂದು ತುಂಡಾದರೂ ಆ ಶಿಬಿರದ ಬಳಿ ಬಿದ್ದರೆ ನಾವು ಅಲ್ಲಿಂದ ಬೇರೆಡೆಗೆ ಹೋಗಬೇಕಾಗುತ್ತಿತ್ತು. ಇನ್ನೊಂದು ಉತ್ತಮ ಸ್ಥಳ ಹುಡುಕುವುದೇನೂ ಸುಲಭದ್ದಾಗಿರಲಿಲ್ಲ. ನಾವು ವೈರ್‌ಲೆಸ್ ಮೂಲಕ

ಎರಡನೆ ಶಿಬಿರದ ಸಂಪರ್ಕ ಬೆಳೆಸಿದಾಗ ಎಲ್ಲ ಸರಿಯಾಗಿದೆ ಎಂದು ತಿಳಿದು ಸಂತೋಷ ಗೊಂಡೆವು.

ಆದರೆ ಈ ಸಂತೋಷ ಬಹಳ ಹೊತ್ತು ಬಾಳ ಲಿಲ್ಲ. ಸಂಜೆ ೫॥ ಗಂಟೆಗೆ ಅ.ಭಾ.ಆಕಾಶವಾಣಿ ಮಳೆಗಾಲ ಈ ಭಾಗದಲ್ಲಿ ಜೂನ್ ೧೧ ಅಥವಾ ೧೨ ರ ಹೊತ್ತಿಗೆ ಪ್ರವೇಶಿಸುವುದು ಎಂದು ಸಾರಿತು. ನಮಗೆ ಆಘಾತವಾಯಿತು. ಕಳೆದ ೧೫ ವರ್ಷಗಳ ಸರಾಸರಿಯನ್ನು ನೋಡಿ ನಾನು ಈ ಸಮಯವನ್ನು ಆರಿಸಿದ್ದೆ. ಸಾಮಾನ್ಯವಾಗಿ ಇಲ್ಲಿ ಜೂನ್ ೨೫ ರ ಸುಮಾರಿಗೆ ಮಳೆಗಾಲ ಪ್ರವೇಶಿಸುವುದು. ೨೦ ರೊಳಗೆ ಶಿಖರವನ್ನೇರುವ ಲೆಕ್ಕ ಹಾಕಿಕೊಂಡಿದ್ದೆ. ಜೂನ್ ೧೫ ರಂದು ಮಳೆಗಾಲ ಬಂದಿದ್ದರೂ ನಡೆಯಬಹುದಿತ್ತು. ಆದರೆ ಇನ್ನು ಎರಡೇ ಎರಡು ದಿನಗಳಲ್ಲಿ ಏನು ಮಾಡಬಹುದು? ನಮ್ಮ ದುರ್ದೈವದಿಂದ ಈ ಎರಡು ದಿನಗಳಲ್ಲಿ ಕೂಡ ಅಡ್ಡ ಮಳೆ ಬೀಳುವ ಸಂಭವವಿತ್ತು.

ಮೂಲ ಶಿಬಿರದಲ್ಲಿ ಒಬ್ಬನೇ ಒಬ್ಬ ಶೆರ್ಪಾ ಇದ್ದ. ಅವನ ಜೊತೆ ಎರಡನೆಯ ಶಿಬಿರಕ್ಕೆ ಹೊರಟೆ. ವೈರ್‌ಲೆಸ್ ಮೂಲಕ ಚೌಧರಿ ಮತ್ತು ಶರ್ಮಾರಿಗೆ ಆ ಇಳಿಜಾರು ಬಂಡೆಯ ಮೇಲೆ ಸಾಗಿ ಆದಷ್ಟು ಬೇಗ ಬರ್ಫದ ಗೋಡೆಯ ಬುಡವನ್ನು ಮುಟ್ಟಬೇಕು ಎಂದು ತಿಳಿಸಿದೆ.

ಮೇಲಕ್ಕೇರುತ್ತೇರುತ್ತ ಇದು ವರೆಗೆ ಪ್ರಯತ್ನಿಸಿದವರನ್ನು ತಡೆಹಿಡಿದಿದ್ದ ಆ ಕೊನೆಯ ಬಂಡೆಯ ಇಳಿಜಾರನ್ನು ನೋಡುತ್ತಿದ್ದೆ. ತಾಸುಗಟ್ಟಲೆ ಶ್ರಮಿಸಿದರೂ ನಮ್ಮ ಪ್ರಗತಿ ನಗಣ್ಯವಾಗಿತ್ತು. ಸಂಜೆಯೊಳಗೆ ಬರ್ಫದ ಗೋಡೆಯನ್ನೇರಿದೆ. ಅದರ ಮೇಲೆ ಶಿಬಿರ ಹೂಡಲು ಸಾಧ್ಯವಾದೀತೆಂದೂ ಮುಂದೆರಡು ದಿನಗಳಲ್ಲಿ ನೀಲಕಂಠ ಶಿಖರದ

ಮೇಲೇರುವ ಸಾಹಸ ಮಾಡಬಹುದೆಂದೂ ಆಶಿಸಿದ್ದೆ. ಆದರೆ ಎರಡನೇ ಶಿಬಿರ ತಲುಪಿದಾಗ ಕೊನೆಯ ಐವತ್ತು ಅಡಿಗಳ ಬಂಡೆಗೆ ಹಗ್ಗ ಹಾಕುವುದು ಸಾಧ್ಯವಿಲ್ಲೆಂದು ಖಚಿತವಾಗಿಬಿಟ್ಟಿತು.

ಈಗ ಹಿಮ ಬೀಳುತ್ತಲಿತ್ತು. ಬಂಡೆಗಲ್ಲು ನುಣುಪಾಗಿ ಜಾರುತ್ತಿತ್ತು. ಆದರೂ ಕೆಲಸ ನಡೆಯಲೇಬೇಕೆಂದೆ. ಕೊನೆಯ ೫೦ ಅಡಿ ಏರಲು ಹಗ್ಗವನ್ನು ನಾನೇ ಹಿಡಿದೆ. ಮೊದಲಿನ ಹತ್ತು ಅಡಿ ಏರಿದೆನಾದರೂ ಮುಂದೆ ಎರಡು ತಾಸು ಯತ್ನಿಸಿದರೂ ಒಂದು ಇಂಚು ಕೂಡ ಏರುವುದು ಆಗಲಿಲ್ಲ. ಅಂತೂ ಇಂತೂ ೧೬ ಅಡಿ ಎತ್ತರಕ್ಕೆ ಹೋದೆ. ಅಷ್ಟರಲ್ಲಿ ಇಡೀ ನನ್ನ ದೇಹದ ಭಾರವನ್ನು ಹೊತ್ತಿದ್ದ ಬಲಗಾಲಿನ ಹಿಡಿತ ತಪ್ಪಿ ನಾನು ಹಗ್ಗದಗುಂಟ ದಡದಡ ಕೆಳಗುರುಳಿದೆ. ಅಂದಿನ ಕೆಲಸ ನಿಲ್ಲಿಸಲು ಈ ಘಟನೆ ಸಾಕಾಯಿತು. ನಾವು ಅತಿ ನಿರಾಶೆಯಿಂದ ಎರಡನೆಯ ಶಿಬಿರಕ್ಕೆ ಮರಳಿದೆವು. ಜೂನ್ ೯ ಕೂಡ ಕಳೆದಿತ್ತು.

೧೦ ರಂದು ಮುಂಜಾನೆ ಮತ್ತೆ ಆ ಬರ್ಫದ ಗೋಡೆಯನ್ನೇರುವ ಕೆಲಸಕ್ಕೆ ಚೌಧರಿಯವರನ್ನು ತೊಡಗಿಸಿದೆ. ಆ ಗೋಡೆಯ ಮೇಲೆ ಠಾಣ್ಯ ಹಾಕುವ ಹಂಬಲದಿಂದ ನಾನು, ಘುರಬಾ ಶರ್ಪಾ ಎರಡನೆಯ ಶಿಬಿರದಿಂದ ಹೊರಟೆವು. ಆದರೆ ಪ್ರಗತಿ ಬಲು ನಿಧಾನವಾಗಿತ್ತು. ಸಾಗರ ನೀಲವಾದ ಆ ಗೋಡೆ ನಮ್ಮನ್ನು ನುಂಗಲನುವಾದ ರಕ್ಕಸನಂತೆ ನಮ್ಮನ್ನು ಕಂಡು ನಗುತ್ತಿತ್ತು.

ಚೌಧುರಿ ಮತ್ತು ನವಾಂಗ್ ಶರ್ಪಾ ಮೆಟ್ಟಲುಗಳನ್ನು ಕಡಿಯುತ್ತಿದ್ದ ಸ್ಥಳದಲ್ಲಿ ಚೌಧುರಿಯವರ ಹಗ್ಗದ ಬದಲು ನನ್ನ ಹಗ್ಗ ನಿಲ್ಲಿಸಿದೆ. ಸಮಯವನ್ನುಳಿಸಲು ಮೆಟ್ಟಲು ಕಡಿಯುವುದನ್ನು ನಿಲ್ಲಿಸಿ ಕ್ರಾಂಪೂನುಗಳನ್ನು ಬರ್ಫದಲ್ಲಿ ಚುಚ್ಚುತ್ತ ಅದರ ಆಧಾರದಿಂದ, ಅಂಬೆಗಾಲಿನಿಂದ ಸರಿಯುತ್ತ ಹೋದೆವು. ಆದರೆ ನಾನು ಯಾವ ಹಿಮದ ಬಿರುಕಿನ ಮೂಲಕ ಸುಲಭವಾಗಿ ಸಾಗಬಹುದೆಂದೆಣಿಸಿದ್ದೆನೋ ಅದು ಮೃತ್ಯುದ್ವಾರವೇ ಆಗಿತ್ತು. ಆದ್ದರಿಂದ ಕಡಿಮೆ ಅಪಾಯಕರ ಸಾನದಿಂದೇರಬೇಕೆಂದು ಮುಂದೆ ಸಾಗಿದೆವು. ಗೂಟ ಜಡಿದು ಹಗ್ಗ ಕಟ್ಟಲು ನಾಲ್ಕು ತಾಸು ಕಳೆದೆವು. ಆದರೆ ವ್ಯರ್ಥ. ಈ ಸ್ಥಳದಲ್ಲಿ ಏರುವುದಾದರೆ ಕನಿಷ್ಠ ೨೦ ಅಡಿ ಎತ್ತರದ ಮೂರು ನಿಚ್ಚಣಿಕೆಗಳ ಅಗತ್ಯವಿತ್ತು. ನಮ್ಮಲ್ಲಿ ನಿಚ್ಚಣಿಕೆಗಳಿದ್ದರೂ ಮೂಲ ಶಿಬಿರದಿಂದ ಅವುಗಳನ್ನು ತರಲು ಸಮಯವಿರಲಿಲ್ಲ.

ಸಂಜೆ ೫ ಗಂಟೆಯಾಗಿತ್ತು. ಮೇಲೆ ಸಡಿಲಾದ ಕಲ್ಲುಗಳು ಈಗ ಗುಂಡಿನೋಪಾದಿಯಲ್ಲಿ ಕೆಳಗೆ ಬೀಳತೊಡಗಿದ್ದವು. ಕಲ್ಲು ಬೀಳುವ ಸಪ್ಪಳವಾದೊಡನೆ ಶರ್ಪಾರು "ಪತ್ಥರ್ ಆಯೋ" ಎಂದು ಕೂಗುತ್ತ ಬಂಡೆಗಳ ಮರೆಗೆ ಓಡುತ್ತಿದ್ದರು.

ಚೌಧುರಿ ನನ್ನ ಬಳಿ ಬಂದು, "ಇಷ್ಟೆಲ್ಲ ಗಂಡಾಂತರವನ್ನೆದುರಿಸಿರುವಾಗ ನೀವು ಗೋಡೆಯ ಬಲ ದಿಕ್ಕಿನಲ್ಲಿ ಏರುವ ಸಾಹಸವನ್ನೇಕೆ ಮಾಡುವುದಿಲ್ಲ?" ಎಂದು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಹಾಗೆ ಮಾಡಿದರೆ ಆತ್ಮಹತ್ಯೆ ಮಾಡಿಕೊಂಡಂತೆಯೇ ಎಂದರೂ ಅವರು ಕೇಳಲಿಲ್ಲ. "ದಯವಿಟ್ಟು ಆ ಕಡೆಯಿಂದ ಏರಿ" ಎಂದರು ಅವರು. "ಬರುವಿಯಾ?" ಎಂದು ಘುರಬಾನನ್ನು ಕೇಳಿದೆ. ಆತ "ಬಡಾ ಬಡಾ ಖತ್ರಾ ದೇಖಾ, ಪರ್ ಐಸಾ ಖತ್ರಾ ನಹಿ ದೇಖಾ. ಲೇಕಿನ್ ಜಹಾಂ ಸಾಹೇಬ ಜಾಯೇಗಾ, ಹಂ ಜಾಯೇಗಾ" ಎಂದ.

ನಾವು ಆ "ಸಾವಿನ ಕೊರಕಲಿ"ನ ಕಡೆ ಮೆಟ್ಟಲು ಕಡಿದು ಒಂದು ಹತ್ತು ಗಜ ಹೋಗಿದ್ದೆವೋ ಇಲ್ಲವೋ ಕಲ್ಲು-ಬರ್ಫಗಳ ತುಂಡುಗಳ ಗಡಗಡಾಟ ಕೇಳಿಸಿತು. ನಾವು ನಮ್ಮ ತಲೆಯ ಮೇಲೆ ರಕ್‌ಸ್ಯಾಕ್ ಹೊತ್ತುಕೊಂಡೆವು. ಪುಣ್ಯಕ್ಕೆ ನಾವು ಈ ಗುಂಡುಗಳ ಹಾದಿಯಲ್ಲಿರಲಿಲ್ಲ. ಆದರೆ ಈಗ ಪದೇಪದೇ ಕಲ್ಲುಗಳುರುಳತೊಡಗಿದ್ದವು. ಅರ್ಧ ತಾಸಿನ ನಂತರ ನಾವು ಕೆಳಗಿಳಿದೆವು. ಈಗ ನಾವು ಮೇಲಕ್ಕೂ ಹೋಗಲಾರದೆ ಕೆಳಗೆ ಎರಡನೇ ಶಿಬಿರಕ್ಕೂ ಬರಲಾರದೆ ನಡುವೆ ಸಿಕ್ಕಿದ್ದೆವು.

ದೇವರ ಮೇಲೆ ಭಾರ ಹಾಕಿ ನಾವಿದ್ದಲ್ಲಿಯೇ ಬಂಡೆಗಲ್ಲಿನ ಮೇಲೆ ಠಾಣ್ಯ ಹೂಡೋಣವೆಂದು ಚೌಧುರಿ ಹೇಳಿದರು. ಆದರೆ ಸಮೀಪದ ಒಂದು ಗವಿಯನ್ನು ಪ್ರವೇಶಿಸಿ ನೋಡಲೆಂದು ಲಾಪ್ಕಾ ಲಾಮ್ಬಾ ಎಂಬ ಶೆರ್ಪಾನ ಟೊಂಕಕ್ಕೆ ಹಗ್ಗ ಕಟ್ಟಿ ಕಳಿಸಿದೆವು. ನೂರು ಅಡಿ ಹಗ್ಗ ಮುಗಿದರೂ ಆತ ಇನ್ನೂ ಗವಿಯ ಒಳಗೊಳಗೆ ನಡೆದಿದ್ದ. ನಾವು ಕೂಗಿದರೆ ಉತ್ತರ ಬರಲಿಲ್ಲ. ಹಗ್ಗ ಜಗ್ಗಿದೆವು. ಅದೊಂದೇ ಬರತೊಡಗಿತು. ಏನಿದು ಎನ್ನುತ್ತಿರುವಾಗ ಲಾಪ್ಕಾ ನಗುತ್ತಲೇ ಬಂದ. "ಹಂ ಬಹೂತ್ ದೂರ ಗಯಾ, ಕ್ಯಾಂಪಕೀ ಜಾಗಾ ಹೈ" ಎಂದನಾತ.

ಗವಿಯೊಳಕ್ಕೆ ಹೋಗಿ ಎರಡು ಡೇರೆ ಹಾಕಿದೆವು. ಸುತ್ತಲೂ ನೀಲಿ ಬರ್ಫವಿತ್ತು. ಗವಿಯ ಛಾವಣಿಯಿಂದ ಬರ್ಫದ ಭಾರಿ ಬತ್ತಿಗಳು ತೂಗಾಡುತ್ತಿದ್ದವು. ಇದೇ ನಮ್ಮ ಸಾಹಸದ ಕೊನೆಯೆ ಎಂದು ಯೋಚಿಸುತ್ತ ಬಿದ್ದುಕೊಂಡೆ. ಉಳಿದವರಿಗೂ ನಿದ್ದೆ ಬಂದಿರಲಿಲ್ಲ. ಏನು ಎಂದು ಕೇಳಿದೆ. ಅವರೂ ನನ್ನಂತೆಯೆ ಯೋಚಿಸುತ್ತಿರುವುದು ತಿಳಿಯಿತು.

ಜೂನ್ ೧೦ ರ ರಾತ್ರಿ ಅತ್ಯಂತ ವೇದನಾಮಯವಾಗಿತ್ತು. ಆ ಬರ್ಫದ ಗೋಡೆಯ ಬಿರುಕುಗಳಿಂದ ಬರುತ್ತಿದ್ದ ಧ್ವನಿ, ಸಡಿಲಾಗಿ ತೂಗುತ್ತಿದ ಗವಿಯ ಚಪ್ಪರ ಯಾವಾಗ ಕುಸಿದು ತಲೆಯ ಮೇಲೆ ಬೀಳುವುದೋ ಎಂಬ ಭಯ ಇವುಗಳಿಂದ ರಾತ್ರಿಯಿಡೀ ನಾವು ಎಚ್ಚರದಿಂದಿದ್ದೆವು; ಪಾರು ಮಾಡಪ್ಪಾ ದೇವರೇ ಎಂದು ಪ್ರಾರ್ಥಿಸಿಕೊಳ್ಳುತ್ತಿದ್ದೆವು.

ಅದರೆ ರಾತ್ರಿ ಸುರಕ್ಷಿತವಾಗಿ ಕಳೆಯಿತು. ಹವೆ ತೀರ ಕೆಟ್ಟಿತ್ತು. ಹವಾಮಾನ ಶಾಸ್ತ್ರದ ಸಾಕಷ್ಟು ಪರಿಚಯವಿರುವ ಚೌಧುರಿ ಮಳೆಗಾಲದ ಹವೆ ಆರಂಭವಾಗಿದೆ ಎಂದರು. ನಾನು

ಸಂದಿಗ್ಧದಲ್ಲಿ ಬಿದ್ದೆ. ಒಂದೇ ನಾನು ಅಪಯಶಸ್ಸನ್ನು ಒಪ್ಪಿಕೊಂಡು ಹಿಂತಿರುಗಬೇಕು, ಇಲ್ಲವೆ ಮಳೆಗಾಲವನ್ನು ಎದುರಿಸಿ ಹೋರಾಡಬೇಕು. ಎರಡು ಕಾರಣಗಳಿಗಾಗಿ ಮಳೆಗಾಲದಲ್ಲಿ ನೀಲಕಂಠವನ್ನೇರಲು ಯತ್ನಿಸಬಾರದು ಎಂದು ಸ್ಮಿತ್ ಬರೆದಿದ್ದರು. ಹಿಮಾಲಯದ ಪ್ರದೇಶದಲ್ಲಿ ಮಳೆ ನಿಲ್ಲುವ ಸಂಭವ ತೀರ ಕ್ವಚಿತ್ತಾಗಿರುವುದು ಒಂದು ಕಾರಣವಾದರೆ ನೀಲಕಂಠದ ಇಳಿಜಾರಾದ ತಪ್ಪಲುಗಳಲ್ಲಿ ಮಳೆಗಾಲದಲ್ಲಿ ಅವೆಲಾಂಚ್‌ಗಳುರುಳುವುದು ಬಹಳ ಹೆಚ್ಚಾಗುವುದು ಎರಡನೆಯ ಕಾರಣವಾಗಿತ್ತು.

ತುಂಬ ವಿಚಾರ ಮಾಡಿದ ಬಳಿಕ ಹವೆ ಕರುಣೆ ತೋರೀತು ಎಂಬ ಆಶೆಯಿಂದ ಇನ್ನೂ ಎರಡು ದಿನಗಳನ್ನು ಪರ್ವತದ ಮೇಲೆಯೆ ಕಳೆಯಲು ನಾನು ನಿರ್ಧರಿಸಿದೆ.

ಈಗ ತ್ವರಿತವಾಗಿ ಕೆಲಸ ಮಾಡುವುದು ಮತ್ತು ಹೆಚ್ಚಿನ ಒಜ್ಜೆಯನ್ನು ಸಂಗಡ ಇಟ್ಟುಕೊಳ್ಳದೆ ಮುಂದುವರಿಯುವುದು ಮುಖ್ಯವಾಗಿತ್ತು. ನಾವು ಮೇಲೆ ಒಂದೇ ಒಂದು ರಾತ್ರಿ ಕಳೆಯುವ ವಿಚಾರ ಮಾಡಿದ್ದೆವಾದ್ದರಿಂದ ನಾವು ಏಳು ಜನರಿದ್ದರೂ ಒಬ್ಬನಿಗಷ್ಟೇ ಸಾಲುವ ಒಂದು ಚಿಕ್ಕ ಡೇರೆ, ಎರಡು ದಿನದ ಆಹಾರ, ಚಿಮಣಿಯೆಣ್ಣೆ ಹಾಗೂ ನಾಲ್ಕು ಹಗ್ಗಗಳು ಮತ್ತು ಹಿಂ ಬರ್ಫ ಕೆದರುವ ಹಾರೆ ಇಷ್ಟನ್ನು ಮಾತ್ರ ಒಯ್ಯಲು ನಿರ್ಧರಿಸಿದೆ. ಮಲಗುವ ಚೀಲಗಳನ್ನು ಸಹ ಒಯ್ಯದೆ ಕುಳಿತುಕೊಳ್ಳುವುದಕ್ಕಾಗಿ ಎರಡು ಗಾಳಿ ತುಂಬುವ ಚಾಪೆಗಳನ್ನು ಮಾತ್ರ ಒಯ್ಯಬೇಕೆಂದು ಮಾಡಿದೆ.

ನಮಗಿದ್ದ ಅಲ್ಪ ಸಮಯದಲ್ಲಿ ನಾವು ಈ ಮೊದಲೇ ಆರಿಸಿದ್ದ ಸ್ಥಳದಿಂದ ಆ ಬರ್ಫದ ಗೋಡೆಯನ್ನು ಏರುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿತ್ತು. ಈಗ ನಮ್ಮ ಮುಂದಿರುವ ಮಾರ್ಗವೆಂದರೆ ಆ "ಸಾವಿನ ಕೊರಕಲು" ಒಂದೇ ಆಗಿತ್ತು.

ಧುರೀಣನಾದ ನಾನು ಇಬ್ಬರು ಶರ್ಪಾರೊಂ

ದಿಗೆ ಮೊದಲನೆಯ ಹಗ್ಗವನ್ನು ಹಿಡಿಯಲು ನಿರ್ಧರಿಸಿದೆ. ಎರಡನೆಯ ಹಗ್ಗದ ಮೇಲೆ ೫೦ ಗಜ ದೂರದಲ್ಲಿ ಶರ್ಮಾ, ಚೌಧುರಿ ಮತ್ತು ಇನ್ನಿಬ್ಬರು ಶರ್ಪಾ ಜನರು ಬರಲಿದ್ದರು.

ನಾವು ಮುಂಜಾನೆ ೭ ಗಂಟೆಗೆ ಹೊರಟೆವು. ಪ್ರತಿ ಮಿನಿಟಿಗೂ ಹವೆ ಕೆಡುತ್ತಲಿತ್ತು. ಪ್ರಕಾಶ ತೀರ ಮಂದವಾಗಿತ್ತು. ಕೆಲ ಗಜಗಳ ಆಚೆ ಏನೂ ಕಾಣಿಸುತ್ತಿರಲಿಲ್ಲ. ಕೆಲ ನಿಮಿಷವಾದರೂ ಹವೆ ಸುಧಾರಿಸಿ ಪ್ರಕಾಶ ಹೆಚ್ಚಿ ಒಂದು ಹಾದಿಯೇನಾದರೂ ಕಂಡೀತು ಎಂಬುದೇ ನಮಗಿರುವ ಆಶೆಯಾಗಿತ್ತು. ಆ ಕೊರಕಲು ನಾವೆಣಿಸಿದ್ದಕ್ಕಿಂತ ತೀರ ಕಡಿದಾಗಿತ್ತು. ಪ್ರತಿಯೊಂದು ಮೆಟ್ಟಲನ್ನೂ ಕಡಿದೇ ಮಾಡಬೇಕಾಗಿತ್ತು. ನಾನು ಬರ್ಫವನ್ನು ಕಡಿಯುತ್ತಿದ್ದಾಗ ಉರುಳಬಹುದಾದ ಅವೆಲಾಂಚ್ ಮತ್ತು ನಮ್ಮ ಎಡ-ಗಡೆಗೆ ನಮ್ಮ ಮೇಲ ಬಾಗಿ ನಿಂತಿದ್ದ ಬರ್ಫದ ಗೋಡೆಗಳಿಂದ ಬರಬಹುದಾದ ಇಮ್ಮಡಿ ಗಂ-ಡಾಂತರದ ವಿಚಾರ ನನ್ನ ತಲೆಯಲ್ಲಿ ಸುತ್ತುತ್ತಲಿತ್ತು.

ಎರಡು ತಾಸುಗಳ ದೃಢನಿರ್ಧಾರದ ಪ್ರಯ-ತ್ನದಿಂದ ನಾವೊಂದು ವಿಶಾಲವಾದ ಬಂಡೆಗಲ್ಲನ್ನು ತಲುಪಿದೆವು. ನಾವು ಅದರ ಮೇಲೆ ತಂಗಿದೆವು. ಕೆಳಗೆ ಮೂಲ ಶಿಬಿರದಲ್ಲಿ ಇದ್ದವರೇನಾದರೂ ನಮ್ಮನ್ನು ಕಂಡಿದ್ದರೆ ಮೃತ್ಯುವಿನ ಬಾಯಲ್ಲಿಯೆ ವಿಶ್ರಾಂತಿ ಪಡೆಯುತ್ತಿರುವ ಮೂರ್ಖರು ಎಂದು ನಮ್ಮನ್ನು ಕರೆಯಬಹುದಾಗಿತ್ತು.

ಈಗ ಸಾವಿನ ಕೊರಕಲಿನ ಗೋಜನ್ನು ಬಿಟ್ಟು ಬರ್ಫದ ಗೋಡೆಯ ಸ್ವಲ್ಪ ಸುತರವಾಗಿದ್ದ ಎಡಬದಿಯಿಂದ ಮುಂದೆ ಹೋಗುವುದೊಂದೇ ನಮಗುಳಿದಿರುವ ಮಾರ್ಗ ಎಂದು ನನಗನಿಸಿತು. ಫುರಬಾ ಮುಂದಾಳಾದ. ಅರ್ಧ ತಾಸಿನಲ್ಲಿ ನಾವು ಗೋಡೆಯ ಆಚೆ ಇದ್ದೆವು. ನಮಗಾದ ಆನಂದವನ್ನು ಹೇಳಲಾಸಲ್ಲ. ಇನ್ನು ಎರಡು ದಿನಗಳಲ್ಲಿ ಶಿಖರವನ್ನೇರಿ ತಿರುಗಿ ಬರುವುದು ಸಾಧ್ಯ ಎಂದೆನಿಸತೊಡಗಿತು.

ಮಧ್ಯಾಹ್ನ ೩ ಗಂಟೆಗೆ ನಾವು ನೀಲಕಂಠದ ಪಕ್ಕದ ಬಂಡೆಗಲ್ಲಿನ ಬುಡಕ್ಕೆ ಬಂದೆವು. ಈ ಬಂಡೆಗಲ್ಲಗುಂಟ ನೇರವಾಗಿ ಶಿಖರವನ್ನೇರಲು ಸಾಧ್ಯವಿದೆಯೆಂದು ತೋರುತ್ತಿತ್ತು. ಆದರೆ ನಿಜವಾಗಿ ತುದಿಯ ವರೆಗೆ ಆ ಮಾರ್ಗವಾಗಿ ಹೋಗಬಹುದೆಂದು ನನಗೆ ನಂಬಿಗೆಯಿರಲಿಲ್ಲ. ಪರ್ವತದ ಮೇಲೆ ಮೋಡಗಳು ಕವಿದದ್ದರಿಂದ ನಮಗೆ ಸ್ಪಷ್ಟವಾಗಿ ಏನೂ ಕಾಣಿಸುತ್ತಿರಲಿಲ್ಲ. ಮೋಡಗಳು ಚದುರಿ ಹೋಗುವುದನ್ನು ಕಾಯುತ್ತ ನಾವು ಇನ್ನಿಷ್ಟು ಚೆನ್ನಾಗಿ ಕಾಣಲಿ ಎಂದು ಮತ್ತೂ ೨೦೦ ಅಡಿ ಮೇಲೇರಿದೆವು. ಒಂದು ವಿಶಾಲ ಕೊರಕಲನ್ನು ಸುತ್ತಿ ಹಿಮೀ-ಭೂತ ಇಳಿಜಾರಿನ ಮೇಲಿಂದ ತೀರ ಪಶ್ಚಿಮ ತುದಿಯ ಶಿಖರದ ಬೆನ್ನೇಣಿನ ವರೆಗೆ ಹೋಗುವ ಹಾದಿಯೊಂದನ್ನು ಕಂಡು ನಾನು ಸಮಾಧಾನದ ಉಸಿರ್ಗರೆದೆ.

ನಾವು ಮುಂದೆ ಹೆಜ್ಜೆಯಿಡಬೇಕೆನ್ನುವಷ್ಟರಲ್ಲಿ ಒಂದರ ಹಿಂದೆ ಒಂದರಂತೆ ಎರಡು ದೊಡ್ಡ ಹಿಮಶಿಲೆಗಳ ರಾಶಿ ಉರುಳಿ ಬಂತು. ಶರ್ಮರ ತೊಡೆಗೆ ಒಂದು ಶಿಲೆ ಬಡಿಯಿತು. ಪುಣ್ಯಕ್ಕೆ ವಿಶೇಷ ಪೆಟ್ಟಾಗಲಿಲ್ಲ. ದಿನದ ಈ ಸಮಯದಲ್ಲಿ ಆ ವಿಶಾಲ ಕೊರಕಲನ್ನು ದಾಟಲೆತ್ನಿಸುವುದು ಮೂರ್ಖತನದ ಪರಮಾವಧಿ ಎಂದು ಸ್ಪಷ್ಟವಾಗಿತ್ತು.

ಸಂಜೆ ಸಮೀಪಿಸಿತು. ನಾವಿದ್ದಲ್ಲಿ ಠಾಣ್ಯ ಹಾಕುವುದು ಸಾಧ್ಯವಿರಲಿಲ್ಲ. ನಮ್ಮ ಮೂರನೆಯ ಶಿಬಿರಕ್ಕೆ ಮರಳುವುದೂ ಶಕ್ಯವಿರಲಿಲ್ಲ. ಆದ್ದರಿಂದ ನಾವು ಆ ಬಂಡೆಗಲ್ಲಿನ ಬುಡದಲ್ಲಿದ್ದ ಎರಡೇ ಅಡಿ ಅಗಲದ ಒಂದು ಸಂದಿನಲ್ಲಿ ನಮ್ಮ ಡೇರೆ ಹಾಕಬೇಕಾಯಿತು. ಅವೆಲಾಂಚ್‌ಗಳಲ್ಲಿ ಹುಗಿದು ಹೋಗುವ ಭಯವಿದ್ದಿತಾದರೂ ಬೇರೆ ಮಾರ್ಗವಿರಲಿಲ್ಲ. ನಾವು ಆ ಇಕ್ಕಟ್ಟಾದ ಸ್ಥಳದಲ್ಲಿ ಉಪ್ಪಿನ ಕಾಯಿಯಂತೆ ತುಂಬಿ ಹೋಗಿದ್ದೆವು. ಒಬ್ಬರ ಸಲುವಾಗಿ ಇದ್ದ ಚಿಕ್ಕ ಡೇರೆಯಲ್ಲಿ ಏಳು ಜನ ತುಂಬಿಕೊಂಡಿದ್ದೆವು. ಡೇರೆಯ ಒಳಗೆ ಹೊಕ್ಕಮೇಲೆ ಒಂದಿಷ್ಟು ಚಲನವಲನವೂ ಸಾಧ್ಯವಿರಲಿಲ್ಲ. ತುಸು ಹೊತ್ತಿನಲ್ಲಿಯೆ ಉಸಿರು ಗಟ್ಟಿದಂತಾಗಿ ಡೇರೆಗೆ ಒಂದು ತೂತು ಮಾಡಿದೆವು. ಇದೇನೂ ಯೋಗ್ಯ ಪರಿಹಾರವಾಗಲಿಲ್ಲ. ಏಕೆಂದರೆ ಆ ತೂತಿನಿಂದ ಹಿಮ ಒಳಗೆ ನುಸುಳತೊಡಗಿತು.

ನಾನು ನಸುಕಿನಲ್ಲಿ ನಾಲ್ಕು ಗಂಟೆಗೆ ಎದ್ದು ಉಳಿದವರನ್ನೆಬ್ಬಿಸಿದೆ. ಆದರೆ ಒಮ್ಮೆ ಒಬ್ಬ ಮಾತ್ರ ಉಡುಪು ತೊಟ್ಟುಕೊಳ್ಳಬಲ್ಲನಾದ್ದರಿಂದ ನಮ್ಮ ಸಿದ್ಧತೆಗೇ ನಾಲ್ಕು ತಾಸು ಹಿಡಿದುಹೋಯಿತು. ಮುಂದಕ್ಕೆ ಹೋಗಲು ಶರ್ಪಾರು ಸಿದ್ಧರಿರಲಿಲ್ಲ. ಅವರಲ್ಲೊಬ್ಬ ನನ್ನ ಹತ್ತರ ಬಂದು "ಪಾನಿ ನಹಿ ಹೈ, ಖಾನಾ ನಹಿ ಹೈ; ಭರಫ ಪಡತಾ ಹೈ. ಔರ ಸ್ಲೀಪಿಂಗ್ ಬ್ಯಾಗ್ ಭೀ ನಹೀ ಹೈ. ಅಭಿ ಆಗೆ ಜಾನಾ ಠೀಕ ನಹಿ ಹೈ" ಎಂದ ಅವರೊಂದಿಗೆ ಗೋರ್ಖಾಲಿ ಭಾಷೆಯಲ್ಲಿ ಮಾತಾಡಿ ಮನವೊಲಿಸಲು ನಾನು ಚೌಧುರಿಯವರಿಗೆ ಹೇಳಿದೆ. (ಅವರಿಗೆ ಈ ಭಾಷೆ ಈಗ ಚೆನ್ನಾಗಿ ಬರುತ್ತದೆ). ಶರ್ಪಾರ ಮನ-ವೊಲಿಸಲು ಬಹಳ ವೇಳೆ ಹಿಡಿಯಲಿಲ್ಲ. "ಸಾವಿನ ಕೊರಕಲ"ನ್ನು ದಾಟಿ, ಭೀಕರ ರಾತ್ರಿಯನ್ನು ಸಜೀವವಾಗಿ ಕಳೆದ ಮೇಲೆ ಈಗ ಹಿಂದೆಗೆಯುವುದೆ? ನಾವು ಕೊರಕಲನ್ನು ದಾಟುವ ಪ್ರಯತ್ನಕ್ಕೆ ತೊಡಗಿ ಮೂರು ತಾಸುಗಳ ನಂತರ ಯಶಸ್ವಿಯಾದೆವು.

ಆಚೆ ಕಡೆ ಇದ್ದ ಬಂಡೆಯ ಉಬ್ಬು ಸಾಲು ಹೆಚ್ಚು ಕಡಿಮೆ ಲಂಬಾಕೃತಿಯದಾಗಿತ್ತು. ನಾನು ಏರುತ್ತ ಮೊದಲನೇ ಹಗ್ಗದ ಹಿಡಿತಕ್ಕಾಗಿ ಬಂಡೆಯ ಬರ್ಫದ ಮುಖ ಕೆತ್ತುತ್ತಿದ್ದಾಗ ತುಣುಕುಗಳು ಚಿಮ್ಮಿ ಉರುಳಿದವು. ಕೆಳಗಿದ್ದವರು ಅದರ ಹೊಡೆತ ತಪ್ಪಿಸಿಕೊಳ್ಳಲು ಚೀಲಗಳನ್ನು ತಲೆಯ ಮೇಲೆ ಹೊತ್ತುಕೊಳ್ಳಬೇಕಾಯಿತು. ಒಂದು ತುಣುಕು ಹಾರಿ ಚೌಧುರಿಯವರ ಮುಂಗೈಗೆ ಬಡಿದು ಅವರ ಗಡಿಯಾರ ಒಡೆದು ಹೋಯಿತು.

ಮೊದಲನೆಯ ಹಗ್ಗ ಬೆಟ್ಟದ ಬೆನ್ನೇಣನ್ನು ಅಂತೂ ೨॥ ಗಂಟೆಗೆ ಮುಟ್ಟಿತು. ತುದಿಯ ವರೆಗೂ ಹೋಗಿ ತಿರುಗಿ ಬರಬೇಕೆಂದು ಯೋಚಿಸಿದ್ದರೂ ಎರಡನೆಯ ಹಗ್ಗವಿನ್ನೂ ಮೇಲೆ ಬಂದಿರಲಿಲ್ಲವಾದ್ದರಿಂದ ಮತ್ತು ಹವೆ ತೀರ ಕೆಟ್ಟಿತ್ತಾದ್ದರಿಂದ ನಾನು ಮುಂದಿನ ಪ್ರಯತ್ನ ಬಿಟ್ಟೆ.

ನಮ್ಮ ಬಳಿ ಆಹಾರವುಳಿದಿಲ್ಲ ಎಂದು ಗೊತ್ತಿದ್ದರೂ ಇನ್ನೊಂದು ರಾತ್ರಿಯನ್ನು ಇಲ್ಲೇ ಕಳೆದು ಮರುದಿನ (ಜೂನ್ ೧೩) ಶಿಖರವನ್ನೇರಲು ಪ್ರಯತ್ನಿಸುವ ನಿಶ್ಚಯ ಮಾಡಿದೆ. ೪ ಗಂಟೆಗೆ ಶರ್ಪಾ, ಚೌಧುರಿ ಮತ್ತು ಇನ್ನಿಬ್ಬರು ಶರ್ಪಾರು ಮೇಲೇರಿ ಬಂದಾಗ ಅವರಿಗೆ ನನ್ನ ನಿರ್ಧಾರ ತಿಳಿಸಿದೆ. ಚೌಧುರಿ ಕೂಡಲೆ ಒಪ್ಪಿದರು. ನಮ್ಮ ಐದನೆಯ ಶಿಬಿರಕ್ಕಾಗಿ ೨೧,೨೦೦ ಅಡಿ ಎತ್ತರದಲ್ಲಿ ಸ್ಥಳ ಹುಡುಕತೊಡಗಿದೆವು.

ಗಾಳಿ ಬಲವತ್ತಾಗಿದ್ದರಿಂದ ಬಂಡೆಯ ಬೆನ್ನೇಣಿನ ಮೇಲೆ ಶಿಬಿರ ಹೂಡುವುದು ಸಾಧ್ಯವಿರಲಿಲ್ಲ. ಆದರೆ ಸುದೈವದಿಂದ ಗವಿಯಂತಿದ್ದ ಒಂದು ದೊಡ್ಡ ಬಿರುಕು ನಮಗೆ ಕಾಣಿಸಿತು. ಸಮೀಪ ಹೋಗಿ ನೋಡಲು ಆ ಬಿರುಕು ಆಳವಾಗಿರುವುದು ತಿಳಿಯಿತು. ಇಬ್ಬರು ಶರ್ಪಾರು ಒಳಗೇನಿದೆಯೆಂದು ನೋಡಲು ಹೊರಟರು. ಹತ್ತಾರು ನಿಮಿಷ ಕಳೆದರೂ ಅವರು ತಿರುಗಿ ಬಾರದ್ದರಿಂದ ನಾನೇ ಒಳಗೆ ಹೋದೆ. ಒಳಗೆ ನೆಲ ಸಮತಟ್ಟಾಗಿ ವಿಶ್ರಾಂತಿಗೆ ಅನುಕೂಲವಾಗಿತ್ತು.

ಎಲ್ಲರೂ ಕುಳಿತುಕೊಂಡೆವು. ನಮ್ಮ ಸುತ್ತ ಬರ್ಫದ ಮನುಷ್ಯರನ್ನೂ ಪಶುಗಳನ್ನೂ ಹೋಲುವ ಚಿತ್ರವಿಚಿತ್ರ ಆಕೃತಿಗಳು ಮೂಡಿದ್ದವು. ಒಂದು ಅರ್ಧ ಟಾಫಿ, ಒಂದು ಚಿಮುಟಿಗೆ ಖಾರದ ಪುಡಿ ಮತ್ತು ಒಂದು ಕೆಮ್ಮಿನ ಗುಳಿಗೆ ನಮ್ಮ ಅಂದಿನ ಭೋಜನವಾಗಿತ್ತು. ಹಸಿವೆ ಹೊಟ್ಟೆಯನ್ನು ಕೊರೆಯುತ್ತಿತ್ತು. ಅತ್ತಿತ್ತ ಅಲುಗಾಡಲು ಸಾಧ್ಯವಿರದ್ದರಿಂದ ಕೈಕಾಲು ಮರಗಟ್ಟಿಂತಾ

ಗಿತ್ತು. ಆದರೆ ಗಾಳಿ ಮತ್ತು ಹಿಮದಿಂದಾದರೂ ಸುರಕ್ಷಿತವಾಗಿದ್ದೆವಲ್ಲ.

ನಮ್ಮ ನಿರೀಕ್ಷೆ ತಪ್ಪಿ ೧೩ ರಂದು ಹವೆ ಇನ್ನಷ್ಟು ಕೆಟ್ಟಿತು. ನಾಲ್ಕು ತಾಸುಗಳಲ್ಲಿ, ಶಿಖರದ ತುದಿ ಮುಟ್ಟಲು ಉಳಿದಿದ್ದ ಇನ್ನೂ ೪೦೦ ಅಡಿಗಳನ್ನು ಏರಿ ಸಂಜೆಯೊಳಗಾಗಿ ಕೆಳಗಿನ ಶಿಬಿರಕ್ಕೆ ಹೋಗಬೇಕು ಎಂದು ನಾನು ಹಂಚಿಕೆ ಮಾಡಿದ್ದೆ. ಏಕೆಂದರೆ ನಮ್ಮಲ್ಲಿ ಆಹಾರವಿರಲಿಲ್ಲ. ನೀರೂ ಇರಲಿಲ್ಲ. ನಮ್ಮ ದೇಹಗಳು ಬಲು ಭರದಿಂದ ಒಣಗತೊಡಗಿದ್ದವು.

ನಮ್ಮಲ್ಲಿ ಎರಡು ತಂಡಗಳನ್ನು ಮಾಡಲು ನಿರ್ಧರಿಸಿದೆ. ಒಂದರಲ್ಲಿ ನಾನು, ಶರ್ಮ ಮತ್ತು ಇಬ್ಬರು ಶರ್ಪಾರು. ಇನ್ನೊಂದರಲ್ಲಿ ಚೌಧುರಿ ಮತ್ತು ಇಬ್ಬರು ಶರ್ಪಾರು. ಚೌಧುರಿಯವರ ಹಗ್ಗ ಮುಂದೆ ಸಾಗಿತು. ಆದರೆ ನಾಲ್ಕು ತಾಸ ಯತ್ನಿಸಿದರೂ ಶಿಖರದ ಬೆನ್ನೇಣನ್ನು ಏರಲು ಸಾಧ್ಯವಾಗಲಿಲ್ಲ. ನಮ್ಮ ಎಣಿಕೆ ತಪ್ಪಾಗಿತ್ತು. ಇನ್ನೂ ಒಂದು ದಿನ ಪರ್ವತದ ತುದಿಯ ಮೇಲೆ ಕಳೆಯಬೇಕು ಇಲ್ಲವೆ ಪ್ರಯತ್ನವನ್ನು ಬಿಟ್ಟು ಬಿಡಬೇಕು ಎಂಬ ಅವಸ್ಥೆ ನಮ್ಮದಾಯಿತು.

ನಾನು ಬಲು ಕಠಿನವಾದ ನಿರ್ಣಯವೊಂದನ್ನು ಮಾಡಬೇಕಾಯಿತು. ತಂಡದ ಧುರೀಣನಾದ ನಾನು ಯಾವ ವಿಧವಾದ ಮೂರ್ಖತನವನ್ನೂ ಮಾಡದೆ ತಂಡವನ್ನು ರಕ್ಷಿಸಬೇಕಾಗಿತ್ತು. ಯಾವ ಶಿಖರವೂ ಮನುಷ್ಯ ಬಲಿಗೆ ಯೋಗ್ಯವಾದುದಲ್ಲ. ಶಿಖರವೇನೂ ಓಡಿ ಹೋಗುವುದಿಲ್ಲ. ಮತ್ತೊಮ್ಮೆ, ಹೆಚ್ಚು ಅನುಕೂಲ ಪರಿಸ್ಥಿತಿಯಲ್ಲಿ ಪ್ರಯತ್ನ ಮಾಡಲು ಸಮಯವಿದ್ದೇ ಇರುತ್ತದೆ.

ಆದರೆ 'ಇದುವರೆಗೆ ಯಾರೂ ಮುಟ್ಟದಿದ್ದ ಸ್ಥಳವನ್ನು ಬಹಳ ಗಂಡಾಂತರಗಳನ್ನೆದುರಿಸಿದ ಮೇಲೆ ನಾವು ಮುಟ್ಟಿದ್ದವು. ಫಲ ಕೈಗೆ ಎಟುಕುವಂತಿತ್ತು. ಇನ್ನು ಮುಂದೂ ಗಂಡಾಂತರಗಳಿದ್ದರೂ ನಾವು ಈಗಾಗಲೇ ಎದುರಿಸಿದ ಗಂಡಾಂತರಗಳ ಮುಂದೆ ಅವೇನೂ ಹೆಚ್ಚು ಭೀಕರವಾಗಿದ್ದಂತೆ ತೋರುತ್ತಿರಲಿಲ್ಲ.

ನಿಜ, ಆದರೆ ಮಳೆಗಾಲ ಪ್ರಾರಂಭವಾಗಿತ್ತು. ಹಿಮ ದಟ್ಟವಾಗಿ ಬೀಳುತ್ತಿತ್ತು. ಮೂರು ರಾತ್ರಿಗಳನ್ನು ನಿದ್ದೆಯಿಲ್ಲದೆ ಅತ್ಯಂತ ಕಷ್ಟದಲ್ಲಿ ಕಳೆದಿದ್ದೆವು. ಮೇಲಾಗಿ ನಮ್ಮ ಬಳಿ ಇನ್ನು ನಾಲ್ಕೇ ನಾಲ್ಕು ಬರ್ಫ ಅಗೆಯುವ ಹಾರೆಗಳಿದ್ದವು. ಕೆಳಗಿಳಿಯಲು ಅವು ಅಗತ್ಯವಾದ್ದರಿಂದ ಅವನ್ನು ಕಳೆದುಕೊಳ್ಳುವಂತಿರಲಿಲ್ಲ. ಪ್ರಯತ್ನವನ್ನು ಬಿಟ್ಟುಬಿಡೋಣವೆಂದು ನಾನೆಂದರೂ ಶರ್ಮಾ ಕೇಳಲಿಲ್ಲ. ಅವರ ಆಗ್ರಹಕ್ಕೆ ಒಳಗಾಗಿ ನೀಲಕಂಠದ ಆಹ್ವಾನವನ್ನೆದುರಿಸಲು ನಿರ್ಧರಿಸಿದೆ.

ಶರ್ಮಾ ಉತ್ಸಾಹದಿಂದ ಕುಣಿಯುತ್ತಿದ್ದರು. ಚೌಧುರಿ ಒಮ್ಮೆ ಪ್ರಬಲ ಪ್ರಯತ್ನವನ್ನು ಮಾಡಿದ್ದರಾದ್ದರಿಂದ ಮತ್ತೊಮ್ಮೆ ಅವರು ಮುಂದಾಗುವ ಮಾತೇ ಇರಲಿಲ್ಲ. ಐದನೆಯ ಶಿಬಿರದಲ್ಲಿ ನಾನಿರುವುದು ಅಗತ್ಯವಾಗಿತ್ತು. ಯಾವ ಹೊತ್ತಿಗೆ ಏನಾದೀತೊ! ಅಗತ್ಯವೆನಿಸುವ ನಿರ್ಣಯಗಳನ್ನು ಸ್ವೀಕರಿಸಲು ಧುರೀಣನಾದವ ಸದಾ ಸಿದ್ಧನಿರಬೇಕಾಗುತ್ತದೆ.

ಆದ್ದರಿಂದ ಶಿಖರವನ್ನೇರುವ ಕಾರ್ಯಕ್ಕೆ ಶರ್ಮಾರನ್ನು ಗೊತ್ತು ಮಾಡಿದೆ. ಪುರಬಾ ಮತ್ತು ಲಖಪಾ ಎಂಬಿಬ್ಬರು ಶರ್ಪಾರೊಂದಿಗೆ ಅವರು ಪ್ರಯತ್ನ ಮಾಡಬೇಕು. ನಮಗೆ ಈಗ ಜೀವದಷ್ಟೇ ಪ್ರಿಯವಾಗಿದ್ದ ನಾಲ್ಕು ಹಾರೆಗಳನ್ನು ಶರ್ಮಾರಿಗೆ ಕೊಟ್ಟೆ. ಆದಷ್ಟು ಪ್ರಯತ್ನ ಮಾಡಿ ಅವನ್ನು ತಿರುಗಿ ತನ್ನಿ ಎಂದೆ.

ಅನೇಕ ಶಿಖರಗಳನ್ನೇರಿದ, ಬಗೆಬಗೆಯ ಹವಾಮಾನವನ್ನೆದುರಿಸಿದ ಶರ್ಪಾರು ಕೊಂಚ ಅರೆಮನಸಿನಿಂದಲೇ ಇದ್ದರು. ಆದರೆ ಕೊನೆಗೆ ಅವರ ಸಾಹಸಪ್ರಿಯತೆಗೆ ಜಯವಾಗಿ ಅವರು ಸಿದ್ಧರಾದರು.

ಶಿಖರದ ತುತ್ತತುದಿಯ ಬೆನ್ನೇಣನ್ನು ತಲುಪಲು ೧೫೦ ಅಡಿ ಮೇಲಕ್ಕಿದ್ದ ಕಡಿದಾದ ಮೈ-ಯನ್ನು ಏರಬೇಕಾಗಿತ್ತು. ಆದಷ್ಟು ಬೇಗ ಈ ಕಾರ್ಯ ಮುಗಿಯಬೇಕಿತ್ತು. ಏಕೆಂದರೆ ಆಗಲೇ

೧೦ ಹೊಡೆದುಹೋಗಿತ್ತು. ಶರ್ಮಾರ ತಂಡ ಉತ್ಸಾಹದಿಂದ ಕಾರ್ಯ ಪ್ರಾರಂಭಿಸಿತು. ಐದು ತಾಸುಗಳ ನಂತರ ಅವರು ಆ ಬೆನ್ನೇಣನ್ನು ತಲುಪಿದರು. ಇನ್ನೂ ಅವರು ಸುಮಾರು ೫೦೦ ರಿಂದ ೮೦೦ ಗಜ ಅಂತರದವರೆಗೆ ನಡನಡುವೆ ಇದ್ದ ಬಂಡೆಗಲ್ಲಿನ ಗೂನುಗಳನ್ನು ದಾಟಿ ಶಿಖರವನು ತಲುಪಬೇಕಾಗಿತ್ತು. ಒಂದು ಬಂಡೆಗಲ್ಲನ್ನೇರುವುದೇ ತಡ, ಅದಕ್ಕಿಂತ ಎತ್ತರವಾದ ಇನ್ನೊಂದು ಗೂನು ಬರುತ್ತಿತ್ತು. ದಣಿದು ಸುಣ್ಣವಾದ ಶರ್ಪಾರು ಮುಂದಕ್ಕೆ ಹೋಗಲು ಸಿದ್ಧರಿರಲಿಲ್ಲ. ಶರ್ಮಾರ ಅವಿರತ ಪ್ರೋತ್ಸಾಹ ಮತ್ತು ಅಮಿತ ಉತ್ಸಾಹಗಳು ಅವರನ್ನು ಮುನ್ನಡೆಸುತ್ತಿದ್ದವು.

ಹಿಮ ಇನ್ನೂ ದಟ್ಟವಾಗಿ ಬೀಳುತ್ತಲಿತ್ತು. ಗಾಳಿ ಬಲವಾಗಿ ಬೀಸುತ್ತಿತ್ತು. ಒಂದು ನಿಮಿಷವೂ ಹಿಂದೆ ಮುಂದೆ ನೋಡದೆ ಶರ್ಮಾ ಮತ್ತು ಅವರ ಜನ ಮುಂದೊತ್ತುತ್ತಿದ್ದರು ನಾಲ್ಕನೆಯ ಗೂನನ್ನೇರಿ ನೋಡುತ್ತಾರೆ, ಆ ಬದಿಯಿಂದ ಪರ್ವತ ಇಳಿಮುಖವಾಗಿತ್ತು. ಹಾ! ಅವರು ಶಿಖರವನ್ನು, ನೀಲಕಂಠ ಶಿಖರವನ್ನೇರಿ ನಿಂತಿದ್ದರು. ಆಗ ೫.೧೫ ಗಂಟೆ.

ಶಿಖರದ ಆ ತುತ್ತ ತುದಿಯಲ್ಲಿ ಅವರು ೧೫ ನಿಮಿಷಗಳ ಕಾಲ ನಿಂತರು. ತನ್ನೊಡನೆ ತಂದಿದ್ದ ಪುಷ್ಪಹಾರಗಳನ್ನು ಶರ್ಮಾರು ನೀಲಕಂಠನಿಗೆ ಸಮರ್ಪಿಸಿದರು. ಧೂಪವನ್ನು ಉರಿಸಿ ಭಾರತದ ರಾಷ್ಟ್ರಧ್ವಜ ಮತ್ತು ವಿಮಾನ ದಲದ ಧ್ವಜವನ್ನು ಹಾರಿಸಿದರು. ೧೯೫೯ ರಲ್ಲಿ ನೀಲಕಂಠವನ್ನೇರಲು ಪ್ರಯತ್ನಿಸಿದ್ದ ಐ. ಎ. ಎಫ್. ಟ್ರೆಕ್ಕಿಂಗ್ ಸೊಸೈಟಿ ಈ ವಿಮಾನ ದಲದ ಧ್ವಜವನ್ನು ಕೊಟ್ಟಿತ್ತು.

ಮೂರೂಸಂಜೆಯಾಗತೊಡಗಿತ್ತು. ಆ ಧೀರತ್ರಯರು ಸಾವಕಾಶವಾಗಿ ಕೆಳಗಿಳಿಯತೊಡಗಿದರು. ಅವರಿಗೆ ಇಷ್ಟು ತಡವಾದದ್ದರ ಕಲ್ಪನೆಯೇ ಇರಲಿಲ್ಲ. ನಾವಿದ್ದ ಐದನೆಯ ಶಿಬಿರವನ್ನು ತಲುಪಲು ಐದು ತಾಸುಗಳಾದರೂ ಬೇಕಿದ್ದವು. ನಾವು ಕಾತರದಿಂದ ಅವರ ಹಾದಿ ಕಾಯುತ್ತಲಿದ್ದೆವು. ಕತ್ತಲಾಗುವುದರೊಳಗೆ ನಮ್ಮನ್ನು ಮುಟ್ಟಲು ಸಾಧ್ಯವಿರದ್ದರಿಂದ ಅವರು ರಾತ್ರಿಯನ್ನು ಶಿಖರದ ತಪ್ಪಲಲ್ಲಿ ಎರಡು ಬಂಡೆಗೂನುಗಳ ನಡುವೆ ಕಳೆಯಲು ನಿರ್ಧರಿಸಿದರು.

ಹಸಿವು ನೀರಡಿಕೆ, ದಣಿವುಗಳಿಂದ ಕಂಗಾಲಾದ, ಡೇರೆ ಅಥವಾ ಮಲಗುವ ಚೀಲಗಳಿಲ್ಲದೆ ನಿರಾಶ್ರಿತರಾದ ಅವರು ರಾತ್ರಿಯ ಕತ್ತಲಿನ ಘೋರಸಮಯವನ್ನು ಆ ಬಟ್ಟಬಯಲಲ್ಲಿ ಕಳೆಯಲು ಎದೆ ಮಾಡಿದರು. ನಿರ್ದಯಿಯಾದ ನಿಸರ್ಗದ ಪೆಟ್ಟನ್ನು ಸಹಿಸಿಕೊಳ್ಳಲೆಂದು ಪರಸ್ಪರರಿಗೆ ತೆಕ್ಕೆ ಬಿದ್ದು ಅವರು ನಿಂತುಕೊಂಡು ರಾತ್ರಿಯನ್ನು ಕಳೆದರು. ಬೆಳಗಾಗುವಾಗ ಅವರು ಹೆಚ್ಚು ಕಡಿಮೆ ಹೆಪ್ಪುಗಟ್ಟಿ ಹೋಗಿದ್ದರು.

ಕತ್ತಲಾದರೂ ಅವರು ಬಾರದ್ದನ್ನು ಕಂಡು ನಾವು ಕಂಗಾಲಾದೆವು. ಏನೆಲ್ಲ ಅನಿಷ್ಟಗಳ ವಿಚಾರ ತಲೆ ತಿನ್ನತೊಡಗಿತು. ರಾತ್ರಿ ೧೦ ಗಂಟೆಯವರೆಗೂ ನಮ್ಮ ಸ್ಥಳವನ್ನು ಅವರಿಗೆ ಸೂಚಿಸಲೆಂದು ಆಗಾಗ ಟಾರ್ಚುಗಳನ್ನು ಬೆಳಗುತ್ತಿದ್ದೆವು. ಆದರೆ ಅವರು ಬರುತ್ತಿರುವ ಸುಳಿವು ಕೂಡ ಹತ್ತಲಿಲ್ಲ.

ಅಸ್ವಸ್ಥರಾಗಿ ರಾತ್ರಿ ಕಳೆದೆವು. ಮೂಲ

ಮತ್ತು ಎರಡನೆಯ ಶಿಬಿರದ ಜನರಿಗೆ ಕೆಟ್ಟ ಹವೆಯ ಮೂಲಕ ನಾವು ಕಾಣಿಸುತ್ತಿರಲಿಲ್ಲ ವಾದ್ದರಿಂದ ಅವರೂ ಚಿಂತಾಗ್ರಸ್ತರಾಗಿದ್ದರು. ಅವರು ಪ್ರವರ್ತಕ ಸಮಿತಿಗೆ "ಧುರೀಣ, ಚೌಧರಿ, ಶರ್ಮ ಮತ್ತು ನಾಲ್ವರು ಶರ್ಪಾರು ೧೨ ನೆಯ ತಾರೀಖಿನಿಂದಲೂ ಕಣ್ಮರೆಯಾಗಿದ್ದಾರೆ" ಎಂದು ಸಂದೇಶ ಕಳುಹಿಸಿಬಿಟ್ಟಿದ್ದರು.

ಮರುದಿನ ಮುಂಜಾನೆ ೫ ಗಂಟೆಗೆ ಶಿಖರದ ಮೇಲಿದ್ದವರು ಕೆಳಗಿಳಿಯತೊಡಗಿದರು. ಒಂ-ದೆಡೆ ಆ ಮೂವರೂ ಬೆಳಗಿನ ಆ ಗಟ್ಟಿ ಬರ್ಫದ ಮೇಲೆ ಜಾರಿ ಸುಮಾರು ೫೦ ಅಡಿ ಕೆಳಗೆ ಉರುಳಿದ್ದರು. ಇನ್ನೊಂದೆಡೆ ಒಂದು ಬರ್ಫದ ತುಂಡು ಶರ್ಮಾರ ತಲೆಯ ಮೇಲೆ ಬಿದ್ದು ಮೂರಿಂಚು ಉದ್ದ, ಕಾಲು ಇಂಚು ಆಳದ ಗಾಯಮಾಡಿತು. ಸುಮಾರು ೧೦ ಗಂಟೆಯ ಹೊತ್ತಿಗೆ ಅವರು ಹಾಗೂ ಹೀಗೂ ಜೀವನ್ಮೃತ ಸ್ಥಿತಿಯಲ್ಲಿ ನಾವಿದ್ದಲ್ಲಿಗೆ ಬಂದರು. ಅವರು ಬಂದಿದ್ದು, ಅವರು ವಿಜಯಿಗಳಾದ ಸಮಾಚಾರ, ನಮ್ಮನ್ನು ಹರ್ಷ ಪುಲಕಿತರನ್ನಾಗಿ ಮಾಡಿತು.

ಇನ್ನು ಒಂದೇ ದಿನದಲ್ಲಿ ಎರಡನೆಯ ಶಿಬಿರವನ್ನು ತಲುಪುತ್ತೇವೆ ಎಂದಿದ್ದ ನಮಗೆ ಕೆಟ್ಟ ಹವೆ, ಕಠಿನ ಮಾರ್ಗಗಳಿಂದಾಗಿ ಮೂರು ದಿನ ಬೇಕಾಯಿತು. ಅನ್ನ ನೀರಿಲ್ಲದ ಮೂರು ದಿನ. ೧೪ ನೆಯ ತಾರೀಖಿನ ಸಂಜೆ ೬ ಗಂಟೆಗೆ ನಾಲ್ಕನೆಯ ಶಿಬಿರ ಮುಟ್ಟಿದೆವು. ಒಬ್ಬರ ಸಲುವಾಗಿ ಇರುವ ಆ ಚಿಕ್ಕ ಡೇರೆಯಲ್ಲಿ ನಾನೊಂದು ಮೂಲೆಯಲ್ಲಿ ಮುದುಡಿ ಕುಳಿತಿದ್ದೆ.

ರಾತ್ರಿ ಡೇರೆಯ ಅಂಚು ಗಾಳಿಯ ಹೊಡೆತಕ್ಕೆ ಹರಿದು ನನ್ನ ಕಾಲು ಹೊರಗೆ ಬಿತ್ತು. ನನ್ನ ಕಾಲ ಮೇಲೆ ಒರಗಿದ್ದ ಶರ್ಪಾಗೆ ತುಸು ಸರಿಯಲು ಹೇಳಿದೆ. ಆದರೆ ನಾವು ಅಲ್ಲಿ ಎಷ್ಟು ಒತ್ತಾಗಿ ಕುಳಿತಿದ್ದೆವೆಂದರೆ ಆತನಿಗೆ ಒಂದಿಂಚು ಕೂಡ ಸರಿಯುವುದು ಸಾಧ್ಯವಾಗಲಿಲ್ಲ. ಬೆಳಗಾಗುವಷ್ಟರಲ್ಲಿ ನನ್ನ ಪಾದಗಳಿಗೆ ಹಿಮವ್ರಣವಾಗಿಬಿಟ್ಟಿತ್ತು.

ನಾವು "ಸಾವಿನ ಕೊರಕಲಿನ" ಮಾರ್ಗವಾಗಿ ಇಳಿಯದೆ ಬರ್ಫದ ಗೋಡೆಯ ತುದಿಗೆ ಬಂದು ನೇರವಾಗಿ ಇಳಿದೆವು. ಆದರೆ ಇದು ಬಲು ಕಠಿನವಾಗಿತ್ತು. ನಮ್ಮ ಬೆರಳುಗಳು ಥಂಡಿಯಿಂದ ಸೆಟೆದಿದ್ದವಾದ್ದರಿಂದ ಹಗ್ಗವನ್ನು ನಾವು ಹಲ್ಲುಗಳಿಂದ ಕಚ್ಚಿ ಹಿಡಿಯಬೇಕಾಯಿತು. ಆದರೆ ನಾವು ಸುರಕ್ಷಿತವಾಗಿ ಕೆಳಗಿಳಿದೆವು. ಮೂರನೆಯ ಶಿಬಿರ ನಮಗೆ ಸ್ವರ್ಗದಂತೆ ಭಾಸವಾ-ಯಿತು. ಒಂದಿಷ್ಟು ಕಿಚಡಿ, ಮುಸಂಬಿರಸ ಹೊಟ್ಟೆಗೆ ಬಿದ್ದಮೇಲೆ ಇನ್ನು ನಮ್ಮ ಪ್ರಾಣ ಉಳಿಯಿತು ಎಂದುಕೊಂಡೆವು.

೧೬ ರಂದು ಎರಡನೆಯ ಶಿಬಿರವನ್ನೂ ೧೭ ರಂದು ೧ನೆಯ ಶಿಬಿರವನ್ನೂ ತಲುಪಿದೆವು. ಅಲ್ಲಿಂದ ನನ್ನನ್ನು ಸ್ಟ್ರೆಚರಿನ ಮೇಲೆ ಕೂಡಲೆ ಮೂಲ ಶಿಬಿರಕ್ಕೆ ಸಾಗಿಸಿದರು. ಮುಲ್ಕರಾಜ ಮತ್ತು ಗ್ರಿವಾಲರು ಶಿಬಿರ ಕೀಳುವ ಸನ್ನಾಹದ-ಲ್ಲಿದ್ದು ಆಗಲೇ ಅರ್ಧದಷ್ಟು ಸಾಮಾನನ್ನು ಕೆಳಗೆ ಕಳಿಸಿದ್ದರು.

ನೀಲಕಂಠದಿಂದ ಹೊರಟೆವು. ಸ್ಟ್ರೆಚರಿನಲ್ಲಿ ಮಲಗಿದ ನಾನು ಆಗಾಗ ತಲೆಯೆತ್ತಿ ಶಿಖರವನ್ನು ನೋಡುತ್ತಲಿದ್ದೆ. ಆ ಶಿಖರದ ಅಡಿಯಲ್ಲಿ ಕಳೆದ ಆಶೆ-ನಿರಾಶೆಗಳಿಂದ ಕೂಡಿದ ಹಗಲು ರಾತ್ರಿಗಳನ್ನು ಮೆಲುಕು ಹಾಕುತ್ತಲಿದ್ದೆ. ಪುನಃ ಅವನ್ನೆಲ್ಲ ಅನುಭವಿಸುತ್ತಿರುವಂತೆ ನನಗೆ ಭಾಸವಾಯಿತು.

ನಮ್ಮ ಯತ್ನ ಫಲಿಸಲು ಸಹಾಯಕರಾದವರೆಲ್ಲರನ್ನು ನೆನಸಿದೆ. ನನ್ನ ಪಾದಗಳಲ್ಲಿನ ಅಸಾಧ್ಯ ನೋವು ನನ್ನನ್ನು ಈ ಕನಸಿನಿಂದ ಎಚ್ಚರಿಸಿ ವಾಸ್ತವ ಜಗತ್ತಿಗೆ ಕರತಂದಿತು. ಈ ಯಾತ್ರೆಯ ಇತರ ಸದಸ್ಯರು ಕುಂಟುತ್ತ ಬರುತ್ತಿರುವುದು ನನಗೆ ಕಾಣಿಸುತ್ತಿತ್ತು. ಅವರೆಲ್ಲ ದಣಿದಿದ್ದರು. ಅಶಕ್ತರಾಗಿದ್ದರು. ಆದರೆ ಅವರಲ್ಲಿ ದುರ್ದಮನೀಯ ಉತ್ಸಾಹವಿತ್ತು. ಮನದಲ್ಲಿಯೆ ಎಲ್ಲರನ್ನೂ ಅಭಿನಂದಿಸಿದೆ, ವಂದಿಸಿದೆ. ಈ ಅಸಾಮಾನ್ಯ ಕಾರ್ಯಕ್ಕಾಗಿ ನಾವು ತೆತ್ತ ಬೆಲೆ ಅತಿರೇಕವೇನೂ ಆಗಿರಲಿಲ್ಲ. *

This Magazine owned by The Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli


ವನಿತಾ ಲೋಕದ
ಸುಂದರ ಸ್ವಪ್ನ
ಅನಿತಾ
ಟ್ವಾಲೆಟ್ ಸೋಪ್
SROMILLS
ANITA
TOILET SOAP
ANITA
TOILET SOAP
ತಯಾರಕರು:- ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್. ಬೆಂಗಳೂರು.